ಡಿಸೆಂಬರ್ ೨೦೦೫ ರೂ.೧೦

ಅಹಿಂದ ಚರ್ಚೆ

ಪ್ಯಾರಿಸ್ ಪ್ರಳಯ

ಕೇಳುವವರಿಲ್ಲದ ಕೊರಗರು

ಸಂವಾದ

ಮಾಸ ಪತ್ರಿಕೆ

ಸಂಪುಟ ೪ ಸಂಚಿಕೆ ೨
ಡಿಸೆಂಬರ್ ೨೦೦೫

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ|| ನಟರಾಜ್ ಹುಳಿಯಾರ್
ಪ್ರೊ|| ರಹಮತ್ ತರೀಕೆರೆ
ಕೆ. ಪುಟ್ಟಸ್ವಾಮಿ
ಡಿ. ಡೊಮಿನಿಕ್
ಬಿ.ಯು. ಸುಮಾ
ಡಾ|| ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ : ಸ್ಫೂರ್ತಿಧಾಮ
ಅಂಜನಾ ನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು - ೫೬೦ ೦೯೧
✆ ೨೩೨೮೭೯೪೩ / ೯೪೪೮೦ ೪೮೩೦೬
ಇ-ಮೇಲ್ ವಿಳಾಸ : samvaada@yahoo.co.in

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ 080-23287943, 94480 48306
e- mail : samvaada@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ...

- ❑ ಪತ್ರಗಳು ೩
- ❑ ಹೊಸ ಪುಸ್ತಕ ೪
- ❑ ಅಂತರಂಗ ೫
- ❑ ಮಾಹಿತಿ ತಾಂತ್ರಿಕರ ಮೂಲ ಸೌಲಭ್ಯ ೬
  - ○ ಡಾ|| ಜಿ. ಪಾಂಡುನಾಯಕ್
- ❑ ಪ್ಯಾರಿಸ್ ಪ್ರಳಯ? ೮
  - ○ ಶಿವಸುಂದರ್
- ❑ ಖಾಸಗಿ ವಲಯ ಮತ್ತು ಸಾಮಾಜಿಕ (ಅ)ನ್ಯಾಯ ೧೦
  - ○ ಡಾ|| ಕಾ ವೆಂ. ಶ್ರೀನಿವಾಸ ಮೂರ್ತಿ



- ❑ ಅಮೆರಿಕಾದ ಕೊಳೆಗೇರಿಗಳನ್ನು ತೆರೆದ ತೋರಿದ ಕತ್ರಿನಾ ೧೨
  - ○ ಜಯ
- ❑ ಕೇಳುವವರಿಲ್ಲದ ಕೊರಗರು ೧೪
  - ○ ಡಾ|| ಎಚ್ ನಾಗವೇಣಿ
- ❑ ಜಾನಪದ ಮಹಿಳೆ ಮತ್ತು ನೋವಿನ ನೆಲೆಗಳು ೧೮
  - ○ ಡಾ|| ಶೈಲಜಾ ಹೀರೆ ಮಠ
- ❑ ಅಹಿಂದ ಚರ್ಚೆ ೨೨
  - ○ ಡಿ. ಎಸ್ ನಾಗಭೂಷಣ
  - ○ ಎಚ್. ಎಸ್ ದೊರೆಸ್ವಾಮಿ
  - ○ ಜ. ಹೊ. ನಾರಾಯಣ ಸ್ವಾಮಿ
  - ○ ಸಿ. ಹರೀಶ್ ಕುಮಾರ್, ಗಂಗನ ಬೀಡು

- ❑ ಕಾಲ ೨೮
  - ○ ನಾ ಡಿಸೋಜ
- ❑ ದೇವರಾಯ ೩೧
  - ○ ಡಾ|| ಸರಜೂ ಕಾಟ್ಕರ
- ❑ ದಲಿತತ್ವ ಮತ್ತು ಬುದ್ಧತತ್ವ ಸಾಂಸ್ಕೃತಿಕ ರಾಜಕಾರಣ ೩೪
  - ○ ಡಾ|| ಮೊಗಳ್ಳಿ ಗಣೇಶ್
- ❑ ದಲಿತ್ ಡೈರಿ ೩೮
  - ○ ಚಂದ್ರಭಾನ್ ಪ್ರಸಾದ್
- ❑ ಬುದ್ಧಾಯಣ ೪೨
  - ○ ಸಿ.ಎಚ್. ರಾಜಶೇಖರ್

ಕವನಗಳು : ❑ ಮಣ್ಣಿನ ಬಹುಮಾನ ೧೩ ❑ ಡೀಸೆಲ್ ಫ್ಯಾಕ್ಟರಿಯ ಹಿಂಬೆಳಕಿನಲಿ ೨೭
❑ ರುಬಾಯಿಗಳು ೩೩



ಮುಖಪುಟ ಕಲೆ: ಕಳಿಂಗರ ಕಾಲದ ಏಕ ಶಿಲಾ ಆನೆ *ವಿನ್ಯಾಸ: ರಾಠೋಡ್*

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ಹಿಂದು ಧರ್ಮ, ರಾಜಕೀಯ ಲಾಭ

ಾನ್ಯ ಸಂಪಾದಕರೇ,

ಕೋಪ ತಾಪಗಳಿಂದ, ದ್ವೇಷ ಧಿಸುವುದರಿಂದ ಸುಧಾರಣೆಗಳನ್ನು ಲು ಸಾಧ್ಯವಿಲ್ಲ. ಅಂಬೇಡ್ಕರ್ ಕಾಲ ಲ್ಲಿ, ಅರವತ್ತು ವರ್ಷಗಳ ಹಿಂದೆ ಜನರು ಮಾಜಿಕ ಬದಲಾವಣೆಗಳಿಗೆ ಸ್ಪಂದಿಸು ಲಿಲ್ಲ. ಆಗ ಬದಲಾವಣೆಗಾಗಿ ಪ್ರತಿಭ ಅಗತ್ಯವಿತ್ತು. ಈಗ ಹಾಗಲ್ಲ ಜನರ ನೋಭಾವ ಬಹಳ ಬದಲಾಗುತ್ತಾ . ಯಾವುದೇ ಸುಧಾರಣೆ ಫಲಕಾರಿ ಾಗ ಬೇಕಾದರೆ ಎಲ್ಲ ಮತದವರೂ ಡಿ ಅದಕ್ಕಾಗಿ ಶ್ರಮಿಸಬೇಕು. ಸುಧಾ ಎನ್ನುವುದು ಒಂದು ಸಾಮಾಜಿಕ ಮಾನ್ಯ ವಿದ್ಯಮಾನ. ಈ ಪ್ರಕ್ರಿಯೆಯಲ್ಲಿ ಜಾತಿ ಜನಾಂಗದವರೂ ಕೂಡಿಕೊ ಆಸಕ್ತಿ ವಹಿಸುವಂತೆ ಪ್ರಚೋದನೆ ಡಬೇಕು.

ಜಾತಿ ಪಕ್ಷಪಾತವನ್ನು ಸುಧಾ ಗಳ ಮೂಲಕ, ಮತ್ತು ಮಾನವೀಯ ಲ್ಯಗಳ ಅರಿವನ್ನು ಉಂಟು ಮಾಡುವ ಲಕ ಮಾತ್ರ ಬಗೆಹರಿಸಲು ಸಾಧ್ಯ.

ಜಾತಿ ಜಾತಿಗಳ ಮೇಲೆ ದ್ವೇಷ ಸುವ ಮೂಲಕ ಸುಧಾರಣೆಗಳನ್ನು ಾಗದು. ಒಬ್ಬ ಹಿಂದು ದ್ವೇಷಿ, ದು ಸಮಾಜದಲ್ಲಿ ಸುಧಾರಣೆ ತರು ಸಾಧ್ಯವೇ ಇಲ್ಲ. ದ್ವೇಷ ಭಾವನೆ ಾಜವನ್ನು ಒಂದು ಗೂಡಿಸುವ ನ ಖಂಡಿತ ಆಗಲಾರದು. ದ್ವೇಷ ದ್ವೇಷ ಬೆಳೆಯುತ್ತದೆ. ಇದರಿಂದ ದಾಯ ಕಲಹ ಹರಡುತ್ತವೆ. ಈಗ ತ್ತಿರುವುದು ಅದೇ. ಹಿಂದಿನ ತಲೆಮಾ ರು ಪಕ್ಷಪಾತ ಬೆಳೆಸಿದ್ದಕ್ಕೆ ಈಗಿನ ನ್ನು ಹೊಣೆಗಾರರನ್ನಾಗಿ ಮಾಡುವುದು ವೇಕ. ಸಮಾಜದ ಒಂದು ಪಂಗಡ, ಬೇರೆ ಮುಂದುವರಿದ ಪಂಗಡಗಳನ್ನು ಬೆಳಗಾದರೆ ದ್ವೇಷಿಸುತ್ತಾ ಇದ್ದರೆ. ಅವರ ಸಹಕಾರ ಪಡೆಯುವುದಾದರೂ ಹೇಗೆ ಸಾಧ್ಯವಾದೀತು?

ಈಗಿನ ಭಾರತದಲ್ಲಿ ಎಲ್ಲ ಜಾತಿಪಂಗಡಗಳಿಗೆ ಸೇರಿದ. ಹಾಗೂ ಅರ್ಪಣ ಭಾವನೆಯಿಂದ ಸಾಮಾಜಿಕ ಬದಲಾವಣೆಗೆ ಕೆಲಸ ಮಾಡುವ ಸಾವಿರಾರು ಮಂದಿ ಕಾಣಿಸಿಕೊಳ್ಳುತ್ತಿದ್ದಾರೆ. ಅವರೆಲ್ಲ ಸಾಮಾಜಿಕ ನ್ಯಾಯ ಹಾಗೂ ಸಮಾನತೆಗಾಗಿ ದುಡಿಯುತ್ತಿದ್ದಾರೆ. ಅದರಂತೆಯೆ ಪಾರ್ಲಿಮೆಂಟಿನಲ್ಲೂ. ಶಾಸನ ಸಭೆಗಳಲ್ಲೂ ಸಾಮಾಜಿಕ ಬದಲಾವಣೆ ಬಯಸುವ ದಲಿತರಿದ್ದಾರೆ. ಅಲ್ಲದೆ ದಲಿತರಲ್ಲಿ ಮಾತ್ರ ಬಡವರಿದ್ದಾರೆ ಎಂದು ಭಾವಿಸುವುದು ಸರಿಯಲ್ಲ. ಬಡತನ ಸಮಾಜದ ಎಲ್ಲ ಜಾತಿ ಮತದವರನ್ನೂ ಕಿತ್ತು ತಿನ್ನುತ್ತಿದೆ.

ಜಾತಿಭೇದ ಎಣಿಸುವುದು ಒಂದು ಸಾಮಾಜಿಕ ಪಿಡುಗು. ಅದನ್ನೂ ಸುಧಾರಣೆಗಳ ಮೂಲಕ ತೆಗೆದು ಹಾಕಬೇಕು. ಅದು ಬಿಟ್ಟು ಇದರಲ್ಲಿ ರಾಜಕೀಯ ಬೆರೆಸುವುದರಿಂದ ಹಾಗೂ ಸಾಮಾಜಿಕ ಪಾತಕಗಳನ್ನು ತಿರುಚಿ ಪ್ರಚಾರ ಮಾಡುವುದರಿಂದ ಸಮಸ್ಯೆಗಳು ಬಗೆಹರಿಯುವುದಿಲ್ಲ. ಸಾಮಾಜಿಕ ಪಿಡುಗನ್ನು ಬಗೆಹರಿಸಲು ಬಯಸುವ ದಲಿತರು ರಾಷ್ಟ್ರ ಸಂಕಲ್ಪವನ್ನೇ ದುರ್ಬಲಗೊಳಿಸುವ ಕೆಲಸದಲ್ಲಿ ತೊಡಗಬಾರದು.

ಬಸವ, ನಾರಾಯಣ ಗುರು. ದಯಾನಂದ ಸರಸ್ವತಿ, ಜ್ಯೋತಿ ಫುಲೆ ಮುಂತಾದ ಮಹಾನುಭಾವರು ಜಾತಿಯ ವಿರೋಧವಾಗಿ ಹೋರಾಡಿದ ಹಿಂದು ಕಲಿಗಳು. ಇವರ ಮಾರ್ಗದಲ್ಲಿ ನಡೆಯುವ ಬದಲು ಹಿಂದೂ ಧರ್ಮವನ್ನೇ ರಾಜಕೀಯ ಲಾಭಕ್ಕಾಗಿ ದೂರುತ್ತಾ ಹೋಗುವುದರಿಂದ ರಾಷ್ಟ್ರವೇ ದುರ್ಬಲಗೊಳ್ಳಬಹುದು. ಅಷ್ಟೇ ಹೊರತು ಯಾವ ಸಾಧನೆಯನ್ನೂ ಮಾಡುವುದಕ್ಕಾಗುವುದಿಲ್ಲ.

Art of Living Ashrama ದ ಶ್ರೀ ರವಿಶಂಕರ್ ಅವರ ಅನಿಸಿಕೆಗಳು ಇವು. ಪೂರ್ವಗ್ರಹ ಇಲ್ಲದೆ ಶ್ರೀ ರವಿಶಂಕರ್ ಅವರ ಅಭಿಪ್ರಾಯಗಳನ್ನು ಕುರಿತು ಚಿಂತಿಸಬೇಕಾದ ಅಗತ್ಯತೆ ಇದೆ.

ಎಚ್.ಎಸ್.ದೊರಸ್ವಾಮಿ, ಬೆಂಗಳೂರು

ಚಂದಾ ವಿವರ

ಬಿಡಿ ಪ್ರತಿ ರೂ. ೨೦/-

೧ ವರ್ಷಕ್ಕೆ ೩ ವರ್ಷಕ್ಕೆ ೫ ವರ್ಷಕ್ಕೆ

ವಿದ್ಯಾರ್ಥಿಗಳು/ಕಾರ್ಯಕರ್ತರಿಗೆ

೧೦೦/- ರೂ. ೨೦೦/- ರೂ. ೫೦೦/-

ನೌಕರರು ಮತ್ತು ವೃತ್ತಿಪರರಿಗೆ

೨೦೦/- ರೂ. ೫೦೦/- ರೂ. ೮೦೦/-

ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ

೨೫೦/- ರೂ. ೬೦೦/- ರೂ. ೧೦೦೦/-

ವಿಶೇಷ ಹಿತೈಷಿ ಚಂದಾದಾರರಿಗೆ

೫೦೦/- ರೂ.೧೫೦೦/-ರೂ.೨೫೦೦/-

ಅಜೀವ ಚಂದಾ ರೂ. ೫,೦೦೦/-

ಪೋಷಕ ಚಂದಾ ರೂ. ೧೦,೦೦೦/-

ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ, ಎಂ.ಓ. / ಡಿ.ಡಿ. ಮಾತ್ರ ಕಳುಹಿಸಬೇಕು.

ವೈಚಾರಿಕ ಬೀಜ

ಪ್ರೀತಿಯ ಇಂದೂಧರ ರವರೆ,

ನಾನು ಮೊದಲಿನಿಂದಲು ನಿಮ್ಮ ಸಂಪಾದಕತ್ವದ 'ಸುದ್ದಿಸಂಗಾತಿ' ಯನ್ನು ಓದುತ್ತಲಿದ್ದು ಪತ್ರಿಕೆ ಉನ್ನತ ಸ್ಥಾನದಲ್ಲಿದ್ದಾಗಲೇ ಹಲವಾರು ಕಾರಣಗಳಿಂದ ನಿಂತೇ ಹೋದದ್ದರ ಬಗ್ಗೆ ಬಹಳ ಬೇಸರಪಟ್ಟಿದ್ದೆ. ನಂತರ ಮತ್ತೆ ನಿಮ್ಮ ಸಂಪಾದಕತ್ವದ "ಸಂವಾದ" ಪ್ರಾರಂಭವಾದಾಗ ಸಂತಸವೆನಿಸಿತು. ಇದು ಮಾಸ ಪತ್ರಿಕೆಯಾಗಿ ಬರುತ್ತಿರುವುದು ಬಹಳ ಸಂತೋಷವೆನಿಸುತ್ತಿದೆ.

ಇದು ವೈಚಾರಿಕ ಬೀಜವನ್ನು ಬಿತ್ತಿ ಎಲ್ಲರಲ್ಲಿ ವೈಚಾರಿಕತೆಯನ್ನು ಬೆಳೆಸಲಿ. ಹಾಗೆಯೇ ಇದು ಒಳ್ಳೆಯ ಅರಿವನ್ನು ಮೂಡಿಸುವ ದಿಕ್ಕಿನಲ್ಲಿ ಸಾಗಲಿ. ಹಲವಾರು ಗಣ್ಯರ ಸಂದರ್ಶನ, ಚರ್ಚೆ, ಚೆನ್ನಾಗಿ ಮೂಡಿ ಬರುತ್ತಲಿದೆ. ಬುದ್ಧಾಯಣದ ಮೂಲಕ "ಬೌದ್ಧ ಧಮ್ಮ"ದ ಬಗ್ಗೆ ಬುದ್ಧನ ಬಗ್ಗೆ ಬಹಳ ಸ್ಪಷ್ಟವಾಗಿ ವಿಷಯಗಳು ಬರುತ್ತಲಿವೆ. ನಿಮಗೆ ಮತ್ತು ನಿಮ್ಮ ತಂಡದ ಎಲ್ಲರಿಗೂ ಶುಭಾಶಯಗಳು.

ಎಚ್. ಶಿವರಾಜು, ಮೈಸೂರು.

ದಾಳವಾಗಿರುವ ಅಹಿಂದ

ಮಾನ್ಯ ಸಂಪಾದಕರೇ,

'ಅಹಿಂದ, ರಾಜಕಾರಣ ಮತ್ತು ಜಾಗತೀಕರಣ' ಡಾ॥ ರಹಮತ್ ತರೀಕೆರೆ ಅವರ ಲೇಖನ (ನವೆಂಬರ್ 2005) 'ಅಹಿಂದ' ಸಂಘಟನೆ ಎದುರಿಸಬೇಕಾದ ಸಮಸ್ಯೆ ಮತ್ತು ಅದು ಬದ್ಧವಾಗಿರಬೇಕಾದ ತಾತ್ವಿಕ ನಿಲುವು ಹೇಗಿರಬೇಕೆಂಬುದನ್ನು ವಿವರವಾಗಿ ಮತ್ತು ಸ್ಪಷ್ಟವಾಗಿ ಬರೆದಿದ್ದಾರೆ. ಇದರ ಹಿಂದಿನ ಭಾವನೆ ಅಹಿಂದ ಚಳವಳಿಯಲ್ಲಿ ಭಾಗವಹಿಸದವರು ಬಿಡಿಬಿಡಿಯಾಗಿ ಬರೆದಿದ್ದರೂ ಈ ಲೇಖನದಲ್ಲಿ ಅದು ಒಟ್ಟಂದದಲ್ಲಿ ಬಂದಿದೆ. 'ಅಹಿಂದ' ಇಂದು ಕಾಂಗ್ರೆಸ್ ದೂರ್ತ ರಾಜಕಾರಣಿಗಳ ದಾಳವಾಗಿಬಿಟ್ಟುದು ಅದರ ಬಗ್ಗೆ ಆಸಕ್ತಿ ಇಟ್ಟು ಕೊಂಡವರಿಗೆ ಆತಂಕವನ್ನುಂಟು ಮಾಡಿದೆ. ಈ ಸಂದರ್ಭದಲ್ಲಿ ರಹಮತ್ ಅವರ ಬರಹ, 'ಅಹಿಂದ'ವನ್ನು ಸರಿಯಾದ ದಾರಿಗೆ ಹಚ್ಚಬಹುದೇ ಎಂಬುದು ನಿರೀಕ್ಷೆ

'ಅಹಿಂದ'ದ ಬಗ್ಗೆ ಆಸಕ್ತಿಯಿರುವವರೆಲ್ಲ ನಿತ್ಯ ಕುಳಿತು ಚಿಂತಿಸಬೇಕಾದ ಅನಿವಾರ್ಯತೆ ಇದೆ. ಅಂಥ ಚಿಂತನೆ ಮುಂದಿನದಾಗಲಿ.

ಆರ್.ವಿ.ಭಂಡಾರಿ, ಕೆರೆಕೋಣ



ಪತ್ರಾಗಾರ

ಚಿಂತನೆಗೆ ಹಚ್ಚುವ ಲೇಖನಗಳು

ಪ್ರಿಯ ಸಂಪಾದಕರೆ,

ನವಂಬರದ ಸಂವಾದ ಅಕ್ಟೋಬರದಲ್ಲಿಯೇ ಹಸ್ತಗತವಾಯಿತು. ಸಂತೋಷ.

ಸಂಚಿಕೆಯ ಲೇಖನಗಳೆಲ್ಲವೂ ಚಿಂತನೆಗೆ ಹಚ್ಚುತ್ತವೆ.

ಡಾ.ಮೊಗಳ್ಳಿಯವರ "ದಲಿತತ್ವ ಮತ್ತು ಬುದ್ಧತ್ವದ ಸಾಂಸ್ಕೃತಿಕ ರಾಜಕಾರಣ" ಪ್ರಸ್ತುತ ಗಂಭೀರವಾಗಿರುವ ವಿಷಯ.

ದಲಿತತ್ವವೆನ್ನುವುದೇ ಒಂದು ಸಂಕೀರ್ಣ ಪದ. ಜಿಜ್ಞಾಸೆಯು ಸಂಕೀರ್ಣತೆಯನ್ನು ಮತ್ತಷ್ಟು ಸಂಕೀರ್ಣಗೊಳಿಸಿದೆ. ಚರ್ಚಿಸಲಾಗಿರುವ ಸಾಂಸ್ಕೃತಿಕ ರಾಜಕಾರಣವು ಅರಗಿಸಿಕೊಳ್ಳಬಹುದಾದ ಸಾಮೀಪ್ಯಕ್ಕಿಂತ ಬಹುದೂರ ಧುಮುಕಿದೆ.

ದೇವನೂರು ಅವರ ಕುಸುಮಬಾಲೆಯ ಭಾಷೆಯು ಅರ್ಥವಾಗದಿರುವುದು "ಓದುಗನ ಸಮಸ್ಯೆ"ಯೆಂದು ಮನಗಂಡಿರುವ ಮೊಗಳ್ಳಿಯವರಿಗೆ "ದಲಿತತ್ವ ಮತ್ತು ಬುದ್ಧತ್ವದ ಸಾಂಸ್ಕೃತಿಕ ರಾಜಕಾರಣದಲ್ಲಿ ಬಳಸಿರುವ ಭಾಷಾ ಶೈಲಿ ಕೂಡ ಓದುಗನಿಗೆ "ಸಮಸ್ಯೆ"ಯೆಂದು ಅರ್ಥ ಮಾಡಿ ಕೊಳ್ಳಬಹುದಾಗಿತ್ತು. ಹಾಗಾಗಿ ಜಿಜ್ಞಾಸೆಯು ಜಿಜ್ಞಾಸೆಯಾಗಿಯೇ ಉಳಿದಿದೆ. ಲೇಖನದುದ್ದಕ್ಕೂ ಮುದ್ರಾಸುರನ ಹಾವಳಿ ಬೇರೆ ನುಸುಳಿದೆ. ಉಳಿದ ಲೇಖನಗಳೂ ಹೊರತಾಗಿಲ್ಲ. ಈ ಕುಂದನ್ನು ಶೀಘ್ರ ದೂರಗೊಳಿಸುವಿರಾಗಿ ಭರವಸೆಯಿದೆ.

ಇದು ಟೀಕೆಯಲ್ಲ ಬಯಕೆ.

ಶುಭಾಶಯಗಳೊಂದಿಗೆ

ಪಿ.ಗೋಕುಲ್‌ದಾಸ್, ಮಂಗಳೂರು



ಹೊಸ ಪುಸ್ತಕ

ಕಬ್ಬಿಣದ ಕಾಚಗಳು

ಲೇ: ತಾಪೀ ಧರ್ಮರಾವು

ಬೆಲೆ:ರೂ 30/-

ನಾಗರಿಕತೆಯ ವಿಕಾಸ ಮಾರ್ಗದಲ್ಲಿ ಆಸ್ತಿ ಸಂರಕ್ಷಣೆಗೆ ಮುಂದಾದ ಮನುಷ್ಯ ಹೆಣ್ಣನ್ನು ಗಂಡಿನ ಆಸ್ತಿ ಎಂದೇ ಪರಿಗಣಿಸಿದ. ಈ ಆಸ್ತಿಯನ್ನು ರಕ್ಷಿಸುವುದು, ಅದನ್ನು ಅನ್ಯರು ಆಕ್ರಮಿಸದಂತೆ ನೋಡಿಕೊಳ್ಳುವುದು ಗಂಡಿನ ಕರ್ತವ್ಯ ಆಯಿತು. ಅದಕ್ಕೆ 'ಪಾತಿವ್ರತ್ಯ'ದ ಸಂಕೋಲೆ ಬೇರೆ! ತನ್ನ ಆಸ್ತಿಯಾದ ಹೆಂಗಸು ಅನ್ಯ ಗಂಡಸಿನ ವಶವಾಗದಂತೆ ತಡೆಯುವ ಉಪಾಯವೇ ಕಬ್ಬಿಣದ ಕಾಚಗಳು! ಹೆಣ್ಣಿಗೆ ಕಬ್ಬಿಣದ ಕಾಚಾ ತೊಡಿಸಿ, ಅದಕ್ಕೊಂದು ಬೀಗ ಹಾಕಿ, ಕೀಲಿ ಕೈಯನ್ನು ತನ್ನಲ್ಲಿ ಇರಿಸಿಕೊಳ್ಳುವುದು. ಗಂಡಸಿನ ಇಂಥ ಬರ್ಬರತೆಯನ್ನು ವಿವರಿಸುವ ಉತ್ತಮ ಕೃತಿ ಇದು.

ಪ್ರಕಾಶಕರು: ನವಕರ್ನಾಟಕ ಪ್ರಕಾಶನ
ಎಂಬೆಸಿ ಸೆಂಟರ್, ಬೆಂಗಳೂರು-560001



ಮುಗಿಲ ಮಿಂಚು

ಲೇ:ಶ್ರೀ ಶಿವಮೂರ್ತಿ ಮುರುಘಾ ಶರಣರು

ಬೆಲೆ:ರೂ.75/-

ನಾಡಿನ ಪ್ರಗತಿಶೀಲ ಮಠಾಧೀಶರಾದ ಶ್ರೀ ಶಿವಮೂರ್ತಿ ಮುರುಘಾ ಶರಣರು ವಿವಿಧ ಸಂದರ್ಭದಲ್ಲಿ ವ್ಯಕ್ತಪಡಿಸಿದ ಚಿಂತನೆಗಳು ಇಲ್ಲಿ ಲೇಖನ ರೂಪದಲ್ಲಿ ಮೂಡಿಬಂದಿವೆ. ಅವರ ಚಿಂತನೆ, ಅಭಿಪ್ರಾಯ, ಭಾಷಣ, ಸಂಭಾಷಣೆ, ಸಂದರ್ಶನ ಇತ್ಯಾದಿಗಳನ್ನೊಳಗೊಂಡ ಈ ಸಂಕಲನ ಪ್ರಾಮಾಣಿಕ ಮನಸ್ಸೊಂದರ ನಿರ್ಭೀತ ಅಭಿವ್ಯಕ್ತಿಯಾಗಿ ಹೊರ ಬಂದಿದೆ. ಸದ್ಯದ ಜಾತಿ, ಭ್ರಷ್ಟತೆ, ಮಲಿನಗೊಂಡ ಮನಸ್ಸು ವಿಘಟಿಸುತ್ತಿರುವ ಸಾಮಾಜಿಕ ವ್ಯವಸ್ಥೆಗೆ ಆರೋಗ್ಯಕರ ಚಿಕಿತ್ಸೆ ಕಾರಣದ ಚಿಂತನೆಗಳಿಲ್ಲಿವೆ.

ಪ್ರಕಾಶಕರು: ಶ್ರೀ. ಮುರುಘ ರಾಜೇಂದ್ರ ಗ್ರಂಥಮಾಲೆ, ಚಿತ್ರದುರ್ಗ- 577502

ಯಾನ (ಕಥಾಸಂಕಲನ)

ಲೇ.ಪ್ರೇಮ ಶೇಖರ

ಬೆಲೆ.ರೂ.65/-

ಪತ್ತೇದಾರಿ ಕಥೆ ಕಾದಂಬರಿಗಳನ್ನು ಬರೆದು ಹೆಸರು ಮಾಡಿರುವ ಪ್ರೇಮ ಶೇಖರ ಅವರ ಕಥಾ ಸಂಕಲನ ಇದು. ಇದರಲ್ಲಿ ಎರಡು ನೀಳ್ಗತೆಗಳಿದ್ದು, ಮೂರು ಸಣ್ಣ ಕಥೆಗಳಾಗಿವೆ. ಲೇಖಕರೇ ಹೇಳುವಂತೆ, ಇಲ್ಲಿನ ಕಥೆಗಳು ವರ್ತಮಾನದಲ್ಲಿ ಸಾಗುತ್ತಿದ್ದಂತೇ, ತಟಕ್ಕನೆ ಇತಿಹಾಸದಾಳಕ್ಕೆ ಇಳಿದು ಅಲ್ಲಿನ ಘಟನೆಗಳನ್ನು ಮೇಲೆತ್ತಿ ತಂದು ಓದೂಗರೆದುರು ದುತ್ತನೆ ನಿಲ್ಲಿಸುತ್ತವೆ. ಒಂದು ರೀತಿಯ ಫ್ಯಾಂಟಸಿ ಹಾಗೂ ಸರ್ರಿಯಲಿಸ್ಟ್ ಮಾದರಿಯಲ್ಲಿರುವ ಇಲ್ಲಿನ ಕಥೆಗಳು ತನನ್ನು ನೇರವಾಗಿ ಹೇಳದಿದ್ದರೂ, ಅವು ಧ್ವನಿಸುವ ಅರ್ಥಗಳು ನೂರಾರು.

ಪ್ರಕಾಶಕರು: ಕಾವ್ಯಾಲಯ ಪ್ರಕಾಶಕರು
ಜಯನಗರ, ಮೈಸೂರು - 570014

ಬಳಕುವ ಗೆರೆಗಳು

ಲೇ: ಪುಂಡಲೀಕ ಕಲ್ಲಿಗನೂರ

ಬೆಲೆ:ರೂ 90/-

ಇದು ರೇಖಾ ಚಿತ್ರ ಕಲಾವಿದ ಪುಂಡಲೀಕ ಅವರ ರೇಖಾ ಚಿತ್ರಗಳ ಸಂಗ್ರಹ. ಕನ್ನಡದ ಮಟ್ಟಿಗೆ ಅಪರೂಪ ಎನ್ನಬಹುದಾದ ಈ ಸಂಕಲನದಲ್ಲಿ ವ್ಯಕ್ತಿ ಚಿತ್ರ, ವ್ಯಂಗ್ಯ ಚಿತ್ರಗಳಾದಿಯಾಗಿ ಪತ್ರಿಕೆಗಳಲ್ಲಿ ಮೂಡಿಬರುವ ಎಲ್ಲಾ ಬಗೆಯ ರೇಖಾ ಚಿತ್ರಗಳು ಇವೆ. ಇಲ್ಲಿಯ ರೇಖೆಗಳಲ್ಲಿ ನಲಿಯುವ ಭಾವಶಕ್ತಿ ಎಣೆಯಿಲ್ಲದ್ದು, ರಾಜಕಾರಣಿ ಸಾಮಾಜಿಕ ವ್ಯಕ್ತಿಗಳು ಹಾಗೂ ಸಾಹಿತಿಗಳ ಚಿತ್ರಗಳಲ್ಲಿ ಅವರುಗಳ ವ್ಯಕ್ತಿತ್ವದ ಪ್ರತಿಫಲನ ಕಾಣಿಸುತ್ತದೆ. ಇಲ್ಲಿ ಬಣ್ಣಗಳ ದೊಡ್ಡಾಟಗಳಿಲ್ಲ, ಕಪ್ಪಿನ ಮೇಲಾಟವಿದೆ.

ಪ್ರಕಾಶಕರು: ಸಿ.ವಿ.ಜಿ. ಪಬ್ಲಿಕೇಷನ್
ವೈಯಲಿ ಕಾವಲ್, ಬೆಂಗಳೂರು-560040



ಸ್ಪಂದನ

ಲೇ: ನಾ. ದಿವಾಕರ, ಮ.ಶ್ರೀ.ಮುರಳಿ ಕೃಷ್ಣ

ಬೆಲೆ.ರೂ.50/-

'ಸ್ಪಂದನ'ದ ಲೇಖಕರಿಬ್ಬರೂ 'ಸಂವಾದ' ಲೇಖಕರ ಬಳಗದವರು. 'ಸಂವಾದವೂ ಸೇರಿದಂತೆ ವಿವಿಧ ಪತ್ರಿಕೆಗಳಲ್ಲಿ ಬರೆದ ಲೇಖನಗಳನ್ನೂ ಸಂಗ್ರಹಿಸಿ 'ಸ್ಪಂದನ'ವನ್ನು ಹೊರತಂದಿದ್ದಾರೆ. ಸೃಜನಶೀಲತೆ ಹಾಗೂ ಕ್ರಿಯಾಶೀಲತೆಗೆ ಒಗ್ಗಿಕೊಂಡ ಮನೋಧರ್ಮ ಇಲ್ಲಿ ಲೇಖನಗಳಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ನಿತ್ಯದ ಬದುಕಿನ ಹತ್ತು ಹಲವು ಆಗುಹೋಗುಗಳಗೆ ಸ್ಪಂದಿಸುವ ಹಾಗೂ ಅದನ್ನು ಅಕ್ಷರ ರೂಪಕ್ಕಿಳಿಸುವ ಸೃಜನ ಶೀಲತೆ ಈ ಲೇಖಕರದು. ವರ್ತಮಾನದ ಸಮಸ್ಯೆಗಳನ್ನು ವಿಶ್ಲೇಷಿಸುವ ಕಲೆಗಾರಿಕೆ ಈ ಲೇಖನಗಳ ಮುಖ್ಯ ಅಂಶ.

ಪ್ರಕಾಶಕರು: ಸಂಗಾತಿ ವೃಂದ,
ಹನುಮಂತನಗರ, ಬೆಂಗಳೂರು-560019

ಈ ಭೂಮಿ ಈ ಸಸ್ಯ

ಲೇ: ಡಾ|| ಎಲ್. ನಾರಾಯಣ ರೆಡ್ಡಿ

ಬೆಲೆ: ರೂ 25/-

ಕೃಷಿ ತಜ್ಞ ಡಾ|| ಎ... ನಾರಾಯಣ ರೆಡ್ಡಿ ಅವರ ... ವಿಚಾರಗಳನ್ನು ಸರಳವಾಗಿ ತಿಳಿಸಿಕೊಡು... ಪುಸ್ತಕ ಇದು. ಬೆಳೆಯೂರಿನ '... ವಿಕಾಸ ಕೇಂದ್ರ'ದ ಉದ್ಘಾಟ... ಸಮಾರಂಭದಲ್ಲಿ ರೆಡ್ಡಿ ಅವರು ನೀ... ಉಪನ್ಯಾಸದ ಧ್ವನಿಮುದ್ರಿ ಇದೀಗ ಪು... ರೂಪತಾಳಿದೆ. ಭೂಮಿಯಲ್ಲಿ ಜೀವವ... ಸಸ್ಯಗಳೂ ನಮ್ಮಂತೆಯೇ ಬದುಕುತ್ತ... ಸಸ್ಯಗಳ ಬೆಳವಣಿಗೆಗೆ ಬೇಕಾ... ಸೂಕ್ಷ್ಮಾಣು ಜೀವಿಗಳು ಇದ್ದರೆ ಮ... ಮಣ್ಣು ಸಮೃದ್ಧವಾಗಿರುತ್ತದೆ. ರಸಗೊ... ಬಳಸಿ ಈ ಸೂಕ್ಷ್ಮಾಣು ಜೀವಿಗಳ... ಕೊಲ್ಲುವುದರ ಮೂಲಕ ಬೆಳೆ ಕು... ಹೇಗೆ ನಾಶವಾಗುತ್ತದೆ ಎಂಬುದನ್ನು ... ಕೃತಿಯಲ್ಲಿ ವಿವರಿಸಲಾಗಿದೆ. ಬಂದ... ರಾಧಾಕೃಷ್ಣ ನಿರೂಪಿಸಿದ್ದಾರೆ.

ಪ್ರಕಾಶಕರು:ನವಕರ್ನಾಟಕ ಪ್ರಕಾಶನ
ಎಂಬೆಸಿ ಸೆಂಟರ್, ಬೆಂಗಳೂರು.



ಸಂಪಾದಕೀಯ

ಅಂತರಂಗ

ನಮ್ಮೊಳಗಿನ 'ರಾಷ್ಟ್ರಪತಿ'

ಆಗಸ್ಟ್ 21, 2003 ಸಂಜೆ. ದೆಹಲಿಯ ಅದ್ದೂರಿ ಅನ್ನಿಸದ ಸರ್ಕಾರಿ ಬಂಗಲೆ. ಮಾಜಿ ರಾಷ್ಟ್ರಪತಿ ಕೆ. ಆರ್. ನಾರಾಯಣನ್ ಅವರನ್ನು ನೋಡಲೆಂದು ಕುಳಿತಿದ್ದೆ. ದೆಹಲಿಯ ಪತ್ರಕರ್ತ ಮಿತ್ರ ಉಮಾಪತಿ ಮತ್ತು ದಸಂಸ ರಾಜ್ಯ ಸಂಚಾಲಕ ಸಿ.ಎಂ. ಮುನಿಯಪ್ಪ ಜತೆಗಿದ್ದರು. ದಂತಗೋಪುರ ಒಲ್ಲದ, ಸಾಮಾನ್ಯ ನಾಗರಿಕ ರಾಷ್ಟ್ರಪತಿಯಾಗಿ, ಇಡೀ ದೇಶಕ್ಕೆ ಮಾದರಿಯಾದ ನಾರಾಯಣನ್ ಅವರನ್ನು ನೋಡುವ ಮಾತನಾಡುವ ತವಕ. ಸಾಮಾನ್ಯವಾಗಿ ಮೂಡದ ಅವ್ಯಕ್ತ ಭಾವ ಆ ಕ್ಷಣ ನನ್ನೊಳಗೆ ಇಣುಕಿತ್ತು.

ನಾರಾಯಣನ್ ಅವರನ್ನು ಬೆಂಗಳೂರಿನಲ್ಲಿ ನಡೆಸಲು ಉದ್ದೇಶಿಸಿದ್ದ ಕಾರ್ಯಕ್ರಮವೊಂದಕ್ಕೆ ಆಹ್ವಾನಿಸಲು ನಾವುಗಳು ಹೋಗಿದ್ದೆವು. ನಮಗೆ ನಿಗಧಿ ಪಡಿಸಿದ್ದ ಸಮಯಕ್ಕೆ ಸರಿಯಾಗಿ ನಾವು ಕುಳಿತಿದ್ದ ಜಾಗಕ್ಕೆ 'ರಾಷ್ಟ್ರಪತಿ' ನಡೆದು ಬಂದರು. ಅವರಿಗೆ ಆರೋಗ್ಯ ಸರಿಯಿರಲಿಲ್ಲ. ಕಾಲೂರಲು ತೊಂದರೆ. ಆದರೂ ಅವರು ನಡೆದು ಬಂದು ನಿಂತು ನಮಗೆ ಸ್ವಾಗತ ನೀಡಿದ ಬಗೆ ನನ್ನ ಹೃದಯ ತುಂಬಿತು. ಒಂದು ರೀತಿಯ ಪುಳಕಿತ-ಧನ್ಯತಾ ಭಾವ. ಅವರ ಸರಳತೆ, ಪ್ರೀತಿ, ಸ್ನಿಗ್ಧ ಮುಖಭಾವ, ಆಪ್ತತೆ ಆ ನೆನಪನ್ನು ಚಿರಗೊಳಿಸಿತು. ಒಂದು ನೂರು ಕೋಟಿ ಜನಸಂಖ್ಯೆಯ ಬೃಹತ್ ರಾಷ್ಟ್ರವೊಂದರ ನಿವೃತ್ತ ಪ್ರಥಮ ಪ್ರಜೆ ನಮ್ಮನ್ನು ನಡೆಸಿಕೊಂಡದ್ದು ಇಂದಿಗೂ ಮರೆಯಲಾಗದ ನೆನಪು.

ಅನಾರೋಗ್ಯದಿಂದಾಗಿ ಅವರು ಕಾರ್ಯಕ್ರಮಕ್ಕೆ ಬರಲು ಸಾಧ್ಯವಾಗಲಿಲ್ಲ. ಅವರೊಂದಿಗೆ ಅಂದು ಕಳೆದ ೪೦-೪೫ ನಿಮಿಷಗಳಲ್ಲಿ ಇಡೀ ದೇಶದ ಬಗ್ಗೆ ಅವರಿಗಿದ್ದ ಕಾಳಜಿ ಕಂಡ ನಾವೆಲ್ಲ ಮೂಕರಾದೆವು. 'ಸಂವಾದ' ಪತ್ರಿಕೆಯ ಪ್ರತಿ ಪುಟವನ್ನು ತಿರುವಿ ಹಾಕಿ ಅದರಲ್ಲಿರುವ ವಿಷಯಗಳ ಮಾಹಿತಿಯನ್ನು ಪಡೆದರು. ತಾವೇ ಉದ್ಘಾಟಿಸಿದ ಸ್ಫೂರ್ತಿಧಾಮ ಸಂಸ್ಥೆಯಿಂದ 'ಸಂವಾದ' ಪ್ರಕಟವಾಗುತ್ತಿರುವುದನ್ನು ತಿಳಿದು ಹೆಮ್ಮೆ ಪಟ್ಟರು. ದೇವರಾಜ ಅರಸರನ್ನು ನೆನೆದರು. ಬಸವಣ್ಣನ ಸಾಮಾಜಿಕ ಕ್ರಾಂತಿಯನ್ನು ಮೆಲುಕು ಹಾಕಿದರು. ಆರೋಗ್ಯ ಸುಧಾರಿಸಿದರೆ ಮುಂದೆ ಖಂಡಿತ ನಮ್ಮ ಕಾರ್ಯಕ್ರಮಕ್ಕೆ ಬರುವುದಾಗಿ ಹೇಳಿದರು.

ಆದರೆ ಅವರು ಬರಲಾಗಲಿಲ್ಲ. ಅನಾರೋಗ್ಯ ಅವರನ್ನು ಬಲಿ ತೆಗೆದುಕೊಂಡಿತು. ೧೯೯೭ರಿಂದ ೨೦೦೨ರವರೆಗೆ ಭಾರತದ ರಾಷ್ಟ್ರಪತಿಯಾಗಿ ಸೇವೆ ಸಲ್ಲಿಸಿದ ಕೊಚೇರಿಲ್ ರಾಮನ್ ವೈದ್ಯರ್ ನಾರಾಯಣನ್, ಭಾರತದ ಇತಿಹಾಸ ಹಿಂದೆಂದೂ ಕಂಡರಿಯದ ಹೆಮ್ಮೆ ಮತ್ತು ಆದರ್ಶದ ವ್ಯಕ್ತಿಯಾಗಿದ್ದರು. ಕೇರಳದ ಕೊಟ್ಟಾಯಂ ಜಿಲ್ಲೆಯ ಉಳವೂರು ಗ್ರಾಮದ ಅತ್ಯಂತ ಬಡಕುಟುಂಬದಲ್ಲಿ (ಫೆಬ್ರವರಿ ೪, ೧೯೨೧) ಜನಿಸಿದ ಅವರು ಏರಿದ ಎತ್ತರ ಮಾತ್ರ ಹಿಮಾಲಯದಷ್ಟು! ದಲಿತರಾಗಿ ಹುಟ್ಟಿ, ಸ್ವಾಭಿಮಾನಿಯಾಗಿ ಬೆಳೆದು ಇಡೀ ನಾಡಿಗೇ ಆದರ್ಶವಾಗುವಂತೆ ಬದುಕಿದರು. ಶಿಕ್ಷಕರಾಗಿ, ಪತ್ರಕರ್ತರಾಗಿ, ರಾಜ ತಾಂತ್ರಿಕರಾಗಿ, ರಾಯಭಾರಿಯಾಗಿ ಸಂಸತ್ ಸದಸ್ಯರಾಗಿ, ಕೇಂದ್ರ ಸಚಿವರಾಗಿ, ರಾಷ್ಟ್ರಪತಿಯಾಗಿ ನಾಡಿನ ದುರ್ಬಲ ವರ್ಗಗಳ ಆಶಾಕಿರಣವಾಗಿ ಅವರು ಬೆಳೆದು ನಿಂತರು.

ಅತ್ಯಂತ ಬಡತನದಲ್ಲಿ ಶಿಕ್ಷಣ ಆರಂಭಿಸಿದ ನಾರಾಯಣನ್, ಬಿ.ಎ. (ಆನರ್ಸ್) ಪದವಿಯಲ್ಲಿ ಪ್ರಥಮ ರ್‍ಯಾಂಕ್ ಪಡೆದರು. ರ್‍ಯಾಂಕ್ ಪಡೆದವರಿಗೆ ಆಗ ಸುಲಭವಾಗಿ ಸಿಕ್ಕುತ್ತಿದ್ದ ಉಪನ್ಯಾಸಕ ಹುದ್ದೆ ನಾರಾಯಣನ್ ಅವರಿಗೆ ದಕ್ಕಲಿಲ್ಲ. ತಾನು 'ಅಸ್ಪೃಶ್ಯ'ನೆಂಬ ಕಾರಣದಿಂದಾಗಿ ರ್‍ಯಾಂಕ್ ಪಡೆದಿದ್ದರೂ ನೌಕರಿ ದಕ್ಕದಾದಾಗ ನಾರಾಯಣನ್ ಅನುಭವಿಸಿದ ನೋವು ಅಪಾರ. ಆದರೆ ಅದೇ ನೋವು ಛಲವಾಗಿ, ಇಚ್ಚಾಶಕ್ತಿಯಾಗಿ ಮಾರ್ಪಟ್ಟು ಸಾಧನೆಯ ಮೆಟ್ಟಿಲಾಯಿತು. ತಿರುವಾಂಕೂರು ವಿ.ವಿ.ಯಲ್ಲಿ ಕೆಲಕಾಲ ಇಂಗ್ಲೀಷ್ ಅಧ್ಯಾಪಕರಾದರು. ನಂತರ ಮದರಾಸಿನ ಹಿಂದೂ ಪತ್ರಿಕೆಯಲ್ಲಿ ದುಡಿಮೆ. ೧೯೪೫ರಲ್ಲಿ ಮುಂಬೈ ಸೇರಿ 'ಟೈಂಸ್ ಆಫ್ ಇಂಡಿಯಾ' ವರದಿಗಾರರಾದರು.

ನಂತರ ನಾರಾಯಣನ್ ಹಿಂತಿರುಗಿ ನೋಡಲಿಲ್ಲ. ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಅಧ್ಯಯನ (೧೯೪೫-೪೮). ಆ ಮೂಲಕ ಅಂದಿನ ಪ್ರಧಾನಿ ನೆಹರು ಸಂಪರ್ಕ. ೧೯೪೯ರಲ್ಲಿ ಭಾರತೀಯ ವಿದೇಶಾಂಗ ಸೇವೆಗೆ ಸೇರ್ಪಡೆ. ಬರ್ಮಾ (ಮೈನ್ಮಾರ್) ಜಪಾನ್, ಇಂಗ್ಲೆಂಡ್‌ನಲ್ಲಿ ರಾಜ ತಾಂತ್ರಿಕರಾಗಿ ಸೇವೆ. ನಂತರ ಚೀನಾ, ಟರ್ಕಿ. ಥಾಯ್ಲೆಂಡ್ ಹಾಗೂ ಅಮೆರಿಕಾದಲ್ಲಿ ರಾಯಭಾರಿಯಾಗಿ ಸಮರ್ಥವಾಗಿ ಕರ್ತವ್ಯ ನಿರ್ವಹಿಸಿದರು.

ಅಮೆರಿಕಾದಲ್ಲಿ ರಾಯಭಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ನಾರಾಯಣನ್ ಅವರನ್ನು ಅಂದಿನ ಪ್ರಧಾನಿ ಇಂದಿರಾಗಾಂಧಿ ಅವರು ಪ್ರತಿಷ್ಠಿತ ಜವಹರಲಾಲ್ ನೆಹರೂ ವಿಶ್ವವಿದ್ಯಾಲಯದ ಕುಲಪತಿಯನ್ನಾಗಿ ನೇಮಿಸಿದರು. ನಂತರ ದಿ॥ ರಾಜೀವ್ ಗಾಂಧಿ ಅವರ ಕಾಲದಲ್ಲಿ ನಾರಾಯಣನ್ ಸಕ್ರಿಯ ರಾಜಕಾರಣಕ್ಕೆ ಧುಮುಕಿದರು. ಇಂದಿರಾಗಾಂಧಿ ಹತ್ಯೆಯ ನಂತರ ೧೯೮೪ರಲ್ಲಿ ನಾರಾಯಣನ್ ಮೊದಲ ಬಾರಿಗೆ ಸಂಸತ್ ಸದಸ್ಯರಾಗಿ ಆಯ್ಕೆಯಾದರು.

ನಾನೊಬ್ಬ ನಾಗರಿಕ ರಾಷ್ಟ್ರಪತಿ ಎಂದು ಕರೆದುಕೊಳ್ಳುತ್ತಿದ್ದ ನಾರಾಯಣನ್ ಚುನಾವಣೆಯಲ್ಲಿ ಎಲ್ಲ ನಾಗರಿಕರಂತೆ ಸರತಿಯ ಸಾಲಿನಲ್ಲಿ ನಿಂತು ಮತ ಚಲಾಯಿಸಿ ಪ್ರಜಾಪ್ರಭುತ್ವದ ಹಿರಿಮೆಯನ್ನು ಎತ್ತಿ ಹಿಡಿದರು. ಮಾತು ಮತ್ತು ಕೃತಿ ಅವರ ಪಾಲಿಗೆ ಬೇರೆಯಾಗಿರಲಿಲ್ಲ. ಸದಾ ಅಧ್ಯಯನ ಶೀಲವಾಗಿರುತ್ತಿದ್ದ, ನಾರಾಯಣನ್ ಅತ್ಯಂತ ಕ್ರೀಯಾ ಶೀಲ ರಾಷ್ಟ್ರಪತಿಯಾಗಿದ್ದರು. ಭಾರತದ ಮೊದಲ 'ಕಾರ್ಯನಿರತ ರಾಷ್ಟ್ರಪತಿ' ಎಂಬ ಹೆಗ್ಗಳಿಕೆ ಅವರದಾಗಿತ್ತು. ಅಧಿಕಾರದ ತುತ್ತ ತುದಿಗೆ ಏರಿದರೂ, ಸಾಮಾನ್ಯ ಜನರ ದುಃಖ ದುಮ್ಮಾನಗಳಿಗೆ ಅವರು ಸ್ಪಂದಿಸುತ್ತಿದ್ದರು. ಜನಮಾನಸದ ತಲ್ಲಣಗಳನ್ನು ಅವರು ಗ್ರಹಿಸುತ್ತಿದ್ದರು. ಅವುಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸುವ ತಾಯಿ ಹೃದಯ ಅವರದಾಗಿತ್ತು. ಕೇವಲ ಅಲಂಕಾರಪ್ರಾಯವಾದ ರಾಷ್ಟ್ರಪತಿ ಹುದ್ದೆಗೆ ವಿಶೇಷ ಘನತೆ ಮತ್ತು ಜವಬ್ದಾರಿಯನ್ನು ಅವರು ತಂದುಕೊಟ್ಟರು. ರಾಷ್ಟ್ರಪತಿ ಹುದ್ದೆಯ ಮೂಲಕ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿಯವುದಕ್ಕಾಗಿ ಕೇಂದ್ರ ಸರ್ಕಾರದ ಕಿವಿ ಹಿಂಡಬಹುದೆನ್ನುವುದನ್ನೂ ಅವರು ಸಾಬೀತು ಪಡಿಸಿದರು.

ಅಂತರ್ ಧರ್ಮೀಯರಾದ ಉಷಾ (ಮಾರ್ಟಿನ್ ಟಿಂಟು) ಅವರನ್ನು ಮದುವೆಯಾಗುವ ಮೂಲಕ ಧರ್ಮ ನಿರಪೇಕ್ಷತೆಯನ್ನು ಸಾರಿದರು. ಬಹು ಸಂಸ್ಕೃತಿಯ ಬಹು ದೊಡ್ಡ ದೇಶದ ರಾಷ್ಟ್ರಪತಿಯಾಗಿ ನಾರಾಯಣನ್ ದೇಶದ ಪ್ರಜಾಪ್ರಭುತ್ವದ ಔನ್ನತ್ಯ ಹಾಗೂ ಜಾತ್ಯಾತೀತತೆಯ ಉದಾತ್ತ ಮೌಲ್ಯಗಳನ್ನು ಎತ್ತಿ ಹಿಡಿದರು. ಭಾರತದ ಭವಿಷ್ಯಕ್ಕೆ ಹಾಗೂ ಮುಂದಿನ ಜನಾಂಗಕ್ಕೆ ಅತ್ಯುನ್ನತ ಆದರ್ಶಗಳ ಮೇಲ್ಪಕ್ತಿ ಹಾಕಿಕೊಟ್ಟರು.

'ಸಂವಾದ' ಅಗಲಿದ ಆ ಮಹಾ ಪುರುಷನಿಗಾಗಿ ಕಂಬನಿ ಮಿಡಿಯುತ್ತದೆ.

○ ಇಂದೂಧರ ಹೊನ್ನಾಪುರ

ಸಮಕಾಲೀನ

ಕಳೆದ ೨೦ ವರ್ಷಗಳಿಂದ ನಮ್ಮ ಸರ್ಕಾರ ಮಾಹಿತಿ ತಂತ್ರಜ್ಞಾನ ಉದ್ಯಮಕ್ಕೆ ತೆರಿಗೆ ರಜೆಯನ್ನು ನೀಡಿದೆ. ಇದರೊಂದಿಗೆ ರಿಯಾಯ್ತಿ ದರದಲ್ಲಿ ಸರ್ಕಾರ ಈ ಉಧ್ಯಮಕ್ಕೆ ಭೂಮಿ ಒದಗಿಸುತ್ತಿದೆ. ಜನಸಾಮಾನ್ಯರಿಗೆ ಸಿಗದ ಭ್ರಷ್ಟಾಚಾರ ರಹಿತ ಸರ್ಕಾರಿ ಸೇವೆಯನ್ನು ಈ ಉಧ್ಯಮಕ್ಕೆ ನೀಡಲಾಗಿದೆ. ರೈತರಿಗೆ ಸಿಗದ ವಿದ್ಯುತ್ ಈ ಉದ್ಯಮಕ್ಕೆ ಧಾರಾಳವಾಗಿ ಸಿಗುತ್ತದೆ. ಈಗ ವಿಶ್ವ ಮಟ್ಟದ ರಸ್ತೆ ಮತ್ತು ಇತರೆ ಮೂಲ ಸವಲತ್ತುಗಳು ಬೇಕೆಂದು ಈ ಉದ್ಯಮದ ಕೆಲವೇ ಹಿರಿಯ ಸಹೋದರರಾದ ವಿಪ್ರೊ ಮತ್ತು ಇನ್‌ಫೋಸಿಸ್‌ಗಳು ಕೀಟಲೆ ಮಾಡಲು ಹೊರಟಿವೆ. ಸರ್ಕಾರಕ್ಕೆ ತೆರಿಗೆಯನ್ನೇ ಕೊಡದೆ ತೆರಿಗೆ ರಜೆಯನ್ನನುಭವಿಸುವ ಈ ಉದ್ಯಮಕ್ಕಾಗಿ ಸರ್ಕಾರ ಒಂಬತ್ತು ಸಾವಿರ ಕೋಟಿ ವೆಚ್ಚದಲ್ಲಿ ಮೇಲುಸೇತುವೆ ರಸ್ತೆಯನ್ನು ಮಾಡಿಕೊಡಲು ಮುಂದಾಗಿದೆ.

○ಡಾ|| ಜಿ. ಪಾಂಡುನಾಯಕ್

ಮಾಹಿತಿ ತಾಂತ್ರಿಕರ ಮೂಲ ಸೌಲಭ್ಯ

ಕರ್ನಾಟಕದ ರಾಜಕೀಯ ಸ್ಥಿತಿ ದಿನೇದಿನೇ ಹದಗೆಡುತ್ತಿದೆ. ರಾಜಕಾರಣಿಗಳು ಮೆರೆದಾಡುತ್ತಿರುವಾಗ ಜನ ಸಾಮಾನ್ಯರು ಹೊಟ್ಟೆಪಾಡಿಗಾಗಿ ಪರಿತಪಿಸುತ್ತಿದ್ದಾರೆ. ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಉದ್ಯಮಗಳು ಬಡವ ಬಲ್ಲಿದರಲ್ಲಿನ ಅಂತರವನ್ನು ಹೆಚ್ಚಿಸಿದೆ. ಹೊರ ರಾಜ್ಯಗಳ ವಲಸಿಗರು ಮಹತ್ತರ ಪ್ರಮಾಣದಲ್ಲಿ ಬೆಂಗಳೂರಿಗೆ ಬಂದಿರುವುದರಿಂದ ಸ್ಥಳೀಯ ಜನರಿಗೆ ಕುಡಿಯುವ ನೀರು, ನಡೆಯುವ ರಸ್ತೆಯಿಂದಿಡಿದು ಬಾಡಿಗೆ ಮನೆ ಅಥವಾ ಮನೆಕಟ್ಟಲೊಂದಿಷ್ಟು ನಿವೇಶನ ಕೂಡ ಕೈಗೆಟುಕದಂತಾಗಿದೆ. ವಲಸೆ ಬಂದ ಜನರು ಮತ್ತು ಮಾಹಿತಿ ತಂತ್ರಜ್ಞಾನ ಉದ್ಯಮದ ದುಬಾರಿ ಸಂಬಳ ಪಡೆವ ಮಂದಿ ಬೆಂಗಳೂರನ್ನು ದುಬಾರಿ ನಗರವನ್ನಾಗಿಸಿದ ಪರಿಣಾಮವಾಗಿ ಮೂಲತಃ ಬೆಂಗಳೂರಿನ ಜನರು ಧೃತಿಗೆಡಬೇಕಾದ ಸ್ಥಿತಿ ಉಂಟಾಗಿದೆ.

ಯಾರಿವರು

ಸರ್ಕಾರಿ ನೌಕರಿಗಳು ಮೀಸಲಾತಿಯಡಿಗೆ ಸೇರಿ ಸವರ್ಣೀಯರ ಏಕಸ್ವಾಮ್ಯದಿಂದ ಹೊರತಾದ ಕಾರಣ ಹೊಸ ಉದ್ಯಮಗಳನ್ನು ಹುಡುಕುವ ನಿಟ್ಟಿನಲ್ಲಿ ಸವರ್ಣೀಯರು ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಅನ್ವೇಷಣೆ ಮಾಡಿಕೊಂಡರು. ಈ ಉದ್ಯಮದ ಮೂಲ ಉದ್ದೇಶವೇನೆಂದರೆ ಭಾರತೀಯ ಮೂಲದ ಮಾಹಿತಿ ತಂತ್ರಜ್ಞಾನ ಕಾರ್ಮಿಕರನ್ನು ಕಡಿಮೆ ಬೆಲೆಗೆ ಖರೀದಿಸಿ ಕನಿಷ್ಠ ಹತ್ತು ಪಟ್ಟು ಲಾಭ ಬರುವಂತಹ ಪಾಶ್ಚಿಮಾತ್ಯ ರಾಷ್ಟ್ರಗಳ ಮಾಹಿತಿ ತಂತ್ರಜ್ಞಾನ ಉದ್ಯಮಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕಳುಹಿಸುವುದು ಅಥವಾ ಅಂತಹ ಸಂಸ್ಥೆಗಳ ಕೆಲಸವನ್ನು ಭಾರತದಲ್ಲೇ ಮಾಡಿಕೊಡುವುದು. ತಿಂಗಳಿಗೆ 45 ಸಾವಿರ ರೂಪಾಯಿ ಅಥವಾ ಒಂದು ಸಾವಿರ ಡಾಲರ್ ಸಂಬಳಕ್ಕೆ ಅಮೇರಿಕದಲ್ಲಿ ಮನೆ ಕೆಲಸದವರು ಕೂಡ ಸಿಗುವುದಿಲ್ಲ. ಆದರೆ ಈ ಬೆಲೆಗೆ ಭಾರತದಲ್ಲಿ ಇಬ್ಬರು ಮಾಹಿತಿ ತಂತ್ರಜ್ಞಾನ ಇಂಜಿನಿಯರುಗಳನ್ನು ನೇಮಕ ಮಾಡಿಕೊಳ್ಳಬಹುದು. ದಕ್ಷತೆಯ ದೃಷ್ಟಿಯಿಂದ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಮಿಸಲಾತಿ ಅಥವಾ ದೀನ ದಲಿತರಿಗೆ ಉದ್ಯೋಗ ಸಾಧ್ಯವಿಲ್ಲವೆನ್ನುವ ನಾರಾಯಣಮೂರ್ತಿ ಮತ್ತು ಅಜಿಂ ಪ್ರೇಂಜಿಗಳಿಗೆ ಈ ಕ್ಷೇತ್ರದ ಸಾಮರ್ಥ್ಯ ದಕ್ಷತೆಯಿಲ್ಲ ಬದಲಿಗೆ ಕಡಿಮೆ ಬೆಲೆಗೆ ಸಿಗುವ ಭಾರತೀಯ ಶ್ರಮಿಕನ ಸೇವೆ ಎಂಬುದು ತಿಳಿದಿದೆ. ಆದರೆ ಮೂಲತಃ ದಲಿತ ವಿರೋಧಿಗಳಾದ ಇಂತಹ ಉದ್ಯಮಿಗಳಿಗೆ ಸಮಾನತೆ ಎಂಬುದು ನುಂಗಲಾರದ ತುತ್ತು.

ವಿಶ್ವಮಟ್ಟದ ಮೂಲ ಸವಲತ್ತುಗಳು

ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಪ್ರಗತಿಯಿಂದ ಲಾಭ ಪಡೆದವರಲ್ಲಿ ಬಹುಪಾಲು ಮಂದಿ ಮೇಲ್ವರ್ಗಕ್ಕೆ ಸೇರಿದವರು. ಕಳೆದ 20 ವರ್ಷಗಳಿಂದ ನಮ್ಮ ಸರ್ಕಾರ ಈ ಉದ್ಯಮಕ್ಕೆ ತೆರಿಗೆ ರಜೆಯನ್ನು ನೀಡಿದೆ. ಇದರೊಂದಿಗೆ ರಿಯಾಯ್ತಿ ದರದಲ್ಲಿ ಸರ್ಕಾರ ಈ ಉದ್ಯಮಕ್ಕೆ ಭೂಮಿ ಒದಗಿಸುತ್ತಿದೆ. ಜನಸಾಮಾನ್ಯರಿಗೆ ಸಿಗದ ಭ್ರಷ್ಟಾಚಾರ ರಹಿತ ಸರ್ಕಾರಿ ಸೇವೆಯನ್ನು ಈ ಉದ್ಯಮಕ್ಕೆ ನೀಡಲಾಗಿದೆ. ರೈತರಿಗೆ ಸಿಗದ ವಿದ್ಯುತ್‌ಚಕ್ತಿ ಈ ಉದ್ಯಮಕ್ಕೆ ಧಾರಾಳವಾಗಿ ಸಿಗುತ್ತದೆ.

ಆದರೆ ಈಗ ವಿಶ್ವ ಮಟ್ಟದ ರಸ್ತೆಗಳು ಮತ್ತು ಇತರೆ ಮೂಲ ಸವಲತ್ತುಗಳು ಬೇಕೆಂದು ಈ ಉದ್ಯಮದ ಕೆಲವೇ ಹಿರಿಯ ಸಹೋದರರಾದ ವಿಪ್ರೊ ಮತ್ತು ಇನ್‌ಫೋಸಿಸ್‌ಗ... ಕೀಟಲೆ ಮಾಡಲು ಹೊರಟಿವೆ. ಸರ್ಕಾರಕ್ಕೆ ತೆರಿಗೆಯನ್ನೇ ಕೊ... ತೆರಿಗೆ ರಜೆಯನ್ನನುಭವಿಸುವ ಈ ಉದ್ಯಮಕ್ಕಾಗಿ ಸರ್ಕಾರ ... ಬ್ಯಾಂಕಿನಿಂದ ಸಾಲ ಪಡೆದು ಸುಮಾರು ಒಂಬತ್ತು ಸಾ... ಕೋಟಿ ರೂಪಾಯಿ ವೆಚ್ಚದಲ್ಲಿ ಮಡಿವಾಳದಿಂದ ಎಲೆಕ್ಟ್ರಾನಿಕ್ ... ವರೆಗೆ ಹನ್ನೆರಡು ಕಿಲೋಮೀಟರ್ ಉದ್ದದ ಮೇಲುಸೇತುವೆ ... ಯನ್ನು ಮಾಡಿಕೊಡಲು ಮುಂದಾಗಿದೆ.

ಜನಸಾಮಾನ್ಯರು ಬಳಸುವ ಅಡಿಗೆ ಉಪ್ಪಿನಿಂದ ಹಿಡಿ... ದೀನ ದಲಿತರು ಕುಡಿಯುವ ಹೆಂಡ ಸಾರಾಯಿಯ ಮೇಲೆ ವಿ... ಸುವ ತೆರಿಗೆಯ ಮೊತ್ತದಲ್ಲಿ ಈ ಸಾಲವನ್ನು ತೀರಿಸಲಾಗುತ್ತ... ದೇಶಾದ್ಯಂತ ಸಾವಿರಾರು ಜನರು ಇರಲು ಮನೆ, ಉಡಲು ಬ... ದುಡಿಯಲು ನೌಕರಿ, ಮತ್ತು ಕುಡಿಯಲು ನೀರಿಲ್ಲದೇ ಕಂಗಾಲಾ... ರುವಾಗ ಕೇವಲ ಮೇಲ್ವರ್ಗದವರ ಹಿತ ಕಾಪಾಡುವ ಮಾಹಿ... ತಂತ್ರಜ್ಞಾನ ಕ್ಷೇತ್ರಕ್ಕೆ ಈ ವಿಶೇಷ ಸವಲತ್ತುಗಳನ್ನು ನೀಡುವ ನ... ರಾಜಕಾರಿಣಿಗಳ ಕ್ರಮ ಅವರ ನಯವಂಚನೆಯ ನಿದರ್ಶ... ವಾಗಿದೆ.

ಯಾರು ಕಾರಣರು?

1999 ರಿಂದ 2004 ರವರೆಗೆ ಬೆಂಗಳೂರಿನ ಮೂ... ಸವಲತ್ತುಗಳನ್ನು ಅಭಿವೃದ್ಧಿ ಪಡಿಸುವ ಬೆಂಗಳೂರು ಅಜೆಂ... ಟಾಸ್ಕ್ ಫೋರ್ಸ್‌ನ ಅಧ್ಯಕ್ಷರಾಗಿದ್ದವರು ಇನ್‌ಫೋಸಿಸ್ ಮುಖಿ... ನಂದನ್ ನಿಲೆಕಣಿ. ರವಿಚಂದರ್, ರಾಮನಾಥ್‌ನಂತ... ಸವರ್ಣೀಯ ಬುದ್ಧಿವಂತರನ್ನೇ ಒಳಗೊಂಡಿದ್ದ ಈ ಸಂಸ್ಥೆ ಬೆಂ... ಳೂರು ನಗರಕ್ಕೆ ಮಾಡಿದ ಉಪಕಾರವಾದರೂ ಏನು? ಕ... ಐವತ್ತು ವರ್ಷ ಬಾಳಿಕೆ ಬರುವ ಕಾಂಕ್ರಿಟ್ ರಸ್ತೆಗಳನ್ನೇಕೆ ಮಾ... ಲಿಲ್ಲ ಈ ಬುದ್ಧಿವಂತರು. ಎಲೆಕ್ಟ್ರಾನಿಕ್ ಸಿಟಿಗೆ ಹೋಗುವ ... ಈಗಾಗಲೇ ಸಾಕಷ್ಟು ಅಗಲವಾಗಿ ನಿರ್ಮಿತವಾಗಿದೆ ಅಂ... ಸುಮಾರು 300 ಅಡಿ ಅಗಲ. ಮಾಹಿತಿ ತಂತ್ರಜ್ಞಾನ ಸಂಸ್ಥೆಗ... ತಮ್ಮ ಕಾರ್ಖಾನೆಗಳ ಹತ್ತಿರದಲ್ಲಿ ವಸತಿ ಗೃಹಗಳು, ಶಾ... ಕಾಲೇಜುಗಳು ಮತ್ತು ಇತರೆ ಮೂಲ ಸವಲತ್ತುಗಳನ್ನು ನೀಡಿ... ಪ್ರತಿದಿನ ಸುಮಾರು ಐವತ್ತು ಸಾವಿರ ನೌಕರರು ಇಪತ್ತು ಸಾ... ಕಾರುಗಳು ಮತ್ತು ನಾಲ್ಕುನೂರು ಬಸ್ಸುಗಳಿಂದ ಈ ರಸ್ತೆಯ... ಮುತ್ತಿಗೆ ಹಾಕುವ ಅವಶ್ಯಕತೆ ಇರುವುದಿಲ್ಲ. ಧರಂ ಸಿಂಗ್ ಬಂ... ತಕ್ಷಣವೇ ಬೆಂಗಳೂರಿನ ರಸ್ತೆಗಳು ಹಾಳಗಿಹೋದವೆ... ಮಾಹಿತಿ ತಂತ್ರಜ್ಞಾನ ಉದ್ಯಮಿಗಳ ಆಪಾದನೆಯಲ್ಲಿ ಸತ್ಯಾ... ಕಂಡು ಬರುತ್ತಿಲ್ಲ. ಇಷ್ಟೆಲ್ಲಾ ನಾಟಕವಾದ ನಂತರವು ರಾಜಕಾ... ಣಿಗಳು ಈ ಉದ್ಯಮಗಳನ್ನು ಬಿಟ್ಟುಕೊಡುತ್ತಿಲ್ಲ ಮತ್ತು ಈ ಉ... ಮಗಳು ಬೆಂಗಳೂರನ್ನು ಬಿಡಲು ಸಿದ್ಧವಾಗಿಲ್ಲ ಏಕೆ?.

ಭ್ರಷ್ಟಾಚಾರದ ಕಣಜ

ಕರ್ನಾಟಕ ರಾಜಕಾರಣದಲ್ಲೇನಿದೆ ಬಾಲಿವುಡ್‌ನಲ್ಲಿಯ... ಸಹ ಇಲ್ಲದ ಆಕರ್ಷಣೆ? ಮಾಜಿ ಪ್ರಧಾನ ಮಂತ್ರಿಗಳು, ಹ... ರಾಜ್ಯಪಾಲರುಗಳು, ಸಾಧು ಸಂತರು, ಮತ್ತು ಸಾಯು... ಸಮಯ ಬಂದವರು ಸಹ ಕರ್ನಾಟಕ ರಾಜಕಾರಣದಲ್ಲಿ ಮು... ವಾಗಿ ಬೆಂಗಳೂರನ್ನು ಬಯಸುತ್ತಾರೆ. ಮಾಹಿತಿ ತಂತ್ರಜ್ಞಾ... ಉದ್ಯಮಿಗಳು ಲಂಚ ಕೊಡುವುದಿಲ್ಲ ನಿಜ. ಆದರೆ ಅ...

ಭಿವೃದ್ಧಿಗಾಗಿ ಬೆಂಗಳೂರನ್ನು ಅಭಿವೃದ್ಧಿ ಮಾಡ ಯಸುವ ರಾಜಕಾರಿಣಿಗಳಿಗೆ ಹಣ ಮಾಡಲು ಹಲ ಾರು ಅವಕಾಶಗಳು ಹುಟ್ಟಿಕೊಳ್ಳುತ್ತವೆ. ಉದಾಹರಣೆಗೆ, ಲವತ್ತು ಸಾವಿರ ನಿವೇಶನಗಳನ್ನು ನಿರ್ಮಿಸಿ ಹಂಚಿದ ಸ್.ಎಂ. ಕೃಷ್ಣ ಸರ್ಕಾರ ಸುಮಾರು ನಾಲ್ಕು ಸಾವಿರದ ಐನೂರ ಐವತ್ತು ಎಕರೆ ಜಮೀನನ್ನು ಬೆಂಗಳೂರಿನ ಸುತ್ತ ಮುತ್ತ ಸ್ವಾಧೀನಪಡಿಸಿಕೊಂಡ ನಂತರ ಪ್ರಭಾವಿ ಭೂಮಾ ಕರಿಗೆ ಹಿಂತಿರುಗಿಸಿದೆ. ಎಕರೆಗೆ ಕನಿಷ್ಟ ಐದು ಲಕ್ಷ ರೂಪಾಯಿ ಎಂದರೂ ಸಹ ಸ್ವಾಧೀನ ಪಡಿಸಿಕೊಂಡ ಈ ಭೂಮಿಯನ್ನು ಹಿಂತಿರುಗಿಸುವಲ್ಲಿ ರಾಜಕಾರಿಣಿಗಳು ಮತ್ತು ಅಧಿಕಾರಿಗಳಿಗೆ ಕನಿಷ್ಟ 225 ಕೋಟಿ ರೂಪಾ ಯಿಯ ಲಂಚ ದೊರಕಿದೆ. ಬಡವರ ಭೂಮಿಯಲ್ಲಿ ಹಣ ಮಾಡುವವರು ಬೇರ್ಯಾರು ಅಲ್ಲ. ಮಣ್ಣಿನ ಮಕ್ಕಳೆನ್ನುವ ಳೀಯ ರಾಜಕಾರಣಿಗಳು.

ರ್ನಾಟಕ ಪ್ರಗತಿಪರ ರಾಜ್ಯವೇ?

ಈ ಬಗ್ಗೆ ನನಗೆ ಸಂಶಯವಿದೆ. ಆರ್ಥಿಕವಾಗಿ ಗತಿಪರ ರಾಜ್ಯವಾದ ಗುಜರಾತಿನಲ್ಲಿ ಮದ್ಯಪಾನದ ಂಪೂರ್ಣ ನಿಷೇಧ ಮಾಡಲಾಗಿದ್ದು ಬಡಜನರ ರೋಗ್ಯ ಮತ್ತು ಆರ್ಥಿಕ ಸ್ಥಿತಿಗತಿಗಳಲ್ಲಿ ಮಹತ್ತರ ಪ್ರಗತಿ ಣಸಿಗುತ್ತದೆ. ದೀನ ದಲಿತರು, ಹಿಂದುಳಿದವರೂ ಮತ್ತು ಲ್ಪ ಸಂಖ್ಯಾತರು ಕೈಗಾರಿಕೋದ್ಯಮಿಗಳಾಗಲು ನಿರಂತರ ರುಪಟ್ಟಿರುವ ಏಕೈಕ ರಾಜ್ಯವಿದು ಗುಜರಾತ್. ನೆರೆಯ ಜ್ಯವಾದ ತಮಿಳುನಾಡು ಜನಸಾಮಾನ್ಯರಿಗೆ ಉದ್ಯೋಗ ರಕಿಸುವ ನಿಟ್ಟಿನಲ್ಲಿ ರಾಜ್ಯದ್ಯಾಂತ ಹೊಸೂರು, ಲಂ, ಕೊಯಮತ್ತೂರು, ಮಧುರೈ, ಇತ್ಯಾದಿಯಾಗಿ ವಾರು ನಗರಗಳಲ್ಲಿ ಕಾರ್ಖಾನೆ ಆಧಾರಿತ ಉದ್ಯಮ ನ್ನು ಯಶಸ್ವಿಯಾಗಿ ನಿರ್ಮಿಸಿದೆ. ಕೇರಳ ರಾಜ್ಯ ಶಿಕ್ಷಣ ತ್ತು ಆರೋಗ್ಯ ಎರಡರಲ್ಲೂ ಮಹಿಳೆ-ಪುರುಷರೆಂಬ ದ ಭಾವವಿಲ್ಲದೆ ಮುನ್ನಡೆದಿದೆ. ಮಹಾರಾಷ್ಟ್ರದ ಂಬೈನಗರದಲ್ಲಿ ರಾತ್ರಿ ಹನ್ನೆರಡು ಗಂಟೆ ವೇಳೆಯಲ್ಲಿ ಹಿಳೆಯರು ರಿಕ್ಷಾ, ಬಸ್ಸು ಅಥವಾ ಟಾಕ್ಸಿಗಳಲ್ಲಿ ಒಬ್ಬಂಟಿ ಾಗಿ ಪ್ರಯಾಣ ಮಾಡಬಹುದಾದಂತಹ ಕಾನೂನು ವ್ಯವಸ್ಥೆಯನ್ನು ಸೃಷ್ಟಿಸಿದೆ.

ಆದರೆ ಕರ್ನಾಟದಲ್ಲಿ ದೇವರ ಹೆಸರಲ್ಲಿ ಹೆಣ್ಣು ಕ್ಕಳನ್ನು ದೇವ ದಾಸಿಯರನ್ನಾಗಿಸಿ ವೇಶ್ಯಾವಾಟಿಕೆಗೆ ಡಗಿಸಲಾಗುತ್ತಿದೆ. ರಾಜ್ಯದ ಮೂಲೆ ಮೂಲೆಗಳಲ್ಲಿ ತುಂಬಿ ತುಳುಕಾಡುವ ಹೆಂಡಸಾರಾಯಿ ನೀತಿಯಿಂದ ಸಾವಿರಾರು ಮಂದಿ ದಾರಿದ್ರ್ಯರಾಗಿ, ಕಾಯಿಲೆಗೀಡಾಗಿ, ಸಾಯುತ್ತಿದ್ದಾರೆ. ರಾಯಚೂರು, ಬಳ್ಳಾರಿ, ಗುಲಬರ್ಗಾ, ಬಿಜಾಪುರದಂತಹ ಪ್ರದೇಶಗಳಿಂದ ಬಡಜನರನ್ನು ಗುತ್ತಿಗೆ ದಾರರು ಕಡಿಮೆ ಬೆಲೆಗೆ ಖರೀದಿಸಿ ಬೆಂಗಳೂರು ಮತ್ತು ಮುಂಬೈನ ಗೃಹ ನಿರ್ಮಾಣ ಉದ್ಯಮಗಳಲ್ಲಿ ಹೆಚ್ಚು ಬೆಲೆಗೆ ಮಾರುತ್ತಿದ್ದಾರೆ. ಜಾತೀಯತೆ ಮತ್ತು ಅಸ್ಪೃಶ್ಯತೆ ಎಲ್ಲೆ ಲ್ಲಿಯೂ ತಲೆಯೆತ್ತಿನಿಂತಿದೆ. ದೀನ ದಲಿತರು ಸವರ್ಣೀ ಯರ ಹಿಡಿತದಿಂದ ಹೊರಬರಲು ಸಾಧ್ಯವಾಗಿಲ್ಲ. ಆದ್ದ ರಿಂದ ಬಿಹಾರ್ ಮತ್ತು ಒರಿಸ್ಸಾಗಳೊಡನೆ ಹೋಲಿಸಿದಾಗ ಮಾತ್ರ ಕರ್ನಾಟಕವೊಂದು ಉತ್ತಮ ರಾಜ್ಯವೆನಿಸುತ್ತದೆ, ಗುಜರಾತ್, ಮಹಾರಾಷ್ಟ್ರ ಅಥವಾ ಕೇರಳ ರಾಜ್ಯಗಳೊಡ ನೆಯಲ್ಲ. ಅತಿಯಾದ ಭ್ರಷ್ಟಾಚಾರದಿಂದ ಸರ್ಕಾರಿ ಆಡಳಿತ ಜನಸಾಮಾನ್ಯರಿಗೆ ನರಕಯಾತನೆಯನ್ನುಂಟು ಮಾಡಿದೆ.

ಯಾರು ಹಿತವರು?

ಎಸ್.ಎಂ. ಕೃಷ್ಣ ಆಡಳಿತದಲ್ಲಿ ನಗರಗಳು ಅದ ರಲ್ಲೂ ಮುಖ್ಯವಾಗಿ ಬೆಂಗಳೂರಿನ ಉದ್ಧಾರವಾಯಿತು ಎನ್ನುವವರುಂಟು. ಹಾಗಿದ್ದರೆ ಬೆಂಗಳೂರೇಕೆ ಮಳೆಯ ನೀರಿಗೆ ಮುಳುಗಿದೆ. ಮಾಹಿತಿ ತಂತ್ರಜ್ಞಾನ ಉದ್ಯಮಿಗಳೇಕೆ ರಸ್ತೆ ಸರಿಯಿಲ್ಲವೆಂದು ಅಳತೊಡಗಿದ್ದಾರೆ. ಧರಂ ಸಿಂಗ್ ಮತ್ತು ದೇವೆಗೌಡರು ಗ್ರಾಮೀಣಾಭಿವೃದ್ಧಿ ಮಾಡುತ್ತಿರುವು ದಾದರೆ ಬಡಜನರೇಕೆ ದಿಕ್ಕಾಪಾಲಾಗಿದ್ದಾರೆ. ಧರಂ ಸಿಂಗ್‌ರ ಮೂಲ ಉದ್ದೇಶ ಏನೇ ಆದರೂ ಮುಖ್ಯ ಮಂತ್ರಿಯಾಗಿರಬೇಕೆಂಬುದು. ಸೊನಿಯಾಗಾಂಧಿಯವರ ಉದ್ದೇಶ ಏನೇ ಆದರೂ ಬಿ.ಜೆ.ಪಿ. ಸರ್ಕಾರ ರಾಜ್ಯದಲ್ಲಿ ಹುಟ್ಟಬಾರದೆನ್ನುವುದು. ದೇವೆಗೌಡರ ಉದ್ದೇಶ ತಾವು ಹೇಳಿದಂತೆ ಕೇಳ ಬಯಸುವ ಮುಖ್ಯಮಂತ್ರಿಯಡಿಯಲ್ಲಿ ತಮ್ಮ ಮಕ್ಕಳನ್ನು ಉದ್ಧಾರ ಮಾಡುವುದು. ಜನ ಸಾಮಾನ್ಯರ ಕಣ್ಣೀರೊರೆಸುವವರಾರು ಇಲ್ಲ.

1995 ರಲ್ಲಿ ದೇವೆಗೌಡರು ಪ್ರಧಾನಮಂತ್ರಿಯಾದ ತಕ್ಷಣ ಮಾಡಿದ ಕೆಲಸ ಅಂದಿನ ಪಕ್ಷಧ್ಯಕ್ಷರಾದ ಲಾಲು ಯಾದವರಿಗೆ ಆದೇಶ ನೀಡಿ ರಾಮಕೃಷ್ಣ ಹೆಗ್ಗಡೆಯ ವರನ್ನು ಪಕ್ಷದಿಂದ ಯಾವುದೇ ಕಾರಣವಿಲ್ಲದೇ ಉಚ್ಚಾ ಟನೆ ಮಾಡಿಸಿದ್ದು ನಂತರ ಸಿ.ಬಿ.ಐ ಸಂಸ್ಥೆಯನ್ನು ಬಳಸಿ ಕೊಂಡು ಮೇವು ಹಗರಣದ ನಾಟಕದಲ್ಲಿ ಯಾದವರನ್ನೇ ಜೈಲಿಗೆ ಕಳುಹಿಸಿದವರು. ಅಂದಿನ ಕಾಂಗ್ರೆಸ್ ಪಕ್ಷ ತನ್ನ ಬೆಂಬಲ ಹಿಂತೆಗೆದುಕೊಂಡಿದ್ದರಿಂದ ಪ್ರಧಾನಿ ಹುದ್ದೆ ಯನ್ನು ಕಳೆದುಕೊಂಡ ಗೌಡರು ಕಾಂಗ್ರೆಸ್ಸಿಗೆ ಸೂಕ್ತ ಪಾಠ ಹೇಳಲಿದ್ದಾರೆ ಶೀಘ್ರವೇ.

ಕೃಷ್ಣ ಮರಳಿ ಬೆಂಗಳೂರಿಗೆ!

ಕೃಷ್ಣ ರಾಜ್ಯಪಾಲರಾಗಿರುವುದರಿಂದ ಸಂವಿಧಾನ ಅವರ ಮೇಲೆ ಯಾವುದೇ ಕಾನೂನು ಕ್ರಮ ಕೈಗೊಳ್ಳ ದಂತೆ ರಕ್ಷಣೆ ನೀಡುತ್ತದೆ. ಪಕ್ಷದ ಸೋಲಿಗೆ ಕಾರಣರಾದ ವ್ಯಕ್ತಿ ಬಾಲಬಿಚ್ಚುವುದು ಕಾಂಗ್ರೆಸ್ಸಿಗೆ ಇಷ್ಟವಿಲ್ಲ. ಆದ್ದರಿಂದ ಅವರನ್ನು ರಾಜ್ಯದಿಂದ ಹೊರ ಹಾಕಲಾಯಿತು. ಅವರು ಮತ್ತೆ ರಾಜ್ಯಕ್ಕೆ ಬಂದರೆ ಅವರ ಆಡಳಿತಾವಧಿಯ ಭ್ರಷ್ಟಾ ಚಾರಗಳು ಬೆಳಕಿಗೆ ಬಂದು ಜೈಲಿಗೆ ಹೋಗಬೇಕಾಗು ತ್ತದೆ. ನಾಗಪ್ಪ ಅಪಹರಣ, ರಾಜಕುಮಾರ್ ಅಪಹರಣ, ಅರ್ಕಾವತಿ ಬಡಾವಣೆ, ಕೇಂದ್ರ ಲೋಕಸೇವಾ ಆಯೋ ಗದ ಹಗರಣಗಳಿತ್ಯಾದಿಯಾಗಿ ಕೃಷ್ಣರನ್ನು ಜೈಲಿಗೆ ಕಳುಹಿ ಸಲು ಅವರ ವೈರಿಗಳ ಬಳಿಯಲ್ಲಿ ಸಾಕಷ್ಟು ರಾಜಕೀಯ ಆಯುಧಗಳಿವೆ.

ಕನ್ನಡಿಗರಿಗೆ ಮೀಸಲಾತಿ

ರಸ್ತೆ ಸರಿಮಾಡಿಸಿ ಎಂದು ಕೇಳಿದ್ದೇ ತಪ್ಪು ಕನ್ನಡಿಗರಿಗೆ ಮೀಸಲಾತಿ ಆಧಾರದ ಮೇಲೆ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಉದ್ಯೋಗ ಕೊಡಿ ಎನ್ನುತ್ತದೆ ನಮ್ಮ ಸರ್ಕಾರ. ಭಾಷೆ ಆಧಾರಿತ ಮೀಸಲಾತಿ ಕಾನೂನು ಬಾಹಿ ರವೆಂದು ಸರ್ವೋಚ್ಚನ್ಯಾಯಾಲಯ ಸಾಕಷ್ಟು ಬಾರಿ ಹೇಳಿದೆಯಾದರೂ ಬಡಕನ್ನಡಿಗರ ಸಹಾನುಭೂತಿ ಮತಗ ಳನ್ನು ಪಡೆಯಲು ನಮ್ಮ ರಾಜಕಾರಿಣಿಗಳು ಮಾಡಲೊರ ಟಿರುವ ತಂತ್ರ. ಇದು ರಾಜ್ಯದಲ್ಲಿನ ಕಳಪೆ ದರ್ಜೆಯ ಶಿಕ್ಷಣದಲ್ಲಿ ಸುಧಾರಣೆಯಾದರೆ ಕೆಲಸಗಳು ತಾವಾಗಿಯೇ ಕನ್ನಡಿಗರಿಗೆ ಸಿಗುತ್ತವೆ. ಸುಧಾರಣೆಯಿರಲಿ ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ಪ್ರಾರಂಭಿಸಲು ಸಹ ಹಿಂಜರಿ ಯುವ ನಮ್ಮ ಸರ್ಕಾರ ಮೀಸಲಾತಿಯ ಬಗ್ಗೆ ಮಾತನಾ ಡಲೊರಟಿದೆ.

ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಸುಮಾರು 30% ಹುದ್ದೆಗಳು ಗುತ್ತಿಗೆ ಆಧಾರದಲ್ಲಿವೆ. ಈ ಹುದ್ದೆಗಳಲ್ಲಿ ಸ್ಥಳೀಯರೇ ಹೆಚ್ಚು ಮಂದಿ ಇರುವುದು. ಸರ್ಕಾರ ಗುತ್ತಿಗೆ ಕಾರ್ಮಿಕರ (ನಿಷೇಧ ಮತ್ತು ನಿಯಂತ್ರಣ) ಕಾಯಿದೆಯ ಡಿಯಲ್ಲಿ ಈ ಗುತ್ತಿಗೆ ನೌಕರಿಗಳನ್ನು ನಿಷೇಧ ಮಾಡಿದರೆ ಸಹಜವಾಗಿಯೇ ಶೇಕಡ 30 ರಷ್ಟು ಹುದ್ದೆಗಳು ಕನ್ನಡಿ ಗರಿಗೆ ಸಿಗುತ್ತವೆ. ಅಪ್ರೆಂಟಿಸ್ ಕಾಯಿದೆಯಡಿಯಲ್ಲಿ ಕನ್ನಡಿ ಗರಿಗೆ ಮಾಹಿತಿ ತಂತ್ರಜ್ಞಾನ ಕಂಪನಿಗಳಲ್ಲಿ ತರಬೇತಿ ನೀಡಲು ಸರ್ಕಾರ ಆದೇಶ ಹೊರಡಿಸಿದರೆ, ತರಬೇತಿಯ ನಂತರ ಕನ್ನಡಿಗರು ಅಲ್ಲಿಯೇ ಕೆಲಸಗಿಟ್ಟಿಸುವ ಪ್ರಯತ್ನ ಮಾಡಬಹುದು. ಹೀಗೆ ನ್ಯಾಯ ಸಮ್ಮತವಾದ ಕ್ರಮಗಳನ್ನು ಕೈಗೊಳ್ಳದ ಸರ್ಕಾರ ಕಾನೂನು ಬಾಹಿರ ಭಾಷೆ ಆಧಾರಿತ ಮೀಸಲಾತಿಗೆ ಕಣ್ಣಿಟ್ಟಿದೆ.

1994 ರಲ್ಲಿ ಕಳಪೆ ಮಟ್ಟದ ಕೋಳಿಮಾಂಸವನ್ನು ಮಾರುತ್ತೀರಾ ಎಂದು ಕೆಂಚಕಿ ಫ್ರೈಡ್ ಚಿಕನ್ ಸಂಸ್ಥೆಯ ಬಳಿ ಗಲಾಟೆಮಾಡಿದ ರೈತ ಸಂಘದ ಅಧ್ಯಕ್ಷ ಪ್ರೊ.ಎಂ.ಡಿ ನಂಜುಂಡ ಸ್ವಾಮಿಯವರನ್ನು ಜೈಲಿಗೆ ಕಳುಹಿಸಿದ ಅಂದಿನ ಮುಖ್ಯಮಂತ್ರಿ ದೇವೆಗೌಡರು ಈಗ ಮಾಹಿತಿ ತಂತ್ರಜ್ಞಾನ ಸಂಸ್ಥೆಗಳ ಮುಂದೆ ಗಲಾಟೆ ಮಾಡುತ್ತಿರುವ ಕನ್ನಡ ರಕ್ಷಣಾ ವೇದಿಕೆಯ ನಾರಾಯಣಗೌಡರನ್ನೇಕೆ ಬಂಧಿಸ ಬಯಸುವುದಿಲ್ಲ. □

ವರ್ತಮಾನ

ಪ್ಯಾರಿಸ್ ಪ್ರಳಯ?

ಪ್ಯಾರಿಸ್ ನಗರ ಈಗ ಮತ್ತೊಮ್ಮೆ ಹತ್ತಿ ಉರಿಯುತ್ತಿದೆ. ಒಂದು ವಾರ ಇಡೀ ಪ್ಯಾರಿಸ್ ನಗರದಲ್ಲಿ ಕರ್ಫ್ಯೂ, ಗೋಲಿಬಾರ್, ಹಾಗೂ ಹಿಂಸಾಚಾರ. ಒಂದು ವರದಿಯ ಪ್ರಕಾರ ಕಳೆದ ಅಕ್ಟೋಬರ್ ೨೭ರಂದು ಪ್ರಾರಂಭವಾದ ಈ ಹಿಂಸಾಚಾರದಲ್ಲಿ ನವಂಬರ್ ೮ರ ವರೆಗೆ ೬೦೦೦ ವಾಹನಗಳು ಸುಟ್ಟುಹೋಗಿವೆ ೧೨೦೦ ಕಛೇರಿಗಳು, ೮೪ ಸಾರ್ವಜನಿಕ ಕಛೇರಿಗಳು, ಬೆಂಕಿಗೆ ಆಹುತಿಯಾಗಿವೆ, ಈಗ ಈ ಸಂಕ್ಷೋಭೆಯ ಕೆನ್ನಾಲಗೆ ಪ್ಯಾರಿಸ್ ನಗರವನ್ನು ದಾಟಿ ಫ್ರಾನ್ಸಿನ ೨೭೪ ನಗರಗಳಿಗೂ ವಿಸ್ತರಿಸಿದೆ. ಅಷ್ಟೇ ಅಲ್ಲ ಅದು ಫ್ರಾನ್ಸಿನ ಗಡಿಯನ್ನು ದಾಟಿ ಇಂಗ್ಲೆಂಡ್, ಜರ್ಮನಿ, ಸ್ಪೇನ್, ಪೋರ್ಚುಗಲ್ಲುಗಳಿಗೆ ವಿಸ್ತರಿಸಿದೆ.

○ ಶಿವಸುಂದರ್

ಪ್ಯಾರಿಸ್ ಎಂದರೆ ಸ್ವರ್ಗ. ಫ್ಯಾಶನ್ನಿನ ತವರೂರು. ಫ್ರಾನ್ಸಿನ ರಾಜಧಾನಿ–ಯುರೋಪಿನ ಸಾಂಸ್ಕೃತಿಕ ರಾಜಧಾನಿ. ಇಡೀ ವಿಶ್ವಕ್ಕೆ "ಸ್ವಾತಂತ್ರ್ಯ, ಭ್ರಾತೃತ್ವ, ಸಮಾನತೆ"ಯ ಪ್ರಜಾತಾಂತ್ರಿಕ ತತ್ವಗಳನ್ನು ಕಲಿಸಿಕೊಟ್ಟ ದೇಶ. ಊಳಿಗಮಾನ್ಯತೆಯ ವಿರುದ್ಧ ಯಶಸ್ವೀ ಜನಕ್ರಾಂತಿ ನಡೆದ ಮೊಟ್ಟ ಮೊದಲ ದೇಶ. ಅಷ್ಟು ಮಾತ್ರವಲ್ಲ ಕಾರ್ಮಿಕರ ಮೊತ್ತ ಮೊದಲ ಕಾರ್ಮಿಕ ರಾಜ್ಯ–ಪ್ಯಾರಿಸ್ ಕಮ್ಯೂನ್–ಸ್ಥಾಪನೆಯಾಗಿದ್ದೂ ಪ್ಯಾರಿಸನಲ್ಲೇ. ಯಾವುದೇ ಸಮುದಾಯ ಒಗ್ಗೂಡಿ ಹೋರಾಡಲು ಸಾಧ್ಯವಿಲ್ಲವೆಂಬ ಪೋಸ್ಟ್ ಮಾಡರ್ನ್ ಸಿದ್ಧಾಂತ ಹುಟ್ಟಿದ್ದೂ ಇದೇ ಪ್ಯಾರಿಸ್‌ನಲ್ಲಿ. ಅದೇ ಸಿದ್ಧಾಂತವನ್ನು 95ರಲ್ಲಿ ಬಗ್ಗು ಬಡೆದ ಬೃಹತ್ ಸಾರಿಗೆ ಕಾರ್ಮಿಕರ ಮುಷ್ಕರ ನಡೆದದ್ದೂ ಇದೇ ಪ್ಯಾರಿಸ್ಸಿನಲ್ಲಿ ಪಿಯರಿ ಬೋರ್ದೋ ಎಂಬ ತತ್ವಶಾಸ್ತ್ರಜ್ಞ 1995 ರಲ್ಲಿ ಪೋಸ್ಟ್ ಮಾಡರ್ನ್ ಸಿದ್ಧಾಂತವನ್ನು ಮಗ್ಗಲು ಮುರಿದದ್ದೂ ಇದೇ ಪ್ಯಾರಿಸ್ಸಿನಲ್ಲಿ. ಇಡೀ ಯುರೋಪನ್ನು ತಲ್ಲಣಗೊಳಿಸಿದ 1968ರ ಫ್ರಾನ್ಸಿನ ಬೃಹತ್ ವಿದ್ಯಾರ್ಥಿ ಚಳವಳಿಯ ಕೇಂದ್ರ ಸ್ಥಾನ ಆಗಿದ್ದೂ ಇದೇ ಪ್ಯಾರಿಸ್ ನಗರವೇ!

ಅಂತಹ ಪ್ಯಾರಿಸ್ ನಗರ ಈಗ ಮತ್ತೊಮ್ಮೆ ಹತ್ತಿ ಉರಿಯುತ್ತಿದೆ. ಕಳೆದ ಒಂದು ವಾರ ಇಡೀ ಪ್ಯಾರಿಸ್ ನಗರದಲ್ಲಿ ಕರ್ಫ್ಯೂ, ಗೋಲಿಬಾರ್, ಹಾಗೂ ಹಿಂಸಾಚಾರ. ಒಂದು ವರದಿಯ ಪ್ರಕಾರ ಕಳೆದ ಅಕ್ಟೋಬರ್ 27ರಂದು ಪ್ರಾರಂಭವಾದ ಈ ಹಿಂಸಾಚಾರದಲ್ಲಿ ನವಂಬರ್ 8ರ ವರೆಗೆ 6000 ವಾಹನಗಳು ಸುಟ್ಟುಹೋಗಿವೆ 1200 ಕಛೇರಿಗಳು, 84 ಸಾರ್ವಜನಿಕ ಕಛೇರಿಗಳು, ಬೆಂಕಿಗೆ ಆಹುತಿಯಾಗಿವೆ, ಈಗ ಈ ಸಂಕ್ಷೋಭೆಯ ಕೆನ್ನಾಲಗೆ ಪ್ಯಾರಿಸ್ ನಗರವನ್ನು ದಾಟಿ ಫ್ರಾನ್ಸಿನ 274 ನಗರಗಳಿಗೂ ವಿಸ್ತರಿಸಿದೆ. ಅಷ್ಟೇ ಅಲ್ಲ ಅದು ಫ್ರಾನ್ಸಿನ ಗಡಿಯನ್ನು ದಾಟಿ ಇಂಗ್ಲೆಂಡ್, ಜರ್ಮನಿ, ಸ್ಪೇನ್, ಪೋರ್ಚುಗಲ್ಲುಗಳಿಗೆ ವಿಸ್ತರಿಸಿದೆ.

ಏನಾಯಿತು ಪ್ಯಾರಿಸ್ಸೆಂಬ ಅಮರಾವತಿಗೆ ಯುರೋಪೆಂಬ ಸ್ವರ್ಗಕ್ಕೆ?

ಕಳೆದ 5 ದಶಕಗಳಲ್ಲಿ ಕಂಡರಿಯದ ಈ ಮಹಾನ್ ಸಂಕ್ಷೋಭೆಯ ಸ್ಫೋಟಕ್ಕೆ ಕಾರಣ ಯಾರೋ ಕೆಲವು ಭಯೋತ್ಪಾದಕರಲ್ಲ. ಅಥವಾ ದಾರಿ ತಪ್ಪಿದ ಯುವಜನರೂ ಅಲ್ಲ. ಈಗ ಬಹಿರಂಗವಾಗಿ ಸೋಲುತ್ತಿರುವ ಯುರೋಪಿನ ಕೀವಿಗೆ ಫ್ರಾನ್ಸಿನ ಹಾಗೂ ಇತರ ಯುರೋಪ್ ದೇಶಗಳ ಒಳಗೆ ಹಸಿ–ಹಸಿಗಾಯವಾಗಿಯೇ ಉಳಿದು ಬೆಳೆದು ವ್ರಣವಾಗುತ್ತಿರುವ ಜನಾಂಗಭೇಧ, ನಿರುದ್ಯೋಗ ಹಾಗೂ ನಿತ್ಯ ಅಪಮಾನಗಳೇ ಕಾರಣ ಎಂದರೆ ಆಶ್ಚರ್ಯವಾಗಬೇಕಿಲ್ಲ.

ಸ್ವರ್ಗದ ಹಿತ್ತಲಲ್ಲಿ ನರಕವನ್ನು ವಾಚಿಸುವ ಆಫ್ರಿಕನ್–ಅರಬ್ಬರ ಬದುಕು:

ಬೆಂಗಳೂರಿಗೆ ಬಂದ ಪ್ರವಾಸಿಗರು ವಿಧಾನ ಸೌಧವನ್ನು, ಸದಾಶಿವನಗರದ ಬಂಗಲೆಗಳ ವೈಭವವನ್ನು ನೋಡಿ ಉದ್ಯಾನನಗರಿ ಎಂದು ಕರೆಯುತ್ತಾರೆ. ಆದರೆ ಆ ಥಳುಕಿನ ಹಿಂದೆ ನರಕ ಸದೃಶವಾದ ಸ್ಲಮ್ಮುಗಳಲ್ಲಿ ಬೆಂಗಳೂರಿನ ಅರ್ಧಜನ ಬದುಕುತ್ತಾರೆ. ಯುರೋಪಿನಲ್ಲೂ ಅದೇ ಕಥೆ. ಪ್ಯಾರಿಸ್ಸನ್ನು ದಿನವೊಂದಕ್ಕೆ ಭೇಟಿ ನೀಡುವ ಯಾರಿಗೂ ಆ ವೈಭವದ ಹಿಂದೆ ಭಾರತದ ಸ್ಲಮ್ಮುಗಳಿಗಿಂತಲೂ ಹೀನಾಯವಾದ ಪರಿಸ್ಥಿತಿಯಲ್ಲಿ ಬದುಕುತ್ತಿರುವ ಲಕ್ಷಾಂತರ ಆಫ್ರೋ–ಅರಬ್ಬಿಗಳು, ಮುಸ್ಲಿಮರು ಸಾಯಲಾರದೆ ಬದುಕುತ್ತಾರೆ. ಪ್ಯಾರಿಸ್ಸಿನ ಪರಿಶುದ್ಧತೆಗೆ ಈ ಐರೋಪ್ಯ ದಲಿ[ತರ] ಶ್ರಮವೇ ಕಾರಣ.

ಸ್ವರ್ಗದ ಹಿತ್ತಲಲ್ಲಿರುವ ಈ ನರಕವಾಸಿಗಳ ಬದುಕ[ನ್ನು] ನೋಡಿದರೆ ಸಾಕು ಯುರೋಪಿನ ಪ್ರಜಾತಂತ್ರದ, ಬಿಳಿಯರ ನಾ[ಗ]ರೀಕತೆಯ ಹಿಂದಿರುವ ಅತ್ಯಂತ ಪಾಶವೀ ಜನಾಂಗೀಯ ಬೇ[ಧ] ಬಂಡವಾಳಶಾಹಿ ಕ್ರೌರ್ಯ ಬೆಳಕಿಗೆ ಬರುತ್ತದೆ. ಗೆಟ್ಟೋಗಳೆಂ[ದು] ಕರೆಯಲ್ಪಡುವ ಈ 'ಫ್ರೆಂಚ್ ಸ್ಲಮ್ಮು'ಗಳಲ್ಲಿ ಕುಡಿಯುವ ನೀ[ರು] ಶೌಚಾಲಯ, ಕೊರೆಯುವ ಚಳಿಯಿಂದ ಬಚಾವಗಲು ಹಿ[ಟಿಂಗ್] ಸಿಸ್ಟಿಮ್, ವಿದ್ಯುತ್ ಎಲ್ಲಕ್ಕೂ ಖೋತ. ದಿನೇ ದಿನೇ ಬೆಳೆಯುತ್ತಿರು[ವ] ಈ ಸಮುದಾಯದ ಶೇ. 40ರಷ್ಟು ಯುವಕರಿಗೆ ಕೆಲಸವಿಲ್ಲ. ಜಾಗ[ತೀ]ಕರಣದ ಹೊಸ ನೀತಿಯ ಭಾಗವಾಗಿ ನಿರುದ್ಯೋಗಿ ಯುವಕರಿ[ಗೆ] ಹಾಗೂ ಗೆಟ್ಟ ವಾಸಿಗಳಿಗೆ ನೀಡುತ್ತಿದ್ದ ಎಲ್ಲ ಕಲ್ಯಾಣಕಾರಿ ಸೌಕರ್ಯಗಳನ್ನು (Social Security) ಹಿಂತೆಗೆದುಕೊಳ್ಳಲಾಗಿದೆ. ಇ[ದ]ರಿಂದಾಗಿ ಈ ಆಫ್ರೋ–ಅರಬ್ಬರ, ಮುಸ್ಲಿಮರ ದಿನ ನಿತ್ಯದ ಬದು[ಕು] ಮತ್ತಷ್ಟು ದಾರುಣಗೊಂಡಿದೇ ಫ್ರಾನ್ಸಿನಲ್ಲಿ ಸಮಾಜವಾದಿ ಸರ್ಕಾರ[ವೇ] ಬಂದರೇ, ನವ ಫ್ಯಾನಿಸ್ಟರ ಸರ್ಕಾರವೇ ಬಂದರೂ ಫ್ರಾನ್ಸಿನ ಶ್ರಮಜೀವಿ ಜನಾಂಗದ ಬದುಕು ಮಾತ್ರ ದಿನೇ–ದಿನೇ ಬ[ರ್ಬರ]ಯಾಗುತ್ತಿದೆ.

'ನಾಗರೀಕ ಯುರೋಪ್'–ಅನಾಗರೀಕ ಜನಾಂಗೀಯ ಭೇದ?

ಬರೀ ಬಡತನ ಮಾತ್ರವೇ ಆಗಿದ್ದರೂ ಸಹಿಸಬಹು[ದಿ]ತ್ತೇನೋ? ಆದರೆ ಅದರೊಡನೆ ಆಫ್ರೋ–ಅರಬ್ಬ ಮುಸ್ಲಿಮರಿ[ಗೆ] ಫ್ರಾನ್ಸಿನ 'ನಾಗರೀಕ ಸಮಾಜ' ಹಾಗೂ ಪೋಲೀಸರಿಂದ ದಿನ ನಿತ್ಯ ಅಪಮಾನ. ಪೋಲೀಸರಿಂದ ಯಾವ ಕ್ಷಣದಲ್ಲಿ ಬೇಕಾದರು ಬಿಳಿಯರಲ್ಲದ ಈ ಜನಾಂಗದ ಐಡೆಂಟಿಟಿ ಚೆಕ್ ನಡೆಯುತ್ತದೆ. ಗೆಟ್ಟುಗಳಲ್ಲಿರುವ ಆಫ್ರೋ–ಅರಬ್ಬಿಗಳಿಗೆ ID ಕಾರ್ಡ್ ಇಲ್ಲದೇ ಇದ್ದ[ರೆ] ಅದು ಶಿಕ್ಷಾರ್ಹ ಅಪರಾಧ, ಆಗ ಅವರನ್ನು ಅನಧಿಕ[ೃತ] ವಲಸೆಗಾರರೆಂದು ಕರೆದು ಜೈಲಿಗೆ ಹಾಕಲಾಗುತ್ತದೆ. ಅದನ್ನು ಚೆ[ಕ್] ಮಾಡುವ ಬಿಳಿ ಪೋಲೀಸರು ID ಕಾರ್ಡ್ ಇದ್ದರೂ ಅವರ[ನ್ನು] ಮರ್ಯಾದೆ ಕೊಡುವುದಿಲ್ಲ. ಇಲ್ಲದಿದ್ದರಂತೂ ಮುಗಿಯಿತು. ಫ್ರಾನ್ಸ್ ಬಿಳಿ ನಾಗರೀಕರ ದೃಷ್ಟಿಯಲ್ಲಿ ಈ ಬಡ–ಕರಿಯ–ಮಿಶ್ರ ವರ್ಣೀಯ ಆಫ್ರೋ–ಅರಬ್ ಮುಸ್ಲಿಮರು ಫ್ರಾನ್ಸ್ ಸಮಾಜದ ಅಪಮಾನ. ಅವ[ರು] ಮನುಷ್ಯರೇ ಅಲ್ಲಿ. ಪ್ರಾಣಿಗಳಿಗಿಂತಲೂ ಕಡೆ. ಫ್ರಾನ್ಸಿನ ಗೃಹಮಂತ್ರಿ[ಯ] ಪ್ರಕಾರ ಅವರು "ತೊಳೆಯಬೇಕಾಗಿರುವ ಕೊಚ್ಚೆ" ನಿಜ. ಅಕ್ಷರ[ಶಃ] ನಮ್ಮ ಹಳ್ಳಿಗಾಡಿನ ದಲಿತರ ಪರಿಸ್ಥಿತಿ.

ವಾಸ್ತವವಾಗಿ ಅಕ್ಟೋಬರ್ 27 ರಂದು ಪ್ರಾರಂಭವಾದ ಹಿಂಸಾಚಾರಕ್ಕೆ ಕಾರಣವಾದದ್ದು ಪ್ಯಾರಿಸಿನ ಬಿಳಿ ಸಮಾಜ–ಬಿ[ಳಿ] ಪೋಲೀಸರ ಈ ಜನಾಂಗೀಯ ವರ್ತನೆಯೇ!

ಅಕ್ಟೋಬರ್ 27ರಂದು ಪ್ಯಾರಿಸ್ಸಿನ, ಈ ಬಗೆಯ ಶ್ರ[ಮ]ಜೀವಿಗಳೇ ವಾಸಿಸುವ ಗೆಟ್ಟೋ ಒಂದರಲ್ಲಿ ಕೆಲವು ಹೈಸ್ಕೂಲ್ ಹು[ಡು]ಗರು–ಮುಖ್ಯವಾಗಿ ಅರಬ್ಬಿ ಮುಸ್ಲಿಮರು–ಫುಟ್‌ಬಾಲ್ ಆಡುತ್ತಿದ್ದ[ರು] ಇದ್ದಕ್ಕಿಂದಂತೆ ಅಲ್ಲಿ ಈ ಬಿಳಿ ಪೋಲೀಸರು ಪ್ರತ್ಯಕ್ಷರಾದರು. ಅವರ[ನ್ನು] ಕಂಡೊಡನೆ ಈ ಹುಡುಗರು ದಿಕ್ಕಾಪಾಲಾಗಿ ಓಡಿದರು. ಅವರಲ್ಲಿ ಕೆ[ಲ]ವರು ಬಳಿ ID ಕಾರ್ಡಿರಲಿಲ್ಲ. ಅವರಲ್ಲಿ 17 ವಯಸ್ಸಿನ ಜಿಯಾದ್ ಬೆನ್ ಹಾಗೂ 15 ವಯಸ್ಸಿನ ಬನ್ನಾನ್ ಟ್ರಾಮೊಲ್ ಎಂಬಿಬ್ಬ[ರು]

ೂತ್ತಿಲ್ಲದೆ ಎಲೆಕ್ಟ್ರಿಕ್ ಟ್ರಾನ್ಸ್‌ಫಾರ್ಮರ್ ಇಡುವ ಕಪಾ ೋಂದರಲ್ಲಿ ಅವಿತುಕೊಂಡು ಕೂಡಲೇ ಎಲೆಕ್ಟ್ರಿಕ್ ಶಾಕಿ ಂದಾಗಿ ಸತ್ತುಹೋದರು. ಈ ಸುದ್ದಿ ಕಾಳ್ಗಿಚ್ಚಿನಂತೆ ಬ್ಬಿತು. ಆದರೂ ರಂಜಾನಿನ ದಿನಗಳಾದ್ದರಿಂದ ಾರನೇ ದಿನ 1000 ಮುಸ್ಲಿಮರು "Killed For no easons" (ವಿನಾಕಾರಣ ಕೊಲ್ಲಲ್ಪಟ್ಟವರು) ಎಂಬ ಶರ್ಟು ಹಾಕಿಕೊಂಡು ಪ್ರದರ್ಶನ ನಡೆಸಿದರು. ದರೂ ಮಾರನೇ ದಿನ ರಾತ್ರಿಯೇ 400ಕ್ಕೂ ಹೆಚ್ಚು ಸ್ತ್ರ ಬಿಳಿ ಪೊಲೀಸರು ಆ ಗೆಟ್ಟೋ ಪ್ರದೇಶವನ್ನು ಮುತ್ತಿಗೆ ಕಿದರು. ರಂಜಾನಿನ ಪ್ರಾರ್ಥನೆಗೂ ಹೊಗಲು ಬಿಡದೆ ತ್ರ ಭಾಷೆಯಿಂದ ಮುಸ್ಲಿಮರನ್ನು, ಇಸ್ಲಾಂ ಅನ್ನು ದಿಸಲು ಪ್ರಾರಂಭಿಸಿದರು. ಮುಸ್ಲಿಂ ಮಹಿಳೆಯರ ಾತೆಗೂ ಅಸಭ್ಯವಾಗಿ ವರ್ತಿಸಿದರು. ಇದು ಆ ಗೆಟ್ಟೋ ಾಸಿಗಳ ಸಹನೆಯ ಕಟ್ಟೆಯೊಡೆಸಿತು, ಬೀದಿಗೆ ಬಂದ ುವಕರು ತಮ್ಮ ಅಸಮಾಧಾನವನ್ನು-ಆಕ್ರೋಶವನ್ನು ಸಾತ್ಮಕವಾಗಿ ಪ್ರಕಟಗೊಳಿಸಲು ಪ್ರಾರಂಭಿಸಿದರು ದರೂ ಈವರೆಗೆ ಅವರಿಂದ ಪ್ರಾಣಹಾನಿಯಾದ ದಿಗಳಿಲ್ಲ.

್ರಿನ್ಸ್ ಸರ್ಕಾರದ ಪೊಲೀಸ್ ಭಯೋತ್ಪಾದನೆ:

ಆದರೆ ಈ ಬೆಳವಣಿಗೆಗಳನ್ನು ನಂತರ ಫ್ರಾನ್ಸಿನ ಜಾ ತಾಂತ್ರಿಕ ಸರ್ಕಾರ ನಿಭಾಯಿಸಿದ್ದಾದರೂ ಹೇಗೆ? ಂತರದ ಸರ್ಕಾರದ ಕ್ರಮಗಳಲ್ಲಿ ಯಾವುದೇ ಮಾನವೀ ಂತೆ ಯಾಗಲಿ ನಾಗರೀಕತೆಯಾಗಲೀ, ಪ್ರಜಾತಾಂತ್ರಿಕ ಯಾ ಗಲೀ ಇರಲಿಲ್ಲ. ವಾಸ್ತವವಾಗಿ ಈ ಬಿಕ್ಕಟ್ಟು ನ್ಸಿನ ಪ್ರಜಾ ತಾಂತ್ರಿಕತೆಯ ಮುಖವಾಡದ ಹಿಂದಿರುವ ಫ್ಯಾಸಿಸ್ಟ್ ಪ್ರವೃತ್ತಿಯನ್ನು ಸ್ಪಷ್ಟವಾಗಿ ಬಯಲಿಗೆ ದಿತು.

ಈ ತಥಕಥಿತ 'ಹಿಂಸಾಚಾರಕ್ಕೆ' ಕಾರಣಗಳೇನೆಂದು ಚಿತ್ತು ಯೋಚಿಸದ ಫ್ರಾನ್ಸಿನ ಸರ್ಕಾರ ಕೂಡಲೇ ನನ್ನು ಪೊಲೀಸ್ ಭಯೋತ್ಪಾದನೆಯ ಮೂಲಕ ಕ್ಕುವ ಕ್ರಮಗಳನ್ನು ಕೈಗೊಂಡಿತು. ಅದಕ್ಕಾಗಿ 1955 ಫ್ರಾನ್ಸಿನ ಕಾಲೋನಿಯಾಗಿದ್ದ ಅಲ್ಜೀರಿಯಾದ ವಿಮೋ ಾ ಹೋರಾಟಗಾರರನ್ನು ಹತ್ತಿಕ್ಕಲೆಂದು ಬಳಸಲಾಗು ಅತ್ಯಂತ ಕರಾಳ ಕಾಯಿದೆಗೆ ಮರುಜೀವಕೊಟ್ಟಿತು. ಂದರಲ್ಲಿ ಯಾವಾಗಬೇಕಾದರು ಕರ್ಫ್ಯೂ ಹಾಕಬಹು ದ ಪರಮಾಧಿಕಾರವನ್ನು ಪೊಲೀಸರಿಗೆ ಕೊಟ್ಟಿತು. ಪೊಲೀಸರು ಯಾರನ್ನುಬೇಕಾದರು, ಎಲ್ಲಿಬೇಕಾ ೂ ವಾರಂಟಿಲ್ಲದೆ ಬಂಧಿಸಿ ಜೈಲಿಗೆ ತಳ್ಳಬಹುದು. ಸ್ಟ್ ಟ್ರಾಕ್ ಕೋರ್ಟುಗಳನ್ನು ರಚಿಸಿ ವಿಚಾರಣೆಯ ಟಕ ನಡೆಸಿ ಶಿಕ್ಷೆ ವಿಧಿಸಬಹುದು. ಅದಕ್ಕಾಗಿಯೇ ಬೇಗ ೇಗನೇ ಹತ್ತಾರು ಬಿಳಿ ನ್ಯಾಯಾಧೀಶರನ್ನು ನೇಮಿಸಿ ಳಲಾಗಿದೆ. ಆದ್ದರಿಂದಲೇ ಕೇವಲ ಕೆಲವು ದಿನಗಳಲ್ಲೇ 0 ಕ್ಕೂ ಹೆಚ್ಚು ಜನರನ್ನು ಬಂಧಿಸಲಾಗಿದೆಯಲ್ಲದೆ 91 ರಿಗೆ ಶಿಕ್ಷೆಯನ್ನು ವಿಧಿಸಲಾಗಿದೇ ಪ್ರಜಾತಾಂತ್ರಿಕ ನ್ಸಿನಲ್ಲಿ ಇದರ ಬಗ್ಗೆ ವರದಿಯನ್ನು ಮಾಡದಂತೆ ಕೆಗಳ ಮೇಲೂ ನಿರ್ಬಂಧ ವಿಧಿಸಲಾಗಿದೆ.

ಗಾಯದ ಮೇಲೆ ಬರೆ ಎಳೆಯುವಂತೆ, ಫ್ರಾನ್ಸಿನ ಿ ಸರ್ಕಾರದ ಬಲಪಂಥೀಯ ಗೃಹಮಂತ್ರಿ ರ್ಕೋಜಿ, ಈ ಇಡೀ ಗೆಟ್ಟೋ ವಾಸಿಗಳನ್ನು, ಆಫ್ರೋ-ಬ್ ಮುಸ್ಲಿಂ ಸಮುದಾಯವನ್ನು ಫ್ರಾನ್ಸಿನ "ಕೊಚ್ಚೆ ಡಿ" ಎಂದು ಕರೆದು ಅದನ್ನು "ಕೊಚ್ಚಿ ತೊಳೆಯಲಾ ುದೆಂದು" ಘೋಷಿಸಿದ್ದಾನೆ ಅಲ್ಲದೆ ಎಲ್ಲಾ ವಲಸೆಗಾರರನ್ನು ಫ್ರಾನ್ಸಿನಿಂದ ಓಡಿಸುವುದಾಗಿ ಬೆದರಿಕೆಯೊಡ್ಡಿದ್ದಾನೆ. ಇದು ಈಗಾಗಲೇ ಅವಮಾನದಿಂದ ಕೆರಳಿದ್ದ ಆಫ್ರೋ-ಅರಬ್ಬರನ್ನು ಮುಸ್ಲಿಮರನ್ನು ಮತ್ತಷ್ಟು ವ್ಯಗ್ರರನ್ನಾಗಿಸಿತು. ಪರಸ್ಪರರ ನಡುವೆ ಈ ಅಪಮಾನವೇ ಸೌಹಾರ್ದತೆಯನ್ನು, ಹೋರಾಟದ ಕಿಚ್ಚನ್ನು ಹೆಚ್ಚಿಸಿತು. ಅದರ ಪರಿಣಾಮವಾಗಿಯೇ ಪ್ಯಾರಿಸ್ಸಿನಲ್ಲಿ ಪ್ರಾರಂಭವಾದ ಈ ಬೆಂಕಿ ಈಗ ಕಾಳ್ಗಿಚ್ಚಾಗಿ ಇಡೀ ಯುರೋಪ್ ಬಳಿ ಸರ್ಕಾರ-ಸಮಾಜವನ್ನು ಸುಡುತ್ತಿದೆ. ಈಗಲೂ ಈ ಬೆಂಕಿಯನ್ನು ಅವಮಾನದ ಬೆಂಕಿ-ಹಸಿವಿನ ಬೆಂಕಿ ಎಂದು ಅರ್ಥಮಾಡಿಕೊಳ್ಳಲು ನಿರಾಕರಿಸುತ್ತಿರುವ ಫ್ರಾನ್ಸಿನ ಸರ್ಕಾರ ಅದನ್ನು ಪೊಲೀಸ್ ಭಯೋತ್ಪಾದನೆಯ ಮೂಲಕ ಹತ್ತಿಕ್ಕಲು ಯತ್ನಿಸುತ್ತಾ ಆ ಬೆಂಕಿಗೆ ಗಾಳಿಯಾಡುತ್ತಿದೆ. ಇದು ಇಡೀ ಯುರೋಪ್ ಅನ್ನು ಅಸ್ಥಿರಗೊಳಿಸುವುದರಲ್ಲಿ ಸಂಶಯವಿಲ್ಲ.



ಪ್ರತಿಭಟನೆಗಾರರ ಸಿಟ್ಟಿಗೆ ಬಲಿಯಾದ ವಾಹನ

ಸ್ವರ್ಗದ ಹಿತ್ತಲಲ್ಲಿರುವ ಈ ನರಕವಾಸಿಗಳ ಬದುಕನ್ನು ನೋಡಿದರೆ ಸಾಕು ಯುರೋಪಿನ ಪ್ರಜಾತಂತ್ರದ, ಬಿಳಿಯರ ನಾಗರೀಕತೆಯ ಹಿಂದಿರುವ ಅತ್ಯಂತ ಪಾಶವೀ ಜನಾಂಗೀಯ ಬೇಧ, ಬಂಡವಾಳಶಾಹಿ ಕ್ರೌರ್ಯ ಬೆಳಕಿಗೆ ಬರುತ್ತದೆ. ಗೆಟ್ಟೋಗಳೆಂದು ಕರೆಯಲ್ಪಡುವ ಈ 'ಫ್ರೆಂಚ್ ಸ್ಲಮ್ಮು'ಗಳಲ್ಲಿ ಕುಡಿಯುವ ನೀರು, ಶೌಚಾಲಯ, ಕೊರೆಯುವ ಚಳಿಯಿಂದ ಬಚಾವಾಗಲು ಹಿಟಿಂಗ್ ಸಿಸ್ಟಮ್, ವಿದ್ಯುತ್ ಎಲ್ಲಕ್ಕೂ ಖೋತ. ದಿನೇ ದಿನೇ ಬೆಳೆಯುತ್ತಿರುವ ಈ ಸಮುದಾಯದ ಶೇ. ೪೦ರಷ್ಟು ಯುವಕರಿಗೆ ಕೆಲಸವಿಲ್ಲ. ಜಾಗತೀಕರಣದ ಹೊಸ ನೀತಿಯ ಭಾಗವಾಗಿ ನಿರುದ್ಯೋಗಿ ಯುವಕರಿಗೆ, ಹಾಗೂ ಗೆಟ್ಟ ವಾಸಿಗಳಿಗೆ ನೀಡುತ್ತಿದ್ದ ಎಲ್ಲ ಕಲ್ಯಾಣಕಾರಿ ಸೌಕರ್ಯಗಳನ್ನು (Social Security) ಹಿಂತೆಗೆದುಕೊಳ್ಳಲಾಗಿದೆ. ಇದರಿಂದಾಗಿ ಈ ಆಫ್ರೋ-ಅರಬ್ಬರ, ಮುಸ್ಲಿಮರ ದಿನ ನಿತ್ಯದ ಬದುಕು ಮತ್ತಷ್ಟು ದಾರುಣಗೊಂಡಿದೇ ಫ್ರಾನ್ಸಿನಲ್ಲಿ ಸಮಾಜವಾದಿ ಸರ್ಕಾರವೇ ಬಂದರೇ, ನವ ಫ್ಯಾಸಿಸ್ಟರ ಸರ್ಕಾರವೇ ಬಂದರೂ ಫ್ರಾನ್ಸಿನ ಈ ಶ್ರಮ ಜೀವಿ ಜನಾಂಗದ ಬದುಕು ಮಾತ್ರ ದಿನೇ-ದಿನೇ ಬವಣೆಯಾಗುತ್ತಿದೆ.

ಬಂಡವಾಳಶಾಹಿ ಪ್ರಜಾತಂತ್ರ ಹಾಗೂ ಫ್ಯಾಸಿಸ್ಟ್ ಜನಾಂಗೀಯ ಬೇಧ:

ಇದು ಕೇವಲ ಸಾರ್ಕೋಜಿಯಂತ ಬಲಪಂಥೀಯ ಗೃಹಮಂತ್ರಿಯ, ಅಥವಾ ಚಿರಾಕ್ ಸರ್ಕಾರದ ನೀತಿಯ ದುಷ್ಪರಿಣಾಮ ಮಾತ್ರವಲ್ಲ ಏಕೆಂದರೆ ಇಂದು ಇಡೀ ಯುರೋಪಿನದ್ಯಾಂತ ಎಲ್ಲಾ ದೇಶಗಳ ಸರ್ಕಾರಗಳು ಇದೇ ನೀತಿಯನ್ನೇ ಅನುಸರಿಸುತ್ತಿವೆ. ಎರಡನೇ ಮಹಾ ಯುದ್ಧದ ನಂತರ ಜನತೆಯ ಹೋರಾಟಗಳಿಂದ ಯುರೋಪ್‌ನ ಜನರಿಗೆ ನೀಡಲಾಗುತ್ತಿದ್ದ ಸಾಮಾಜಿಕ ಭದ್ರತಾ (Social Security) ಸೌಕರ್ಯ-ನಿರುದ್ಯೋಗಭತ್ಯ ಉಚಿತ ಆರೋಗ್ಯ-ಶಿಕ್ಷಣ, ರಿಯಾಯಿತಿ ವಸತಿ, ಸಬ್ಸಿಡಿ-ಇತ್ಯಾದಿಗಳನ್ನು ಹಿಂತೆಗೆದುಕೊಳ್ಳಲಾಗುತ್ತಿದೆ. ಉದಾರ ವಲಸೆ ನೀತಿಯನ್ನು ಬಿಗಿಗೊಳಿಸಲಾಗುತ್ತಿದೆ. ಇದರಿಂದಾಗಿ ಬಿಳಿಯರಲ್ಲೂ

(೩೦ನೇ ಪುಟಕ್ಕೆ)

ಖಾಸಗಿ ವಲಯ ಮತ್ತು ಸಾಮಾಜಿಕ (ಅ)ನ್ಯಾಯ

ಡಾ|| ಕಾ.ವೆಂ ಶ್ರೀನಿವಾಸ ಮೂರ್ತಿ

ವಿಶ್ಲೇಷಣೆ

ಮನುವಾದಿ ಭಾರತವು ಸಾಮಾಜಿಕ ನ್ಯಾಯಕ್ಕೆ ಎಂದೂ ವಿರೋಧವೇ. ಆದ್ದರಿಂದಲೇ ಹತ್ತೊಂಭತ್ತನೇ ಶತಮಾನದ ಕೊನೆಯವರೆಗೂ ಅದನ್ನು ನಿರಾಕರಿಸುತ್ತಲೇ ಬರಲಾಯಿತು. ಅದೃಷ್ಟವಶಾತ, ಕಳೆದ ಶತಮಾನದ ರಾಜಕೀಯ ಧುರೀಣರು, ಚಿಂತಕ-ಹೋರಾಟಗಾರ ಪರಿಶ್ರಮದ ಫಲವಾಗಿ ಸಾರ್ವಜನಿಕ ರಂಗದಲ್ಲ ಸಾಮಾಜಿಕ ನ್ಯಾಯವು ಅನುಷ್ಠಾನಕ್ಕೆ ಬಂದಿತು. ಇದು ಮನುವಾದೀ ಭಾರತಕ್ಕೆ ಸಹಿಸಲ ಸಾಧ್ಯವಾಗಿ, ಅದನ್ನು ಮೂಲೋತ್ಪಾಟನೆ ಮಾಡುವ ಯೋಚನೆ ಮಾಡಿ ಹುನ್ನಾರವನ್ನು ಹೂಡಿತು. ಮಿಶ್ರ ಆರ್ಥಿಕ ವ್ಯವಸ್ಥೆಯನ್ನು ಒಪ್ಪಿದ್ದ ಭಾರತದಲ್ಲ ಮುಕ್ತ ಆರ್ಥಿಕ ವ್ಯವಸ್ಥೆಯನ್ನು ಜಾರಿ ಮಾಡಿತು.

ದೇಶವು ಗ್ಯಾಟ್ ಒಪ್ಪಂದಕ್ಕೆ ಸಹಿ ಹಾಕಿದ ಅನಂತರದಲ್ಲಿ ಸಾಮಾಜಿಕ ನ್ಯಾಯದ ಮಾತು ಮತ್ತು ಅದನ್ನು ಕುರಿತ ಒತ್ತಾಯ-ಹೋರಾಟಗಳು ಹೆಚ್ಚು ಹೆಚ್ಚು ಕಾಣುತ್ತಿವೆ. ಇದ ರರ್ಥ, ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪೆನಿ ಅಥವಾ ಬ್ರಿಟನ್‌ನಿಂದ ಸ್ವತಂತ್ರಗೊಂಡ ಭಾರತವು ತನ್ನ ಪ್ರಜಾಪ್ರಭುತ್ವದ ಆಶಯಕ್ಕನುಸಾರವಾಗಿ ರಾಷ್ಟ್ರೀಕರಣದ ಹಾದಿಯಲ್ಲಿ ಸಾಗುತ್ತಾ ಬಂದದ್ದು, ಅನಂತರದಲ್ಲಿ ಗ್ಯಾಟ್ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ರಾಷ್ಟ್ರೀಕರಣಕ್ಕೆ ವಿರುದ್ಧ ದಿಕ್ಕಿನಲ್ಲಿರುವ ಖಾಸಗೀಕರಣದತ್ತ ಸಾಗಿತ್ತಿರುವುದೇ ಆಗಿದೆ. ಹೀಗೆ ಖಾಸಗೀಕರಣಗೊಳ್ಳುತ್ತಿರುವ ಭಾರತದಲ್ಲಿ ಬಂಡವಾಳಶಾಹಿಗಳ ಸಾರ್ವಭೌಮತ್ವವಿರುವುದರಿಂದ ಅಲ್ಲಿ ಸಂವಿಧಾನಾತ್ಮಕ ಸರ್ಕಾರದ ಸಾರ್ವಭೌಮತ್ವವು ತಮಾಷೆಯ ವಸ್ತುವಾಗಿ ಪರಿಣಮಿಸಿಬಿಟ್ಟಿದೆ. ಇದರ ಪರಿಣಾಮವಾಗಿ ಖಾಸಗೀಕರಣದ ಭಾರತದಲ್ಲಿ ಸಾಮಾಜಿಕ ನ್ಯಾಯಕ್ಕೆ ಸ್ಥಾನವಿಲ್ಲವಾಗಿದೆ. ಈ ಮಾತಿಗೆ ಸಮರ್ಥನೆ ಎನ್ನುವ ಹಾಗೆ ಟಾಟಾ, ಬಿರ್ಲಾ ಆದಿಯಾಗಿ ಇಂದಿನ ರಿಲೆಯನ್ಸ್, ಇನ್ಫೋಸಿಸ್, ವಿಪ್ರೋ ಮೊದಲಾದ ನೂರಾರು ದೊಡ್ಡ ಸಂಸ್ಥೆಗಳು ನಮ್ಮ ಕಣ್ಣೆದುರಿಗಿವೆ. ನಮ್ಮ ದೇಶದ ಒಟ್ಟು ರಾಷ್ಟ್ರೀಯ ಉತ್ಪನ್ನದಲ್ಲಿ ಶೇ. ೬೦ಕ್ಕೂ ಮಿಗಿಲು ಈ ಸಂಸ್ಥೆಗಳದ್ದೇ ಪಾತ್ರವಿದೆ. ಅವುಗಳಲ್ಲಿ ರಿಲೆಯನ್ಸ್ ಸಂಸ್ಥೆಯದೊಂದೇ ಶೇ. ೩. ೫ರ ಪಾಲಿದೆ.

ಹೀಗೆ ಕಳೆದ ಹದಿನಾಲ್ಕು ವರ್ಷಗಳಲ್ಲಿ ಖಾಸಗೀಕರಣದ ಪರಿಣಾಮವಾಗಿ ಮಾರುತಿ ಸುಜುಕಿ ಮೊದಲಾದ ಸಂಸ್ಥೆಗಳನ್ನು ಸರ್ಕಾರವು ಖಾಸಗಿಯವರಿಗೆ ಮಾರಾಟ ಮಾಡಿರುವುದಲ್ಲದೇ ನಷ್ಟದಲ್ಲಿವೆ ಎಂಬ ನೆಪವೊಡ್ಡಿ ಕೆಇಬಿ, ಟೆಲಿಕಾಂ ಮೊದಲಾದ ಹತ್ತಾರು ಸಂಸ್ಥೆಗಳ ಷೇರುಗಳನ್ನು ಸಹ ಬಹುಪ್ರಮಾಣದಲ್ಲಿ ಮಾರಾಟ ಮಾಡಿದೆ. ಹೀಗೆ ಸಾರ್ವಜನಿಕ ಆಸ್ತಿಯನ್ನು ಜನರಿಂದ ಆರಿಸಲ್ಪಟ್ಟ ಸರ್ಕಾರವು ಉಳಿಸಿ ಬೆಳೆಸಬೇಕಿತ್ತಲ್ಲದೇ ಬೇಜವಾಬ್ದಾರಿಯಿಂದ ಹೀಗೆ ಖಾಸಗಿಯವರಿಗೆ ಮಾರಾಟ ಮಾಡಬಹುದಿತ್ತೆ? ಹೀಗೆ ಮಾರಾಟ ಮಾಡುತ್ತಾ ಹೋದರೆ ಸರ್ಕಾರಕ್ಕೇನು ಕೆಲಸ? ಎಲ್ಲಾ ರಂಗಗಳನ್ನು ಆವರಿಸಿಬಿಡುವ ಖಾಸಗಿ ಉದ್ಯಮಗಳನ್ನು ಮೇನೇಜ್ ಮಾಡುವ ವ್ಯವಸ್ಥಾಪಕರ ಕೆಲಸವೇ? ಅಥವಾ ಜನರ ಆಶೋತ್ತರಗಳಿಗೆ ಅನುಗುಣವಾಗಿ ದೇಶದ ಸ್ವಾವಲಂಬನೆ, ಸಮಾಜವಾದೀ ವ್ಯವಸ್ಥೆಯ ಸ್ಥಾಪನೆ ಇತ್ಯಾದಿಗಳನ್ನು ಅನುಷ್ಠಾನಗೊಳಿಸುವ ಕಾಯಕವೇ? ಇವೆಲ್ಲವನ್ನೂ ಇತ್ತೀಚಿನ ವರ್ಷಗಳಲ್ಲಿ ನಾವು ಹೆಚ್ಚು ಹೆಚ್ಚು ಕೇಳುತ್ತಿದ್ದೇವೆ.

ಆದರೆ ಸರ್ಕಾರಗಳು ಮಾತ್ರ ಇವುಗಳಿಗೆ ಕಿವುಡಾಗುತ್ತಾ ವರ್ಷವರ್ಷವೂ ಖಾಸಗಿ ವಲಯವನ್ನು ವಿಸ್ತಾರಗೊಳಿಸುತ್ತಿವೆಯೇ ವಿನಃ ರಾಷ್ಟ್ರೀಕರಣದ ಹೆಜ್ಜೆಗಳನ್ನು ಮುಂದುವರೆಸುತ್ತಿಲ್ಲ. ಇದರ ಪರಿಣಾಮವಾಗಿ ಜಾತಿಗಳ ಹೆಸರಿನಲ್ಲಿ ಸಾವಿರಾರು ಹೋಳುಗಳಾಗಿ ಒಡೆದು ಹೋಗಿದ್ದ ಭಾರತವು ಐದು ಸಾವಿರ ವರ್ಷಗಳ ಅವಧಿಯಲ್ಲಿ ಪಡೆಯಲು ಸಾಧ್ಯವಾಗದಿದ್ದ ಸಾಮಾಜಿಕ ಸಮಾನತೆ ಮತ್ತು ಸಾಮಾಜಿಕ ನ್ಯಾಯ ಎಂಬ ಕಲ್ಪನೆಯನ್ನು ಕಳೆದ ಶತಮಾನದಲ್ಲಿ ಪಡೆದು, ಅದೇ ಶತಮಾನದ ಕಡೆಯ ಹೊತ್ತಿಗೆ ಅದನ್ನು ಕಳೆದುಕೊಳ್ಳುತ್ತಿರುವ ಪ್ರಕ್ರಿಯೆಗೆ ಇಳಿದಿರುವುದು ಗೋಚರವಾಗುತ್ತಿದೆ.

ಮನುವಾದಿ ಭಾರತವು ಸಾಮಾಜಿಕ ನ್ಯಾಯಕ್ಕೆ ಎಂದೂ ವಿರೋಧವೇ. ಆದ್ದರಿಂದಲೇ ಕ್ರಿಸ್ತಪೂರ್ವದಿಂದ ಕ್ರಿಸ್ತಶಕ ಹತ್ತೊಂಭತ್ತನೇ ಶತಮಾನದ ಕೊನೆಯವರೆಗೂ ಅದನ್ನು ನಿರಾಕರಿಸುತ್ತಲೇ ಬರಲಾದದ್ದು. ಅದೃಷ್ಟವಶಾತ, ಕಳೆದ ಶತಮಾನದ ರಾಜಕೀಯ ಧುರೀಣರು, ಚಿಂತಕ-ಹೋರಾಟಗಾರರೂ ಆದ ಶಾಹು ಮಹಾರಾಜ್, ನಾಲ್ವಡಿ ಕೃಷ್ಣರಾಜ ಒಡೆಯರ್, ಪೆರಿಯಾರ್, ಅಂಬೇಡ್ಕರ್, ದೇವರಾಜ ಅರಸು, ವಿ.ಪಿ. ಸಿಂಗ್ ಮೊದಲಾದವರ ಪರಿಶ್ರಮದ ಫಲವಾಗಿ ಸಾರ್ವಜನಿಕ ರಂಗದಲ್ಲಿ ಸಾಮಾಜಿಕ ನ್ಯಾಯವು ಅನುಷ್ಠಾನಕ್ಕೆ ಬಂದಿತು. ಇದು ಮನುವಾದಿ ಭಾರತಕ್ಕೆ ಸಹಿಸಲಸಾಧ್ಯವಾಗಿ ಅದನ್ನು ಮೂಲೋತ್ಪಾಟನೆ ಮಾಡುವ ಯೋಚನೆ ಮಾಡಿ ಹುನ್ನಾರವನ್ನು ಹೂಡಿತು. ಹುನ್ನಾರವು ಯಾಕೆಂದರೆ, ಸಂವಿಧಾನಾತ್ಮಕ ಭಾರತದಲ್ಲಿ ಸಾಮಾಜಿಕ ನ್ಯಾಯವನ್ನು ನೇರವಾಗಿ ಪ್ರಶ್ನಿಸಲಾಗಲೀ ಅಪ್ರಸ್ತುತಗೊಳಿಸಲಾಗಲೀ ಸಾಧ್ಯವಿಲ್ಲ. ಅದರ ಬದಲಾಗಿ ಬೆನ್ನಿನ ದಿಕ್ಕಿನಿಂದ ಅದಕ್ಕೆ ಚೂರಿ ಹಾಕುವ ಕ್ರಮದಲ್ಲಿ ಮಿಶ್ರ ಆರ್ಥಿಕ ವ್ಯವಸ್ಥೆಯನ್ನು ಒಪ್ಪಿದ್ದ ಭಾರತದಲ್ಲಿ ಮುಕ್ತ ಆರ್ಥಿಕ ವ್ಯವಸ್ಥೆಯನ್ನು ಜಾರಿ ಮಾಡಿತು. ಮಿಶ್ರ ಆರ್ಥಿಕ ವ್ಯವಸ್ಥೆಯ ಯಾವುದೇ ಉದ್ಯಮ-ಉದ್ದಿಮೆಗಳಲ್ಲಿ ಸಾಮಾಜಿಕ ನ್ಯಾಯ ಅನುಷ್ಠಾನಗೊಂಡಿಲ್ಲ.

ಸರ್ಕಾರದ ಹಿಡಿತವೇ ಹೆಚ್ಚಾಗಿರುವ ಈ ಮುಕ್ತ ಆರ್ಥಿಕ ವ್ಯವಸ್ಥೆಯಲ್ಲಿ ಸಾಮಾಜಿಕ ನ್ಯಾಯಕ್ಕೆ ಈ ಗತಿಯಾದರೆ ಇನ್ನು ಖಾಸಗಿಯವರ ಹಿಡಿತವೇ ಹೆಚ್ಚಾಗಿರುವ ಮುಕ್ತ ಆರ್ಥಿಕ ವ್ಯವಸ್ಥೆಯಲ್ಲಿ ಇದರ ಪಾಡೇನು! ಈ ದಿಸೆಯಲ್ಲಿ ಚಿಂತಿಸಿದ ಮನುವಾದಿ ಮನಸ್ಸುಗಳ ಒಕ್ಕೂಟವು ಭಾರತವನ್ನು ಗ್ಯಾಟ್ ಒಪ್ಪಂದದ ಮೂಲಕವಾಗಿ ಉದಾರೀಕರಣ ಎಂಬ ಮುಕ್ತ ಆರ್ಥಿಕ ವ್ಯವಸ್ಥೆಗೆ ದೂಡಿತು. ಇದರ ಪರಿಣಾಮವಾಗಿ, ರಾಷ್ಟ್ರೀಕರಣದ ಮುಖ್ಯ ನೆಲೆಗಳಾಗಿದ್ದ ಸಾಮಾಜಿಕ ನ್ಯಾಯ, ಸ್ವಾವಲಂಬನೆ, ಸಾರ್ವಭೌಮತ್ವಗಳನ್ನು ಎತ್ತಿ ಹಿಡಿಯುತ್ತಾ ಸಾಗಬೇಕಿದ್ದ ದೇಶವು ಖಾಸಗೀಕರಣದ ಜಾಡಿನಲ್ಲಿ ಸಾಂವಿಧಾನಿಕ ಭಾರತವನ್ನು ಬೇಲಿಯಿಲ್ಲದ ಹೊಲವನ್ನಾಗಿ ಮಾಡಿಬಿಟ್ಟಿತು. ಈ ಪ್ರಕ್ರಿಯೆಯಲ್ಲಿ ಸಂವಿಧಾನವಿಲ್ಲ. ಅದು ಹೇಳುವ ಪ್ರಜಾಪ್ರಭುತ್ವದ ಪಾಠಗಳಿಲ್ಲ. ಅವುಗಳನ್ನು ಬರೆದ ಅಂಬೇಡ್ಕರ್, ಗಾಂಧಿ, ಮಾರ್ಕ್ಸ್ ಮೊದಲಾದವರ ನೆನಪುಗಳೂ ಇಲ್ಲ. ಒಟ್ಟಾರೆ, ಸಾಮಾಜಿಕ ನ್ಯಾಯ ಕಲ್ಪನೆಯನ್ನು ಅಪ್ರಸ್ತುತಗೊಳಿಸುವ ಹುನ್ನಾರವೇ ಖಾಸಗೀಕರಣ. ಭಾರತೀಯ ಜನತಂತ್ರದ ಸಾರ್ವಭೌಮತ್ವವನ್ನು ನಾಶಗೊಳಿಸುವುದೇ ಜಾಗತೀಕರಣ. ಭಾರತವನ್ನು ಜಾಗತಿಕ ಲೂಟಿಗೊಳಪಡಿಸಿ, ದಿವಾಳಿಯೆಬ್ಬಿಸುವುದೆ ಉದಾರೀಕರಣ. ಆದ್ದರಿಂದ ಸಾಮಾಜಿಕ ನ್ಯಾಯದ ಸಕ್ರಿಯಾತ್ಮಕ ಪ್ರತಿಪಾದನೆಯೆಂದರೆ, ಈ ಮೂರು ಕಾರಣಗಳ ದೂರೀಕರಣವೇ ಆಗಿದೆ.

ಖಾಸಗಿ ವಲಯದಲ್ಲಿ ಸಾಮಾಜಿಕ ನ್ಯಾಯ ಸಾಧ್ಯವೇ?

ಇದುವರೆಗಿನ ಯಾವುದೇ ಖಾಸಗಿ ಉದ್ಯಮದಲ್ಲಿ ಸಾಮಾಜಿಕ ನ್ಯಾಯ ಕಲ್ಪನೆಯು ಸಾಕಾರಗೊಂಡ ಉದಾಹರಣೆಗಳಿಲ್ಲ. ವೋಲ್ವೋ ಮೊದಲಾದ ಮೂರ್‍ನಾಲ್ಕು ಕಂಪೆನಿಗಳು ಮಾತ್ರ ಇದಕ್ಕೆ ವ್ಯತಿರಿಕ್ತವಾಗಿ ಸ್ವಯಂಘೋಷಣೆ ನೀಡಿದ್ದರೂ ಇತರೆ ಅಧಿಕೃತ ದಾಖಲೆಗಳು ಈ ಕುರಿತು ಇದುವರೆಗೆ ಕಂಡಿಲ್ಲ. ಹಾಗೊಮ್ಮೆ ಇದನ್ನು ಹೊರತುಪಡಿಸಿದರೂ ಉಳಿದಂತಹ ಶೇ. ೯೯ಕ್ಕೂ ಮಿಗಿಲಾದ ಖಾಸಗಿ ಸಂಸ್ಥೆಗಳು ಲಾಭ-ನಷ್ಟಗಳನ್ನು ಆದ್ಯತೆಯ ವಿಚಾರಗಳನ್ನಾಗಿ ಇಟ್ಟು

...ಂಡಿವೆಯೇ ವಿನಃ ಪ್ರಾದೇಶಿಕ ನ್ಯಾಯ, ಮೀಸಲಾತಿ ...ದಲಾದ ಯಾವುದೇ ಹಂತದ ಸಾಮಾಜಿಕ ನ್ಯಾಯ ...ಲ್ಪನೆಗಳನ್ನು ಇಟ್ಟುಕೊಂಡಿಲ್ಲ. ಆದ್ದರಿಂದ ವಿಸ್ತಾರವಾಗುತ್ತಿ...ುವ ಖಾಸಗಿ ವಲಯದಲ್ಲಿ ಸಾಮಾಜಿಕ ನ್ಯಾಯವನ್ನು ...ರಿತ ಒತ್ತಾಯವಾಗಲೀ ಸರ್ಕಾರವು ಈ ನಿಟ್ಟಿನಲ್ಲಿ ತೆಗೆ...ುಕೊಳ್ಳುವ ಕ್ರಮವಾಗಲೀ ಮೂಗಿಗೆ ತುಪ್ಪವನ್ನು ಸವ...ುವ ಚೇಷ್ಟೆ ಎಂಬುದು ವಿವೇಕವು ಹೇಳುವ ಪಾಠವಾಗು...ದೆ. ಆದ್ದರಿಂದಲೇ ಖಾಸಗಿ ಆಸ್ತಿ ಕಲ್ಪನೆಯು ಇರುವವ...ಗೂ ಶೋಷಣೆಯು ತಪ್ಪಿದ್ದಲ್ಲ ಎಂಬ ಮಾರ್ಕ್ಸ್‌ನ ...ಾತಾಗಲೀ ಕರಡು ಸಂವಿಧಾನದಲ್ಲಿ ಕುಡಿಯೊಡೆದು ...ಪ್ಪಿತ ಸಂವಿಧಾನದಲ್ಲಿ ನೆಲಕಚ್ಚಿದ ಅಂಬೇಡ್ಕರ್‌ರವರ ...ರಾಷ್ಟ್ರೀಕರಣದ ಕಲ್ಪನೆಯಾಗಲೀ ಇಲ್ಲಿ ನೆನಪಿಗೆ ...ರುವುದು.

ಆದ್ದರಿಂದ ಲೋಕಸಭೆಯಿಂದ ಗ್ರಾಮಸಭೆಯ ...ರೆಗೂ ರಾಜಕೀಯಾತ್ಮಕ ಸಾಮಾಜಿಕ ನ್ಯಾಯವನ್ನು ...ಡೆದಿರುವ ಭಾರತೀಯ ಜನತೆ ಮುಖ್ಯವಾಗಿ ಆರ್ಥಿಕ ...ಮಾನತೆಯನ್ನು ಪಡೆಯಬೇಕು. ಅದಕ್ಕಾಗಿ ಖಾಸಗಿ ...ಲಯದ ರಾಷ್ಟ್ರೀಕರಣದ ಪ್ರಕ್ರಿಯೆಯು ಹಂತಹಂತವಾಗಿ ...ಡೆಯಬೇಕು. ಆಗ ಮಾತ್ರ ನಿಜದ ಸಮಾನತೆ ನೆಲೆಯಾಗಿ ...ರಿಪೂರ್ಣದ ಸಾಮಾಜಿಕ ನ್ಯಾಯ ಕಲ್ಪನೆಯು ಸಾಕಾರ...ಳ್ಳುವುದು.

...ಾಸಗಿ ವಲಯದಲ್ಲಿ ಸಾಮಾಜಿಕ ನ್ಯಾಯದ ...ತ್ತಾಯ ಸೂಕ್ತವೇ?

ದೇಶದಲ್ಲಿರುವ ಸ್ವದೇಶಿ ಕಂಪೆನಿಯಾಗಲೀ ...ದೇಶೀ ಕಂಪೆನಿಯಾಗಲೀ ತನ್ನ ಉದ್ಯಮಕ್ಕಾಗಿ ...ಳಸುತ್ತಿರುವ ನಿವೇಶನ, ನೀರು, ವಿದ್ಯುತ್, ಷೇರು ...ಕ್ರಯದ ಮೂಲಕ ಸಂಗ್ರಹಿಸಿದ ಬಂಡವಾಳ ಎಲ್ಲವೂ ...ೇಶೀಯವಲ್ಲವೇ? ಇದು ಇನ್ನೊಂದರ್ಥದಲ್ಲಿ ...ರ್ವಜನಿಕರ ಆಸ್ತಿಯಲ್ಲವೇ? ಹಾಗಾದರೆ, ಈ ...ದ್ಯಮಪತಿಯ ಪಾತ್ರವೇನು ಇಲ್ಲಿ? ಇವನು ಈ ಎಲ್ಲಾ ...ಂಪನ್ಮೂಲಗಳನ್ನು ತನ್ನ ಬುದ್ಧಿಯ ಬಲದಿಂದ ...ಂಘಟಿಸಿದ್ದಾನೆ, ಅಷ್ಟೇ. ಆದರೆ ಈ ಸಂಘಟನಾಕ್ರಿಯೆ ...ಡ ಮೂಲತಃ ಶ್ರಮವೇ ಆಗಿರುವುದರಿಂದ ಮತ್ತು ಈ ...ುದ ಕಾರಣಕ್ಕಾಗಿ ಮೂಲತಃ ಇವನೂ ಒಬ್ಬ ...ರ್ಮಿಕನೇ ಆಗಿರುವುದರಿಂದ ಇವನಿಗೂ ಕೂಲಿ ...ಕ್ಕಬೇಕು. ಇಷ್ಟಲ್ಲದೇ ಅಧಿಕ ಕೂಲಿಯಾಗಲೀ ಅಥವಾ ...ದರ ಇನ್ನೊಂದು ಪರಿಭಾಷೆಯಾದ ಲಾಭ ಇವನಿಗೇ ...ರ್ಣವಾಗಿ ದಕ್ಕುವುದು ಅನ್ಯಾಯ. ಅದು ಕಾರ್ಮಿಕರಿಗೆ ...ಥವಾ ಆ ದೇಶಕ್ಕೆ ದಕ್ಕಬೇಕು. ಇದು ನಿಜದ ಸಮಾಜ...ದಿ ರಾಷ್ಟ್ರಗಳಲ್ಲಿರುವ ವ್ಯವಸ್ಥೆ. ಆದರೆ ಹೆಸರಿಗೆ ಮಾತ್ರ ...ಮಾಜವಾದಿ ಎಂದು ಕರೆಸಿಕೊಂಡು, ವಾಸ್ತವದಲ್ಲಿ ...ಂಡವಾಳಶಾಹಿ ವ್ಯವಸ್ಥೆಯಿರುವ ಭಾರತದಂತಹ ರಾಷ್ಟ್ರ...ಲ್ಲಿ ಇಂತಹ ಗುಣಾತ್ಮಕ ಪ್ರವೃತ್ತಿಗಳು ಅಸಾಧ್ಯ.

ಈ ಸಾತ್ವಿಕ ನೆಲೆಯಲ್ಲಿ ಖಾಸಗೀ ವಲಯದಲ್ಲಿ ...ಲ್ಲಾ ಸಂಪನ್ಮೂಲಗಳು ದೇಶೀಯವೇ ಆಗಿದ್ದು, ಅವುಗಳ ...ಂಘಟನೆಗೆ ಸಂವಿಧಾನಾತ್ಮಕ ಒಪ್ಪಿಗೆ ಇರುವುದರಿಂದ ...ಾಸಗಿ ಸಂಸ್ಥೆಗಳು ಸಂವಿಧಾನ ಹೇಳುವ ಸಾಮಾಜಿಕ ...ಯಕ್ಕೂ ಬದ್ಧವಾಗಿರಬೇಕು. ಇದನ್ನು ಕೈಗಾರಿಕೋದ್ಯ...ಗಳೇ ಅಲ್ಲದೇ ಶಿಕ್ಷಣ ಸಂಸ್ಥೆಗಳು ಸಹ ವೃತ್ತಿ ಶಿಕ್ಷಣದ ...ೇಶಾವಕಾಶದಲ್ಲಿಯೂ ತೋರಬೇಕು. ಹಾಗಿಲ್ಲವಾದರೆ ...ನ್ನು ಸಂವಿಧಾನ ವಿರೋಧೀ ಕ್ರಮವೆಂದು ಭಾವಿಸಿ ಆ ಸಂಸ್ಥೆಗಳ ವಿರುದ್ಧಕ್ರಮವನ್ನು ಜರುಗಿಸಿ, ಜರೂರಾಗಿ ಅವುಗಳನ್ನು ರಾಷ್ಟ್ರೀಕರಣಕ್ಕೆ ಒಳಪಡಿಸಬೇಕು. ಆಗ ಮಾತ್ರ ಅಲ್ಲಿ ಸಾಮಾಜಿಕ ನ್ಯಾಯಕ್ಕೆ ನೆಲೆಯೊದಗುತ್ತದೆ. ಇದಕ್ಕೆ ರಾಷ್ಟ್ರೀಕರಣಗೊಂಡ ಬ್ಯಾಂಕುಗಳು ಈಗಾಗಲೇ ಚರಿತ್ರೆಯ ಪಾಠವಾಗಿ ನಮ್ಮ ಮುಂದಿವೆ.

ಸಾಮಾಜಿಕ ಅನ್ಯಾಯ–ಸಾಮಾಜಿಕ ನ್ಯಾಯ:

ಭಾರತವು ಜಾತಿಗಳಿಂದ ವಿಭಜಿಸಲ್ಪಟ್ಟ ದೇಶವಾಗಿದೆ. ಇದು ಭವ್ಯ ಎಂದು ಹೇಳಲ್ಪಡುವ ಸನಾತನ ಭಾರತದ ಗಟ್ಟಿ ನೆಲೆಯೂ ಹೌದು. ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದ ಅಯೋಗ್ಯನೂ ಪೌರೋಹಿತ್ಯಕ್ಕೆ ಸೂಕ್ತ. ಅಂತೆಯೇ ಶೂದ್ರ ಜಾತಿಯಲ್ಲಿ ಹುಟ್ಟಿದ ಜ್ಞಾನಿಯು ಯೋಗ್ಯನಾಗಿದ್ದಾಗಲೂ ಅಧ್ಯಾಪನಕ್ಕೆ ನಿಷಿದ್ಧ. ಅಂದರೆ ತುಪ್ಪವನ್ನು ತಿನ್ನುತ್ತಾ ಬಂದವರು ತುಪ್ಪವನ್ನೇ ತಿನ್ನುತ್ತಿರಬೇಕು. ಎಕ್ಕಡ ವನ್ನು ಹೊಲಿಯುತ್ತಿರುವವರು ಎಕ್ಕಡವನ್ನೇ ಹೊಲಿಯುತ್ತಿರ ಬೇಕು. ಇದು ಸಾಮಾಜಿಕನ್ಯಾಯ. ಹಿಂದೂ ಧರ್ಮ. ಇದಕ್ಕೆ ಕರ್ಮಸಿದ್ಧಾಂತದ ಠಸ್ಸೆ ಬೇರೆ.

ಆದ್ದರಿಂದ ಲೋಕಸಭೆಯಿಂದ ಗ್ರಾಮಸಭೆಯ ವರೆಗೂ ರಾಜಕೀಯಾತ್ಮಕ ಸಾಮಾಜಿಕ ನ್ಯಾಯವನ್ನು ಪಡೆದಿರುವ ಭಾರತೀಯ ಜನತೆ ಮುಖ್ಯವಾಗಿ ಆರ್ಥಿಕ ಸಮಾನತೆಯನ್ನು ಪಡೆಯಬೇಕು. ಅದಕ್ಕಾಗಿ ಖಾಸಗಿ ವಲಯದ ರಾಷ್ಟ್ರೀಕರಣದ ಪ್ರಕ್ರಿಯೆಯು ಹಂತಹಂತವಾಗಿ ನಡೆಯಬೇಕು.

ವಾಸ್ತವವಾಗಿ ಎಕ್ಕಡ ಹೊಲಿಯುತ್ತಿರುವವನಿಗೆ ತನ್ನ ಸ್ಥಾನ ಭದ್ರತೆಯ ಬಗೆಗೆ ತುಪ್ಪ ತಿನ್ನುವವನ ಭಯವಿಲ್ಲ. ತುಪ್ಪ ತಿನ್ನುವವನಿಗೆ ಎಕ್ಕಡ ಹೊಲಿಯುವವನದೇ ಭಯ. ಯಾಕೆಂದರೆ, ತನ್ನ ಪುಷ್ಕಳ ಭೋಜನ, ಆರಾಮು ಜೀವನಗಳು ಎಲ್ಲಿ ಅನ್ಯಾಕ್ರಮಣದಿಂದ ದೂರವಾಗುತ್ತದೋ ಎಂಬುದು ಇದರ ಮೂಲ. ಆದ್ದರಿಂದ ಯಾವ್ಯಾವ ಕಸುಬನ್ನು ಯಾರ್ಯಾರು ಮಾಡುತ್ತಿರುವರೋ ಅವರು ಅವುಗಳನ್ನು ಉಲ್ಲಂಘಿಸಿ ನಡೆಯಬಾರದು ಎಂಬ ಲಿಖಿತ ಮತ್ತು ಅಲಿಖಿತ ಸಂವಿಧಾನವನ್ನು ಮನುವಾದೀ ಮನಸ್ಸು ರಚನೆ ಮಾಡಿಬಿಟ್ಟಿತು. ಅದಕ್ಕೆ ಧರ್ಮವೆಂದು ಹೆಸರಿಟ್ಟು, ಅದನ್ನು ಕಾಯುವ ಕೆಲಸವನ್ನು ರಾಜನಿಗೆ ವಹಿಸಿತು. ಇಲ್ಲಿಯ ಸಾಮಾಜಿಕ ಹುನ್ನಾರವನ್ನು ಅರಿಯದ ಮಿದುಳು ರಹಿತ ಕಿರೀಟಧಾರಿ ತಲೆಯಲ್ಲ ಅದನ್ನು ಶಿರಸಾವಹಿಸಿ ಖಡ್ಗ ಹಿಡಿದು ರಕ್ಷಿಸುತ್ತಾ ಬಂದಿತು. ಇದು ಐದು ಸಾವಿರ ವರ್ಷಗಳ ಭಾರತದ ಕತೆ. ಇದನ್ನು ಸಮಗ್ರವಾಗಿ ಪ್ರತಿನಿಧಿಸುವ ಒಂದು ಕಥನ ಪ್ರತಿಮೆಯೆಂದರೆ ಶಂಭೂಕನ ಕತೆ. ಇದು ಬ್ರಾಹ್ಮಣನ ಕೂಗಿಗೆ ಮಣಿದ, ನಾರದನ ಕುತಂತ್ರಕ್ಕೆ ಒಳಗಾದ ಶೂದ್ರ ಮೂಲದ ಕಠಿಣ ಅಧ್ಯಯನಶೀಲ ಶಂಭೂಕನು ರಾಜ ಶ್ರೀರಾಮಚಂದ್ರನಿಂದ ಅನ್ಯಾಯವಾಗಿ ವಧೆಯಾದ ಕತೆ.

ಹೀಗೆ ಸಾಮಾಜಿಕ ನ್ಯಾಯದ ಜಾಗದಲ್ಲಿ ಭದ್ರವಾಗಿ ನೆಲೆಯಾಗಿದ್ದ ಸಾಮಾಜಿಕ ಅನ್ಯಾಯದ ಬಂಡೆಗಲ್ಲನ್ನು ಸರಿಸಲು ನಡೆದ ಹೋರಾಟವೆಷ್ಟೋ! ಅದು ಸಾವಿರಾರು ವರ್ಷಗಳಿಂದ ಕಿರುತೊರೆಯಾಗಿ ಹರಿದುಬಂದು, ಕಳೆದ ಶತಮಾನದಲ್ಲಿಯೇ ನದಿಯಾಗಿ ಪ್ರವಾಹವಾಗಿ ಮೊರೆದಿದೆ. ಇದರ ಪರಿಣಾಮವಾಗಿ ನಿಜದ ಸಾಮಾಜಿಕ ನ್ಯಾಯ ಗುರುತಿಸುವಷ್ಟಾದರೂ ಅನುಷ್ಠಾನಗೊಂಡಿದೆ. ದಲಿತರು, ಮಹಿಳೆಯರು, ಹಿಂದುಳಿದವರು, ಅಲ್ಪಸಂಖ್ಯಾತರು ಇನ್ನೂ ಪೂರ್ಣ ಸಾಮಾಜಿಕ ನ್ಯಾಯವನ್ನು ಪಡೆಯಲು ಹೆಣಗುತ್ತಿರುವಾಗಲೇ 'ಜಾಗತಿಕ ಹಳ್ಳಿ'ಯ ಏಟು ಬಿದ್ದದ್ದು ಪುರೋಗಾಮಿ ಚರಿತ್ರೆಯ ಹಿನ್ನಡೆಯಂತಾಗಿದೆ.

ಹೀಗೆ ಭಾರತದ ಚರಿತ್ರೆಯು ಸಾಮಾಜಿಕ ಅನ್ಯಾಯ–ಸಾಮಾಜಿಕ ನ್ಯಾಯ–ಸಾಮಾಜಿಕ ಅನ್ಯಾಯ ಎಂಬ ಮೂರು ಘಟ್ಟಗಳಲ್ಲಿ ಹಾದುಬಂದಿದೆ.

ಸಾಮಾಜಿಕ ನ್ಯಾಯವು ಉನ್ನತ ಸ್ಥಾನಗಳಲ್ಲಿ ಯಾವ ಸ್ವರೂಪದಲ್ಲಿರುಬೇಕು?

ಭಾರತವು ಜಾತಿಯಾಧಾರಿತ ಮತ್ತು ಜಾತಿವಿಭಜಿತ ದೇಶವಾಗಿರುವುದರಿಂದ ಎಲ್ಲ ಜಾತಿಗಳಿಗೂ ಎಲ್ಲ ರಂಗಗಳಲ್ಲಿಯೂ ಪ್ರಾತಿನಿಧ್ಯವಿರುವುದು ಸಾಮಾಜಿಕ ನ್ಯಾಯವೆನ್ನಿಸುತ್ತದೆ. ಇಲ್ಲಿ ಲಭ್ಯ ಇರುವ ಅವಕಾಶಗಳ ಸಮಾನ ವರ್ಗೀಕರಣವಿದೆಯೇ ಹೊರತು ಹೆಚ್ಚುವರಿ ಅವಕಾಶಗಳ ನಿರ್ಮಾಣವಿಲ್ಲ. ಇದು ಉದ್ಯೋಗಾವಕಾಶಗಳಲ್ಲಿರಬಹುದು; ಶಿಕ್ಷಣದ ಪ್ರವೇಶಾವಕಾಶಗಳಲ್ಲಿರಬಹುದು ಅಥವಾ ಯಾವುದೇ ಸ್ಥಾನದ ಹಂಚಿಕೆಯಲ್ಲಿರಬಹುದು. ಇದನ್ನು ಮರೆಯುವಂತಿಲ್ಲ. ಇದು ಪ್ರಾಥಮಿಕ ಶಿಕ್ಷಣದ ಹಂತದಿಂದ ಐ.ಎ.ಎಸ್. ಹಂತದವರೆಗೂ ಸಾಧ್ಯವಾಗುತ್ತಾ ಬಂದಿದೆ. ಇದು ಸೂಕ್ತ. ಆದರೆ ಸರ್ಕಾರವನ್ನು ರಚಿಸುವ ಮತ್ತು ದೇಶಕ್ಕೆ ನೀತಿ-ನಿರೂಪಗಳನ್ನು ರೂಪಿಸುವ ನಾಯಕರ ಮತ್ತು ಹಿರಿಯ ಅಧಿಕಾರಿಗಳ ಆಯ್ಕೆಯ ವಿಚಾರ ಬಂದಾಗ ಅಲ್ಲಿ ಎಲ್ಲಾ ಜಾತಿಗಳಿಗೂ ಪ್ರಾತಿನಿಧ್ಯವಿರಬೇಕು ಎಂಬ ಸಾಮಾನ್ಯ ತತ್ವ ಮುಖ್ಯವಾಗಬೇಕೋ ಅಥವಾ ಎಲ್ಲಾ ಜಾತಿಗಳಿಗೂ ಕಡ್ಡಾಯ ಪ್ರಾತಿನಿಧ್ಯವನ್ನು ಕೊಡುತ್ತಲೇ ಅಲ್ಲಿ ಸೈದ್ಧಾಂತಿಕ ವ್ಯಕ್ತಿತ್ವವನ್ನು ಪಡೆದ ವ್ಯಕ್ತಿಗಳಿಗೆ ಮಾತ್ರ ಪ್ರಾತಿನಿಧ್ಯ ಕೊಡಬೇಕೋ ಎಂಬ ಪ್ರಶ್ನೆ ಪ್ರಸ್ತುತವಾಗಬೇಕೋ ಎಂಬುದು ಇಲ್ಲಿಯ ಮುಖ್ಯ ಪ್ರಶ್ನೆ. ಈ ಪ್ರಶ್ನೆಯನ್ನು ಹಾಕಿಕೊಳ್ಳದೆ ಹೆಜ್ಜೆಯನ್ನು ಇಡಬೇಕು. ಇಲ್ಲವಾದಲ್ಲಿ ಶೋಷಿತ ಸಮುದಾಯವಾದ ಮಹಿಳೆ ಎಂಬ ಹೆಸರಿನಲ್ಲಿ ಉಮಾಭಾರತಿಯ ಆಯ್ಕೆಯಾಗಿಬಿಡುತ್ತದೆ. ಅಂತೆಯೇ ದಲಿತ ಎಂಬ ಕೋಟಾದಲ್ಲಿ ಬಂಗಾರು ಲಕ್ಷ್ಮಣ್, ದೇವರಾಜ ಅರಸು ಹೆಸರಿನಲ್ಲಿ ಶಿಕ್ಷಣ ಸಂಸ್ಥೆಯನ್ನು ಕಟ್ಟಿ ಹಿಂದುಳಿದವರು ಎಂಬ ಕೋಟಾದಲ್ಲಿ ಸಿಇಟಿ ವಿರೋಧಿ ಕಾಮೆಡ್‌-ಕೆ. ನಾಯಕರು ಆಯ್ಕೆಯಾಗಿಬಿಡುತ್ತಾರೆ.

ಒಟ್ಟಾರೆ 'ಖಾಸಗಿ ವಲಯ ಮತ್ತು ಸಾಮಾಜಿಕ ನ್ಯಾಯ' ಎಂಬ ಇಲ್ಲಿಯ ಪರಿಕಲ್ಪನೆಯು 'ಖಾಸಗಿ ವಲಯ ಮತ್ತು ಸಾಮಾಜಿಕ ಅನ್ಯಾಯ' ಎಂಬ ಪರಿವರ್ತಿತ ಪರಿಕಲ್ಪನೆಯೂ ಆಗುತ್ತದೆ. ಇದು ಇಂದಿಗೂ ಎಂದಿಗೂ ನಿರಂತರವಾಗಿ ಉಳಿಯುವ ಸತ್ಯ. ಆದ್ದರಿಂದ 'ಖಾಸಗಿ ವಲಯ' ಮತ್ತು 'ಸಾಮಾಜಿಕ ನ್ಯಾಯ' ಎಂಬ ಪರಸ್ಪರ ವಿರೋಧಾತ್ಮಕ ಸಂಬಂಧದ ಎರಡು ನೆಲೆಗಳಲ್ಲಿ ರಾಷ್ಟ್ರೀಕರಣ ಮತ್ತು ಸಾಮಾಜಿಕ ನ್ಯಾಯ ಎಂಬ ಸಕಾರಾತ್ಮಕ ಪರಿಕಲ್ಪನೆಗಳನ್ನು ನೆಲೆಗೊಳಿಸಬೇಕಾಗಿದೆ. ಇದಕ್ಕೆ ಒತ್ತಾಸೆಯಾಗಿ ಮಾರ್ಕ್ಸ್, ಲೆನಿನ್, ಅಂಬೇಡ್ಕರ್, ಮಾವೋ, ನೆರೂಡ–ಎಲ್ಲರೂ ಇದ್ದಾರೆ. ಈ ನಿಟ್ಟಿನಲ್ಲಿ ಚಳುವಳಿ ಮತ್ತು ಬೌದ್ಧಿಕ ವಲಯವು ಒಂದುಗೂಡಬೇಕಾಗಿದೆ. ಇದರ ಮೂಲಕವಾಗಿ ಕಳೆದು ಹೋಗುತ್ತಿರುವ ಸ್ವಾತಂತ್ರ್ಯದ ನಿಜದ ಆಶಯಗಳನ್ನು ಉಳಿಸಿಕೊಳ್ಳಬೇಕಾಗಿದೆ. □

ಅಮೆರಿಕಾದ ಕೊಳೆಗೇರಿಗಳನ್ನು ತೆರೆದು ತೋರಿಸಿದ ಕತ್ರಿನಾ

ಕಳೆದ ತಿಂಗಳು ಮುಂಬೈ ಮಹಾನಗರ ಮಳೆಯ ಮಹಾಪುರಕ್ಕೆ ಸಿಲುಕಿ, ಲಕ್ಷಾಂತರ ಜನರು ಮನೆ ಗುಡಿಸಲುಗಳನ್ನು ಕಳೆದುಕೊಂಡು ನಿರ್ಗತಿಕರಾದಾಗ ಮುಂಬೈನ ಜನತೆ ನಿರ್ಗತಿಕರಿಗೆ ಚಹಾ, ಆಹಾರಗಳನ್ನು ನೀಡಿ ರಕ್ಷಿಸಿದ ಕಥೆಗಳನ್ನು ಕಂಡಿದ್ದೇವೆ. ಧೈರ್ಯದಿಂದ, ಕೆಚ್ಚೆದೆಯಿಂದ ಹೋರಾಡಿ ಮುಳುಗುತ್ತಿದ್ದ ಹಸುಳೆ, ವೃದ್ಧ ಜನರನ್ನು ಬಚಾಯಿಸಿದ್ದಾರೆ. ಸಂಕಟದಲ್ಲಿ ಭಾಗಿಯಾಗಿ ಅಳುವವರ ಕಣ್ಣೀರನ್ನೊರಸಿದ್ದಾರೆ. ಇದು ನಮ್ಮ ದೇಶದ ದುಡಿಯುವ ವರ್ಗದ ಜನತೆ ಸಂರಕ್ಷಿಸಿಕೊಂಡು ಬಂದಿರುವ ಸಂಸ್ಕೃತಿ.

ಈ ತಿಂಗಳು ಅಮೆರಿಕಾದ ಪ್ರಮುಖ ಪಟ್ಟಣಗಳಲ್ಲೊಂದಾದ ನ್ಯೂಓರ್ಲೇನ್ಸ್ ನಗರವನ್ನು 'ಕತ್ರಿನಾ' ಚಂಡಮಾರುತ ಕೊಚ್ಚಿಹಾಕಿದೆ. ಈ ನಗರದ ಕನಿಷ್ಟ 10,000 ಜನ ಪ್ರಾಣ ಕಳೆದುಕೊಂಡಿದ್ದು ಉಳಿದ 5,00,000 ಜನಸಂಖ್ಯೆ ಮನೆ ಮಠ ಕಳೆದುಕೊಂಡು ನಿರ್ಗತಿಕರಾಗಿದ್ದಾರೆ. ನ್ಯೂ ಓರ್ಲೇನ್ಸ್ ನಗರ ಸಮುದ್ರ ತೀರ ಪ್ರದೇಶವಾಗಿದ್ದು ನಗರದ ಜನಸಂಖ್ಯೆಯಲ್ಲಿ ಶೇ.84 ರಷ್ಟು ಕಪ್ಪು ಜನಾಂಗದವರಾಗಿರುವುದರ ಜೊತೆಗೆ ಶೇ 28 ರಷ್ಟು ಜನತೆ ಬಡತನ ರೇಖೆಗಿಂತ ಕೆಳಮಟ್ಟದಲ್ಲಿದ್ದಾರೆ. ಇದೊಂದು ಅತಿ ಹಿಂದುಳಿದ ರಾಜ್ಯದ ನಗರ ಪ್ರದೇಶವಾಗಿದ್ದು ತೀರ ನಿರ್ಲಕ್ಷ್ಯಕ್ಕೊಳಗಾಗಿರುವುದರಿಂದ ಕೊಳೆಗೇರಿಗಳು ನಗರದ ತುಂಬೆಲ್ಲ ಹರಡಿವೆ. ಕತ್ರಿನಾ ಚಂಡಮಾರುತದ ಹೊಡೆತಕ್ಕೆ ಸಿಲುಕಿ ಸಂಕಷ್ಟದಿಂದ ಜನತೆ ನರಳುತ್ತಿರುವಾಗ ಅಮೆರಿಕಾದ ಅಧ್ಯಕ್ಷ ಜಾರ್ಜ್‌ಬುಶ್ ತಮ್ಮ ನೆರವನ್ನು ಬರೇ ಭಾಷಣಕ್ಕೆ ಸೀಮಿತಗೊಳಿಸಿರುವುದು ಜನರ ಕ್ರೋಧಕ್ಕೆ ಕಾರಣವಾಗಿದೆ.

ಇಂತಹ ಸಂಕಟಮಯ ಪರಿಸ್ಥಿತಿಯಲ್ಲಿ ಆ ನಗರದ 1,600 ಶಕ್ತಿಯುತ ಪೋಲಿಸ್ ಶಕ್ತಿಯ 500 ಮಂದಿ ಜೀವ ಭಯದಿಂದ ಕರ್ತವ್ಯಕ್ಕೆ ಗೈರುಹಾಜರಾಗಿದ್ದರು. ಇದೇ ಸಂದರ್ಭದ ದುರ್ಲಾಭ ಪಡೆಯಲು ಸಾವಿರಾರು ಸಂಖ್ಯೆಯ ಲೂಟಿಕೋರರು ಸಿಕ್ಕಿದ್ದು ದೋಚುತ್ತಾ ಆಧುನಿಕ ಶಸ್ತ್ರಾಸ್ತ್ರಗಳನ್ನು ದರೋಡೆಗಾಗಿ ಬಳಸುತ್ತಾ ಜನರಲ್ಲಿ ಭಯಭೀತಿ ಸೃಷ್ಟಿಸಿದ್ದರೆ. ಪೋಲಿಸರು ದರೋಡೆಕೋರರನ್ನು ಮಟ್ಟ ಹಾಕಲು 'ಕಂಡಲ್ಲಿ ಗುಂಡು' ಆದೇಶವನ್ನು ಅಧ್ಯಕ್ಷ ಬುಶ್ ನೀಡಿದ್ದಾರೆ. ಅಧ್ಯಕ್ಷ ಬುಶ್, ನೆರವಿಗಾಗಿ ಪ್ರಪಂಚದ ಇತರೆ ರಾಷ್ಟ್ರಗಳಲ್ಲಿ ಬಡಭಿಕ್ಷುಕನಂತೆ ಅಂಗಲಾಚುತ್ತಿರುವುದು ನಗೆಪಾಟಲಿಗೀಡು ಮಾಡಿದೆ.

ಜಗತ್ತಿನ ಸೂಪರ್ ಶಕ್ತಿ ತಾನೆಂಬಂತೆ ಅಟ್ಟಹಾಸದಿಂದ ಯುದ್ಧ ಸಾರುತ್ತಾ ಮೆರೆಯುತ್ತಿರುವ ಅಮೆರಿಕಾದ ಆಳುವ ವರ್ಗ ಪ್ರತಿಪಾದಿಸುವ ಹುಸಿ ಮೌಲ್ಯಗಳನ್ನು ಕತ್ರಿನಾ ಚಂಡಮಾರುತ ಬಯಲಿಗೆಳೆದಿದೆ.

ಅಮೆರಿಕಾದ ಆಳುವ ವರ್ಗ ಜಗತ್ತಿನಾದ್ಯಂತ ಹರಿಯಬಿಡುತ್ತಿರುವ ವ್ಯಾಪಾರಿ ಮನೋಭಾವ-ಗುಣಗಳು, ಅಮೆರಿಕನ್ ಶೈಲಿಯ ಜೀವನ ಎಲ್ಲವನ್ನು ನ್ಯೂ ಓರ್ಲೇನ್ಸ್ ನಗರದಲ್ಲಿನ ಇಂದಿನ ಪರಿಸ್ಥಿತಿಯು ಜಗಜ್ಜಾಹೀರುಗೊಳಿಸಿದ್ದು ಅಮೆರಿಕನ್ ಸಂಸ್ಕೃತಿ ಮತ್ತೆ ಅನಾಗರೀಕ - ಬರ್ಬರತೆಯತ್ತ ಎಳೆದೊಯ್ಯುತ್ತಿರುವುದು ಸ್ಪಷ್ಟವಾಗಿದೆ. ಅಮೆರಿಕಾದ ಆಳುವ ವರ್ಗಕ್ಕೆ ಸಾಮಾನ್ಯ ಜನತೆಯೆಂದರೆ ಬರೇ ಹುಳುಹುಪ್ಪಡಿಯಂಥೆ. ಅಮರಿಕಾ ಸರ್ಕಾರದ ವಿರುದ್ಧ ಚಳುವಳಿ ಹೂಡುವ ಆಂದೋಲನಗಳಿಗೆ ಬೃಹತ್ ಖಾಸಗಿ ಕಂಪನಿಗಳು ಮತ್ತು ಕೋಟ್ಯಧಿಪತಿಗಳು ನೆರವು ನೀಡುತ್ತಾ ಆಂದೋಲನಗಳಿಗೆ ಎರಡು ಮುಖ ಅಳವಡಿಸಿದ್ದಾರೆ. ಹೆಚ್ಚಿನ ತೆರಿಗೆ, ಪರಿಸರ ಮಾಲಿನ್ಯ ನಿಯಂತ್ರಣ ಮತ್ತು ಸಾರ್ವಜನಿಕ ಸೇವೆ ಮತ್ತು ಮೂಲಭೂತ ಸೌಕರ್ಯಗಳಿಗೆ ಬಂಡವಾಳ ಹೂಡಿಕೆಗಳ ವಿರುದ್ಧ ಚಳುವಳಿ ಹೂಡುವವರೇ ಮಿಲಿಟರಿ ವೆಚ್ಚ ಮತ್ತು ಬಹುರಾಷ್ಟ್ರೀಯ ಕಂಪನಿ ಹಿತಾಸಕ್ತಿಗಳಿಗೆ ಹೆಚ್ಚಿನ ಉತ್ಸಾಹ ತೋರುತ್ತಾರೆ. ಮೂಲಭೂತ ಸೌಕರ್ಯಗಳಿಗಾಗಿ ಹೆಚ್ಚಿನ ಬಂಡವಾಳ ಹೂಡಿದ್ದರೆ ಸಮುದ್ರದ ಹೊಡೆತಗಳಿಂದ ನಗರವನ್ನು ರಕ್ಷಿಸುವ ಸಾಧ್ಯತೆಗಳಿದ್ದವು. ಇರಾಕ್‌ನ್ನು ದಾಳಿ ಮಾಡಿ ಲೂಟಿ ಮಾಡಲೋಸುಗ ರೂ.8.50 ಲಕ್ಷ ಕೋಟಿ ವ್ಯಯ ಮಾಡಿರುವ ಅಮೆರಿಕಾ ಪ್ರವಾಹ ನೀರಿನಿಂದ ನ್ಯೂಓರ್ಲೇನ್ಸ್ ನಗರವನ್ನು ರಕ್ಷಿಸುವ ಒಡ್ಡುಗಳನ್ನು ನಿರ್ಮಿಸುವುದಕ್ಕೆ ಅದರಲ್ಲಿ ಕನಿಷ್ಟ ಶೇ. 0.05 ರಷ್ಟು ಹಣ ವ್ಯಯಿಸಿದ್ದರೆ ಸಾಕಿತ್ತು.

ಲಕ್ಸಂಬರ್ಗ್ ದೇಶವೊಂದನ್ನು ಬಿಟ್ಟರೆ ಅತಿ ಹೆಚ್ಚಿನ ತಲಾದಾಯವನ್ನು ಅಮೆರಿಕಾ ಹೊಂದಿದೆ. ವಾರ್ಷಿಕ 40,000 ಡಾಲರ್ ತಲಾದಾಯವಿರುವ ಅಮೆರಿಕಾವು ಯುರೋಪಿಯನ್ ಒಕ್ಕೂಟದ ತಲಾದಾಯ ಮಟ್ಟಕ್ಕಿಂತ ಶೇ. 50 ರಷ್ಟು ಹೆಚ್ಚಿನದಾಗಿದೆ. ಆದರೆ, ಮಾನವ ಕಲ್ಯಾಣ ಮಾನದಂಡದ ಆಧಾರದಲ್ಲಿ ಅಮೆರಿಕಾದ ಸ್ಥಾನ 48 ನೆಯದು. ಇದು ಅಮೆರಿಕಾದ ಆರ್ಥಿಕಗಾತ್ರಕ್ಕೆ ಹೋಲಿಸಿದರೆ ಕಡೆಗಣಿಸಬಹುದಾದಷ್ಟು ಪುಟ್ಟ ರಾಷ್ಟ್ರಗಳ ಸ್ಥಾನಕ್ಕಿಂತ ಕಟ್ಟ ಕಡೆಯದು. ಅಮೆರಿಕಾದ ಶ್ರೀಮಂತ ಮತ್ತು ಬಿಳಿಜನರಲ್ಲಿರುವ ಬಿಳಿತೊಗಲಿನ ಮನೋಭಾವನೆಗಳು ನಾಚಿಕೆಗೆಟ್ಟು ವಾಸ್ತವತೆಗಳಲ್ಲಿ ವ್ಯಕ್ತವಾಗಿವೆ. ಪ್ರಪಂಚದ ಶ್ರೀಮಂತ ರಾಷ್ಟ್ರ ಅಮೆರಿಕಾವು ತನ್ನ ಮಿಲಿಯನ್‌ಗಟ್ಟಲೇ ಬಡಜನರನ್ನು ಕಣ್ಮರೆಯಾಗಿಸುವುದರಲ್ಲಿ ವಿಶೇಷ ಪರಿಣತಿ ಪಡೆದಿದೆ. ಅಮೆರಿಕಾದ ನಾಗರೀಕ ಹಕ್ಕು ಚಳುವಳಿಗಳು ಕಾನೂನುಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರೂ, ಎರಡನೇ ದರ್ಜೆ ನಾಗರೀಕತೆಯನ್ನ ಹೋಗಲಾಡಿಸುವಲ್ಲಿ ಆರೋಗ್ಯ, ಶಿಕ್ಷಣ, ವಸತಿ, ಉದ್ಯೋಗ ಸಮಸ್ಯೆ ಮತ್ತು ಪೋಲಿಸರ ಕಿರುಕುಳಗಳನ್ನು ಹೊಡೆದೋಡಿಸುವಲ್ಲಿ ಸಫಲವಾಗಲಿಲ್ಲ.

ಕಪ್ಪು ಜನರ ನಗರವಾಗಿರುವ ನ್ಯೂ ಓರ್ಲೇನ್ಸ್ ನಗರದಲ್ಲಿ ಅನಕ್ಷರತೆ ಶೇ.40 ರಷ್ಟಿರುವುದು ನಮ್ಮದೇ ರಾಜ್ಯದ ರಾಯಚೂರಿನಂಥಹ ನಗರಗಳನ್ನು ನೆನಪಿಸುತ್ತದೆ. ಲೂಸಿಯಾನಾ ರಾಜ್ಯವು ಸಮಾಜ ಕಲ್ಯಾಣ ಕಾರ್ಯಗಳಿಗಾಗಿ ಏಷ್ಯಾದ ಹಲವಾರು ರಾಷ್ಟ್ರಗಳು ವೆಚ್ಚ ಮಾಡುವ ಹಣಕ್ಕಿಂತ ಕಡಿಮೆ ವ್ಯಯಿಸುತ್ತದೆ. ಕತ್ರಿನಾ ಚಂಡಮಾರುತ ಹೊಡೆದಪ್ಪಳಿಸಿದಾಗ ಅಲ್ಲಿಂದ ತಪ್ಪಿಸಿಕೊಳ್ಳಲು ಬಡ ಮತ್ತು ಕಪ್ಪು ಜನರಲ್ಲಿ ಹಲವರಿಗೆ ಬಸ್ಸು/ರೈಲು ಚಾರ್ಜಿಗೆ ಕಾಸಿರದೆ ಸತ್ತರೆಂಬ ಸುದ್ದಿ ತಲೆತಗ್ಗಿಸುವಂತೆ ಮಾಡುತ್ತದೆ.

ಅಮೆರಿಕಾ ತಾನೊಂದು ಉದಾತ್ತತೆಯ ಮತ್ತು ಸಮೃದ್ಧಿಯ ರಾಷ್ಟ್ರವೆಂದು ನಟಿಸಲೆತ್ನಿಸಿದರೂ ನ್ಯೂಓರ್ಲೇನ್ಸ್‌ನಲ್ಲಿ ಜರುಗಿದಂಥಹ ಘಟನೆಗಳು ಅಮೆರಿಕನ್ನರನ್ನು ನಾಚಿಕೆಗೆಟ್ಟವರನ್ನಾಗಿಸುತ್ತದೆ. ಪರ ರಾಷ್ಟ್ರಗಳ ಮೇಲೆ ಶಸ್ತ್ರಸಜ್ಜತರಾಗಿ ಯುದ್ಧ ಸಾರುವ ಅಮೆರಿಕಾ ತನ್ನ ಪ್ರಜೆಗಳನ್ನು ರಕ್ಷಿಸಲು ಹಿಂದೇಟು ಹಾಕುವುದು ಆಳುವ ವರ್ಗದೊಳಗಿನ ಬಿಳಿ ಚರ್ಮದ ಹುಣ್ಣನ್ನು ಬಯಲಿಗೆಳೆದಿದೆ.

○ಜಯ

ಮಣ್ಣಿನ ಬಹುಮಾನ



ಸಾವಿರ ಕಣ್ಣರಳಿಸಿ ನಗುವ ಪುಂನವಿಲಿನ ಹಾಗೆ ಕುವೆಂಪು
ಶುಲ್ಕ ಕಟ್ಟಿ ಕಲಿತಿದ್ದಲ್ಲ ಮಂತ್ರ ತಂತ್ರ ಸಿದ್ಧಿಯಲ್ಲ
ಒನಪೆಂಬುದು ಈ ಕಾಡಹಕ್ಕಿ ಸಹಜ ಜಾಯಮಾನ
ಹೊಟ್ಟೆಯಲೇ ಹುಟ್ಟಿದಂಥ ಇಷ್ಟಗಲದ ಗರಿ
ಆಹಾ ! ಮಣ್ಣಿನ ಬಹುಮಾನ.

ಆ ಹಸುರಿನ, ಆ ಸೊಗಸಿನ, ಅಬ್ಬಿಯ ಸೆರಗಿಂದ
ಹೊರಬಿದ್ದಿತೋ ಹೊಸಜಾಡಿಗೆ ತಬ್ಬಲಿ ಕಾಜಾಣ
ತೊಡೆ ತಟ್ಟುವ ಪಟ್ಟುವರಸೆ ಪಂಡಿತರೆದುರು
ತೆರೆದಿಟ್ಟಿತೋ ಹೊಸ ಧಾಟಿಯ ತದ್ಭವಗಳ ಗುಂಜನ
ಆಹಾ ! ಅಪರೂಪದ ಸ್ವರದಿಬ್ಬಣ

ಹೊರೆ ಚಿನ್ನದ ಪಂಜರದಲಿ ಮುತ್ತಿನ ಉಪಹಾರ
ಇನಿಕೋಗಿಲೆಮರಿ ಮರೆತೀತೇ ಮಲೆಮಾವಿನ ಚಿಗುರ
ಕಾರ್ಗತ್ತಲ ಹುಲಿಬೇಟೆಯ ಝುಮ್ಮೆನ್ನಿಸುವ ಸಂಚರ
ಈ ರಗಳೆಯ ಈ ಬೊಗಳೆಯ ಎತ್ತಣದೀ ಒಣದಫ್ತರ
ಆಹಾ ! ನಿರಂಕುಶಮತಿ ಸಮರ

ನೀರ ಬಿಟ್ಟು ಹಾರಿದೊಡೇನ್ ಮಿಂಚುಳ್ಳಿಗೆ ನೀರೇ ತನ್ನ ಧ್ಯಾನ
ಬಟಾಬಯಲಿನಲ್ಲಿ ರೆಕ್ಕೆಗಮನ ಸದಾ ಇಳೆ ವಿಲೀನ
ಗೀಜಗನ ಕೊಕ್ಕರಿತಿದೆ ಚಿಪ್ಪಿಗನ ಚಾತುರ್ಯ
ಗುರುವಿಲ್ಲದ ಶಬ್ಧವೇಧಿ ದ್ರಾವಿಡನಿಗೆ ಅನಿವಾರ್ಯ
ಆಹಾ ! ಅನೀಕೇತನ ಚೈತನ್ಯ

ಕಸುವಿದ್ದರೂ ಉಸಿರೆತ್ತದ ಹೆಸರಿಲ್ಲದ ಸೊಲ್ಲುಗಳಿಗೆ
ಹಾಡಾಗದೆ ಉಡುಗಿಹೋದ ದಟ್ಟಡವಿಯ ಪಾಡುಗಳಿಗೆ
ಬಾಯಾಯಿತೋ ಬಾಯಾಯಿತೋ ಈ ಬಿದಿರಿನ ಕೊಳಲು
ಕನ್ನೆನೆಲಕೆ ಸಂಕ್ರಮಣ ಸಿರಿಸುಗ್ಗಿಯ ಬಿರು ಹುಯ್ಲು
ಆಹಾ ! ಸಮೃದ್ಧಿಯ ಕುಯ್ಲು

○ ಲಲಿತಾ ಸಿದ್ಧಾಬಸವಯ್ಯ

ಅಮಾನವೀಯವಾದ ಅಸ್ಪೃಶ್ಯತೆಯ ಕರಾಳ ನಾಡಿಗಿಂತ ನಮ್ಮನ್ನು ಪ್ರೀತಿಯಿಂದ ಸಹ ಬಾಳ್ವೆಗೆ ಕರೆಯುತ್ತಿರುವ ಕಾಡು ಮತ್ತು ಕಾಡಿನ ಪ್ರಾಣಿಗಳೇ ಬಲು ಮಿಗಿಲು ಎಂದು ಕಾಡಿನಂಚಿಗೇ ಸೇರಿ ಅಲ್ಲೇ-ಜೀವನ ಸಾಗಿಸ ತೊಡಗಿದ್ದ ಕೊರಗರನ್ನು ಮನುವಿನ ವರ್ಣವ್ಯವಸ್ಥೆಯನ್ನು ಕಾಪಾಡಿಕೊಂಡು ಬಂದಂತಹ ಜಾತಿ ಶ್ರೇಷ್ಠರು ನೆಮ್ಮದಿಯಲ್ಲಿರಲು ಬಿಟ್ಟಾರೆಯೇ? ವರ್ಣಾಶ್ರಮ ವ್ಯವಸ್ಥೆಯು ಸೂಚಿಸಿರುವ ದೇವರ ಮತ್ತು ಉಳ್ಳವರ ಮನೆಯ ಜೀತ ಮತ್ತು ಅಜಲಿನಂತಹ ಸಾಂಪ್ರದಾಯಿಕ ಬಿಟ್ಟಿಚಾಕರಿಯನ್ನು ಮಾಡುವವರಾರು?

○ಡಾ|| ಎಚ್.ನಾಗವೇಣಿ

ಕೇಳುವವರಿಲ್ಲದ ಕೊರಗರು

ಹಸಿವು, ಬಡತನ, ಅಸ್ಪೃಶ್ಯತೆ, ಅವಮಾನ ಎಂಬುದು ಮನುಷ್ಯನ ಆತ್ಮ ವಿಶ್ವಾಸ, ಅಂತಃಶಕ್ತಿ, ವಿವೇಚನಾಶಕ್ತಿ, ಚೈತನ್ಯವನ್ನು ಉಡುಗಿಸಿ ನಿಸ್ತೇಜನನ್ನಾಗಿರಿಸಿ ನೇರ ದಾಸ್ಯಕ್ಕೆ ತಳ್ಳಬಹುದು. ಕರಾವಳಿ ಕರ್ನಾಟಕದಲ್ಲಿ ಅತ್ಯಂತ ಘೋರವಾದ ಬಡತನ, ಹಸಿವು ಹೀನಾಯವಾದ ಅಸ್ಪೃಶ್ಯತೆ, ಶೋಷಣೆಯನ್ನು ಉಂಡು ಸಾಮಾಜಿಕ ದಾಸ್ಯಕ್ಕೆ ತಳ್ಳಲ್ಪಟ್ಟ ಕುಲವೆಂದರೆ ಅದು ಕೊರಗರದ್ದು ಮಾತ್ರ.

ಹಿಂದೂ ಸಮಾಜದಲ್ಲಿ ಅತ್ಯಂತ ಹಿಂಸಾರೂಪಿಯಾಗಿರುವ ಜಾತೀಯ ಪರಿಕಲ್ಪನೆಯಡಿ ಬೆಳೆದುಬಂದಿರುವ, ಶ್ರೇಣೀಕೃತ ಜಾತಿವ್ಯವಸ್ಥೆಯಲ್ಲಿ ಕೊರಗರು 'ಸತ್ತ ದನ ತಿನ್ನುವ' ಜನಾಂಗವೆಂಬ ತಿರಸ್ಕಾರದಿಂದಲೂ ಹಾಗು ಹಸಿವು, ಬಡತನ, ಅವಮಾನದಿಂದ ದನಿಯಿಲ್ಲದೆ ಪ್ರತಿಭಟನಾ ಶಕ್ತಿಯನ್ನು ಸಂಪೂರ್ಣ ಉಡುಗಿಸಿಕೊಂಡಿರುವವರು ಎಂಬ ಧೈರ್ಯದಿಂದಲೂ, ಇವರನ್ನು ಪಂಚಮರಲ್ಲಿ ಪಂಚಮರು, ಅಸ್ಪೃಶ್ಯರಲ್ಲಿ ಅಸ್ಪೃಶ್ಯರು, ಇಡೀಯ ಜಾತಿವ್ಯವಸ್ಥೆಯಲ್ಲೇ ಅಂತ್ಯಜರು ಎಂದು ಪರಿಗಣಿಸಿ, 'ಇವು ನಾಡಲ್ಲಿ ನೆಲಸ ತಕ್ಕವಲ್ಲ, ಇವುಗಳ ಬದುಕಿನ ಸಂಸ್ಕೃತಿ ಬದುಕುವ ಶೈಲಿ ಆ ಕಾಡಿಗೇ ಸಮ' ಎಂದು ನಿರ್ದಯೆಯಿಂದ ಇವರಿಗೆ "ಕಾಡಿನವರು" ಎಂಬ ಕಿರೀಟ ವಿರಿಸಿ ಸಮಾಜದ ಮುಖ್ಯಧಾರೆ ಹಾಗೂ ಸವಲತ್ತುಗಳಿಂದ ಪ್ರತ್ಯೇಕಿಸಿ ಮತ್ತೆ ಕಾಡಿನಂಚಿಗೆ ಅಟ್ಟಲಾಯಿತು.

ದಾರುಣ ಹಸಿವಿನ ಜತೆ ಅಮಾನವೀಯವಾದ ಅಸ್ಪೃಶ್ಯತೆಯ ಬಿಸಿಕೊಡುವ ಈ ನಾಡಿಗಿಂತ ನಮ್ಮನ್ನು ಪ್ರೀತಿಯಿಂದ ಸಹ ಬಾಳ್ವೆಗೆ ಕರೆಯುತ್ತಿರುವ ಕಾಡು ಮತ್ತು ಕಾಡಿನ ಪ್ರಾಣಿಗಳೇ ಬಲು ಮಿಗಿಲು ಎಂದು ಕಾಡಿನಂಚಿಗೇ ಸೇರಿ ಅಲ್ಲಿನ ಉತ್ಪನ್ನಗಳಿಂದ, ಕರಕುಶಲ ಕಸುಬುಗಳಿಂದ 'ತನ್ನ ಕಷ್ಟಗಳ ಜತೆ ತಾನು ಸುಖವಾಗಿದ್ದೇನೆ' ಎಂದು ಅಲ್ಲೇ ಜೀವನ ಸಾಗಿಸತೊಡಗಿದ್ದ ಕೊರಗರನ್ನು ಮನುವಿನ ವರ್ಣವ್ಯವಸ್ಥೆಯನ್ನು ಕಾಪಾಡಿಕೊಂಡು ಬಂದಂತಹ ಜಾತಿಶ್ರೇಷ್ಠರು ನೆಮ್ಮದಿಯಲ್ಲಿರಲು ಬಿಟ್ಟಾರೆಯೇ? ಮನುವಿನ ವರ್ಣವ್ಯವಸ್ಥೆ ಹೇಳುವುದೇನು? ತನ್ನ ಜೀವನಾರ್ಥಕ್ಕಾಗಿ ಸಮಾಜದ ಸೌಹಾರ್ದತೆಗಾಗಿ ತನ್ನ ಪೂರ್ವಜರ ಅಧಿಕೃತ ಕಸುಬನ್ನೇ ಒಬ್ಬ ವ್ಯಕ್ತಿ ಅಥವಾ ಜಾ... ಅನುಸರಿಸಬೇಕು – ಎಂದು. ಆದರೆ ಅಲ್ಲೇ ಸ್ವತಂತ್ರ ಬದುಕನ್ನು ನಡ... ಸುತ್ತಿದ್ದರೆ ವರ್ಣಾಶ್ರಮ ವ್ಯವಸ್ಥೆಯು ಸೂಚಿಸಿರುವ ದೇವರ ಮತ್ತು ಉಳ್ಳವರ ಮನೆಯ ಜೀತ ಮತ್ತು ಅಜಲಿನಂತಹ ಸಾಂಪ್ರದಾಯಿಕ ಬಿಟ್ಟಿಚಾಕರಿಯನ್ನು ಮಾಡುವವರಾರು?

ಜಾತಿ ವ್ಯವಸ್ಥೆಯ ಮೇಲ್ತುದಿಯನ್ನು ಆಕ್ರಮಿಸಿ ಕೊಂಡಿರುವ ವೈದಿಕಶ್ರೇಷ್ಠರು ಮಾತ್ರವೇ ಅಲ್ಲ, ಆ ವೈದಿಕ ಶ್ರೇಷ್ಠರಿಂದಲೇ ನಿರಂತರ ಅಸ್ಪೃಶ್ಯತೆಯ ನಿಂದನೆಗೆ ಒಳಗಾಗುತ್ತಿದ್ದ ಮತ್ತು ಪಂಚಮರಿಗಿಂತ ತಸುವೇ ಮೇಲಕ್ಕಿದ್ದ ಶೂದ್ರ ಸಂಕುಲವೂ ಕೂಡಾ ಮೇಲ್ಜಾತಿಯವ... ಹುನ್ನಾರದೊಳಗೆ ಬೆರೆತು ಕೊರಗರ ಕೊರಳಿಗೆ ಅತ್ಯಂತ ಅಮಾನ... ವೀಯವಾದ, ಸಾಂಪ್ರದಾಯಿಕ ಬಿಟ್ಟಿಚಾಕರಿಯದ್ದೇ ರೂಪದಲ್ಲಿದ್ದ ಅಜಲಿನ ಕೆಲಸಗಳ ಜೀತದ ಹೊರೆ ಹೊರಿಸಿ ಅವರನ್ನು ... ಹಿಂದೂಸಮಾಜದಲ್ಲಿ ಸಂಪೂರ್ಣ ನಿಷ್ಕ್ರಿಯರನ್ನಾಗಿರಿಸಿತು.

ಹೀಗೆ ಹಿಂದೂಧರ್ಮಕ್ಕೆ ಗಂಡಾಂತರವನ್ನು ತಂದೊಡ್ಡು... ವಷ್ಟು ಅಪಾಯಕಾರಿಯೂ ಅಮಾನವೀಯವೂ ಆಗಿರುವ ಅಸ್ಪೃಶ್ಯ... ಮತ್ತು ಅಜಲು ಪದ್ಧತಿಗೆ ತಲೆಯೊಡ್ಡಿದ್ದ ಕೊರಗರು, ಇಂದು ಈ ಸ್ವತಂತ್ರ ಭಾರತದ ನಾಗರಿಕ ಸಮಾಜದಲ್ಲೂ ತಮ್ಮ ಬದುಕಿನ ಶೈ... ಯನ್ನು ಸ್ವಲ್ಪ ಮಾತ್ರವೇ ಬದಲಾಯಿಸಿಕೊಂಡಿದ್ದು, ಸಂಪೂರ್ಣವಾ... ಬದಲಿಸಿಕೊಳ್ಳಲು ಅವರಿನ್ನೂ ಮಾನಸಿಕವಾಗಿ ಸಿದ್ಧರಾಗಿಲ್ಲ. ಶ... ಶತಮಾನಗಳಿಂದಲೂ ಮೇಲ್ಜಾತಿ ಸಮಾಜ ಇವರ ಮೇಲೆ ಧರ್ಮ... ಕರ್ಮದ ಹೆಸರಲ್ಲಿ ನಡೆಸಿರುವ ಮಾನಸಿಕ ಮತ್ತು ದೈಹಿಕ ದೌರ್ಜ... ನ್ಯದ ಗಾಯ ಭಯದಿಂದ ಅವರಿಗಿನ್ನೂ ಹೊರಬರಲು ಸಾಧ್ಯ... ವಾಗಿಲ್ಲ.

ದಕ್ಷಿಣ ಭಾರತದ ಅತ್ಯಂತ ಆದಿತು ಬುಡಕಟ್ಟು... ಗುರುತಿಸಲ್ಪಟ್ಟಿರುವ ಕೊರಗರು ಒಂದು ಬುಡಕಟ್ಟಿಗಿರಬೇಕಾದಂತಹ ಎಲ್ಲ ಲಕ್ಷಣ, ಬಾಹ್ಯಸ್ವರೂಪಗಳನ್ನು ಹೊಂದಿದ್ದು ಮಾತ್ರವಲ್ಲದೆ ಮಾನವಶಾಸ್ತ್ರಜ್ಞರು ಯಾವುದೇ ಒಂದು ಬುಡಕಟ್ಟನ್ನು ನಿರ್ವಚಿಸ...

ವಂತೆ – ಈ ಜನಾಂಗವು ಅಲ್ಪಸಂಖ್ಯಾತ ರಕ್ತಸಂಬಂಧಿಗಳನ್ನು, ತನ್ನದೇ ಆದ ತಂಡ-ಉಪತಂಡಗಳನ್ನು, ನಿರ್ದಿಷ್ಟ ಭೌಗೋಳಿಕ ಪ್ರದೇಶವನ್ನು ಹಾಗೂ ಸ್ವಂತ ಭಾಷೆಯನ್ನು ಹೊಂದಿರುವುದರಲ್ಲದೆ ಸಮಾಜದ ಮುಖ್ಯವಾಹಿನಿಯಿಂದ ಪ್ರತ್ಯೇಕವಾಗುವ ಮೂಲಕ ತಮ್ಮದೇ ಆದ ಆಚಾರವಿಚಾರ, ಸಂಪ್ರದಾಯ, ಸಂಸ್ಕಾರ-ಸಂಸ್ಕೃತಿ, ಸಾಮಾಜಿಕ ಪದ್ಧತಿ, ವೇಷಭೂಷಣ, ಬದುಕುವ ಪರಿಯನ್ನು ರೂಢಿಸಿಕೊಂಡು ತಮ್ಮ ಸಮಾಜ ಇತರರಿಗಿಂತ ಭಿನ್ನತೆಯುಳ್ಳದ್ದು ಎಂದು ಗುರುತಿಸಿಕೊಂಡಿರುವ ಕಾರಣ 1956ರಲ್ಲಿ ಈ ಕೊರಗ ಸಮುದಾಯವನ್ನು ರಾಷ್ಟ್ರಪತಿಗಳ ಆದೇಶದಂತೆ ಪರಿಶಿಷ್ಟ ವರ್ಗವೆಂದು ಘೋಷಿಸಲಾಯಿತು. ಆದರೆ ಹೀಗೆ ಘೋಷಣೆಯಾದ ನಂತರವೂ ಕೊರಗರು ಜೀತದ ಜೀವನದಿಂದ, ಅಜಲೆಂಬ ಅನಿಷ್ಟ ಸಾಮಾಜಿಕ ಕಟ್ಟುಪಾಡಿನಿಂದ, ಬಡತನದ ಕೂಪದಿಂದ ಮೇಲೆದ್ದು ಬರಲಿಲ್ಲ. ಕೊರಗ ಸಮುದಾಯದ ಕಷ್ಟಗಳ ಬಗ್ಗೆ ಕರುಣೆಯಿದ್ದ ಹಲವು ಪ್ರಗತಿಪರ ಚಿಂತಕರ ಸತತ ಪ್ರಯತ್ನ ಹಾಗೂ ಒತ್ತಡದಿಂದ ಕೇಂದ್ರ ಸರ್ಕಾರವೂ 1985ರ ಸಾಲಿನಿಂದ ಕೊರಗರನ್ನು ದಕ್ಷಿಣ ಕನ್ನಡ ಜಿಲ್ಲೆಯ ಆದಿವಾಸಿ ಬುಡಕಟ್ಟು ಎಂದು ಘೋಷಿಸಿತು.

ಈ ಎಲ್ಲ ಘೋಷಣೆಯ ಪರಿಣಾಮವಾಗಿ ಕೊರಗ ಬುಡಕಟ್ಟಿನ ಆರ್ಥಿಕ, ಸಾಮಾಜಿಕ ಸ್ಥಿತಿಯನ್ನು ಸುಧಾರಿಸಲು ಹಲವು ಯೋಜನೆ ಕಾರ್ಯಕ್ರಮಗಳು ರೂಪುಗೊಂಡವು. ಈ ಯೋಜನೆ ಕಾರ್ಯಕ್ರಮಗಳು ನಿರಂತರ ಶ್ರಮ ಮತ್ತು ಅವಮಾನವನ್ನು ಉಂಡ ಕೊರಗ ಸಮಾಜವನ್ನು ಮತ್ತೆ ಸದೃಢಗೊಳಿಸುತ್ತದೆ ಎಂದು, ಈ ಸಮುದಾಯದವರ ಹೀನ ಬದುಕನ್ನು ಬಹಳ ಹಿಂದಿನಿಂದಲೇ ನೋಡುತ್ತಾ ಬಂದಿದ್ದ ಹಾಗೂ ಮನುಷ್ಯ ವಿರೋಧಿಯಾಗಿರುವ ಜಾತಿವ್ಯವಸ್ಥೆಯನ್ನು ವಿರೋಧಿಸುತ್ತ ಬೆಳೆಯುತ್ತಿದ್ದ ಹಲವರ ನಿರೀಕ್ಷೆಯಾಗಿತ್ತು.

ಎಲ್ಲರ ನಿರೀಕ್ಷೆಯಂತೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟಿನವರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸ್ಥಿತಿಗತಿಗಳನ್ನು ಸುಧಾರಿಸುವುದಕ್ಕಾಗಿ ಕೆಲವು ಯೋಜನೆಗಳು ಹಾಗೂ ಆದಿವಾಸಿ ಬುಡಕಟ್ಟು ಎಂಬ ಕಾರಣದಿಂದ ಕೊರಗರ ಅಭಿವೃದ್ಧಿಗಾಗಿಯೇ ಹಲವು ಯೋಜನೆಗಳು ಅನುಷ್ಠಾನಗೊಂಡವು. ಆದರೆ ಆ ಯೋಜನೆಗಳು ಕೊರಗ ಬುಡಕಟ್ಟನ್ನು ಎಷ್ಟು ಪ್ರಮಾಣದಲ್ಲಿ, ಎಷ್ಟು ವೇಗದಲ್ಲಿ ತಲುಪಿದವು? ಆ ಕೆಲವು ಯೋಜನೆಗಳ ನಿಜವಾದ ಫಲಾನುಭವಿಗಳು ಯಾರು? ಎಂಬುದನ್ನು ಕೊರಗರ ಅಭಿವೃದ್ಧಿ ಸಂಘಗಳ ಒಕ್ಕೂಟದ ಅಧ್ಯಕ್ಷರ ಕಣ್ಣಲ್ಲಿ ಕಿಡಿಕಾರುತ್ತಾ ನೀಡುವ ದಾಖಲೆಗಳನ್ನು ಪರಿಶೀಲಿಸಿದಾಗ, ನನ್ನ ನೆನಪಿಗೆ ಥಟ್ಟನೆ ಏರಿ ಬಂದದ್ದು ನನ್ನ ಬಾಲ್ಯದ ಒಂದು ಚಿತ್ರಣ.

ಕೊರಗನ ಉಪ್ಪಿನಕಾಯಿ ಪ್ರಕರಣ

ಅದು ಒಂದಾಣೆಗೆ ಎಂಟು ಖರ್ಜೂರ ಸಿಗುತ್ತಿದ್ದ ಕಾಲ. ಚಾವಡಿಯ ಮೇಲಂತಸ್ತಿನಲ್ಲಿ ಕೂತಿರುತ್ತಿದ್ದ ಅಮ್ಮನ ತೊಡೆಯೇರಿ ಕೂತರೆ, ಮನೆಯ ಮುಂದಿನ ಮೇಲಂಗಳದಿಂದ ದೂರದ ಗದ್ದೆ-ತೋಟದವರೆಗೆ ಕಾಣಿಸುತ್ತಿದ್ದುದು ಶ್ರೇಣೀಕೃತ ಜಾತಿವ್ಯವಸ್ಥೆಯ ಪುಟ್ಟ ಪ್ರತಿಬಿಂಬದಂತಿರುವ ಚಿತ್ರಣ!

ಚಾವಡಿಯ ಕೆಳ ಅಂತಸ್ತಲ್ಲಿ ಅಂಗರ ಮೂಲ್ಯ, ಈರಪ್ಪ ಪೂಜಾರಿ, ಕೂಸಮ್ಮೈಲಿ, ಧೂಮಶೆಟ್ಟಿ ಅಕ್ಕಿ



ಚಾವಡಿಯ ಕೆಳ ಅಂತಸ್ತಲ್ಲಿ ಅಂಗರ ಮೂಲ್ಯ, ಈರಪ್ಪ ಪೂಜಾರಿ, ಕೂಸಮ್ಮೈಲಿ, ಧೂಮಶೆಟ್ಟಿ ಅಕ್ಕಿ ಮುಡಿ ಕಟ್ಟುವ ಕೆಲಸದಲ್ಲಿ ನಿರತರಾಗಿದ್ದಾರೆ. ಮೇಲಂಗಳದಲ್ಲಿ ತುಳಸಿಕಟ್ಟೆಗಿಂತ ಆಚೆಗೆ, ತಾನೇರಬಹುದಾದಷ್ಟು ದೂರದಲ್ಲೇ ನಿಂತು ಬಾಡಮುಗೇರ ಭತ್ತದ ಹಗ್ಗ ಹೊಸೆಯುವುದರಲ್ಲಿ ಮಗ್ನವಾಗಿದ್ದ. ಆತನ ಹೆಂಡತಿ ಬಿಯಲು ಅಂಗಳದ ಬಲಭಾಗಕ್ಕಿರುವ ಕೊಟ್ಟಿಗೆಯ ಪಕ್ಕದ ಕೋಣೆಯಲ್ಲಿ ಅಂಗರ ಮೂಲ್ಯನ ಹೆಂಡತಿಯ ಜತೆಗೆ ಭತ್ತ ಕುಟ್ಟುವುದರಲ್ಲಿ ತಲ್ಲೀನಳಾಗಿದ್ದಾಳೆ. ಕೆಳ ಅಂಗಳದಲ್ಲಿ ಮಾರಿಮನ್ಸ ಕರಿಯ ತನ್ನ ಅಳಿಯ ದೋಗುಮನ್ಸನ ಜತೆ ಸೇರಿ ಭತ್ತದ ಪಡಿಯ ಮೇಲೆ ಬೈಹುಲ್ಲು ಹೊಡೆಯುತ್ತಿದ್ದಾನೆ. ಕೆಳ ಅಂಗಳದಿಂದ ನೇರ ಕಾಣುವ ಕಂಬಳದ ಗದ್ದೆಯಲ್ಲಿ ಬೂದಮಾಯಿಲ ಗದ್ದೆಯ ಹುಣಿ ಕಡಿಯುತ್ತಿದ್ದಾನೆ. ಎಲ್ಲರೂ ಅವರವರ ಜಾತಿಗೆ ತಕ್ಕಂತೆ ಏರಬೇಕಾದಷ್ಟು ಎತ್ತರಕ್ಕೇರಿ, ಸಾಗುವಳಿ ಕೆಲಸದಲ್ಲಿ ಮಗ್ನರಾಗಿರುವಾಗ ದೂರದ ಬೆಟ್ಟಿನ ಬೇಲಿಯಿಂದ 'ಕೂ..' ಎಂಬ ಶಬ್ದ ತೇಲಿ ಒಂದು ನೇರ ಅಮ್ಮನ ಕಿವಿಗೇ ಅಪ್ಪಳಿಸಿತ್ತು.

ಮುಡಿ ಕಟ್ಟುವ ಕೆಲಸದಲ್ಲಿ ನಿರತರಾಗಿದ್ದಾರೆ. ಮೇಲಂಗಳದಲ್ಲಿ ತುಳಸಿಕಟ್ಟೆಗಿಂತ ಆಚೆಗೆ, ತಾನೇರಬಹುದಾದಷ್ಟು ದೂರದಲ್ಲೇ ನಿಂತು ಬಾಡಮುಗೇರ ಭತ್ತದ ಹಗ್ಗ ಹೊಸೆಯುವುದರಲ್ಲಿ ಮಗ್ನವಾಗಿದ್ದ. ಆತನ ಹೆಂಡತಿ ಬಿಯಲು ಅಂಗಳದ ಬಲಭಾಗಕ್ಕಿರುವ ಕೊಟ್ಟಿಗೆಯ ಪಕ್ಕದ ಕೋಣೆಯಲ್ಲಿ ಅಂಗರಮೂಲ್ಯನ ಹೆಂಡತಿಯ ಜತೆಗೆ ಭತ್ತ ಕುಟ್ಟುವುದರಲ್ಲಿ ತಲ್ಲೀನಳಾಗಿದ್ದಾಳೆ. ಕೆಳ ಅಂಗಳದಲ್ಲಿ ಮಾರಿಮನ್ಸ ಕರಿಯ ತನ್ನ ಅಳಿಯ ದೋಗುಮನ್ಸನ ಜತೆ ಸೇರಿ ಭತ್ತದ ಪಡಿಯ ಮೇಲೆ ಬೈಹುಲ್ಲು ಹೊಡೆಯುತ್ತಿದ್ದಾನೆ. ಕೆಳ ಅಂಗಳದಿಂದ ನೇರ ಕಾಣುವ ಕಂಬಳದ ಗದ್ದೆಯಲ್ಲಿ ಬೂದಮಾಯಿಲ ಗದ್ದೆಯ ಹುಣಿ ಕಡಿಯುತ್ತಿದ್ದಾನೆ. ಎಲ್ಲರೂ ಅವರವರ ಜಾತಿಗೆ ತಕ್ಕಂತೆ ಏರಬೇಕಾದಷ್ಟು ಎತ್ತರಕ್ಕೇರಿ, ಸಾಗುವಳಿ ಕೆಲಸದಲ್ಲಿ ಮಗ್ನರಾಗಿರುವಾಗ ದೂರದ ಬೆಟ್ಟಿನ ಬೇಲಿಯಿಂದ 'ಕೂ..' ಎಂಬ ಶಬ್ದ ತೇಲಿ ಒಂದು ನೇರ ಅಮ್ಮನ ಕಿವಿಗೇ ಅಪ್ಪಳಿಸಿತ್ತು.

"ಚಾವಡಿಯಲ್ಲಿ ಮುಡಿ ಕಟ್ಟುತ್ತಿದ್ದ ಅಂಗರ ಮೂಲ ತಟ್ಟನೆ ಅಂದ 'ಓ ಇದು ಅವ್ವ ಹೆಣವೇ, ಏನೋ ಬೇಡವುದಕ್ಕೆ ಬಂದಿದಾನೆ...!'" ಇನ್ನೇನು ಈರಪೂಜಾರಿ ಅದಕ್ಕೊಂದು ಉತ್ತರ ಕೊಡಬೇಕೆನ್ನುವಷ್ಟರಲ್ಲಿನ 'ಕೂ..' ವಿನ ಜತೆಗೆ 'ದೆತ್ತಿಯೇ' ಎನ್ನುವ ಕರೆ ಬೇರೆ! ಏರಿಬಂತು! ಅಮ್ಮ ಇನ್ನೊಂದು 'ಕೂ..' ಬರುವ ಮುನ್ನವೇ ಎದ್ದು.

'ಬಾಡಾ.. ಹೋಗೋ... ಅ ಮುದರ ಕೊರಗಕೂ... ಹಾಕ್ತಾ ಇದ್ದಾನೆ. ಏನಂತ ಕೇಳಿಕೊಂಡು ಬಾರೋ...'

'...ಅವನ್ದು ಯಾವಾಗ್ಲೂ ಇದ್ದದ್ದೆ, ಬೇಡುವ ಬಾಯಿಗೆ ಬರವುಂಟಾ ದೆತ್ತಿ? ಹೋಗೋ ಕರಿಯ ಅವನ್ದು ಏನೂಂತ ಕೇಳಿಕೊಂಡು ಬಾರನಾ..' ಬಾಡಮುಗೇರ, ದೆತ್ತಿ ಹೇಳಿದ ಕೆಲಸವನ್ನು ಕೆಳಅಂಗಳಕ್ಕೆ ಸಲ್ಲಬೇಕಾದ ಜಾತಿಯ ಕರಿಯಮನ್ಸನಿಗೆ ಒಪ್ಪಿಸಿದ್ದ.

ಮನ್ಸ ಹಾಗೇ ಗದ್ದೆ ಇಳಿದು ಬಿಟ್ಟು 'ಓಯ್ ಮಾಯ್ಲಾ... ಅವನ್ದು ಏನಂತೆ ಕತೆ, ಸ್ವಲ್ಪ ಕೇಳನಾ...' ಎಂದು ಬರೀ ಮೈಗೆ ಕೋಮಣವೊಂದನ್ನು ಕಟ್ಟಿಕೊಂಡು ಬದುವಿನ ಕೆಲಸ ಮಾಡುತ್ತಿದ್ದ ಮಾಯಲನಿಗೆ ಆ ಕೆಲಸವನ್ನು ಒಪ್ಪಿಸಿದ್ದ.

ಬೂದ ಮಾಯಿಲ... ಬೇಲಿಯ ಬಳಿ ಸಾಗಿ ಮುದರ ಕೊರಗನಲ್ಲಿ ವಿಚಾರಿಸಿ, ಮತ್ತೆ ಮರಳಿಬಂದು ಕೆಳ ಅಂಗಳದಲ್ಲಿ ನಿಂತಿದ್ದ ಕರಿಯ ಮನ್ಸನಿಗೆ ಸಂದೇಶ ತಲುಪಿಸಿದ್ದ. 'ಅವನ ಕೊರತಿ ಬೈಯ್ಯುವಿಗೆ ಏಳು ತಿಂಗಳಂತೆ. ನೀರಲ್ಲಿ ಹಾಕಿದ ಬೇಯಿಸಿದ ಮಾವಿನಕ್ಯಾ, ಮಿಡಿ ಉಪ್ಪಿನಕ್ಯಾ ತಿನ್ನುವ ಬಯಕೆಯಾಗಿದೆಯಂತೆ. ದೆತ್ತಿಗೆ ಹೇಳಬೇಕಂತೆ.' ಸರಿ, ಮಾಯಿಲ ತಂದ ಸಂದೇಶ ಬಾಡಮುಗೇರನ ಮೂಲಕ ಅಮ್ಮನ ಕಿವಿ ಸೇರಿತ್ತು. ಅಮ್ಮನಿಗೆ ಬೈಯ್ಯುವಿನ ಬಸುರಿ ಬಯಕೆ ತೀರಾ ಸಹಜವೆನಿಸಿದ ಕಾರಣ ಹಾಗೂ ಮುದರ ಕೊರಗನೂ ಆ ಕುಟುಂಬದ ಅಜಲಿನವನಾದ ಕಾರಣ ತಟ್ಟನೆ ಅಮ್ಮ ಅಡುಗೆಮನೆ ಹೊಕ್ಕವರೇ ಒಂದು ಮಣ್ಣಿನ ಗದ್ದವಿಗೆ ಉಪ್ಪುನೀರಲ್ಲಿ ಹಾಕಿಟ್ಟ ಎಂಟು ಬೇಯಿಸಿದ ಮಾವಿನಕ್ಯಾ, ನಾಲ್ಕು ಬೇಯಿಸಿದ ಹೆಬ್ಬಲಸಿನಕಾಯಿಗಳ ಜತೆಗೆ ಒಂದಷ್ಟು ಕೇನೆಕಂಡೆಗಳನ್ನು ಹಾಕಿ ಹೆಣ್ಣುಗೆರಟೆಯಲ್ಲೊಂದಷ್ಟು ಮಿಡಿಉಪ್ಪಿನ ಕಾಯಿ ಹಾಕಿ ಅದನ್ನೂ ಮಣ್ಣಗದ್ದವಿನಲ್ಲಿಟ್ಟು ಅಂಗರಮೂಲ್ಯನ ಕೈಗೆ ಕೊಟ್ಟವರೇ, ಇದನ್ನು 'ಬಾಡನ ಮೂಲಕ ಕೊಟ್ಟು ಕಳುಹಿಸು' ಎಂದು ಕಳುಹಿಸಿಕೊಟ್ಟರು.

ಆತ ಅಂಗಳವಿಳಿದೊಡನೆ ತನ್ನ ಬಾಯಿಗಂಟಲಿಗೆ ಒಂದು ಮಾವಿನ ಮಿಡಿಯನ್ನು ಎಸೆದುಕೊಂಡು, ಬಾಡ ಮುಗೇರನ ಕೈಗಳಿಗೆ ಆ ಮಣ್ಣಗದ್ದವು ಮತ್ತು ಉಪ್ಪಿನ ಕಾಯಿ ಗೆರಟೆ ಕೊಟ್ಟು 'ಜಾಗ್ರತೆ ನಿಧಾನಕ್ಕೆ ಹೋಗಿ ಮುದರನಿಗೆ ತಲುಪಿಸು' ಎಂದು ಅಮ್ಮನಿಗೆ ಕೇಳಿಸುವಂತೆ ಗದರಿ ಮರಳಿ ಚಾವಡಿಯೇರುತ್ತಿದ್ದಂತೆ, ಬಾಡ ಮುಗೇರನೂ ತನ್ನ ಪಾಲಿನ ಮಿಡಿಯೊಂದನ್ನು ಬಾಯಿಗೆಸೆದು ಕೊಂಡನಲ್ಲದೆ, ಅದರ ಜತೆಗೆ ಒಂದು ಬೇಯಿಸಿದ ಮಾವಿನ ಕಾಯನ್ನು ತನ್ನ ಬೀಯಲುವಿಗಾಗಿ ಭತ್ತದ ಪಡಿಯ ಮೇಲೆ ಅಡಗಿಸಿಟ್ಟು, ನೇರ ಕೆಳ ಅಂಗಳಕ್ಕಿಳಿದವನೇ 'ತಗೊಳನಾ... ಸೀದಾ ಹೋಗಿ ಮುದರನಿಗೆ ತಲುಪಿಸಿ ಬಾ' ಎಂದು ತನ್ನ ಜವಾಬ್ದಾರಿಯನ್ನು ಕರಿಯ ಮನ್ಸನಿಗಿ ರವಾನಿಸಿದ್ದ.

ಕರಿಯಮನ್ಸ ಹಾಗೇ ನೇರ ಗದ್ದೆ ಹುಣಿಗಿಳಿದು ಹೋದವ ಮಾಯಿಲನ ಕೈಗಳಿಗದನ್ನು ತಲುಪಿಸುವ ಮುನ್ನ ಎರಡು ಕೇನೆ ಕಂಡೆಗಳನ್ನು, ಒಂದು ಹೆಬ್ಬಲಸಿನ ತುಂಡು, ಮತ್ತೆ ಒಂದು ಮಾವಿನ ಮಿಡಿಯನ್ನು ಸ್ವಾಹ ಮಾಡಿ, ಮಾಯಿಲನಿಗೆ ಎಚ್ಚರಿಸಿಯೇ ಹಿಂದಿರುಗಿದ್ದ. 'ನೋಡನಾ... ಆತನ ಕೊರತಿ ಬಸುರಿಗಿಂತ ನಮ್ಮ ಧೆತ್ತಿ ಕೊಟ್ಟಿದ್ದು, ಕಳ್ಳ ಕೈ ಹಾಕಿ ಕೊಡಬೇಡ ಮತ್ತೆ.. ನೋಡು' ಎಂದು ಎಚ್ಚರಿಸಿ ಹಿಂದಿರುಗುವಷ್ಟರಲ್ಲಿ, ಬೇಲಿ ಬದಿಯಲ್ಲಿದ್ದ ಮುದರ ಇದನ್ನೆಲ್ಲ ನೋಡುತ್ತಿದ್ದವ, ಮಾಯಿಲನ ಕೈಯಿಂದ ಒಂದು ಮಾವಿನಮಿಡಿ ಗಂಟಲು ಸೇರಿದೊಡನೆಯೆ ಗಬಕ್ಕನೆ ಗದ್ದೆಗೆ ಹಾರಿ ಬಂದವನೇ ಮಣ್ಣಿನಗದ್ದವು ಮತ್ತು ಗೆರಟೆ ಸಮೇತ ಕೊಟ್ಟದತ್ತ ಪರಾರಿಯಾಗಿದ್ದ.

ಸರಕಾರ ಅನುಷ್ಠಾನಗೊಳಿಸುವ ಯೋಜನೆಗಳ ಫಲ ಉಣ್ಣುವ ವಿಚಾರದಲ್ಲಿ ಕೊರಗರಿಗೆ ಮಧ್ಯವರ್ತಿಗಳಿಂದ ಮಾತ್ರವಲ್ಲ ಶೂದ್ರ, ಪಂಚಮರಿಂದಲೇ ಆಗುತ್ತಿರುವ ವಂಚನೆಗೆ ನನ್ನ ಬಾಲ್ಯದ ಈ ಉಪ್ಪಿನಕಾಯಿ ಘಟನೆ ಒಂದು ಸಂಕೇತವಷ್ಟೆ.

ಸರಕಾರಿ ಸ್ವ ಉದ್ಯೋಗ ಯೋಜನೆಯಡಿ ಕೊರಗ ಸಮುದಾಯದ ಅಭಿವೃದ್ಧಿಗಾಗಿ ಕೊಡುತ್ತಿರುವ ತೆಂಗಿನಗಿಡಗಳು, ಮಲ್ಲಿಗೆ ಗಿಡಗಳು ಕೊರಗರ ಅಂಗಳದಲ್ಲಿ ಹೂ ಕಾಯಿ ಬಿಟ್ಟಿದ್ದಾವೆಯೇ ಎಂದು ಕೊರಗರ ಸಂಘಗಳ ಒಕ್ಕೂಟದ ಅಧ್ಯಕ್ಷರನ್ನು ಕೇಳಿದರೆ, 'ಕೊರಗರಿಗೆ ಭೂಮಿ ಇದ್ದರೆ ತಾನೆ, ಆ ಗಿಡಗಳನ್ನು ನೆಡುವುದು... ಅವು ಹೂ ಬಿಡುವುದು ಕಾಯಿ ಬಿಡುವುದು. ವಾಸಿಸುವುದಕ್ಕೂ ಸ್ವಂತ ಭೂಮಿ ಇಲ್ಲದೆ, ಕುಡಿಯುವುದಕ್ಕೂ ನೀರಿಲ್ಲದೆ, ಹಸಿವಿನಿಂದ ಕಂಗಾಲಾಗಿರುವ ಅನಕ್ಷರಸ್ಥ ಕೊರಗ ಆ ಗಿಡಗಳನ್ನು ಏನು ಮಾಡಿಯಾನು? ಆ ದಿನದ ಹೊಟ್ಟೆಗಾಗಿ ಉಳ್ಳವರ ಮನೆಗೆ ಗಿಡ ಮಾರಿ ಅದರಿಂದ ಅಕ್ಕಿ ತರಬಲ್ಲ ಅಷ್ಟೆ'

1994 ರಿಂದ ಕೊರಗರು ನಡೆಸುತ್ತಿರುವ ಭೂಮಿ ಚಳವಳಿ ಕಾರಣದಿಂದ ಹಾಗೂ ಡಾ॥ ಮಹಮ್ಮದ್ ಪೀರ್ ಅವರ ವರದಿಯನ್ನು ಆಧರಿಸಿ, ಸರಕಾರಿ ಸ್ವಾಮ್ಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ಕೊರಗರಿಗಾಗಿ ಪುನರ್‌ವಸತಿ ಯೋಜನೆಗಳನ್ನು ಕೈಗೆತ್ತಿಕೊಂಡಿತ್ತು. ಮೊದಲ ಹಂತವಾಗಿ 2001-02ರ ಸಾಲಿನಲ್ಲಿ ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನಲ್ಲಿ 22 ಮಂದಿ ಕೊರಗರಿಗೆ ತಲಾ 2 ಎಕ್ರೆಯಂತೆ, ಸ್ಥಳೀಯರಿಂದ ಭೂಮಿ ಖರೀದಿಸಿ ವಿತರಿಸಿತ್ತು. ಅನಕ್ಷರಸ್ಥ

ಕೊರಗರು ತಮ್ಮ ಪಾಲಿಗೆ ಬಂದಂತಹ ಎರಡು ಎಕ್ರೆ ಭೂಮಿಯನ್ನು ಕಂಡು ಸ್ವರ್ಗಕ್ಕೆ ಏಣಿಕಟ್ಟಿ ಕೂತವರಂತೆ ಸಂತೋಷಿತರಾಗಿ, ಆ ಭೂಮಿಯನ್ನು ಸಮತಟ್ಟುಗೊಳಿಸಿ ಕೃಷಿಯೋಗ್ಯಗೊಳಿಸುವ ಪರಿ ಹೇಗೆ...? ನೀರಾವರಿ ಒದಗಿಸುವ ಬಗೆ ಹೇಗೆ? ಇತ್ಯಾದಿಗಳ ಬಗ್ಗೆ ಯೋಚಿಸುತ್ತಿದ್ದಂತೆ, ಆ ಕೆಲಸಕ್ಕಾಗಿ ನಿಗಮದಿಂದ ಹತ್ತು ಸಾವಿರ ರೂಪಾಯಿ ಹಣವೂ ಬಂತು. ಆ ಸಮತಟ್ಟಿನ ಕೆಲಸ ಮುಗಿಯುವಷ್ಟರಲ್ಲಿ ನಿಗಮದಿಂದ ಒಂದು ನೋಟೀಸೂ ಜಾರಿಯಾಯಿತು.

'ಮಾರ್ಚ್ 2004ಕ್ಕೆ ಅನ್ವಯವಾಗುವಂತೆ ತಮ್ಮ ಆರ್.ಟಿ.ಸಿ.ಯಲ್ಲಿ ನಮೂದಿಸಲ್ಪಟ್ಟಂತೆ, ಎರಡು ಲಕ್ಷ ರೂಪಾಯಿಗಳ ಸಾಲಕ್ಕೆ ಆಧಾರದಂತೆ ತಾವು ರೂ. 50 ಸಾವಿರ ಅಸಲು, ರೂ. 24041 ಬಡ್ಡಿ ಹಾಗೂ ರೂ. 1107/-ನ್ನು ಸುಸ್ತಿ ಬಡ್ಡಿಯನ್ನಾಗಿ ಮರುಪಾವತಿಸತಕ್ಕದ್ದು. ನೋಟೀಸು ತಲುಪಿದ ಏಳು ದಿನಗಳೊಳಗೆ ಹಣ ಪಾವತಿಸದಿದ್ದಲ್ಲಿ ಭೂಮಿಯನ್ನು ವಶಮಾಡಿ ವಸೂಲಾತಿಗೆ ಕ್ರಮ ಕೈಗೊಳ್ಳಲಾಗುವುದು' ಎಂಬ ಸಂದೇಶವುಳ್ಳ ಆ ನೋಟೀಸಿನಿಂದ ಕೊರಗರು ಕಂಗಾಲಾದರು. ಈಗ ಈ ಸ್ವತಂತ್ರ ಭಾರತದಲ್ಲಿ ಸ್ವಾಭಿಮಾನದಿಂದ ಬದುಕಬೇಕೆನ್ನುವ ಅವರ ಕನಸಿನ ಚಿಗುರೇ ಮುರುಟಿದಂತಾಗಿದೆ. ನಿರಂತರವಾಗಿ ಶೋಷಿಸಲ್ಪಟ್ಟವರನ್ನು ಹೆತ್ತತಾಯಿಯಂತೆ ಪೋಷಿಸಬೇಕಾದ ಸರಕಾರವೇ ಅನಕ್ಷರಸ್ಥರಾದ ತಮಗೆ ಸಾಲದ ಸೂಚನೆಯನ್ನೇ ನೀಡದೆ ಸಾಲ ವಸೂಲಾತಿಗೆ ಮುಂದಾಗಿದ್ದು ಕೊರಗರ ಸಮುದಾಯಕ್ಕೆ ಭರಿಸಿಕೊಳ್ಳಲಾಗದ ಆಘಾತವಾಗಿದೆ.

ಸರಕಾರದ ಈ ಕ್ರಮದಿಂದಾಗಿ ಕೊರಗರು ಈ ಭೂಮಿಯಲ್ಲಿ ಬದುಕುವ ಹಕ್ಕನ್ನು ಕೆಣಕಿದಂತಾಗಿದೆ. 'ಈ ಭೂಮಿಯ ಮೂಲನಿವಾಸಿಗಳಾದ ನಮಗೆ ಎಲ್ಲರಂತೆ ಈ ಭೂಮಿಯಲ್ಲಿ ಗೌರವಯುತವಾಗಿ ಬದುಕುವ, ಭೂಮಿ ಅನುಭವಿಸುವ ಹಕ್ಕು ಇದ್ದೇ ಇದೆ. ನಮ್ಮ ಹಕ್ಕನ್ನು ನಮಗೆ ಮರಳಿಸಿ' ಎಂಬ ಹಕ್ಕೊತ್ತಾಯ ನಡೆ, ಭೂಮಿ ಚಳುವಳಿಯನ್ನು ಮತ್ತೆ ಕೊರಗರ ಒಕ್ಕೂಟ ಆರಂಭಿಸಿದೆ.

ಒಂದು ಕಾಲದಲ್ಲಿ ಊಳಿಗಮಾನ್ಯ ಸಮಾಜವು ಕೊರಗರನ್ನು ಜಾತಿಪದ್ಧತಿಯ ನೆಪದಲ್ಲಿ ಭೌತಿಕವಾಗಿ ಹಾಗೂ ಮಾನಸಿಕವಾಗಿ ಹಿಂಸಿಸಿ ವಂಚಿಸಿದ್ದಿರಬಹುದು. ಅಸ್ಪೃಶ್ಯತೆ ಅವಮಾನದಿಂದ ಬಳಲಿ ನಿಸ್ತೇಜರಾಗಿದ್ದ ಆ ಕಾಲವೀಗ ನಿಧಾನಕ್ಕೆ ಬದಲಾಗುತ್ತಿದೆ. ಕೊರಗರಲ್ಲಿ ಪ್ರಖರವಾದ ಸಮಾಜವಾದಿ ಚಿಂತನೆ, ನಿಸ್ವಾರ್ಥ ನಾಯಕತ್ವವುಳ್ಳ, ನಿಖರ ವೈಚಾರಿಕ-ಸೈದ್ಧಾಂತಿಕ ಸ್ಪಷ್ಟತೆಯುಳ್ಳ ನಾಯಕರು

ಸುಮಾರು ವರುಷಗಳ ಹಿಂದೆ ಪುತ್ತೂರಿನ ಬೆಟ್ಟಂಪಾಡಿ ಪಂಚಾಯತ್ ವ್ಯಾಪ್ತಿಯ ಕೊರಗ ಕುಟುಂಬವೊಂದಕ್ಕೆ ಸರಕಾರದ ವೈಯಕ್ತಿಕ ನೀರಾವರಿ ಯೋಜನೆಯಡಿ ಬಾವಿ ಮತ್ತು ಪಂಪ್‌ಸೆಟ್ ಸೌಲಭ್ಯ ಮಂಜೂರಾಗಿತ್ತು. ಕೊರಗರ ಬಾವಿ ತೋಡುವ ಗುತ್ತಿಗೆಯನ್ನು ವಹಿಸಿಕೊಂಡ ನಮ್ಮ ವರ್ಣವ್ಯವಸ್ಥೆಯ ಮೇಲ್ತುದಿಯಲ್ಲಿರುವ ಗುತ್ತಿಗೆದಾರರು ಬಾವಿಯಲ್ಲಿ ನೀರು ಬಿದ್ದಿಲ್ಲವೆಂದು ಬಾವಿಯ ಕೆಲಸವನ್ನು ಅರ್ಧದಲ್ಲೇ ನಿಲ್ಲಿಸಿಬಿಟ್ಟು ಸರಕಾರ ಕೊಟ್ಟ ಪಂಪ್‌ಸೆಟ್ಟನ್ನು ತಮ್ಮ ಅಂಗಳಕ್ಕೊಯ್ದರಲ್ಲದೆ ಆ ಕೊರಗ ಕುಟುಂಬದ ನೀರಾವರಿ ಯೋಜನೆಯಡಿ ಸಿಕ್ಕಿದ್ದ ಹಾರೆ, ಪಿಕ್ಕಾಸು, ಗೊಬ್ಬರ ಎಲ್ಲವನ್ನೂ ತಮ್ಮ ಅಂಗಳಕ್ಕೇರಿಸಿಕೊಂಡರು. ಗುತ್ತಿಗೆದಾರರ ಜಮೀನಿನಲ್ಲಿ ಕೆರೆ ಬಾವಿಗೆ ಕೊರತೆಯಿಲ್ಲದ ಕಾರಣ ಅವರು ಕೊರಗನ ಬರಡು ಜಮೀನಿನಲ್ಲಿ ಬಿದ್ದಿದ್ದ ಪಂಪ್‌ಸೆಟ್‌ಗೆ ಒಂದು 'ನೆಲೆ'ಯನ್ನು ಒದಗಿಸಿಕೊಟ್ಟರೂ ಕೊರಗರ ನಾಯಕರ ಕೈಯಿಂದ ಪಾರಾಗುವುದು ಸಾಧ್ಯವಾಗಲಿಲ್ಲ.

ಬದುಕಿನ ವಿವಿಧ ಮಜಲುಗಲ್ಲಿ ಅಸ್ಪೃಶ್ಯತೆಯ ಬರೆ ಹಾಕಿಸಿಕೊಂಡ ಅಂಬೇಡ್ಕರರು ಶ್ರೇಣೀಕೃತ ಸಮಾಜವನ್ನು ಕುರಿತು ಹೀಗೆ ಅಭಿಪ್ರಾಯಪಡುತ್ತಾರೆ. 'ಈ ಸಮಾಜದ ಜಾತಿವ್ಯವಸ್ಥೆಯ ವಿನ್ಯಾಸ ಹೇಗಿದೆಯೆಂದರೆ ಪ್ರತೀ ಜಾತಿಯು ಶ್ರೇಣೀಕರಣದ ನಿರ್ದಿಷ್ಟ ಹಂತದಲ್ಲಿದ್ದು, ಪ್ರತೀ ಜಾತಿಯೂ ಕೂಡಾ ತನಗಿಂತ ಕೆಳಗಿರುವ ಜಾತಿಯನ್ನು ಹೀನಾಯವಾಗಿ ಅಮಾನವೀಯವಾಗಿ ನಡೆಸಿಕೊಳ್ಳುತ್ತದೆ ಹಾಗೂ ತನ್ನ ಮೇಲಿರುವ ಜಾತಿಯನ್ನು ಓಲೈಸ ತೊಡಗುತ್ತದೆ. ಜಾತಿ ವ್ಯವಸ್ಥೆಯ ಈ ಸಂಕೀರ್ಣತೆಯ ಕಾರಣ ದಿಂದ ಪ್ರತೀ ಜಾತಿಯೂ ಅದು ಮೇಲ್ಜಾತಿಯಾಗಲಿ, ಹಿಂದುಳಿದ ಕೆಳಜಾತಿಯಾಗಲಿ ಅಥವಾ ದಲಿತ ಜಾತಿಯಾಗಲಿ ತಮ್ಮಲ್ಲೆ ಶ್ರೇಣೀಕರಣವನ್ನೇರ್ಪಡಿಸಿಕೊಂಡು ತಾರ ತಮ್ಯಗಳಲ್ಲಿ ತೊಡಗುತ್ತವೆ'. ಅಂಬೇಡ್ಕರರ ಈ ಅಭಿಪ್ರಾಯ ಇಂದಿಗೂ ಪ್ರಸ್ತುತವಾಗಿದೆ.

ಂದಯಿಸಿದ್ದಾರೆ. ಧ್ವನಿಯಿಲ್ಲದ ಕೊರಗರಿಗೆ ಧ್ವನಿಯಾಗಿ, ಸೈದ್ಧಾಂತಿಕ ಹೋರಾಟದ ದಾರಿ ತೋರಿಸುತ್ತ, ಅವರ ಅಭಿವೃದ್ಧಿಗಾಗಿ ಸತತ ಶ್ರಮಿಸುವ ಪ್ರಗತಿಪರ ಸಮಾಜವಾದಿ ಚಿಂತಕರು ಹಾಗೂ ಸಂಸ್ಥೆಗಳೂ ಅವರ ಬೆಂಗಾವಲಿಗಿವೆ.

ಇಂದು ತಮಗಾಗುತ್ತಿರುವ ಅನ್ಯಾಯಗಳ ಬಗ್ಗೆ ಚುಚ್ಚುತ್ತಿರುವ ಕೊರಗ ನಾಯಕರು, ಇದೀಗ ಜನಾಂಗ ಕಾಗುವ ವಂಚನೆಯನ್ನು ತಕ್ಷಣವೇ ಸಮಾಜಕ್ಕೆ ಬಯಲು ಗೊಳಿಸುತ್ತಿರುವುದು ಅವರು ಇದೀಗ ಅದೆಷ್ಟು ಸೂಕ್ಷ್ಮಮತಿ ಯಾಗಿದ್ದಾರೆ ಎನ್ನುವುದಕ್ಕೆ ಸಾಕ್ಷಿಯಾಗಿದೆ.

ಸುಮಾರು ವರುಷಗಳ ಹಿಂದೆ ಪುತ್ತೂರಿನ ಕೆಮ್ಮಿಂಪಾಡಿ ಪಂಚಾಯತ್ ವ್ಯಾಪ್ತಿಯ ಕೊರಗ ಕುಟುಂಬವೊಂದಕ್ಕೆ ಸರಕಾರದ ವೈಯಕ್ತಿಕ ನೀರಾವರಿ ಯೋಜನೆಯಡಿ ಬಾವಿ ಮತ್ತು ಪಂಪ್‌ಸೆಟ್ ಸೌಲಭ್ಯ ಮಂಜೂರಾಗಿತ್ತು. ಕೊರಗರ ಬಾವಿ ತೋಡುವ ಗುತ್ತಿಗೆಯನ್ನು ವಹಿಸಿಕೊಂಡ ನಮ್ಮ ವರ್ಣವ್ಯವಸ್ಥೆಯ ಮೇಲ್ತುದಿಯಲ್ಲಿರುವ ಗುತ್ತಿಗೆದಾರರು ಬಾವಿಯಲ್ಲಿ ನೀರು ಸಿಗಲಿಲ್ಲವೆಂದು ಬಾವಿಯ ಕೆಲಸವನ್ನು ಅರ್ಧದಲ್ಲೇ ನಿಲ್ಲಿಸಿಬಿಟ್ಟು ಸರಕಾರ ಕೊಟ್ಟ ಪಂಪ್‌ಸೆಟ್ಟನ್ನು ತಮ್ಮ ತೋಟಗಳಿಗೊಯ್ದರಲ್ಲದೆ ಆ ಕೊರಗ ಕುಟುಂಬದ ನೀರಾವರಿ ಯೋಜನೆಯಡಿ ಸಿಕ್ಕಿದ್ದ ಹಾರೆ, ಪಿಕ್ಕಾಸು, ಹಬ್ಬರ ಎಲ್ಲವನ್ನೂ ತಮ್ಮ ಅಂಗಳಕ್ಕೇರಿಸಿಕೊಂಡರು. ಗುತ್ತಿಗೆದಾರರ ಜಮೀನಿನಲ್ಲಿ ಕೆರೆ ಬಾವಿಗೆ ಕೊರತೆಯಿಲ್ಲದ ಕಾರಣ ಅವರು ಕೊರಗನ ಬರಡು ಜಮೀನಿನಲ್ಲಿ ಬಿದ್ದಿದ್ದ ಪಂಪ್‌ಸೆಟ್‌ಗೆ ಒಂದು 'ನೆಲೆ'ಯನ್ನು ಒದಗಿಸಿಕೊಟ್ಟರೂ ಕೊರಗರ ನಾಯಕರ ಕೈಯಿಂದ ಪಾರಾಗುವುದು ಮಾತ್ರ ಸಾಧ್ಯವಾಗಲಿಲ್ಲ.

ಕೊರಗ ಸಮುದಾಯ ತಮ್ಮ ಧ್ವನಿಗಾಗಿ ಹೊರಡಿಸುತ್ತಿರುವ 'ನಮ್ಮ ದನಿ' ಪತ್ರಿಕೆಯಲ್ಲಿ 'ಕೊರಗರ ಪಂಪ್‌ಸೆಟ್ ಭಟ್ಟರ ಮನೆಯಲ್ಲಿ' ಎಂಬ ಪತ್ರಿಕಾ ಬರಹದ ಮೂಲಕ ಉಳ್ಳವರು, ಜಾತಿಶ್ರೇಷ್ಠರು ತಮ್ಮ ಪಂಪಸೆಟ್, ಹಾರೆ, ಪಿಕ್ಕಾಸಿಗಳನ್ನು ನುಂಗುವ ಮೂಲಕ ಅನಕ್ಷರ ಸ್ಥರನ್ನು, ಮುಗ್ಧರನ್ನು ವಂಚಿಸುವ ಪರಿಯನ್ನು ಇಡೀಯ ಸಮಾಜಕ್ಕೇ ವರದಿ ಮಾಡಿದರು.

ಅಂದು ಒಂದಾಣೆಗೆ ಎಂಟು ಖರ್ಜೂರ ಸಿಗುತ್ತಿದ್ದ ನನ್ನ ಬಾಲ್ಯದಲ್ಲಿ, ನಮ್ಮ ಅಜಲಿನ ಮುದರ ಕೊರಗನ, ಕೊರತಿಗೆ ಸಲ್ಲಬೇಕಾದ ಉಪ್ಪಿನಕಾಯಿ ಗೆರಟೆಯಲ್ಲಾದ ವಂಚನೆ ನಡೆದದ್ದು ಯಾರಿಂದ? ಆತ ನಂತೆಯೇ ಅಥವಾ ಆತನಿಗಿಂತ ಸ್ವಲ್ಪ ಕಡಿಮೆ ಅಸ್ಪೃಶ್ಯತೆಯ, ಬಡತನದ ಬೇಗೆಯನ್ನುಣ್ಣುತ್ತಿದ್ದ ಶೂದ್ರರಿಂದ ಹಾಗೂ ಹೊಲೆಯರೆಂದು ಮೇಲ್ಜಾತಿಯವರಿಂದ ಜರೆಯಲ್ಪಡು ತ್ತಿದ್ದ ಪಂಚಮರಲ್ಲೇ ಶ್ರೇಣೀಕೃತ ವ್ಯವಸ್ಥೆಯಲ್ಲಿರುವ ಮುಗೇರ, ಮುಂಡಾಲ, ಮನ್ಸ ಜಾತಿಯವರಿಂದ.

ಈ ಘಟನೆಯನ್ನು ನೆನಪಿಸಿಕೊಂಡಾಗಲೆಲ್ಲ ಡಾ. ಅಂಬೇಡ್ಕರ್ ಅವರ ಜಾತ್ಯಾಧಾರಿತ ಸಮಾಜದ ಬಗ್ಗೆಯ ವಿಶ್ಲೇಷಣೆಯೊಂದು ನೆನಪಿಗೆ ಬರುತ್ತದೆ. ಬದುಕಿನ ವಿವಿಧ ಮಜಲುಗಲ್ಲಿ ಅಸ್ಪೃಶ್ಯತೆಯ ಬರೆ ಹಾಕಿಸಿಕೊಂಡ ಅಂಬೇಡ್ಕರರು ಶ್ರೇಣೀಕೃತ ಸಮಾಜವನ್ನು ಕುರಿತು ಹೀಗೆ ಅಭಿಪ್ರಾಯಪಡುತ್ತಾರೆ. 'ಈ ಸಮಾಜದ ಜಾತಿವ್ಯವಸ್ಥೆಯ ವಿನ್ಯಾಸ ಹೇಗಿದೆಯೆಂದರೆ ಪ್ರತೀ ಜಾತಿಯು ಶ್ರೇಣೀಕರಣದ ನಿರ್ದಿಷ್ಟ ಹಂತದಲ್ಲಿದ್ದು, ಪ್ರತೀ ಜಾತಿಯೂ ಕೂಡಾ ತನಗಿಂತ ಕೆಳಗಿರುವ ಜಾತಿಯನ್ನು ಹೀನಾಯವಾಗಿ ಅಮಾನವೀಯವಾಗಿ ನಡೆಸಿಕೊಳ್ಳುತ್ತದೆ ಹಾಗೂ ತನ್ನ ಮೇಲಿರುವ ಜಾತಿಯನ್ನು ಓಲೈಸ ತೊಡಗುತ್ತದೆ. ಜಾತಿ ವ್ಯವಸ್ಥೆಯ ಈ ಸಂಕೀರ್ಣತೆಯ ಕಾರಣದಿಂದ ಪ್ರತೀ ಜಾತಿಯೂ ಅದು ಮೇಲ್ಜಾತಿಯಾಗಲಿ, ಹಿಂದುಳಿದ ಕೆಳಜಾತಿಯಾಗಲಿ ಅಥವಾ ದಲಿತ ಜಾತಿಯಾಗಲಿ ತಮ್ಮಲ್ಲೆ ಶ್ರೇಣೀಕರಣವನ್ನೇರ್ಪಡಿಸಿ ಕೊಂಡು ತಾರತಮ್ಯಗಳಲ್ಲಿ ತೊಡಗುತ್ತವೆ'. ಅಂಬೇಡ್ಕರರ ಈ ಅಭಿಪ್ರಾಯ ಇಂದಿಗೂ ಪ್ರಸ್ತುತವಾಗಿದೆ.

ಸ್ವಾತಂತ್ರ್ಯಾನಂತರ ರಚನೆಯಾದ ಭಾರತದ ಸಂವಿಧಾನದಲ್ಲಿ, ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಜಾತಿ ತಾರತಮ್ಯ ಮತ್ತು ಆರ್ಥಿಕ, ರಾಜಕೀಯ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿನ ಅಸಮಾನತೆಯನ್ನು ಹತ್ತಿಕ್ಕಿ ಎಲ್ಲ ರಿಗೂ ಸಮಾನ ಅವಕಾಶವನ್ನು ನೀಡಬೇಕಾದ ಅಗತ್ಯತೆ ಯನ್ನು ಗುರುತಿಸಲಾಯಿತು. ಅಸಮಾನತೆಯಿಲ್ಲದ ನವಸ ಮಾಜಕ್ಕೆ ಅಗತ್ಯವಾಗಿ ಜೀವರಕ್ಷಕ ಕವಚದಂತೆ ಬೇಕಾ ದಂತಹ, ಅಸ್ಪೃಶ್ಯತಾ ಅಪರಾಧ ಶಾಸನ, ನಾಗರಿಕ ಹಕ್ಕು ಗಳ ರಕ್ಷಣಾ ಶಾಸನ ಹಾಗೂ ಅನುಸೂಚಿತ ಜಾತಿ ಮತ್ತು ಬುಡಕಟ್ಟುಗಳ ದೌರ್ಜನ್ಯ ಪ್ರತಿಬಂಧಕ ಶಾಸನಗಳನ್ನು ಈ ಸಂವಿಧಾನದಲ್ಲಿ ಅಳವಡಿಸಿಕೊಳ್ಳಲಾಯಿತು. ಈ ಶಾಸನಗಳ ಅಳವಡಿಕೆಯಿಂದಾಗಿ ಕೊರಗರ ಬದುಕುವ ಶೈಲಿಯಲ್ಲಿ ಕೊಂಚ ಬದಲಾವಣೆಯಾದರೂ, ಕೊರಗರನ್ನು ನಿಕೃಷ್ಟ ಸ್ಥಿತಿಗೆ ತಳ್ಳಲು ಕಾರಣವಾದ ಅಜಲು ಪದ್ಧತಿಯನ್ನು ಹೊಡೆದಟ್ಟಲು ಮಾತ್ರ ಕೊರಗರ ನಾಯಕರು ಕಳೆದ ವರುಷದವರೆಗೂ ಸರಕಾರದ ಮೇಲೆ ಇನ್ನಿಲ್ಲದಂತೆ ಒತ್ತಡ ತಂದು 'ಅಜಲು ನಿಷೇಧ ಕಾಯಿದೆ'ಯ ಜಾರಿಗಾಗಿ ಹೋರಾಡಬೇಕಾಗಿ ಬಂದದ್ದು ನಮ್ಮ ಜಾತಿ ವ್ಯವಸ್ಥೆಯ ಒಂದು ಕ್ರೂರ ವ್ಯಂಗ್ಯವೇ ಸರಿ. □

(ಮುಂದುವರಿಯುವುದು)

ಸಂವಾದ




ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಛೇರಿಯಲ್ಲಿ ಒಮ್ಮೆ ವಿಚಾರಿಸಿ- ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಛೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾ ದಾರರು ಹೊಸ ವರ್ಷದ ಚಂದಾ ಹಣ ವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨-೩ ತಿಂಗಳ ಮೊದ ಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡ ಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದರಿಂದ ಚಂದಾ ಅವ ಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿ ಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿ ಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

-ವ್ಯವಸ್ಥಾಪಕರು

ಜಾನಪದ, ಮಹಿಳೆ ಮತ್ತು ನೋವಿನ ನೆಲೆಗಳು

೨

(ಹಿಂದಿನ ಸಂಚಿಕೆಯಿಂದ)

ಮೈಲಾರನು ಮಾಳಿಯ ನಾಲಿಗೆಯನ್ನು ಚಿನ್ನದ ಕಡ್ಡಿಯೊಳಗೆ ಬೆಳ್ಳಿ ಕಡ್ಡೀಲಿ ಸುಟ್ಟು, ಅವಳಿಗೆ ನದಿಯೊಳಗೆ ಸ್ನಾನ ಮಾಡಲು ಹೇಳಿ, ಆನಂತರದಲ್ಲಿ ಲಿಂಗಧಾರಣೆ ಮಾಡಿ ಜಾತಿಯೊಳಗೆ ಹಾಕಿಕೊಂಡ ಮೇಲೆಯೇ ಮಾಳಿಯನ್ನು ಮದುವೆಯಾಗುತ್ತಾನೆ. ಕೆಳ ಜಾತಿಯವಳಾದರೂ ಮಾಳಿಗೆ ಅರಸು ಮನೆತನದ ಹಿನ್ನಲೆ ಇದ್ದುದರಿಂದ ಅವಳನ್ನು ಮೈಲಾರನು ಮದುವೆಯಾಗುತ್ತಾನೆ. ಕೆಳ ಜಾತಿ ಮತ್ತು ಕೆಳ ವರ್ಗಕ್ಕೆ ಸೇರಿದ ಗಂಗೆಯನ್ನು ಶಿವನು, ಚಾಮುಂಡಿಯನ್ನು ನಂಜುಂಡನು ಇಟ್ಟುಕೊಳ್ಳುತ್ತಾರೆ ಹೊರೆತು ಮದುವೆಯಾಗುವುದಿಲ್ಲ. ಹೀಗಾಗಿಯೇ ಗಂಗೆ-ಗೌರಿಗೆ ಸಂಬಂಧಿಸಿದ ಹಾಡುಗಳಲ್ಲಿ ಹಾಗೂ ಚಾಮುಂಡಿ ಕುರಿತ ಕಥನ ಗೀತೆಗಳಲ್ಲಿ ಗಂಗೆಯನ್ನು ಮತ್ತು ಚಾಮುಂಡಿಯನ್ನು ಕುಲದೊಳಗೆ ಕರೆದುಕೊಳ್ಳುವ ಸಂಪ್ರದಾಯದ ಕುರಿತು ಪ್ರಸ್ತಾಪ ಬರುವುದೇ ಇಲ್ಲ.

ಮಾರಿ ಕಥೆಯು ಮಾಳಿ ಕಥೆಗೆ ಸಂಪೂರ್ಣವಾಗಿ ತದ್ವಿರುದ್ಧವಾಗಿದೆ. ಮಾರಿ ಮೇಲ್ಜಾತಿಗೆ ಸೇರಿದ್ದರಿಂದ ಅವಳನ್ನು ಹಾದಿ ಬೀದಿಯಲ್ಲಿ ನಿಲ್ಲಿಸಿ, ಹಿಂಸಿಸಿ, ಅಪಮಾನಿಸಿ ಮದುವೆಯಾಗಲು ಒತ್ತಾಯಿಸುವುದಾಗಲಿ ಇಲ್ಲವೆ ಅಪಹರಿಸುವುದಾಗಲಿ ಇಂತಹ ಚಿತ್ರಣಗಳು ಮಾರಿ ಕಥೆಗಳಲ್ಲಿ ಮತ್ತು ಕಾವ್ಯಗಳಲ್ಲಿ ಕಂಡುಬರುವುದಿಲ್ಲ. ಮಾಳಿಯನ್ನು ಮದುವೆಯಾಗಬೇಕೆಂದಿರುವವನು ಮಾದಿಗರ ಹುಡುಗ. ಜಾತಿಯನ್ನು ಗೌಪ್ಯವಾಗಿಟ್ಟುಕೊಂಡು ಬ್ರಾಹ್ಮಣರ ಮನೆಯಲ್ಲಿದ್ದುಕೊಂಡೇ, ವಿದ್ಯೆಗಳೆಲ್ಲವನ್ನು ಕೇಳಿ ಕಲಿತುಕೊಂಡ ಬುದ್ಧಿವಂತನವನು. ಜಾತಿ ಶ್ರೇಣೀಕರಣಕ್ಕನುಗುಣವಾಗಿ ಕೇರಿ ಮತ್ತು ಊರುಗಳು ರೂಪ ಪಡೆದಿವೆ. ಊರನ್ನು ಪ್ರವೇಶಿಸಲು ಹಂಬಲಿಸಿದ ಕೇರಿಯ ಹುಡುಗನಿಗೆ ತನ್ನ ಜಾತಿಯನ್ನು ಬಚ್ಚಿಡುವುದು ಅನಿವಾರ್ಯವಾಯಿತು. ಬ್ರಾಹ್ಮಣ ಯುವತಿಯನ್ನು ಮದುವೆಯಾಗಲು ನಿರ್ಧರಿಸಿದ ಹುಡುಗನಿಗೆ ತನ್ನ ಜೀವನ ಶೈಲಿಯನ್ನು ಮತ್ತು ಸಂಸ್ಕೃತಿಯ ಸಂಸ್ಕಾರವನ್ನು ಬದಲಾಯಿಸಿಕೊಳ್ಳಬೇಕಾಯಿತು. ಅದಕ್ಕಾಗಿಯೇ ತನ್ನನ್ನೊಳಗೊಂಡಂತೆ ತನ್ನ ಕುಟುಂಬದವರಿಗೂ ಜೀವನ ಶೈಲಿಯನ್ನು ಬದಲಾಯಿಸಿಕೊಳ್ಳಲು, ಮೇಲ್ಜಾತಿಯವರ ಸಂಸ್ಕೃತಿಯನ್ನು ಅನುಕರಿಸಲು ಒತ್ತಾಯಿಸುತ್ತಾನೆ.

ಮಾರಿಗೆ ಗಂಡನಾದರೂ, ಆತನ ಜೈವಿಕತೆಯು ಮತ್ತು ಅದನ್ನು ಅನುಸರಿಸಿ ಸಮಾಜವು ಕಟ್ಟಿಕೊಟ್ಟ ಪಿತೃನಿಷ್ಠ ಸಾಂಸ್ಕೃತಿಕ ಮೌಲ್ಯಗಳು ಅವನಿಗಾವ ಶಕ್ತಿಯನ್ನು ತಂದು ಕೊಡುವುದಿಲ್ಲ. ಮೇಲ್ಜಾತಿಯ ಹೆಂಡತಿಯ ಮುಂದೆ, ಗಂಡನಾದರೂ ಮಾದಿಗನಾದ ಕಾರಣಕ್ಕೆ ಅವನು ಎಷ್ಟೊಂದು ಅಸಾಹಯಕವಾಗುತ್ತಾನೆ ಎಂದರೆ ತನ್ನ ಜಾತಿ ಸೂಚಕ ಬಟ್ಟೆಗಳೆಲ್ಲವನ್ನೂ ಸುಟ್ಟುಹಾಕುವನು. ಹುಟ್ಟಿದಾರಬ್ಬಿನಿಂದ ಮುಪ್ಪಿನವರೆಗೆ ರೂಢಿಸಿಕೊಂಡು ಬಂದ ಜೀವನ ಶೈಲಿಯನ್ನು ಮತ್ತು ಭಾಷಾ ಶೈಲಿಯನ್ನು ಬದಲಾಯಿಸಿಕೊಳ್ಳಲು ತನ್ನ ತಾಯಿಗೆ ಒತ್ತಾಯಿಸುವನು. ಬ್ರಾಹ್ಮಣರು ಹಾಕಿಕೊಳ್ಳುವ ಅಡ್ಡನಾಮ, ಜನಿವಾರ ಮತ್ತು ಬಟ್ಟೆಯನ್ನು ಹಾಕಿಕೊಳ್ಳುವನು. ಇಷ್ಟಾದರೂ ಹೆಂಡತಿಯಿಂದ ಕೊಲೆಯಾಗಿ ಹೋಗುವನು. ಮಾದಿಗನು, ಮೈಲಾರನು ಮಾಡಿದಂತೆ ಮದುವೆಗೆ ಮುಂಚೆ ಮಾರಿಯನ್ನು ಜಾತಿಯೊಳಗೆ ಕರೆದುಕೊಳ್ಳುವ ಆಚರಣೆಯನ್ನು ಮಾಡುವುದಿಲ್ಲ. ಕಾರಣ ಬಹಳ ಸ್ಪಷ್ಟವಾಗಿಯೇ ಇದೆ.

ಮೈಲಾರನಿಗಿರುವ ಮತ್ತು ಹೆಂಡತಿಯಾದ ಮಾರಿಗಿರುವ ಜಾತಿ ಹಿನ್ನಲೆ ಮಾದಿಗನಿಗಿಲ್ಲ. ಜಾತಿ ಕಾರಣದಿಂದಾಗಿಯೇ ಅವನು ಎಷ್ಟೊಂದು ಅವಜ್ಞತೆಗೆ ಒಳಗಾಗಿದ್ದಾನೆಂದರೆ, ಮಾರಿ ಕಥೆಗಳಲ್ಲಿ ಎಲ್ಲಿಯೂ ಮಾದಿಗನ ಹೆಸರು ಪ್ರಸ್ತಾಪವಾಗುವುದಿಲ್ಲ. ಈ ಮಾತನ್ನು ನನ್ನ ಓದಿನ ಮಿತಿಯಲ್ಲಿಯೇ ಹೇಳಿದ್ದೇನೆ. ಜಾತಿ ಸೂಚಕ ಪದವೇ ಅವನ ಹೆಸರಾಗಿ ಪರಿಗಣಿತವಾಗಿದೆ, ಮೇಲ್ಜಾತಿ, ಮೇಲ್ವರ್ಗದವರ ಹೆಸರುಗಳಿಗೆ ಸಾಂಸ್ಕೃತಿಕ ಚರಿತ್ರೆಯು ಇದ್ದಂತೆ, ಕೆಳಜಾತಿ, ಕೆಳ ವರ್ಗದವರ ಹೆಸರಿಗೆ ಸಾಂಸ್ಕೃತಿಕ ಹಿನ್ನಲೆಯಿಲ್ಲವೇನೋ! ಅಥವಾ ಇದ್ದಿದ್ದರೂ ಅವರ ಜಾತಿಯಂತೆ, ಅವರ ಹೆಸರಿಗಿರುವ ಸಾಂಸ್ಕೃತಿಕ ಚರಿತ್ರೆ ಅಲಕ್ಷ್ಯಕ್ಕೆ ಒಳಗಾಗಿರಬಹುದೇನೋ! ಹೆಂಡತಿಯು ಮೇಲ್ಜಾತಿಗೆ ಸೇರಿದ್ದ ಕಾರಣದಿಂದಾಗಿ ಕೆಳಜಾತಿಗೆ ಸೇರಿದ ಮಾದಿಗ, ಹೆಂಡತಿಯ ಜಾತಿಗೆ ಜಾತ್ಯಂತರಗೊಳ್ಳುತ್ತಾನೆ. ಹೀಗೆ ಮಾದಿಗನು ಸ್ವತಃ ತಾನು ಜಾತ್ಯಂತರಗೊಳ್ಳುವದನ್ನು ಹೆಂಡತಿಯ ಗಮನಕ್ಕೆ ಬಾರದಂತೆ ನೋಡಿಕೊಳ್ಳುವನು.

ಮಾರಿಗೆ ಜಾತಿಯ ಪ್ರತಿಷ್ಠೆಯ ಮುಂದೆ ಗಂಡನ ಪ್ರತಿಭೆ ಹಾಗೂ ಒಳ್ಳೆಯತನಗಳು ಗೌಣವಾಗಿ ಬಿಡುತ್ತವೆ. ಜಾತಿಯನ್ನು ಮುಚ್ಚಿಟ್ಟ ಸಣ್ಣ ಕಾರಣಕ್ಕಾಗಿ ಕಟ್ಟಿಕೊಂಡ ಗಂಡನಿಗೆ ಮತ್ತು ಹೆತ್ತ ಮಗನಿಗೆ ಬೆಂಕಿಯಿಟ್ಟು, ಅವರನ್ನು ಬರ್ಬರವಾಗಿ ಹತ್ಯೆಗೈದು ತಣ್ಣಗೆ ನಡೆದುಕೊಂಡು ಹೋಗುವವಳು. ಗಂಡನನ್ನು ಮತ್ತು ಮಗನನ್ನು ಭೀಕರವಾಗಿ ಹತ್ಯೆಗೈದ ಮಾರಿ, ಕೆಟ್ಟ ಹೆಂಡತಿಯಾಗಿ, ಕೆಟ್ಟ ತಾಯಿಯಾಗಿ ಇಲ್ಲವೆ ಕೆಟ್ಟ ದೈವವಾಗಿ ಪ್ರತಿನಿಧೀಕರಣಗೊಳ್ಳುವುದಿಲ್ಲ. ಮಾರಿಯ ಸುತ್ತಲಿರುವ ಮಿಥ್‌ಗಳು, ಜನಪದ ಕಥೆಗಳು ಮತ್ತು ಕಥನಗೀತೆಗಳು, ಉಳಿದ ಜನಪದ ಕಥೆ ಕಾವ್ಯಗಳಲ್ಲಿ ಪ್ರತಿನಿಧೀಕರಣಗೊಂಡ ಗಂಡನನ್ನು ಕೊಲೆ ಮಾಡಿದ ಹೆಂಡತಿಯಂತೆ ಮಾರಿಯನ್ನು ನೀತಿ ಬಾಹಿರ ಹೆಂಗಸನ್ನಾಗಿ ಪ್ರತಿನಿಧೀಕರಿಸುವುದಿಲ್ಲ. ಪುರೋಹಿತಶಾಹಿ ಮೌಲ್ಯಗಳನ್ನು ಧೂಳಿಪಟ ಮಾಡಿದ ಪಂಚಮನಾದ ಮಾರಿಯ ಗಂಡನನ್ನು ಸಮಾಜ ಘಾತುಕ ವ್ಯಕ್ತಿಯನ್ನಾಗಿ ಬಿಂಬಿಸಲಾಗಿದೆ.

ಜಾತಿ ನಿಯಮಗಳನ್ನು ಮುರಿದ ಮಾದಿಗನನ್ನು ಕೊಲೆ ಮಾಡಿದ ಮಾರಿಯನ್ನು, ಪೂಜೆಗೈಯುವ ಮೂಲಕ ವರ್ಣ ಶುದ್ಧತೆಯನ್ನು ಕಾಯ್ದುಕೊಳ್ಳುವ ಹಿನ್ನಲೆಯಲ್ಲಿ ಅವಳ ನಡತೆಯನ್ನು ಸಮರ್ಥಿಸಲಾಗಿದೆ. ಅದಕ್ಕಾಗಿ ಗಂಡನನ್ನು ಮತ್ತು ಮಗನನ್ನು ಕೊಲೆಗೈದು ಮಾರಿ ದೇವಿಯಾಗಿ ಪ್ರತಿನಿಧೀಕರಿಸಲ್ಪಟ್ಟಿರುವಳು. ಮೇಲೆ ಉಲ್ಲೇಖಿಸಿದ ಮಾರಿಯ ಕಥೆಯಲ್ಲಿ ಬಹಳ ಮುಖ್ಯವಾಗಿ ಗಮನಿಸಬೇಕಾದ ಸಂಗತಿಯಂದರೆ ಗಂಡನನ್ನು ಕೊಲೆ ಮಾಡಿದ ಮಾರಿಗೆ ವೈಧವ್ಯ ಅಂಟಿಕೊಳ್ಳದಿರುವುದು. ಮಾರಿಗೆ ಗಂಡನನ್ನು ಮತ್ತು ಮಗನನ್ನು ಹತ್ಯೆಗೈಯುವಾಗಾಗಲಿ ಇಲ್ಲವೆ ಹತ್ಯೆಗೈದ ಬಳಿಕವಾಗಲಿ ಮುತ್ತೈದೆತನದ ಮೌಲ್ಯಗಳು ಮತ್ತು ತಾಯ್ತನದ ಜವಾಬ್ದಾರಿಗಳು ಕಾಡುವುದಿಲ್ಲ. ಗಂಡ ಕೆಳ ಜಾತಿಯವನಾಗಿದ್ದು, ಹೆಂಡತಿ ಮೇಲ್ಜಾತಿಗೆ ಸೇರಿದ್ದರೆ ಅವಳಿಗೆ ಗಂಡನನ್ನು ಕೊಲ್ಲುವ ಅಧಿಕಾರವನ್ನು ಪುರೋಹಿತಶಾಹಿ ವ್ಯವಸ್ಥೆ ನೀಡಿದೆ. ಅವಳು ಸಮಾಜ ನಿರ್ವಚಿಸಿದ ಗಂಡನ ಗೌರವವನ್ನು ಮತ್ತು ಹೆಂಡತಿಯಾಗಿ ತನ್ನ ಗೌರವವನ್ನು ಕಾಪಾಡಿಕೊಳ್ಳಬೇಕಾಗಿಲ್ಲ. ಮೇಲ್ಜಾತಿಯವರ ಕಣ್ಣಿಗೆ ಬೀಳದಂತೆ, ಅವರ ಸೇವೆಯನ್ನು ಮಾಡಿಕೊಂಡಿರಬೇಕಾದ ಅಸ್ಪೃಶ್ಯ ಗುಲಾಮನೊಬ್ಬನು ಮೇಲ್ಜಾತಿಯ ಮಹಿಳೆಗೆ ಗಂಡನಾಗುವುದಕ್ಕಾಗಲಿ ಇಲ್ಲವೆ ಅವಳ ಮಕ್ಕಳಿಗೆ ತಂದೆಯಾಗುವುದಕ್ಕಾಗಲಿ ಬರುವುದಿಲ್ಲ. ಅವಳ ಮೇಲೆ ಒಡೆತನವನ್ನು ಹಾಗೂ ಹಕ್ಕನ್ನು ಸ್ಥಾಪಿಸುವುದಕ್ಕಾಗಲಿ ಮತ್ತು ಅವಳ ಮೂಲಕ ವಂಶವನ್ನು ಅಭಿವೃದ್ಧಿ

ಮಹಿಳೆ

ಮಹಿಳೆಯನ್ನು ಪ್ರಕೃತಿಯನ್ನಾಗಿ, ಪುರುಷನನ್ನು ಸಂಸ್ಕೃತಿಯನ್ನಾಗಿ ಗುರುತಿಸಲಾಗುತ್ತದೆ. ಮಹಿಳೆಯ ಸ್ಥಾನಮಾನಗಳ ಹಿಂದೆ ಪುರುಷ ಪ್ರಧಾನ ವ್ಯವಸ್ಥೆ ಪ್ರಕೃತಿಯನ್ನು ನೋಡುವ ವಿಧಾನ ಮತ್ತು ವ್ಯಾಖ್ಯಾನಗಳ ಪ್ರಭಾವ ಇದೆ. ಪ್ರಕೃತಿಯ ಕುರಿತು ಪುರುಷರು ಯಾವ, ಯಾವ ದೃಷ್ಟಿಕೋನಗಳನ್ನು ರೂಪಿಸಿಕೊಂಡಿರುವರೋ ಅದೇ ದೃಷ್ಟಿಕೋನಗಳನ್ನು ಮಹಿಳಾ ಸಂಬಂಧಿತ ವಿಷಯಗಳಗೂ ವಿಸ್ತರಿಸಿಕೊಂಡಿರುವರು. ಈ ಹಿನ್ನಲೆಯಲ್ಲಿಯೇ ಮಹಿಳೆಯನ್ನು ಸಿದ್ಧಾಂತಿಕರಿಸಲಾಗಿದೆ. ಪ್ರಕೃತಿಯಲ್ಲಿ ಬಂಜೆ ನೆಲ, ಬಂಜೆಗಿಡ, ಕಳ್ಳಹೂವು ಕಾಣಿಸಿಕೊಳ್ಳುವವು. ಆದರೆ ಸಂಸ್ಕೃತಿಯ ವಿಷಯದಲ್ಲಿ ಹಾಗಲ್ಲ. ಅಲ್ಲಿರುವುದೆಲ್ಲ ಶ್ರೇಷ್ಠವಾದುದ್ದು, ಇತ್ಯಾತ್ಮಕವಾದದ್ದು, ಮೌಲಿಕವಾದದ್ದು ಎನ್ನುವ ಗ್ರಹಿಕೆಗಳೇ ಪ್ರಬಲವಾಗಿವೆ.

○ಡಾ॥ ಶೈಲಜಾ ಹಿರೇಮಠ

ಪಡಿಸಿಕೊಳ್ಳುವುದಕ್ಕಾಗಲಿ ಸಾಮಾಜಿಕ ಸಮ್ಮತಿ ಇಲ್ಲ.

ಹೀಗಾಗಿ ಹೆಂಡತಿ ಮತ್ತು ತಾಯಿ ಪರಿಕಲ್ಪನೆಯ ಅರ್ಥನಿರ್ವಚನಗಳು ಮಾರಿಯಂತಹ ಹೆಂಡಂದಿರಿಗೆ ಮತ್ತು ತಾಯಂದಿರಿಗೆ ಅನ್ವಯಿಸುವುದಿಲ್ಲ. ಗಂಡ, ಮಕ್ಕಳನ್ನು ಕೊಂದರೂ ಅವರಿಗೆ ನರಕವಿರುವುದಿಲ್ಲ. ಸಾಮಾಜಿಕ ಶಿಕ್ಷೆಗಳಿರುವುದಿಲ್ಲ ಮತ್ತು ಸಾಮಾಜಿಕ ಬಹಿಷ್ಕಾರಗಳಿರುವುದಿಲ್ಲ. ಅಂಥವರನ್ನು ರಾಜಕುಮಾರರು ಬಂದು ಮದುವೆಯಾಗುತ್ತಾರೆ. ಸಕಲ ಸಾಮಾಜಿಕ ಗೌರವಗಳೊಂದಿಗೆ ಜೀವನ ಸಾಗಿಸುತ್ತಾರೆ. ಜಾತಿ ಹಿನ್ನಲೆ ಬಂದಾಗಿ ಮಾರಿ ಗಂಡನನ್ನು ಕೊಂದೂ ಮುತ್ತೈದೆಯಾಗಿ ಉಳಿಯುತ್ತಾಳೆ, ಮುತ್ತೈದೆತನವನ್ನು ದಯಪಾಲಿಸುವ ದೈವವಾಗಿ ನಿಲ್ಲುತ್ತಾಳೆ. ಮಗನನ್ನು ಕೊಂದು 'ಮಹಾತಾಯಿ' ಎನಿಸಿಕೊಳ್ಳುತ್ತಾಳೆ. ಮಕ್ಕಳ ಫಲ ನೀಡುವ ಮಾತೃ ದೈವವಾಗಿ ಪೂಜೆಗೊಳ್ಳುತ್ತಾಳೆ.

ಮೂರನೆಯ ಕಥೆಯಲ್ಲಿ ಬರುವ ರಾಜಕುಮಾರಿಯ ಗಂಡ ಬಡವನಾದರೂ ಮೇಲ್ಜಾತಿಗೆ ಸೇರಿದವನು. ಜಾತಿಯೇ ಅವನಿಗೊಂದು ಸಾಮಾಜಿಕ ಚಹರೆಯನ್ನು, ಮಾನ್ಯತೆಯನ್ನು ಹಾಗೂ ಶ್ರೇಷ್ಠತೆಯನ್ನು ಒದಗಿಸಿದೆ. ಈ ಬಗೆಯ ಐಡೆಂಟಿಟಿಯು ಕೌಟುಂಬಿಕ ಸಂಬಂಧಗಳಲ್ಲಿ ಪ್ರಧಾನ ಪಾತ್ರವಾಗುತ್ತದೆ. ಮೇಲ್ಜಾತಿಗಳ ನ ಪಿತೃಪ್ರಧಾನ ಮೌಲ್ಯಗಳು ಪತೀತ್ವವನ್ನು ವೈಭವೀಕರಿಸಿವೆ, ಸತೀತ್ವವನ್ನು ದಾಸ್ಯದ ನೆಲೆಯಲ್ಲಿ ಪ್ರತಿನಿಧೀಕರಿಸಿವೆ. ಹೀಗಾಗಿ ಮೇಲ್ಜಾತಿಯ ಹುಡುಗನು ಆರ್ಥಿಕವಾಗಿ ತನಗಿಂತ ಮೇಲೆ ಇರುವ ಹುಡುಗಿಯನ್ನು ಮದುವೆಯಾದರೂ ಹೆಂಡತಿಗಿಂತ ಗಂಡನೇ ಪ್ರಬಲನಾಗಿ ಉಳಿಯುತ್ತಾನೆ. ಮಾರಿಗೆ ಜಾತಿ ತಂದುಕೊಟ್ಟಂತಹ ಶಕ್ತಿಯನ್ನು, ರಾಜಕುಮಾರಿಗೆ ಅವಳ ಅಂತಸ್ತು ಶಕ್ತಿಯನ್ನು ತುಂಬುವುದಿಲ್ಲ. ವರ್ಣ ಪ್ರಾಬಲ್ಯದೆದುರು ವರ್ಗ ಪ್ರಾಬಲ್ಯವು ಸೋಲುತ್ತದೆ.

ಈ ರಾಜಕುಮಾರಿ ಮಾಳಿಗಿಂತ ಉತ್ತಮ ಜಾತಿಗೆ ಸೇರಲ್ಪಟ್ಟದ್ದರಿಂದ ಮೇಲ್ಜಾತಿಗೆ ಸೇರಿದ ಶಿವಕುಮಾರನು ಸಾಮಾಜಿಕ ನೀತಿ ನಿಯಮಗಳಡಿಯಲ್ಲಿಯೇ ಅವಳನ್ನು ವಿವಾಹವಾಗುವನು. ಒಂದು ಹೊತ್ತಿನ ಊಟಕ್ಕೂ ಪರದಾಡುವ ಹುಡುಗ ಜಾತಿ ಕಾರಣದಿಂದಾಗಿಯೇ ಅವನಿಗೆ ದತ್ತವಾದ ಮುಖದ ತೇಜಸ್ಸಿನಿಂದ ರಾಜಕುಮಾರಿಯನ್ನು ಮದುವೆಯಾಗುವನು. ಅವಳ ಅರಮನೆಯಲ್ಲಿದ್ದುಕೊಂಡೇ ಆಕೆಯನ್ನು ಕಾಡಿಗಟ್ಟುವನು. ಶಿವಕುಮಾರನ ಜಾತಿ ಪ್ರಭಾವದೆದುರು ರಾಜಕುಮಾರಿಯ ಆರ್ಥಿಕ ಮತ್ತು ರಾಜಕೀಯ ಪ್ರಭಾವವು ಶಕ್ತಿಯನ್ನು ಕಳೆದುಕೊಳ್ಳುತ್ತದೆ. ಅವಳ ತಂದೆಯೇ ಮಹಾರಾಜನಾಗಿದ್ದರೂ, ಅವನಿಂದ ಕಷ್ಟ ಕಾಲದಲ್ಲಿ ಆಶ್ರಯ ಸಿಗುವುದಿಲ್ಲ. ಅನಾಥೆಯಂತೆ ಕಾಡಿನಲ್ಲಿದ್ದು ತನ್ನ ಸತಿ ಧರ್ಮದ ಮೂಲಕ ಮತ್ತೆ ಗಂಡನನ್ನು ಕೂಡುತ್ತಾಳೆ. ರಾಜಕುಮಾರಿಯಾದರೂ ತನಗಿಂತ ಮೇಲ್ಜಾತಿಯ ಹುಡುಗನನ್ನು ಮದುವೆಯಾಗಿದ್ದರಿಂದ ಅವಳು ಮೇಲ್ಜಾತಿಯ ಪಿತೃಪ್ರಧಾನ ಮೌಲ್ಯಗಳನ್ನು ಪಾಲಿಸಬೇಕು. ಕಟ್ಟಿಕೊಂಡ ಗಂಡನ ಸೇವೆಯನ್ನು ದಾಸಿಯಂತೆ ಮಾಡಬೇಕು. ರಂಬೆಯಂತೆ ಶೃಂಗಾರ ಜೀವಿಯಾಗಿ ಭೋಗ ಸುಖವನ್ನು ನೀಡಬೇಕು. ಅವನ ಅಣತಿಗನುಗುಣವಾಗಿ ನಡೆಯಬೇಕು.

ಮೇಲಿನ ಮೂರು ಕಥೆಗಳಲ್ಲಿ ಯಾವ ವರ್ಣದ ಇಲ್ಲವೆ ಜಾತಿಯ ಇಲ್ಲವೆ ಯಾವ ವರ್ಗದ ಹುಡುಗಿ



ಮಾರಿಯ ಕಥೆಯಲ್ಲಿ ಬಹಳ ಮುಖ್ಯವಾಗಿ ಗಮನಿಸ ಬೇಕಾದ ಸಂಗತಿಯೆಂದರೆ ಗಂಡನನ್ನು ಕೊಲೆ ಮಾಡಿದ ಮಾರಿಗೆ ವೈಧವ್ಯ ಅಂಟಿಕೊಳ್ಳದಿರುವುದು. ಮಾರಿಗೆ ಗಂಡನನ್ನು ಮತ್ತು ಮಗನನ್ನು ಹತ್ಯೆಗೈಯುವಾಗಾಗಲಿ ಇಲ್ಲವೆ ಹತ್ಯೆಗೈದ ಬಳಿಕವಾಗಲಿ ಮುತ್ತೈದೆತನದ ಮೌಲ್ಯಗಳು ಮತ್ತು ತಾಯ್ತನದ ಜವಾಬ್ದಾರಿಗಳು ಕಾಡುವುದಿಲ್ಲ. ಗಂಡ ಕೆಳ ಜಾತಿಯವನಾಗಿದ್ದು, ಹೆಂಡತಿ ಮೇಲ್ಜಾತಿಗೆ ಸೇರಿದ್ದರೆ ಅವಳಿಗೆ ಗಂಡನನ್ನು ಕೊಲ್ಲುವ ಅಧಿಕಾರವನ್ನು ಪುರೋಹಿತಶಾಹಿ ವ್ಯವಸ್ಥೆ ನೀಡದೆ. ಅವಳು ಸಮಾಜ ನಿರ್ವಚಿಸಿದ ಗಂಡನ ಗೌರವವನ್ನು ಮತ್ತು ಹೆಂಡತಿಯಾಗಿ ತನ್ನ ಗೌರವವನ್ನು ಕಾಪಾಡಿಕೊಳ್ಳಬೇಕಾಗಿಲ್ಲ. ಮೇಲ್ಜಾತಿಯವರ ಕಣ್ಣಿಗೆ ಬೀಳದಂತೆ, ಅವರ ಸೇವೆಯನ್ನು ಮಾಡಿಕೊಂಡಿರಬೇಕಾದ ಅಸ್ಪೃಶ್ಯ ಗುಲಾಮನೊಬ್ಬನು ಮೇಲ್ಜಾತಿಯ ಮಹಿಳೆಗೆ ಗಂಡನಾಗುವುದಕ್ಕಾಗಲಿ ಇಲ್ಲವೆ ಅವಳ ಮಕ್ಕಳಿಗೆ ತಂದೆಯಾಗುವುದಕ್ಕಾಗಲಿ ಬರುವುದಿಲ್ಲ. ಅವಳ ಮೇಲೆ ಒಡೆತನವನ್ನು ಹಾಗೂ ಹಕ್ಕನ್ನು ಸ್ಥಾಪಿಸುವುದಕ್ಕಾಗಲಿ ಮತ್ತು ಅವಳ ಮೂಲಕ ವಂಶವನ್ನು ಅಭಿವೃದ್ಧಿ ಪಡಿಸಿಕೊಳ್ಳುವುದಕ್ಕಾಗಲಿ ಸಾಮಾಜಿಕ ಸಮ್ಮತಿ ಇಲ್ಲ.

ಯಾವ ವರ್ಣದ ಇಲ್ಲವೆ ಯಾವ ಜಾತಿಯ ಇಲ್ಲವೆ ಯಾವ ವರ್ಗದ ಹುಡುಗನನ್ನು ಮದುವೆಯಾಗುತ್ತಾಳೆ ಎನ್ನುವುದನ್ನನುಸರಿಸಿ 'ಹೆಂಡತಿ' ಪಾತ್ರಗಳು ಭಿನ್ನ ಭಿನ್ನವಾಗಿ ಪ್ರತಿನಿಧೀಕರಿಸಲ್ಪಟ್ಟವೆ. ಗಂಡ ಕೆಳಜಾತಿಯವನಾಗಿದ್ದು, ಹೆಂಡತಿ ಅತ್ಯುಚ್ಚ ವರ್ಣಕ್ಕೆ ಸೇರಿದ್ದರೆ ಅಂತಹ ಹೆಂಡತಿಯು ಶಕ್ತಿಶಾಲಿಯಾಗಿ ಪ್ರತಿನಿಧೀಕರಿಸಲ್ಪಟ್ಟರುವಳು. ಅವಳ ಶಕ್ತಿಯು ಗಂಡನನ್ನು ಎನ್ನುವುದಕ್ಕಿಂತ ವರ್ಣವ್ಯವಸ್ಥೆಯನ್ನು ಮುರಿದ ಕೆಳಜಾತಿಯವನನ್ನು ಸರ್ವನಾಶ ಮಾಡುವುದರಲ್ಲಿ ವಿಜೃಂಭಿಸುತ್ತದೆ. ಈ ಸಂದರ್ಭವನ್ನು ಹೊರತುಪಡಿಸಿದಂತೆ ಉಳಿದ ಎಲ್ಲಾ ಸಾಮಾಜಿಕ ಸ್ತರಗಳಲ್ಲಿ ಅಧೀನ ಸ್ಥಿತಿಯಲ್ಲಿಯೇ ಇರುತ್ತಾಳೆ. ಈ ಕಥೆಯ ಉದ್ದೇಶ ಸಾಮಾಜಿಕ ವರ್ಣಶ್ರೇಣೀಕರಣಗಳನ್ನು ಮುರಿಯಕೂಡದು ಎಂದು ಪ್ರತಿಪಾದಿಸುವುದಾಗಿದೆ. ಅದಕ್ಕಾಗಿ ಅದು ಅವಳ ಅಧೀನ ಸ್ಥಿತಿಯ ಕುರಿತು ಮೌನವಾಗಿ ಬಿಡುತ್ತದೆ. ವರ್ಣಮೌಲ್ಯಗಳ ಪ್ರಾಬಲ್ಯದೆದುರು ಸತಿಮೌಲ್ಯಗಳು ಗೌಣವಾಗಿ ಬಿಡುತ್ತವೆ.

ಜಾತಿ ಶ್ರೇಣೀಕರಣದಲ್ಲಿ ಕೆಳಸ್ತರಕ್ಕೆ ಸೇರಿದ್ದು, ವರ್ಗ ಶ್ರೇಣೀಕರಣದಲ್ಲಿ ಮೇಲುಸ್ತರದಲ್ಲಿರುವ ಕುಟುಂಬಕ್ಕೆ ಸೇರಿದ ಹೆಣ್ಣು ಮಗಳು ಮೇಲ್ಜಾತಿಯ ವ್ಯಕ್ತಿಯು ತನ್ನನ್ನು ಇಷ್ಟಪಟ್ಟರೆ ಅವನನ್ನು ವರಿಸಲೇಬೇಕಾಗುತ್ತದೆ. ಅವಳಿಗೆ ಆಯ್ಕೆಯ ಪ್ರಶ್ನೆಯೇ ಇರುವುದಿಲ್ಲ. ಒಲ್ಲದ ಗಂಡನೊಂದಿಗೆ ಬಾಳಬೇಕಾಗುತ್ತದೆ. ಕೆಳಜಾತಿಯ ಸ್ತ್ರೀಪುರುಷರು ಮೇಲ್ಜಾತಿಯವರಿಗೆ ದಾಸ-ದಾಸಿಯರಾಗಿದ್ದು, ಅವರ ಸ್ವತ್ತಾಗಿಯೇ ಪ್ರತಿನಿಧೀಕರಿಸಲ್ಪಟ್ಟಿರುವರು. ಇಂತಹ ಮಹಿಳೆಯರು ಮೇಲ್ಜಾತಿಯ ಪುರುಷರಿಗೆ ಮೊದಲನೆಯ ಹೆಂಡತಿಯರಾಗಿ ಪ್ರತಿನಿಧೀಕರಣಗೊಳ್ಳದೇ ಉಪಪತ್ನಿಯರಾಗಿ ಪ್ರತಿನಿಧೀಕರಣಗೊಂಡಿರುವರು. ಮೇಲ್ಜಾತಿಯವನನ್ನು ಕೆಳಜಾತಿಯವಳು ಮದುವೆಯಾಗಬೇಕಾದರೆ ಮದುವೆಯಾಗುವವನಿಂದ ಜಾತಿ ಶುದ್ಧೀಕರಣಕ್ಕೆ ಒಳಗಾಗಬೇಕಾಗುತ್ತದೆ. ಆರ್ಥಿಕವಾಗಿ, ರಾಜಕೀಯವಾಗಿ ಮೇಲುಸ್ತರದಲ್ಲಿರುವ ಕುಟುಂಬಕ್ಕೆ ಸೇರಿದ ಕ್ಷತ್ರಿಯ ಹೆಣ್ಣು, ಕೆಳವರ್ಗಕ್ಕೆ ಸೇರಿದ ಮೇಲ್ವರ್ಣದ ಹುಡುಗನ ಜೊತೆ ಮದುವೆಯಾದರೆ, ಅವಳು ಮೇಲ್ವರ್ಣದ ಪಿತೃಪ್ರಧಾನ ಮೌಲ್ಯಗಳನ್ನು ಅನುಸರಿಸುತ್ತಾ ಅದು ಪ್ರತಿನಿಧೀಕರಿಸಿಕೊಟ್ಟ 'ಹೆಂಡತಿ' ಪರಿಕಲ್ಪನೆಯಂತೆ ನಡೆದುಕೊಳ್ಳಬೇಕಾಗುತ್ತದೆ. ಅಂದರೆ 'ಹೆಂಡತಿ' ಪರಿಕಲ್ಪನೆಗೆ ಏಕರೂಪದ ಅರ್ಥನಿರ್ವಚನವಿಲ್ಲ. ವಿವಾಹವಾದವರ ವರ್ಗ, ಜಾತಿ, ವರ್ಣ ಹಾಗೂ ಲಿಂಗ ಶ್ರೇಣೀಕರಣವನ್ನು ಅನುಸರಿಸಿ ಪತ್ನಿತ್ವದ ನಿರ್ವಚನಗಳು ಭಿನ್ನವಾಗಿರುವವು.

ಹೆಂಡತಿಯರ ಬಾಧ್ಯತೆಗಳು

ಗೊಲ್ಲರ ಕಾವ್ಯದಲ್ಲಿ ಬರುವ ಸಾತಮ್ಮ ಮತ್ತು ಮಾರಿ ಮುತ್ತಣ್ಣನ ವಿವಾಹದ ಸಂದರ್ಭ ಹಾಗೂ ಅವರ ವೈವಾಹಿಕ ಸಂಬಂಧಗಳನ್ನು ಮತ್ತು ಮಲ್ಲಿಗೆ ದಂಡೆಯಲ್ಲಿರುವ ಕೊರವಂಜಿ ಹಾಡುಗಳನ್ನು ಇಟ್ಟುಕೊಂಡು, ಹೆಂಡತಿಗಿರುವ ಸ್ಥಾನಮಾನಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಲಾಗಿದೆ. ಮೊದಲು ಈ ಕಥೆಗಳ ಸಾರಾಂಶವನ್ನು ನೀಡಿ, ನಂತರ ಅವುಗಳನ್ನು ವಿಶ್ಲೇಷಿಸಿ, ಸಮಾಜಗಳು, ಕುಟುಂಬಗಳು ಹೆಂಡತಿಯಿಂದ ಅಪೇಕ್ಷಿಸುವ ನಡಾವಳಿಯ ಸ್ವರೂಪವನ್ನು ತಿಳಿದುಕೊಳ್ಳಲು ಪ್ರಯತ್ನಿಸಲಾಗಿದೆ.

ಅ. "ಚಂದ್ರತುಟಿ, ಹಾಲುಗೆನ್ನೆ, ಕಣ್ ಮೆಣ್, ರೂಪು" (ಕಾಳೇಗೌಡ ನಾಗವಾರ, ಬೋರಲಿಂಗಯ್ಯ ಹಿ.ಚಿ.

2000, ಪು 31) ಹೊಂದಿದ ಸಾತಮ್ಮನ ರೂಪ ಮತ್ತು ಅವಳ ಕಾಲ್ಗುಣದ ಶುಭಾಶುಭಗಳನ್ನು ತಿಳಿದುಕೊಂಡೇ, ಆಕೆಯನ್ನು ಮಾರಿಮುತ್ತಣ್ಣನಿಗೆ ಕೇಳಲು, ಆತನ ಅಣ್ಣ ತಮ್ಮಂದಿರು ಹೋಗುತ್ತಾರೆ. 'ಮಾರಿಮುತ್ತಣ್ಣ ಎಲ್ಲಿ' ಎಂದು ಸಾತಮ್ಮನ ತವರವರು ಕೇಳಿದಾಗ ಅವನಿಗೆ ಬರಲಾಗಲಿಲ್ಲ. ಅದಕ್ಕಾಗಿ ಆತನ ಕಬ್ಬಿಣ ಬಾಕನ್ನು ತಂದಿದ್ದೇವೆ' ಎನ್ನುತ್ತಾರೆ. ಇದರಿಂದ ಕೋಪಗೊಂಡ ಅವರು, ಹೆಣ್ಣು ಕೊಡುವುದಿಲ್ಲ ಎಂದು ಹೇಳುತ್ತಾರೆ. ಕಬ್ಬಿಣದ ಬಾಕು ಸ್ಥಳ ಬಿಟ್ಟು ಕದಲದಾದಾಗ, ಊರಿನವರ ಒತ್ತಾಯಕ್ಕೆ ಮಣಿದು, ಸಾತಮ್ಮನನ್ನು ಮಾರಿಮುತ್ತಣ್ಣನ ಹೆಸರಿನಲ್ಲಿ ಆ ಕಬ್ಬಿಣದ ಬಾಕ್‌ಗೆ ಧಾರೆಯೆರೆದು ಕೊಡುತ್ತಾರೆ. ಸಾತಮ್ಮ ಗಂಡನ ಮನೆಗೆ ಬಂದು ಮೂರು ವರ್ಷಗಳಾದರೂ ಅವಳಿಗೆ ಮಾರಿಮುತ್ತಣ್ಣನ ಮುಖ ದರ್ಶನವೇ ಆಗುವುದಿಲ್ಲ. ಆಕೆಯ ಭಾವಂದಿರು, ಅತ್ತೆಯಂದಿರು ಸಾತಮ್ಮನಿಗೆ ವಿಪರೀತ ಕಿರುಕುಳ ಕೊಡುತ್ತಾರೆ.

ಮದುವೆಯಾದ ಎರಡು ವರ್ಷಗಳ ನಂತರ ಭಾವನಿಗೆ ಮೊದಲ ಬಾರಿಗೆ ಗಂಡನ ಇರುವಿಕೆಯ ಕುರಿತು ಪ್ರಶ್ನಿಸುತ್ತಾಳೆ. ಆತನು ಘೋರ ಅರಣ್ಯದಲ್ಲಿರುವ ಮಾರಿಮುತ್ತನನ್ನು ನೀನು ಕಾಣಲಾಗುವುದಿಲ್ಲ ಎಂದು ಉತ್ತರಿಸುತ್ತಾನೆ. ತವರಿನವರು ಮಗಳ ವೈವಾಹಿಕ ಬದುಕಿನ ಕುರಿತು ವಿಚಾರಿಸುವುದೇ ಇಲ್ಲ. ಗೌರಸಂದ್ರದ ಮಾರಮ್ಮ ಮಾರಿಮುತ್ತನಿರುವ ಸ್ಥಳವನ್ನು ತೋರಿಸಿ, ಆತನನ್ನು ನೇರವಾಗಿ ಕಂಡು ಮಾತನಾಡಬೇಡ ಎನ್ನುವ ಸೂಚನೆಯನ್ನು ನೀಡುತ್ತಾಳೆ. ಬುತ್ತಿಯನ್ನು ತಿನ್ನಲು ಪ್ರಾರಂಭಿಸಿದ ಗಂಡನನ್ನು ದೂರದಿಂದಲೇ ಪ್ರಥಮ ಬಾರಿಗೆ ನೋಡಿದ ಸಾತಮ್ಮ ಸಂತೋಷ ಪಡುತ್ತಾಳೆ. ಬಾಚದ ತಲೆ, ಮಾಸಿದ ಸೀರೆಯನ್ನುಟ್ಟ ಸಾತಮ್ಮನನ್ನು ನೋಡಿದ ಮಾರಿಮುತ್ತ ಪಾಪ ಪ್ರಜ್ಞೆಯಿಂದ ಓಡಿ ಹೋಗಲು ಪ್ರಯತ್ನಿಸುತ್ತಾನೆ. ಹಿಂಬಾಲಿಸಿ ಬಂದ ಹೆಂಡತಿಯೊಂದಿಗೆ ಬಾಳುವೆ ಮಾಡುತ್ತಾನೆ" (ಕಾಳೇಗೌಡ ನಾಗವಾರ ಮತ್ತು ಬೋರಲಿಂಗಯ್ಯ ಹಿ.ಚಿ.2000, ಪು. 1-63).

ಆ. ಮದುವೆಯಾಗಿ ಹನ್ನೆರಡು ವರ್ಷಗಳಾದರೂ ತನ್ನ ಹತ್ತಿರ ಸುಳಿಯದ ಗಂಡನನ್ನು ಒಲಿಸಿಕೊಳ್ಳುವುದಕ್ಕಾಗಿ ಕೊರವಂಜಿ 'ವೇಷ' ತೊಟ್ಟು, ಆತನಿರುವ ಸೂಳೆ ಕೇರಿಗೆ ಬರುತ್ತಾಳೆ. 'ಸೂಳೆಯಿಂದಲೇ ನಿನಗೆ ಮರಣವಿದೆ' ಎಂದು ಭವಿಷ್ಯ ಹೇಳಿದಂತೆ ಮಾಡಿ, ಗಂಡನು ಸೂಳೆಯನ್ನು ತೊರೆಯುವಂತೆ ಮಾಡುತ್ತಾಳೆ. ಅನಂತರ ಅವನೊಂದಿಗೆ ಮನೆಗೆ ಹಿಂದಿರುಗುತ್ತಾಳೆ. (ಕಾಪಾಸೆರೇ ವಪ್ಪ ಸಂ. 1990. ಪು. 31).

ಹೆಣ್ಣು ನೋಡುವ ಸಂದರ್ಭ ವಿವಾಹವಾಗುವ ಸಂದರ್ಭ ಮತ್ತು ವಿವಾಹವಾಗಿ ಬಂದ ಮೂರು ವರ್ಷಗಳ ಅವಧಿಯವರೆಗೆ ಮಾರಿಮುತ್ತು ಅದೃಶ್ಯನಾಗಿಯೇ ಉಳಿಯುವನು. ಕಬ್ಬಿಣದ ಬಾಕು ಮಾರಿಮುತ್ತನ ಪ್ರತಿನಿಧಿಯಾಗಿ ಮೂಡಿಬಂದಿದೆ. ಅತನ ಈ ಅದೃಶ್ಯವನ್ನು ಕಾವ್ಯವು ಅಸಹಜವಾಗಿ, ಅನುಚಿತವಾಗಿ ಹಾಗೂ ಆಭಾಸಕರವಾಗಿ, ಪ್ರತಿನಿಧೀ ಕರಿಸುವುದಿಲ್ಲ. ಇವೆಲ್ಲವೂ ಗಂಡಿನ ಅಸ್ತಿತ್ವವು ಪ್ರಶ್ನೆಗೆ ಒಳಪಡುವಂಥದ್ದಲ್ಲ ಎನ್ನುವಂತೆ ಆತನನ್ನು ಪ್ರತಿನಿಧೀಕರಿಸಿವೆ. ಮಾರಿಮುತ್ತನ ಮನೆಯವರು ಸಾತಮ್ಮನನ್ನು ನೋಡಲು ಬರುವ ಮುಂಚೆಯೇ ಅವಳ ಅಂದ, ಚೆಂದ ಯೌವನ, ಚಾರಿತ್ರ್ಯ ಹಾಗೂ ಆಕೆಯ ಕಾಲ್ಗುಣದ ಶುಭಾಶುಭಗಳನ್ನು ಪರೀಕ್ಷೆಗೊಳಪಡಿಸಿರುತ್ತಾರೆ. ಗಂಡಿನವರು ನಡೆಸುವ ಈ ಪರೀಕ್ಷೆಗಳನ್ನು ಸಮಾಜವು ನ್ಯಾಯೋಚಿತವೆಂದೆ ಭಾವಿಸಿದೆ.

ಮೇಲೆ ಉಲ್ಲೇಖಿಸಿದ ಮೊದಲನೆಯ ಕಥೆಯ ವಿಶ್ಲೇಷಣೆಯೊಂದಿಗೆ 'ಹೆಂಡತಿ' ಪ್ರತಿನಿಧೀಕರಿಸಲ್ಪಟ್ಟ ರೀತಿಯನ್ನು ಚರ್ಚೆಗೊಳಪಡಿಸಲಾಗಿದೆ. ಹೆಣ್ಣು ನೋಡು ಸಂದರ್ಭ ವಿವಾಹವಾಗುವ ಸಂದರ್ಭ ಮತ್ತು ವಿವಾ ವಾಗಿ ಬಂದ ಮೂರು ವರ್ಷಗಳ ಅವಧಿಯವರೆ ಮಾರಿಮುತ್ತು ಅದೃಶ್ಯನಾಗಿಯೇ ಉಳಿಯುವನು. ಕಬ್ಬಿಣ ಬಾಕು ಮಾರಿಮುತ್ತನ ಪ್ರತಿನಿಧಿಯಾಗಿ ಮೂಡಿಬಂದಿ ಆತನ ಈ ಅದೃಶ್ಯವನ್ನು ಕಾವ್ಯವು ಅಸಹಜವಾಗಿ, ಅನು ತವಾಗಿ ಹಾಗೂ ಆಭಾಸಕರವಾಗಿ, ಪ್ರತಿನಿಧೀಕರಿಸು ದಿಲ್ಲ. ಹಾವಿನೊಂದಿಗೆ, ಹೆಣದೊಂದಿಗೆ ಹೆಣ್ಣ ಮದುವೆ ಮಾಡಿದಂತಹ ವಸ್ತುವುಳ್ಳ ಅನೇಕ ಜನಪ ಕತೆಗಳು ಚಾಲ್ತಿಯಲ್ಲಿವೆ. ಇವೆಲ್ಲವೂ ಗಂಡಿನ ಅಸ್ತಿತ್ವ ಪ್ರಶ್ನೆಗೆ ಒಳಪಡುವಂಥದ್ದಲ್ಲ ಎನ್ನುವಂತೆ ಆತನನ್ನು ಪ್ರತಿ ಧೀಕರಿಸಿವೆ. ಮಾರಿಮುತ್ತನ ಮನೆಯವರು ಸಾತಮ್ಮನನ ನೋಡಲು ಬರುವ ಮುಂಚೆಯೇ ಅವಳ ಅಂದ, ಚೆಂ ಯೌವನ, ಚಾರಿತ್ರ್ಯ ಹಾಗೂ ಆಕೆಯ ಕಾಲ್ಗುಣ ಶುಭಾಶುಭಗಳನ್ನು ಪರೀಕ್ಷೆಗೊಳಪಡಿಸಿರುತ್ತಾರೆ.

ಗಂಡಿನವರು ನಡೆಸುವ ಈ ಪರೀಕ್ಷೆಗಳನ ಸಮಾಜವು ನ್ಯಾಯೋಚಿತವೆಂದೆ ಭಾವಿಸಿದೆ. ಮದುವೆಯ ಗಂಡು ಹಾಗೂ ಆತನ ಮನೆಯವರು ಹುಡುಗಿಯನ ಒಪ್ಪಿದರೆ ಸಾಕು, ಮದುವೆ ನಡೆಯುತ್ತದೆ. ಹುಡುಗಿ ಏನ ಹೇಳುತ್ತಾಳೆ, ಹುಡುಗಿಯ ಮನೆಯವರಿಗೆ ಹುಡು ಒಪ್ಪಿಗೆಯಾಗಿದೆಯೆ ಎನ್ನುವ ಸಂಗತಿಯನ್ನು ವಿಚಾರಿಸು ರೂಢಿ ಬಹಳ ಕಡಿಮೆ. ಹುಡುಗನ ಮತ್ತು ಆತ ಕುಟುಂಬದವರ ಅಭಿಪ್ರಾಯಕ್ಕೆ, ಅಭಿವ್ಯಕ್ತಿಗೆ ವಿಶೇ ಮಾನ್ಯತೆಯನ್ನು ಕಲ್ಪಿಸಲಾಗಿದೆ. ಹುಡುಗಿಗೆ ಅಭಿವ್ಯಕ್ತಿಸು ಸ್ವಾತಂತ್ರ್ಯ ಇಲ್ಲ. ಹೆಣ್ಣು ಹೆತ್ತವರ ಧ್ವನಿಗೂ ಮಾನ್ಯ ಯನ್ನು ನೀಡಿಲ್ಲ.

ಹೀಗಾಗಿ ಹೆಣ್ಣು, ಹೆಣ್ಣು ಹೆತ್ತವರು ಗಂಡಿಗೆ ಗಂಡು ಹೆತ್ತವರಿಗೆ ಮನ್ನಣೆ ನೀಡಬೇಕಾಗುತ್ತದೆ. ಮದು ವೆಯ ಮುಂಚೆಯೇ ಗಂಡಿನವರು ನಡೆಸುವ ಅರ್ಹತಾ ಪರೀಕ್ಷೆಯಲ್ಲಿ ಹೆಣ್ಣು ಪಾಸಾಗಬೇಕಾಗುತ್ತದೆ. ಪರೀಕ್ಷಿಸು ವವರು ಮತ್ತು ಮೌಲ್ಯಮಾಪನ ಮಾಡುವವರು ಗಂಡಿನವ ರಾದರೆ, ಪರೀಕ್ಷೆಗೆ ಹಾಜರಾಗುವವರು. ಮೌಲ್ಯಮಾ ಪನಕ್ಕೊಳಗಾಗುವವರು ಹೆಣ್ಣು ಮತ್ತು ಹೆಣ್ಣಿನ ಸಂಬಂಧಿ ಗಳಾಗಿರುತ್ತಾರೆ. ಮೌಲ್ಯಮಾಪನಕ್ಕೊಳಗಾಗುವವರಿಗ ಇರುವ ತಲ್ಲಣ ತಳಮಳಗಳು, ಪರೀಕ್ಷಿಸುವವರಿಗೆ ಹಾಗೂ ಮೌಲ್ಯಮಾಪನ ಮಾಡುವವರಿಗೆ ಇರುವುದಿಲ್ಲ. ಗಂಡು ಮತ್ತು ಗಂಡಿನ ಕಡೆಯವರು ಶ್ರೇಷ್ಠತೆಯ ಹಾಗೂ ಘನತೆಯ ಭಾವನೆಯಲ್ಲಿ ಬೀಗಿದರೆ, ಹೆಣ್ಣು ಮತ್ತು ಹೆಣ್ಣಿನ ಕಡೆಯವರು ಶ್ರೇಷ್ಠತೆಯ ಹಾಗೂ ಘನ ತೆಯ ಭಾವನೆಯಲ್ಲಿ ಬೀಗಿದರೆ, ಹೆಣ್ಣು ಮತ್ತು ಹೆಣ್ಣಿನ ಕಡೆಯವರು ಕೀಳರಿಮೆಯ ಭಾವನೆಯಲ್ಲಿ ತಳಮಳಿಸು ತ್ತಾರೆ. ಇಂತಹ ಸಾಮಾಜಿಕ ಪರಿಸರದಲ್ಲಿ ಗಂಡಿನ ಹಾಗೂ ಅವರ ಮನೆಯವರ ಒಪ್ಪಿಗೆಯು ಹೆಣ್ಣಿಗೆ ಹಾಗೂ ಹೆಣ್ಣಿನ ಕಡೆಯವರಿಗೆ ಧನ್ಯತಾ ಭಾವನೆಯನ್ನು ಮೂಡಿಸುತ್ತದೆ,

ವಿವಾಹ ಪೂರ್ವದಲ್ಲಿ ನಡೆಯುವ ಕನ್ಯಾ ಪರೀಕ್ಷೆಗಳು ಹೆಣ್ಣಿನಲ್ಲಿ ಆತ್ಮವಿಶ್ವಾಸವನ್ನು, ಆತ್ಮಗೌರವ ವನ್ನು ಕುಂದಿಸುತ್ತದೆ. ಹೀಗೆ ಕೀಳರಿಮೆಯನ್ನು, ಅಭದ್ರತೆ ಯನ್ನು ಎದುರಿಸುತ್ತ, ಅಪರಿಚಿತ ಗಂಡಿನೊಂದಿಗೆ ವಿವಾ ಹವಾಗಿ ಬಾಳಬೇಕಾದ ಹೆಣ್ಣು ಎದುರಿಸುವ ಸಂಕಷ್ಟಗಳು ನೂರಾರು. ಈ ಕಾವ್ಯದಲ್ಲಿ ಮಾರಿಮುತ್ತನಿಗಾಗಲಿ, ಸಾತ ಮ್ಮನಾಗಲಿ ಅವರವರ ಕುಟುಂಬದವರು ಈ ಮದುವೆ

ಗೆಯೆ ಎನ್ನುವ ಮಾತನ್ನು ಕೇಳುವುದೇ ಇಲ್ಲ. ಟುಂಬದ ಹಿರಿಯರೇ ಮದುವೆಯನ್ನು ನಿರ್ಧರಿಸಿ ಡುತ್ತಾರೆ. ಮದುವೆಯಾಗುವ ಹುಡುಗಿ ಹೇಗಿರುವಳು ನ್ನುವ ಸಣ್ಣ ಕುತೂಹಲವನ್ನು ಮಾರಿಮುತ್ತಣ್ಣನು ಳಿಸುವುದಿಲ್ಲ.

ತಾಳಿಕಟ್ಟಲು ಬರುವುದಿಲ್ಲ. ನನ್ನ ಮದುವೆಗೆ ಣದ ಬಾಕು ತೆಗೆದುಕೊಂಡು ಹೋಗಿ' ಎಂದು ರ್ಷ್ಯತೆಯ ಉತ್ತರ ನೀಡಿ ನಿರ್ಲಿಪ್ತನಾಗಿ ಬಿಡುತ್ತಾನೆ. ನ್ನ ಈ ನಡತೆ ಹೆಂಡತಿಯಾಗುವವಳ ಮನಸ್ಸಿನ ಮೇಲೆ ಾವ ಪರಿಣಾಮಗಳನ್ನು ಬೀರಬಹುದು ಎಂದು ಂಚವು ಆತ ಆಲೋಚಿಸುವುದಿಲ್ಲ. ಕನ್ಯಾಪರೀಕ್ಷೆಯ ದರ್ಭದಲ್ಲಾಗಲಿ, ವಿವಾಹದ ಸಂದರ್ಭದಲ್ಲಾಗಲಿ ತಮ್ಮನ ಧ್ವನಿ ಕೇಳಿಸುವುದೇ ಇಲ್ಲ. ತವರವರು ಕೊಟ್ಟ ಗೆ ಮದುವೆಯಾಗುತ್ತಾಳೆ. ಕಬ್ಬಿಣ ಬಾಕ್‌ನೊಂದಿಗೆ ದುವೆಯಾಗುವಾಗ ಸಾತಮ್ಮನ ಮನಸ್ಥಿತಿ ಹೇಗಿತ್ತು, ್ಯಾವ ಹತಾಶೆ, ಅಪಮಾನಗಳನ್ನು ಎದುರಿಸಿದಳು ನ್ನುವುದರ ಒಂದು ಸಣ್ಣ ಎಳೆಯೂ ಈ ಕಾವ್ಯದಲ್ಲಿ ್ಕುವುದಿಲ್ಲ. ಹೆಣ್ಣಿನ ಅಭಿಪ್ರಾಯ, ದುಗುಡ ದುಮ್ಮಾನ ು ಜಾನಪದದಲ್ಲಿ ದಾಖಲಾಗಿಲ್ಲ. ಯಾಕೆಂದರೆ ಣ್ಣಿಗೂ ಧ್ವನಿಯಿದೆ, ಮನಸ್ಸಿದೆ, ಬುದ್ಧಿಯಿದೆ ಎಂದು ರುಷ ಪ್ರಧಾನ ಸಮಾಜ ಆಲೋಚಿಸಿಲ್ಲ. ಮದುವೆ ಾಗಿ ಗಂಡನ ಮನೆಗೆ ಬಂದು ಎರಡು ವರ್ಷಗಳಾದ ೇಲೆ ಸಾತಮ್ಮನು ಗಂಡನ ಕುರಿತು ಮೊತ್ತ ಮೊದಲು ಾರಿಗೆ ಪ್ರಶ್ನೆ ಕೇಳುತ್ತಾಳೆ. ಅವಳ ಪ್ರಶ್ನೆಗೆ ಸರಿಯಾದ ಾಬು ಬರದ ಕಾರಣ, ಗಂಡನ ಮುಖವನ್ನು ೋಡಲು ಮೂರು ವರ್ಷಗಳು ಕಾಯಬೇಕಾಯಿತು.

ತಾ ತಂದ ಬುತ್ತಿಯನ್ನು ತಿನ್ನುತ್ತಿರುವ ಗಂಡ ನ್ನು ದೂರದಿಂದಲೇ ನೋಡಿ ಸಂತೋಷ ಪಡುತ್ತಾಳೆ. ಡತಿ ತಂದ ಬುತ್ತಿಯನ್ನು ಹಸಿವಿ ನಿಂದಲೂ ್ನುವುದಿಲ್ಲ. ಪ್ರೀತಿಯಿಂದಲೂ ತಿನ್ನುವುದಿಲ್ಲ. 'ಅವಳ ತಂದ ಬುತ್ತಿಯನ್ನು ತಿನ್ನದೆ ಹೋದರೆ ಆತ್ಮಹತ್ಯೆ ಮಾಡಿಕೊಂಡಾಳು. ಹಾಗದರೆ ಸ್ತ್ರೀಹತ್ಯೆಗೆ ಒಳಗಾಗುತಿನಿ' ಎಂದು ಊಟ ಮಾಡುವನು. ಸಾತಮ್ಮನ ಮೇಲಿನ ಕರುಣೆಯಿಂದ, ಅವಳ ಜೀವ ರಕ್ಷಣೆ ಮಾಡುವುದಕ್ಕಾಗಿ ತನ್ನ ವ್ರತವನ್ನು ಮುರಿದು, ಬೇಯಿಸಿದ ಆಹಾರವನ್ನು ಊಟ ಮಾಡುವನು ಎಂದು ಕಾವ್ಯವು ಆತನನ್ನು ಉದಾತ್ತವಾಗಿ ಪ್ರತಿನಿಧೀಕರಿ ಸುತ್ತದೆ. ಮದುವೆಯಾಗಿ ಮೂರು ವರ್ಷಗಳಾದರೂ ಒಂದೇ ಒಂದು ಸಲವೂ ಆಕೆಗೆ ಮುಖ ತೋರಿಸಿಲ್ಲ. ಆಕೆಯನ್ನು ನೋಡಿಲ್ಲ, ಎಷ್ಟು ನೊಂದುಕೊಂಡಿ ರುವಳೊ ಎಂದು ಆಲೋಚಿಸಿವುದೆ ಇಲ್ಲ. ದೂರದಿಂದಲೇ ಗಂಡನನ್ನು ನೋಡಿದ ಸಾತಮ್ಮನ ನರನಾಡಿಗಳಲ್ಲಿ ಸಂತೋಷ ಜೀವ ಸೆಲೆಯಾಗಿ ಹರಿದಾಡುತ್ತದೆ. ಕಳೆದುಕೊಂಡ ಸಂಸಾರದ ಕನಸುಗಳನ್ನು ಮತ್ತೆ ಕಟ್ಟ ತೊಡಗುತ್ತಾಳೆ.

ಈ ಕಾವ್ಯದಲ್ಲಿ ಮಾರಿಮುತ್ತು ತನ್ನ ಹೆಂಡತಿಯ ಮೇಲೆ ನೇರವಾಗಿ ಹಲ್ಲೆ ಮಾಡಿಲ್ಲ. ಆದರೆ ಹೆಣ್ಣು ನೋಡುವ ಸಂದರ್ಭದಲ್ಲಿಂದ ಹಿಡಿದುಕೊಂಡು, ಆಕೆಯನ್ನು ಮದುವೆಯಾಗಿ ಮೂರು ವರ್ಷಗಳವರೆಗೆ ಆಕೆಗೆ ತನ್ನ ಮುಖವನ್ನು ತೋರಿಸದೇ ಅವಳನ್ನು ಸತಾಯಿಸುತ್ತ, ಪರೋಕ್ಷವಾಗಿ ಹಲ್ಲೆ ನಡೆಸಿರುವನು. ಗಂಡನು ಮತ್ತು ಗಂಡನ ಮನೆಯವರು ನಡೆಸುವ ದೌರ್ಜನ್ಯವನ್ನು, ತೋರುವ ನಿರ್ಲಕ್ಷ್ಯವನ್ನು ಹೆಂಡತಿ ಅನುಭವಿಸಬೇಕಾದ ಕರ್ಮಗಳಾಗಿಯೇ ಜನಪದ ಸಾಹಿತ್ಯವು ಪ್ರತಿನಿಧೀಕರಿಸಿದೆ. ಮಾಸಿದ ಸೀರೆಯನ್ನುಟ್ಟು ಕೊಂಡು, ಮಾಸಿದ ತಲೆಬಿಟ್ಟುಕೊಂಡು ನಿಂತ ಸಾತಮ್ಮನನ್ನು, ಮದುವೆಯಾಗಿ ಮೂರು ವರ್ಷಗಳ ನಂತರ ಮೊಟ್ಟಮೊದಲ ಬಾರಿಗೆ ಮಾರಿ ಮುತ್ತನು ನೋಡುತ್ತಾನೆ. ಅವಳ ಸ್ಥಿತಿಯನ್ನು ಕಂಡು ಕನಿಕರಿಸುತ್ತಾನೆ "ಹರಿಹರ ಶಂಕರನು, ನಮ್ಮತ್ತಿಗೇರು ನಮ್ಮಣ್ಣಗಳು ಇನ್ನೆಂಥ ಕಷ್ಟ ಕೊಟ್ಟಿರಬಹುದು, ಇವಳಿಗೆ... ತಲೆಯನ್ನು ಬಾಸ ಗಂಡಿಲ್ಲ... ಈ ಹೆಣ್ಣು ನನ್ನೆಸರಿನು ಮೇಲೆ ಬಂದು ಗೋಳಾಡುತ್ತಿದ್ದರೂ ನನಗೂ ಶಂಕರನೆ ಒಳ್ಳೆಯದು ಮಾಡಾಂಗಿಲ್ಲ" ಎಂದು ಮರುಗುತ್ತಾನೆ. ತಂದೆಯ ಆಸ್ತಿ ಎಲ್ಲವನ್ನು ತಿರಸ್ಕರಿಸಿ ಓಡಲು ಪ್ರಾರಂಭಿ ಸುತ್ತಾನೆ. ತನ್ನ ಪಲಾಯನ ಸಾತಮ್ಮನ ಬದುಕಿಗೆ ಪರಿ ಹಾರ ನೀಡುತ್ತದೆಯಾ ಎಂದು ಆತ ಆಲೋಚಿಸುವುದಿಲ್ಲ.

ಅವಳ ಕಮರಿದ ಕನಸುಗಳಿಗೆ ಜೀವ ಚೈತನ್ಯ ತುಂಬುವುದರತ್ತ ಅವನು ಒಲವು ತೋರಿಸುವುದಿಲ್ಲ. ತನ್ನ ಹೆಸರಿನಲ್ಲಿ ತಾಳಿ ಕಟ್ಟಿಕೊಂಡು ಬಂದ ಹೆಂಡತಿಯ ಶಾಪಕ್ಕೆ ಒಳಗಾಗುವೆನಲ್ಲ ಎನ್ನುವ ಪಾಪದ ಭಯವೇ ತೀವ್ರವಾಗಿ ಕಾಡುತ್ತದೆ. ಬೆನ್ನತ್ತಿ ಬಂದ ಹೆಂಡತಿಗೆ ಸೋತು ಅವಳೊಂದಿಗೆ ಮಾರಿಮುತ್ತನು ಸಂಸಾರ ಪ್ರಾರಂಭಿಸುತ್ತಾನೆ. ಹೀಗೆ ಅಂತ್ಯಗೊಳ್ಳುವ ಕಾವ್ಯವು ಗಂಡ –ಹೆಂಡತಿಯರ ಸಂಬಂಧದ ಮಹತ್ವವನ್ನು ಎತ್ತಿಹಿಡಿ ಯುತ್ತದೆ. ಹೆಣ್ಣಿಗಾಗಲಿ, ಗಂಡಿಗಾಗಲಿ, ಜೀವನದ ಕೊನೆಯ ಘಟ್ಟದವರೆಗೂ ಅವರ ಕಷ್ಟ ಸುಖಗಳನ್ನು ಕೇಳಿಸಿಕೊಳ್ಳುವವರು, ಹೆಗಲು ಕೊಡುವವರು ಹೆತ್ತವರಲ್ಲ, ಒಡಹುಟ್ಟಿದವರಲ್ಲ, ಕೈಹಿಡಿದ ಗಂಡ ಹೆಂಡತಿಯರು ಮಾತ್ರ ಒಬ್ಬರಿಗೊಬ್ಬರು ಸ್ಪಂದಿಸುವರು ಎನ್ನುವಂತೆ ಗಂಡ ಹೆಂಡಂದಿರನ್ನು ಪ್ರತಿನಿಧೀಕರಿಸಲಾಗಿದೆ.



"ಕೊರವಂಜಿ ಹಾಡಿನಲ್ಲಿ ಬರುವ ಕಥಾನಾ ಯಕಿಯು ಸಾತಮ್ಮನಂತೆ ಗಂಡನಾಗುವವನ ಹೆಸರಿನಲ್ಲಿ ಬೇರೆಯವರ ಕೈಯಿಂದ ತಾಳಿ ಕಟ್ಟಿಸಿಕೊಳ್ಳುವುದಿಲ್ಲ. ಇವರಿಬ್ಬರಿಗೂ ವಿವಾಹ ಪೂರ್ವದಲ್ಲಿಯೇ ಪರಿಚಯ ವಿದೆ. ಸೂಳೆಯೊಡನಿರುವ ಮಗನ ಸಂಪರ್ಕವನ್ನು ತಪ್ಪಿಸುವುದಕ್ಕಾಗಿಯೇ ತನ್ನ ಅಣ್ಣನ ಮಗಳೊಂದಿಗೆ ಮಗ ನಿಗೆ ಮದುವೆ ಮಾಡುವಳು. ಹುಡುಗಿಗೆ ತಾಳಿ ಕಟ್ಟಿ ಮತ್ತೆ ಸೂಳೆಯಿದ್ದಲ್ಲಿಗೆ ಹೊರಟು ಹೋಗುವನು ತಾಯಿಯ ನಿರೀಕ್ಷೆ ಸುಳ್ಳಾಗುತ್ತದೆ. ಹನ್ನೆರಡು ವರ್ಷಗಳಾದರೂ ಹೆಂಡತಿಯತ್ತ ಸುಳಿಯುವುದೇ ಇಲ್ಲ. ಅದಕ್ಕಾಗಿ ವೇಷ ಮರೆಸಿಕೊಂಡು ಗಂಡನ ಮನಸ್ಸನ್ನು ಒಲಿಸಿಕೊಂಡು, ಆತನೊಂದಿಗೆ ಮನಗೆ ಹಿಂದಿರುಗುತ್ತಾಳೆ. ಹನ್ನೆರಡು ವರ್ಷಗಳ ಸುದೀರ್ಘ ಅವಧಿಯವರೆಗೆ ಅವಳು ಅನುಭವಿ ಸಿದ ಒಂಟಿತನ, ಹಾಗೂ ಎದುರಿಸಿದ ಕಷ್ಟನಷ್ಟಗಳ ಕುರಿತು ಈ ಕಾವ್ಯ ಮಾತನಾಡುವುದೇ ಇಲ್ಲ.

ಮೇಲೆ ಉಲ್ಲೇಖಿಸಿದ ಕಥೆಗಳ ಕಥಾವಸ್ತುವನ್ನು ಹೊಂದಿದ ಅನೇಕ ಕಥೆಗಳು, ಕಾವ್ಯಗಳು, ಕಥನ ಗೀತೆಗಳು ಮಹಿಳಾ ಜನಪದ ಸಾಹಿತ್ಯದಲ್ಲಿ ಹೇರಳವಾಗಿ ದೊರೆಯುತ್ತವೆ. ಇಂತಹ ಮಹಿಳಾ ಜನಪದ ಸಾಹಿತ್ಯದ ಲ್ಲಿರುವ ಕಥಾನಾಯಕಿಯರು ಗಂಡಂದಿರ ದಿವ್ಯ ನಿರ್ಲಕ್ಷಕ್ಕೆ ಒಳಗಾದವರು. ಗಂಡನು ಮತ್ತು ಆತನ ಕುಟುಂಬದವರು ಎಷ್ಟೇ ಹಿಂಸೆಯನ್ನು ನೀಡಿದರೂ, ಅವುಗಳನ್ನೆಲ್ಲಾ ಸಹಿಸಿ ಕೊಂಡು, ಆತನ ಒಲವಿಗಾಗಿ ಕಾಯಬೇಕು. ಹೆಂಡತಿ ಯರ ಈ ನಿರೀಕ್ಷೆ ಹುಸಿಗೊಳ್ಳುವುದಿಲ್ಲ. ಅದಕ್ಕೆ ಫಲದೊ ರೆತೇ ದೊರೆಯುತ್ತದೆ ಎನ್ನುವ ಭರವಸೆಯನ್ನು ಇಂತಹ ಸಾಹಿತ್ಯವು ಬಿತ್ತುತ್ತಿರುತ್ತದೆ. □

(ಮುಂದುವರಿಯುವುದು)

ಚರ್ಚೆ

'ಅಹಿಂದ' ಕುರಿತ ಚರ್ಚೆ ನಾಡಿನಲ್ಲೀಗ ವ್ಯಾಪಕವಾಗಿ ನಡೆಯುತ್ತಿದೆ. ಗರ್ಲಲರಲ್ಲಿ ಕೋಲಾರದಲ್ಲಿ ಆರಂಭ ಗೊಂಡಿದ್ದ 'ಅಹಿಂದ' ಇಂದು ರಾಜಕೀಯ ಸ್ಥಿತ್ಯಂತರಗಳಿಂದಾಗಿ ಇಡೀ ನಾಡಿನಲ್ಲಿ ಸಂಚಲನವನ್ನು ಹುಟ್ಟಿ ಹಾಕಿದೆ. ಸಾಮಾಜಿಕ ಬದಲಾವಣೆಗೆ ಕಾರಣವಾಗುವ ಇಂಥ ಚರ್ಚೆಗಳು ಆರಂಭವಾದಾಗಲೆಲ್ಲಾ 'ಸಂವಾದ' ಪತ್ರಿಕೆ ತಳೆದಿರುವ ಆರೋಗ್ಯಕರ ನಿಲುವು ಹಾಗೂ ಅದು ರೂಪಿಸುತ್ತಾ ಬಂದಿರುವ ಚಿಂತನೆಗಳ ಬಗೆಗೆ 'ಸಂವಾದ'ದ ಓದುಗರಿಗೆಲ್ಲ ಅರಿವಿದೆ. 'ಅಹಿಂದ' ರಾಜಕಾರಣವು ದಿಕ್ಕು ತಪ್ಪದಂತೆ ನಡೆಯಲು ಕರ್ನಾಟಕದ ಪ್ರಜ್ಞಾವಂತ ವಲಯ ಈ ನಿಟ್ಟಿನಲ್ಲಿ ಹೊಸ ಚಿಂತನೆಯನ್ನು ರೂಪಿಸಬೇಕೆಂಬ ಆಶಯದೊಂದಿಗೆ ಸಂವಾದ, ಪ್ರಶ್ನೋತ್ತರ ಹಾಗೂ ಚರ್ಚೆಗಳನ್ನು ಆರಂಭಿಸಿದೆ.

ಡಿ.ಎಸ್. ನಾಗಭೂಷಣ



ಅಹಿಂದ ಮತ್ತು ಕರ್ನಾಟಕದ ರಾಜಕಾರಣ

ಚರ್ಚೆ

ವ್ಯಕ್ತಿಯಾಚೆಗಿನ ತಾತ್ವಿಕ ವೇದಿಕೆಯಾಗಬೇಕು

ಪ್ರಶ್ನೆ: ನೀವು ಬಹುಕಾಲದಿಂದ ಪ್ರಗತಿಪರ ಚಳುವಳಿಗಳ ಮಿತ್ರರಾಗಿ ಕೆಲಸ ಮಾಡುತ್ತಾ ಬಂದಿದ್ದೀರಿ. ಇದೀಗ ವಿಸ್ತಾರಗೊಳ್ಳುತ್ತಿರುವ 'ಅಹಿಂದ'ವನ್ನು ದೀರ್ಘಕಾಲದ ಚಳುವಳಿಯಾಗಿ ಬೆಳೆಸುವ ಮಾರ್ಗಗಳನ್ನು ದಯಮಾಡಿ ಸೂಚಿಸಬಲ್ಲಿರಾ?

ಉತ್ತರ: 'ಅಹಿಂದ' ಆರಂಭವಾದದ್ದು ಹೇಗೇ ಇರಲಿ, ಸದ್ಯಕ್ಕೆ ಅದು ಸಿದ್ಧರಾಮಯ್ಯನವರ ರಾಜಕೀಯ ಅಳಿವು-ಉಳಿವುಗಳ ವೇದಿಕೆಯಾಗಿ ಮಾರ್ಪಟ್ಟಿರುವುದಂತೂ ಸತ್ಯ. ಹೀಗಿರುವಾಗ ಅದನ್ನು ಅದು ಈಗಿರುವ ಸ್ಥಿತಿಯಲ್ಲಿ ದೀರ್ಘ ಕಾಲದ ಚಳುವಳಿಯಾಗಿ ಬೆಳೆಸುವ ಪ್ರಶ್ನೆಯೇಏಳದು. ಹಾಗೇನಾದರೂ ಬೆಳೆಸುವ ಯೋಚನೆ ಇರುವವರು, ಮೊದಲು ಅದನ್ನು ವ್ಯಕ್ತಿ ನಿಷ್ಠೆಯಾಚೆಯ ತಾತ್ವಿಕ ವೇದಿಕೆಯನ್ನಾಗಿ ರೂಪಿಸುವ ಕಡೆ ಗಮನ ಹರಿಸಬೇಕು.

ಪ್ರಶ್ನೆ: ಅಹಿಂದ, ಸರ್ವೋದಯ ಕರ್ನಾಟಕ, ಬಿ.ಎಸ್.ಪಿ, ಸಮಾಜವಾದಿ ಪಕ್ಷಗಳು ಒಂದೇ ಮತದಾರ ವಲಯಕ್ಕೆ ಕೈಇಟ್ಟಂತೆ ಕಾಣುತ್ತದೆ. ಇದನ್ನು ತಪ್ಪಿಸಲು ಏನು ಮಾಡಬೇಕು?

ಉತ್ತರ: ಪ್ರಶ್ನೆಯಲ್ಲೇ, 'ಅಹಿಂದ'ವನ್ನು ಒಂದು ಪ್ರತ್ಯೇಕ ರಾಜಕೀಯ ಪಕ್ಷವಾಗಿ ಗ್ರಹಿಸಿರುವುದು ಸ್ಪಷ್ಟವಾಗಿದೆ. ಅಂದರೆ, 'ಅಹಿಂದ' ಎಂಬುದು ಸಿದ್ಧರಾಮಯ್ಯನವರ ಜನತಾದಳವೆಂದೇ ಗ್ರಹೀತವಾಗಿದೆ. ಇಲ್ಲಿದೆ ಹಿಂದುಳಿದ ಜಾತಿಗಳ ಚಳುವಳಿಯ ದುರಂತ.

ಸಿದ್ಧರಾಮಯ್ಯ ದೇವೇಗೌಡರ ಹಳೇ ಗೌಡಿಕೆ ರಾಜಕಾರಣವನ್ನು ಎದುರಿಸಲು ವಿಫಲವಾಗಿ ಹೊರದೂಡಲ್ಪಟ್ಟಾಗ, ನಮ್ಮೆಲ್ಲರ ಸಹಾನುಭೂತಿ ಸಿದ್ಧರಾಮಯ್ಯನವರ ಪರವಿತ್ತು. 'ಸರ್ವೋದಯ ಕರ್ನಾಟಕ'ವು ತಾತ್ವಿಕವಾಗಿಯಾದರೂ ಪ್ರತಿನಿಧಿಸುತ್ತಿರುವ ಹೊಸ ರೀತಿಯ ಸಮಾಜವಾದಿ ರಾಜಕಾರಣಕ್ಕೆ ಸಮೂಹ ರಾಜಕಾರಣದ ದೀಕ್ಷೆ ದೊರಕಬಹುದೆಂದು ಆಸೆಯಿತ್ತು. ಈಗ? ಸಿದ್ಧರಾಮಯ್ಯನವರು ಜಾಲಪ್ಪ-ಮುಕುಡಪ್ಪ-ಇಬ್ರಾಹಿಂರ ಸುಖಸಹವಾಸದಲ್ಲಿ ಪರಮಿಸಿರುವುದನ್ನು ನೋಡಿದರೆ ಅವರ ಹೋರಾಟ ಹಿಂದುಳಿದ ಜಾತಿಗಳ ಚಳುವಳಿಯ ಇನ್ನೊಂದು ಅಪೂರ್ಣ ಅಧ್ಯಾಯವಾಗಿಯೇ ಕೊನೆಗೊಳ್ಳುವಂತೆ ಕಾಣುತ್ತಿದೆ.

ಹಿಂದುಳಿದ ಜಾತಿಗಳ ಸಂಘಟನೆಯ ಮೂಲಕ ರಾಜಕೀಯ ಮಾಡುವ ಕಲ್ಪನೆ ಗೊಡ್ಡು ಸಮಾಜವಾದಿಗಳ ಒಂದು ವ್ಯಸನವಷ್ಟೇ. ಈ ಹಿನ್ನೆಲೆಯಲ್ಲಿ ಯಾರ ಮತ ಬುಟ್ಟಿಗೆ ಯಾರು ಕೈ ಹಾಕಿದ್ದಾರೆ ಎಂಬುದರ ಲೆಕ್ಕಾಚಾರವೂ ಒಂದು ಹಳೇ ವ್ಯಸನವಷ್ಟೆ. ಚಿಂತಿಸಲು, ಬೆಳೆಯಲು ನಿರಾಕರಿಸುವ ಸಮಾಜವಾದಿಗಳ ಈ ತಾತ್ವಿಕ ವ್ಯಸನದಿಂದಾಗಿ ಅಖಂಡವೂ, ಸಮಗ್ರವೂ ಆಗಿ ರೂಪುಗೊಳ್ಳಬೇಕಾದ ಹೊಸ ಸಮಾಜವಾದಿ ರಾಜಕಾರಣದ ಕಲ್ಪನೆ ಪದೇ ಪದೇ ಘಾಸಿಗೊಳ್ಳುತ್ತಿದೆ. ಹಾಗಾಗಿಯೇ ಅವರು ಪದೇ ಪದೇ ಅದನ್ನು ತಪ್ಪಿಸಲು ಏನು ಮಾಡಬೇಕು, ಇದನ್ನು ತಪ್ಪಿಸಲು ಏನು ಮಾಡಬೇಕು ಎಂಬ 'ಚಿಲ್ಲರೆ' ರಾಜಕಾರಣದಲ್ಲೇ ತೊಡಗುವಂತಾಗಿದೆ.

ಪ್ರಶ್ನೆ: ದಲಿತ, ಶೂದ್ರ, ಅಲ್ಪಸಂಖ್ಯಾತ ಜಾತಿಗಳನ್ನು ಒಗ್ಗೂಡಿಸಲು ಪೆರಿಯಾರ್ ಮಾದರಿ ಅಥವಾ ವಚನ ಚಳುವಳಿಯ ಮಾದರಿಯಲ್ಲಿ ನಾವು ಈಗಲೂ ಮುನ್ನಡೆಯಲು ಸಾಧ್ಯವೆ?

ಉತ್ತರ: ನಮ್ಮ ಉದ್ದೇಶಗಳಿಗನುಗುಣವಾಗಿ ನಮ್ಮ ಮಾದರಿ ರೂಪುಗೊಳ್ಳುತ್ತಿರುತ್ತದೆಯಲ್ಲವೇ? ನೀವು ಉಲ್ಲೇಖಿಸಿರುವ ಮಾದರಿಗಳಂತೂ ಕೇವಲ ಅಧ್ಯಯನದ ಫಲಗಳಷ್ಟೇ. ವಚನ ಚಳುವಳಿಯ ಮಾದರಿ ಎನ್ನುತ್ತೀರಿ. ಅದರ ಸಾಹಿತ್ಯಿಕ ಸ್ವರೂಪದಾಚೆಗೆ ಏನಾದರೂ ಗ್ರಹಿಕೆಗೆ ಸಿಗುವಂತಿದೆಯೇ? ಪೆರಿಯಾರ್ ಚಳುವಳಿ ನಮ್ಮ ಕಣ್ಮುಂದೆಯೇ ಬಹುರೂಕ್ಷವೂ, ಸ್ವಲ್ಪ ಮಟ್ಟಿಗೆ ಅಶ್ಲೀಲವೂ ಆಗಿ ಅವಸಾನಗೊಳ್ಳುತ್ತಿದೆಯಲ್ಲವೇ? ಹೀಗಿರುವಾಗ ಸದ್ಯಕ್ಕೆ 'ಅಹಿಂದ' ಜಾತಿಗಳನ್ನೂ ಒಗ್ಗೂಡಿಸುವುದಾದರೂ ಏತಕ್ಕೆ? ಅಧಿಕಾರದ ಶೀಲ – ಸ್ವರೂಪಗಳನ್ನು ಬದಲಾಯಿಸುವುದಕ್ಕೋ? ಅಥವಾ

> 'ಅಹಿಂದ'ದ ಈಗಿನ ಅದರ ನಾಯಕರ ರಾಜಕೀಯ ವರಸೆಗಳನ್ನು ನೋಡಿ ಹೇಳುವುದಾದರೆ ಅದು, ಆ ನಾಯಕರ ರಾಜಕೀಯ ಆಕಾಂಕ್ಷೆಗಳು ಈಡೇರಿದೊಡನೆ/ಕರಗಿಹೋದೊಡನೆ ಹಿನ್ನಲೆಗೆ ಸರಿಯಲಿದೆ. ಯಾವುದೇ ಸ್ಪಷ್ಟ ತಾತ್ವಿಕತೆ, ಅದನ್ನಾಧರಿಸಿದ ಕಾರ್ಯಕ್ರಮ ಹಾಗೂ ಅದನ್ನು ಅನುಷ್ಠಾನಗೊಳಿಸುವ ಸಂಕಲ್ಪ ಬಲವಿರುವ ಸಂಘಟನೆಯೇ ಇರದೆ, ಕೇವಲ ಒಂದು ರಾಜಕೀಯ ವಂಚನೆಯ ನೋವನ್ನಷ್ಟೇ ಭಾವನಾತ್ಮಕವಾಗಿ ಸ್ಫೋಟಿಸಿಕೊಂಡು ನಡೆದಿರುವ ಅಹಿಂದ, ಬಹುಬೇಗನೆ ಆಯಾಸಗೊಂಡು ಬೀಳುವ ಎಲ್ಲ ಲಕ್ಷಣಗಳಿವೆ.

ಅದನ್ನು ಈಗಿರುವ ಸ್ಥಿತಿಯಲ್ಲೇ ಎಲ್ಲರೂ ಸಮನಾಗಿ ತಿಂದುಂಡು ಸಾಯುವುದಕ್ಕೆಂದೋ? ಈ ಪ್ರಶ್ನೆಗಳಿಗೆ ಉತ್ತರ ಪಡೆದುಕೊಳ್ಳದೆ ನಿಮ್ಮ ಪ್ರಶ್ನೆಯೆನ್ನೆತ್ತಿಕೊಳ್ಳುವುದು ಕಷ್ಟ.

ಪ್ರಶ್ನೆ: ಅಹಿಂದ ಜಾತಿಗಳನ್ನು ರಾಜಕೀಯವಾಗಿ ಒಗ್ಗೂಡಿಸುವುದಕ್ಕಿಂತ ಸಾಂಸ್ಕೃತಿಕವಾಗಿ ಒಗ್ಗೂಡಿಸುವುದರ ಮೂಲಕ ದೀರ್ಘಕಾಲ ಈ ಸಂಘಟನೆಯನ್ನು ಮುಂದುವರಿಸಬಹುದಲ್ಲವೆ? ಈ ನಿಟ್ಟಿನಲ್ಲಿ ನಿಮ್ಮ ಸಲಹೆಗಳೇನು?

ಉತ್ತರ: ಸಾಂಸ್ಕೃತಿಕವಾಗಿ ಒಗ್ಗೂಡಿಸುವುದು ಎಂದರೆ ಯಾವ ಆಧಾರಗಳ ಮೇಲೆ? ಹಾಡು– ಹಸೆ–ಕುಣಿತಗಳ ಆಧಾರದ ಮೇಲೆಯೇ? ಅಥವಾ ನಮ್ಮೆಲ್ಲರ 'ಸಂಸ್ಕೃತಿ' ಒಂದೇ; ಅದು ಅಹಿಂದೇತರ ಗುಂಪಿಗಿಂತ ಭಿನ್ನ ಎಂಬ ಶಿಕ್ಷಣ'ದ ಮೂಲಕವೇ? ನಿಮಗೆಲ್ಲೋ ಭ್ರಾಂತು. ಪ್ರಜಾಪ್ರಭುತ್ವದ ಇತ್ತೀಚಿನ ಆವೃತ್ತಿಯಲ್ಲಿ ಸಂಸ್ಕೃತಿಯೂ ತನ್ನ ಸಾರ್ಥಕತೆ ಕಂಡುಕೊಳ್ಳುವುದು ರಾಜಕಾರಣದಲ್ಲಿಯೇ. ಇತ್ತೀಚಿನ ಆರೆಸ್ಸೆಸ್–ಬಿಜೆಪಿ ಜಗಳ ವೈಯಕ್ತಿಕ ನೆಲೆಯದ್ದೇನಲ್ಲ ಎಂದು ನಿಮಗೂ ಗೊತ್ತಿರಬೇಕು.

ಪ್ರಶ್ನೆ: ಅಹಿಂದಕ್ಕೆ ಅಗತ್ಯವಾದ ವೈಚಾರಿಕ, ತಾತ್ವಿಕ ಚೌಕಟ್ಟು ಯಾವುದಾಗಿರಬೇಕು ಎಂದು ನಿಮಗನ್ನಿಸುತ್ತದೆ?

ಉತ್ತರ: 'ಅಹಿಂದ' ಒಂದು ಬೀಜ ಮಾತ್ರ. ಅದು ಇಡೀ ಸಮಾಜದ ವಿವೇಕದ ನೆಲದಲ್ಲಿ ಚಿಗುರೊಡೆದು ಎಲ್ಲ ಜನವರ್ಗಗಳಿಗೂ ನೆರಳನ್ನು ಒದಗಿಸುವಂತಾಗಬೇಕು. ಲೋಹಿಯಾ ಪ್ರತಿಪಾದಿಸಿದ ಸಮಾಜವಾದದ ತಾತ್ವಿಕ ಚೌಕಟ್ಟನ್ನು ಮೂಲಾಧಾರವಾಗಿ ಇಟ್ಟುಕೊಂಡು, ಕಳೆದ ಐವತ್ತು ವರ್ಷಗಳ ರಾಜಕೀಯ ಪಾಠಗಳ ಹಿನ್ನಲೆಯಲ್ಲಿ ಅದನ್ನು ವಿಸ್ತರಿಸುತ್ತಾ ಹೋಗಬೇಕಾಗಬಹುದು. ಇದು ಬಹುದೊಡ್ಡ ಜವಾಬ್ದಾರಿಯ ಕೆಲಸ.

ಪ್ರಶ್ನೆ: 'ಅಹಿಂದ' ಕರ್ನಾಟಕ ರಾಜಕಾರಣದ ಮುಂದಿನ ದಿಕ್ಕನ್ನು ನಿರ್ಧರಿಸುವಷ್ಟು ಶಕ್ತವಾಗಿದೆಯೆ? ಹಾಗೆ ಶಕ್ತವಾಗಲು ಅದು ಮಾಡಬೇಕಾದ ಕೆಲಸಗಳೇನು?

ಉತ್ತರ: 'ಅಹಿಂದ'ದ ಈಗಿನ ಅದರ ನಾಯಕರ ರಾಜಕೀಯ ವರಸೆಗಳನ್ನು ನೋಡಿ ಹೇಳುವುದಾದರೆ ಅದು, ಆ ನಾಯಕರ ರಾಜಕೀಯ ಆಕಾಂಕ್ಷೆಗಳು ಈಡೇರಿದೊಡನೆ/ ಮುಗಿಹೋದೊಡನೆ ಹಿನ್ನಲೆಗೆ ಸರಿಯಲಿದೆ. ಯಾವುದೇ ಸ್ಪಷ್ಟ ತಾತ್ವಿಕತೆ, ಅದನ್ನಾಧರಿಸಿದ ಕಾರ್ಯಕ್ರಮ ಹಾಗೂ ಅದನ್ನು ಅನುಷ್ಠಾನಗೊಳಿಸುವ ಸಂಕಲ್ಪ ಬಲವಿರುವ ಸಂಘಟನೆಯೇ ಇರದೆ, ಕೇವಲ ಒಂದು ರಾಜಕೀಯ ವಂಚನೆಯ ನೋವನ್ನಷ್ಟೇ ಭಾವನಾತ್ಮಕವಾಗಿ ಸ್ಫೋಟಿಸಿಕೊಂಡು ನಡೆದಿರುವ ಅಹಿಂದ, ಬಹುಬೇಗನೆ ಆಯಾಸಗೊಂಡು ಬೀಳುವ ಎಲ್ಲ ಲಕ್ಷಣಗಳಿವೆ. ರಾಜಕೀಯ ಧ್ರುವೀಕರಣದ ಇಂತಹ ಆಟ ಕಳೆದ ಐವತ್ತು ವರ್ಷಗಳಲ್ಲಿ ಬಹುಬಾರಿ ಆಡಲ್ಪಟ್ಟಿದ್ದು (ಪಾತ್ರಧಾರಿಗಳು ಬೇರೆ ಬೇರೆ ಇಷ್ಟೆ). ಅದನ್ನು ಸ್ವಯಂಪ್ರೇರಣೆಯಿಂದ ನೋಡುವವರ ಸಂಖ್ಯೆ ದಿನೇ ದಿನೇ ಕಡಿಮೆಯಾಗುತ್ತಿದೆ, ಹೆಚ್ಚಾಗುತ್ತಿಲ್ಲ. ಇದನ್ನರಿತು, ಹಳೇ ರಾಜಕಾರಣದ ವರಸೆಗಳನ್ನು ಬಿಟ್ಟು ಹಣ–ಜಾತಿಬಲಗಳನ್ನೇ ಪ್ರಮುಖ ಮಾಡಿಕೊಳ್ಳದ, ಹೊಸ ಸಾಮಾಜಿಕ ಸನ್ನಿವೇಶಕ್ಕೆ ತಕ್ಕಂತಹ ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಡುವ 'ಹೊಸ' ಸಮಾಜವಾದಿ ರಾಜಕಾರಣದ ಬಗ್ಗೆ ಜನಾಭಿಪ್ರಾಯ ರೂಪಿಸುವತ್ತ 'ಅಹಿಂದ' ಗಮನ ಹರಿಸಿದರೆ ಒಳ್ಳೆಯದು. □

○ಎಚ್.ಎಸ್. ದೊರೆಸ್ವಾಮಿ.



ಚರ್ಚೆ

ಅಹಿಂದ ಮತ್ತು ಕರ್ನಾಟಕದ ರಾಜಕಾರಣ

ಅಹಿಂದ ಒಂದು ರಾಜಕೀಯ ಪಕ್ಷವಾಗಿ ರಾಜಕೀಯ ಶಕ್ತಿಯಾಗಿ ಹೊರಹೊಮ್ಮಬೇಕೇ, ಇಲ್ಲವೇ ಅದು ಒಂದು ರಾಜಕೀಯೇತರ ಸಾಮಾಜಿಕ ಸಂಸ್ಥೆಯಾಗಿ ಉಳಿಯ ಬೇಕೇ? ಎಂಬ ಚರ್ಚೆ ನಡೆದಿದೆ. ಅಹಿಂದ ಹುಟ್ಟಿಹಾಕಿದವರು ಸಿದ್ಧರಾಮಯ್ಯನವರು–ದೇವೇಗೌಡರು, ತಮ್ಮ ಪಕ್ಷದಿಂದ ಕಿತ್ತುಹಾಕಿ, ಉಪಮುಖ್ಯಮಂತ್ರಿ ಪದವಿಯಿಂದ ಇಳಿಸಿದ ಸಿದ್ಧರಾಮಯ್ಯನವರು ಅಹಿಂದ ಎಂಬ ಸಾಮಾಜಿಕ ಸಂಸ್ಥೆಯನ್ನು ಅಸ್ತಿತ್ವಕ್ಕೆ ತಂದರು. ಅದರ ಸಮಾವೇಶಗಳು ನಾಲ್ಕಾರು ಈಗಾಗಲೇ ನಡೆದಿವೆ. ಜನರಿಂದ ಉತ್ತಮ ಪ್ರತಿಕ್ರಿಯೆ ಕೂಡ ದೊರೆತಿದೆ.

ಶ್ರೀನಿವಾಸಪ್ರಸಾದರು ಈಗ ಅಹಿಂದ ಜೊತೆಗೆ ಕೈ ಜೋಡಿಸಿದ್ದಾರೆ. ಅಹಿಂದ ಸಾಮಾಜಿಕ ಸ್ವತಂತ್ರ ಸಂಸ್ಥೆಯಾಗಿ ಬೆಳೆಯಬೇಕೆಂದು ಅವರು ಅಪೇಕ್ಷಿಸುತ್ತಾರೆ.

ಆದರೆ ಶ್ರೀನಿವಾಸಪ್ರಸಾದರೂ, ಸಿದ್ಧರಾಮಯ್ಯನವರೂ ರಾಜಕೀಯದಲ್ಲಿರಬೇಕೆಂದು ಆಶೈಸುವವರು. ದೇವೇಗೌಡರ ಧೃತರಾಷ್ಟ್ರ ಪ್ರೇಮವನ್ನು ಮುರುಟಿ ಹಾಕಬೇಕು ಎನ್ನುವವರು ಇವರು. ಆದ್ದರಿಂದ ಇವರಿಬ್ಬರೂ ಯಾವುದಾದರೂ ರಾಜಕೀಯ ಪಕ್ಷಗಳಿಗೆ ಸೇರಿ, ಶಾಸನ ಸಭೆಯಲ್ಲಿ ಪ್ರಾತಿನಿಧ್ಯ ಪಡೆಯಬೇಕಾದ ಅನಿವಾರ್ಯತೆ ಇದೆ.

ಅದರ ಬದಲು ಇವರು ಅಹಿಂದವನ್ನೇ ಒಂದು ರಾಜಕೀಯ ಪಕ್ಷವಾಗಿ ಪರಿವರ್ತಿಸಿ, ಚುನಾವಣೆಯನ್ನೂ ಎದುರಿಸುವುದು ಸೂಕ್ತ. ಅಲ್ಪಸಂಖ್ಯಾತರು ಮತ್ತು ಹಿಂದುಳಿದವರ ಮುಖವಾಣಿಯಾಗಿ, ಅಹಿಂದ ಕಣಕ್ಕಿಳಿಯಲಿ: ಬೇರೆ ರಾಜಕೀಯ ಪಕ್ಷಗಳೊಡನೆ ಹೊಂದಾಣಿಕೆ ಮಾಡಿಕೊಂಡು ಸಾಧ್ಯವಾದಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಸಮರ್ಥರೂ, ಸಿದ್ಧಾಂತ ಬದ್ಧರೂ, ಪ್ರಾಮಾಣಿಕರೂ, ಸಾಮಾಜಿಕ ಕಳಕಳಿಯುಳ್ಳವರೂ ಆದ ಅಲ್ಪಸಂಖ್ಯಾತರು ಮತ್ತು ಹಿಂದುಳಿದವರೂ ತಮ್ಮ ಪಕ್ಷದಿಂದ ಆಯ್ಕೆಯಾಗಿ ಬರುವುದಕ್ಕೆ ಶ್ರಮಿಸಲಿ. ಹೀಗೆ ಆರಿಸಿ ಬಂದವರು ಶಾಸನ ಸಭೆಯಲ್ಲಿ ಹಿಂದುಳಿದವರ, ಅಲ್ಪಸಂಖ್ಯಾತರ ಸಾಮಾಜಿಕ ಹಾಗೂ ಆರ್ಥಿಕ ಹಕ್ಕುಗಳಿಗಾಗಿ ಹೋರಾಡಲಿ ಎಂಬುದು ನನ್ನ ಅಭಿಮತ.

ಅಹಿಂದ ನೇರವಾಗಿ ರಾಜಕೀಯ ಪ್ರವೇಶ ಮಾಡುವುದು ಬೇಡವೆಂದಾದರೆ, ಅಹಿಂದವನ್ನು ಒಂದು ಸ್ವತಂತ್ರ ಸಾಮಾಜಿಕ ಸಂಸ್ಥೆಯಾಗಿ ಬೆಳೆಸಬಹುದು. ಈ ಸಂಸ್ಥೆ ಆಗ ಒಂದು ಹೋರಾಟದ ಸಂಸ್ಥೆಯಾಗಿ ರೂಪುಗೊಳ್ಳಬೇಕು.

ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಆಮೂಲಾಗ್ರವಾಗಿ ಬದಲಾವಣೆ ತರಲು ಯೋಜನೆಯನ್ನು ಸಿದ್ಧಗೊಳಿಸಬೇಕು. ಈ Process ವಿಚಾರ ಕ್ರಾಂತಿಯಿಂದ ಆರಂಭವಾಗಬೇಕು. ಅನಂತರ ಅದನ್ನು ಶಾಸಕರ ಮುಂದೆ ಸರ್ಕಾರದ ಮುಂದೆ ಇಡಬೇಕು. ಸರ್ಕಾರ ಈ ಮೂಲಭೂತ ಬದಲಾವಣೆಯನ್ನು ತರಲು ಕ್ರಮ ಕೈಗೊಳ್ಳುವಂತೆ ಮನ ಒಲಿಸಬೇಕು. ಅನಿವಾರ್ಯವೆನಿಸಿದರೆ ಸಂಘರ್ಷಕ್ಕೆ ಅಹಿಂದ ಸಜ್ಜುಗೊಳ್ಳಬೇಕು. ಜನರೇ ಕೂಡಿಕೊಂಡು ಮಾಡಿಕೊಳ್ಳಬಹುದಾದ ಸುಧಾರಣೆಗಳ ಅಧ್ಯಯನ ನಡೆಸಿ, ಅವುಗಳನ್ನು ಕಾರ್ಯಗತಗೊಳಿಸಬೇಕು.

ಸಾಮಾಜಿಕ ಮೂಲಭೂತ ಬದಲಾವಣೆಗಳು

1.ಅಸ್ಪೃಶ್ಯತೆ ತೊಡೆದು ಹಾಕಲು ಎಲ್ಲ ಯುವಕರ ಸಂಘಟನೆ ಮಾಡಿ ಕಾನೂನಿನ ಪುಸ್ತಕದಲ್ಲಿರುವುದನ್ನು ನಿಜಜೀವನದಲ್ಲಿ ಚಾಲ್ತಿಗೆ ತರಲು ಕಾರ್ಯಕ್ರಮವನ್ನೂ ಕರ್ನಾಟಕದಾದ್ಯಂತ ರೂಪಿಸಬೇಕು.

2.ನಮ್ಮ ಸಮಾಜ ಒಂದು Human Jungle ಇದನ್ನೂ ನಿಜಮಾನವರ ಸಮಾಜವಾಗಿ ಪರಿವರ್ತಿಸುವುದು ನಮ್ಮ ಆದ್ಯಕರ್ತವ್ಯ.

ಎಲ್ಲ ಭೇದಭಾವನೆಯನ್ನೂ ಸಮಾಜದಿಂದ ಕಿತ್ತುಹಾಕಲು ಯೋಜನೆ. ಮೇಲುಕೀಳು, (ಜಾತಿ, ಅಂತಸ್ತು, ಆಳು–ಅರಸ, ದಲಿತ, ಶೋಷಕ) ದುರ್ವ್ಯಸನಗಳಿಂದ ಸಮಾಜವನ್ನೂ ಮುಕ್ತಗೊಳಿಸಲು ಹೋರಾಟ, ಸಾಮಾಜಿಕ ಅಸಮಾನತೆಯನ್ನೂ ತೊಡೆದು ಹಾಕುವ ಕಾರ್ಯಕ್ರಮ ಹಿಂದು, ಮುಸ್ಲಿಂ ಸಮಸ್ಯೆ–ಕೋಮುಸೌಹಾರ್ದ ಸ್ಥಾಪನೆ, ಎಲ್ಲರಿಗೂ ಬದುಕಿಬಾಳುವ ಹಕ್ಕು. ಮಾನವೀಯತೆಯ ಸಮಾಜ ಎಲ್ಲರಿಗೂವಿದ್ಯೆ, ಎಲ್ಲರಿಗೂ ಊಟ, ಉದ್ಯೋಗ ಮೊದಲ ಗುರಿಯಾಗಬೇಕು. ಸ್ತ್ರೀಶಕ್ತಿ ಜಾಗೃತಿಗೆ ಸಂಘಟಿತ ಪ್ರಯತ್ನ, ಯುವಕರಿಗೆ ಗ್ರಾಮ ಕಟ್ಟುವ ಪ್ರತೀಕ್ಷೆ.

ರಾಜಕೀಯ

ಜಾತಿ, ಧರ್ಮಗಳ ಹೆಸರಿನಲ್ಲಿ ರಾಜಕೀಯ ಪಕ್ಷಗಳಿರಬಾರದು ಸರ್ಕಾರದ ಕೆಲಸದಲ್ಲಿ ಚುನಾವಣೆಗಳಲ್ಲಿ ಜಾತಿ, ಧರ್ಮ ಬೆರೆಸಬಾರದು, ಬಳಸಬಾರದು

Criminalization of Politics ಕೊನೆಗೊಳ್ಳಬೇಕು ಸರ್ಕಾರ ಎಲ್ಲ ಜಾತಿ, ಧರ್ಮದವರನ್ನೂ ಸಮಾನಾಂತರದಲ್ಲಿ ದೂರ ಇಡಬೇಕು. Secular

(೨೬ನೇ ಪುಟಕ್ಕೆ)

ರಾಜಕೀಯ ಪಕ್ಷವಾಗಲಿ

ಅಧಿಕಾರ ರಾಜಕಾರಣದ ಸುಳಿಯಲ್ಲಿ

'ಅಹಿಂದ' ಈಗ ಜ್ವರ ಬಂದ ರೇಷ್ಮೆ ಹುಳುವಿನಂತೆ ಮುಲುಗುಡುತ್ತಿದೆ. ಅಧಿಕಾರದ ಭದ್ರಕೋಟೆಯಲ್ಲಿ ಕುಳಿತುಕೊಳ್ಳಲು ಹವಣಿಸುತ್ತಿದೆ. ಅಧಿಕಾರದ ಗೂಡಿನೊಳಗೆ ಕುಳಿತು ತನ್ನೆಲ್ಲ ಕನಸುಗಳನ್ನು ನನಸಾಗಿಸಿಕೊಂಡು ರೂಪಾಂತರ ಹೊಂದಿ ಚಿಟ್ಟೆಯಾಗಿ ಹಾರುವ ಹಂಬಲ ಹೊತ್ತು ಹಾತೊರೆಯುತ್ತಿದೆ. ಪಾಪ ರೂಪಾಂತರಗೊಳ್ಳುವುದರೊಳಗೆ ಕೊತ ಕೊತನೆ ಕುದಿವ ನೀರಿನಲ್ಲಿ ಹಾಕಿ ಜೀವತೆಗೆದು ಅದರ ರೇಷ್ಮೆಯ ದಾರವನ್ನು ಸೆಳೆದುಕೊಳ್ಳುವ ಅವ್ಯಕ್ತ ಕೈಗಳ ಹುನ್ನಾರದ ಅರಿವು ಅದಕ್ಕೆ ಇದ್ದಂತಿಲ್ಲ. ಸದ್ಯದ ಪರಿಸ್ಥಿತಿಯಂತೂ ಇದಕ್ಕೆ ಪೂರಕವಾಗಿದೆ.

1998 ರಲ್ಲೆ ಅಸ್ತಿತ್ವಕ್ಕೆ ಬಂದು ಬೆಳಕಿಗೆ ಬಾರದೆ ಅಥವಾ ತಾರದೆ ಇದ್ದ ಅಹಿಂದ ಈಗ ಇದ್ದಕ್ಕಿದ್ದಂತೆ ರಾಜಕೀಯ ದಾಳವಾಗಿ ಪರಿಣಮಿಸಲು ಕಾರಣವೇನು? ಅಹಿಂದನನ್ನು ತನ್ನೆಡೆಗೆ ಸೆಳೆದುಕೊಂಡ ರಾಜಕೀಯ ಸುಳಿಗಳು ಯಾವುವು? ಇದು ಈಗ ನಮ್ಮ ಗಂಭೀರ ಪ್ರಶ್ನೆಯಾಗಬೇಕು.

ಅತೃಪ್ತ ಕಾಂಗ್ರೆಸಿಗರು ಎಸೆದಗಾಳಕ್ಕೆ ಸಿದ್ಧರಾಮಯ್ಯ ಸಿಕ್ಕಿಹಾಕಿಕೊಂಡಿದ್ದಾರೆ. ದಳದೊಳಗೆ ಇದ್ದ ಕುಳಗಳ ಒಳಜಗಳ ಅಹಿಂದವನ್ನೂ ಅಪ್ಪಿಕೊಳ್ಳುವಂಥ ಅನಿವಾರ್ಯತೆಯನ್ನು ಸೃಷ್ಟಿಸಿದೆ. ಅಹಿಂದವನ್ನು ಅಪ್ಪಿಕೊಂಡಿರುವುದಂತೂ ಅಭಿಮಾನದಿಂದ ಅಲ್ಲ, ಆತ್ಮಾರ್ಪಣೆಯಿಂದಲೂ ಅಲ್ಲ. ಅದು ನಿಜವಾಗಿದ್ದರೆ 1997 ರಲ್ಲಿ ಚಿಕ್ಕಬಳ್ಳಾಪುರದಲ್ಲಿ 'ಬಲಿಜ' ಸಮಾಜದ ಸಮಾವೇಶವನ್ನೂ, 1998 ರಲ್ಲಿ ಕೋಲಾರದಲ್ಲಿ 'ಅಹಿಂದ' ಅಧಿವೇಶನವನ್ನೂ ಉದ್ಘಾಟಿಸಿದ ಸಿದ್ಧರಾಮಯ್ಯ ಹಾಗೂ ಅದರಲ್ಲಿ ಭಾಗವಹಿಸಿದ್ದ ಧರ್ಮಸಿಂಗ್ ಸೇರಿದಂತೆ ಇತರ ನಾಯಕರುಗಳು ಏಳು ವರ್ಷಗಳ ಕಾಲ 'ಅಹಿಂದ' ಕಡೆ ಕಣ್ಣೆತ್ತಿಯೂ ನೋಡಲಿಲ್ಲ ಏಕೆ? ಈಗ ನಮಗೆ ಪ್ರಮುಖ ಪ್ರಶ್ನೆಯಾಗಬೇಕಿರುವುದು ಇದೆ. ಏಕೆಂದರೆ ತಾತ್ವಿಕತೆಯ ತಾಯಿ ಬೇರಿನ ಬದ್ಧತೆ ಇರದೆ ಸಂದರ್ಭ ಸೃಷ್ಟಿಸುವ ಸನ್ನಿವೇಶಕ್ಕೆ ತಕ್ಕಂತೆ ವರ್ತಿಸುವ ಬುದ್ಧಿವಂತಿಕೆ ಅತ್ಯಂತ ಅಪಾಯಕಾರಿಯಾದುದು. ನವ ನಿರ್ಮಾಣ ಕ್ರಾಂತಿಯಾಗಲೀ, ಸಮಾಜವಾದಿ ಚಳುವಳಿಗಳಾಗಲೀ, ರೈತ ಸಂಘ, ದಸಂಸದ ಹೋರಾಟಗಳಾಗಲೀ ನೆಲೆಯಾಗಿ ನಿಲ್ಲದೆ ಒಡೆದು ಛಿದ್ರವಾಗಲು ಇದೇ ಮೂಲ. ಕೇವಲ ಹಣ ಮತ್ತು ಅಧಿಕಾರಕ್ಕೆ ಓತು ಸಾಂಸ್ಕೃತಿಕ ಪ್ರಕ್ರಿಯೆಗೆ ಬೆನ್ನು ಮಾಡಿದ್ದರ ಫಲ.

ಶತಶತಮಾನಗಳಿಂದಲೂ ಶೋಷಿತ ಜನಾಂಗದ ಶ್ರಮದ ಬೆವರನ್ನು ಹುನ್ನಾರ ಹೂಡಿ ಬಸಿದುಕೊಂಡ ವರ್ಗವೇ ಈಗ ಬಿಸಿನೀರಿನಲ್ಲಿ ಹಾಕಿ ದಾರವನ್ನೂ ಸೆಳೆದುಕೊಳ್ಳುವ ಎಲ್ಲ ರೀತಿಯ ಸೂಕ್ಷ್ಮಾತಿ ಸೂಕ್ಷ್ಮತಂತ್ರಗಳನ್ನು ಹೆಣೆದುಕೊಂಡುಕೂತಿದೆ. ಮೀಸಲಾತಿ ಪಡೆದುಕೊಂಡವರು ಪ್ರಬಲರಾಗುವುದಕ್ಕಿಂತ ಹೆಚ್ಚು ಮೀಸಲಾತಿ ಮೇಲ್ವರ್ಗದವರಲ್ಲಿ ಹಚ್ಚಿದಕಿಚ್ಚು ವ್ಯಾಪಕವಾಗಿ ಹಬ್ಬಿ ಈಗ ಅಂತರ ರಾಷ್ಟ್ರೀಯ ವೇದಿಕೆಯೊಂದಿಗೆ ಕೈ ಜೋಡಿಸಿ ಜಾಗತೀಕರಣ, ಬಹುರಾಷ್ಟ್ರೀಯ ಕಂಪನಿಗಳು, ಖಾಸಗೀಕರಣ ಮುಂತಾದವುಗಳಲ್ಲಿ ಪ್ರಾಬಲ್ಯ ಹೊಂದಿ ಮಣ್ಣು ಮುಕ್ಕಿಸುತ್ತಿದೆ. ಅಲ್ಲಿಗೆ ಹೋಗಿ ಮೀಸಲಾತಿ ನೀಡುವಂತೆ ಬೇಡುವ ದೈನೇಸಿಸ್ಥಿತಿಗೆ ತಂದಿದೆ. ಭಾರತದಲ್ಲಿ ಅಲ್ಪಸಂಖ್ಯಾತರು ಎಂದು ಕರೆಯಲ್ಪಡುವ ಮುಸ್ಲಿಮರನ್ನು ಸ್ವಾರ್ಥಸಾಧನೆಗಾಗಿ ವಿನಾಕಾರಣ ಪ್ರಪಂಚದಾದ್ಯಂತ ಬಗ್ಗು ಬಡಿಯುವ ಅಮೆರಿಕದ ಹುನ್ನಾರದಲ್ಲಿ ಬ್ರಿಟನ್ ನೇರವಾಗಿಯೆ ಕೈಜೋಡಿಸಿದ್ದರೆ ಯೂರೋಪ್ ದೇಶಗಳು ಪರೋಕ್ಷವಾಗಿ ಬೆಂಬಲ ನೀಡಿವೆ. ತೈಲಕ್ಕಾಗಿ ಮುಸ್ಲಿಂ ರಾಷ್ಟ್ರಗಳನ್ನು ಒಡೆದು ಕುವೈತ್ ಅನ್ನು ಕೈಗೊಂಬೆಯಾಗಿಸಿಕೊಂಡು ಸ್ವಾರ್ಥಸಾಧಿಸಿಕೊಳ್ಳುತ್ತಿರುವ ಅಮೆರಿಕ, ಭಾರತ, ಪಾಕಿಸ್ತಾನಗಳ ನಡುವೆ ಕಿಚ್ಚು ಹಚ್ಚಿ ಕಾಶ್ಮೀರವನ್ನು ಸ್ವಾಯತ್ತಗೊಳಿಸಿ ಚೈನಾ ವಿರುದ್ಧ ಹೋರಾಡುವ ತನ್ನ ನೆಲೆಯಾಗಿಸಿಕೊಳ್ಳುವ ಹುನ್ನಾರವನ್ನು ತನ್ನ ಕ್ರೂರ ಹೃದಯದಲ್ಲಿ ಹುದುಗಿಸಿಕೊಂಡಿದೆ. ಜನಪರ ರಾಜರನ್ನು ಭಾರತದಲ್ಲಿ ಬಗ್ಗು ಬಡಿಯಲು ಹೊರದೇಶದ ಆಕ್ರಮಣಕಾರರನ್ನು ಕರೆತಂದು ಹಾರುವರು ಈಗ ಹಿಂದುತ್ವವಾದವನ್ನೂ ಮುಂದು ಮಾಡಿಕೊಂಡು ಅಮೆರಿಕಾದೊಂದಿಗೆ, ಹಿಟ್ಲರನ ಸಂತಾನದೊಂದಿಗೆ ಒಂದಾಗಿದ್ದಾರೆ. ಈ ದುಷ್ಟ ಪ್ರಬಲ ಶಕ್ತಿಯ ವಿರುದ್ಧ ಎದ್ದು ಬಿಲ್ಲುವ ತಾತ್ವಿಕ ಚಿಂತನೆಯ ನೆಲೆಗಟ್ಟಿನಲ್ಲಿ 'ಅಹಿಂದ' ಹೊರಟಿದೆಯೋ ಇಲ್ಲಾ ಅತೃಪ್ತ ಒಳರಾಜಕಾರಣದ ಸ್ವಹಿತಾಸಕ್ತ ನಾಯಕ ಮಣಿಗಳ ದಾಳವಾಗಿ ಪರಿಣಮಿಸಿದೆಯೋ?

ದರಿದ್ರನಾರಾಯಣ ರ್‍ಯಾಲಿಗಳು, ಕೊಳೆಗೇರಿ ಕುರಿತ ಚಳವಳಿ, ಅಹಿಂದ ಹೆಸರಿನ ಸಮಾವೇಶಗಳು ನೊಂದು ಬೆಂದವರ ಉದ್ಧಾರ ಮಾಡುವ ಕರುಳ ಕಳಕಳಿಯಿಂದ ಆಗುತ್ತಿವೆಯೋ ಇಲ್ಲಾ ರಾಜಕೀಯ ಧುರೀಣರ ಸ್ವಾರ್ಥಾಕಣವಾಗಿ ಪರಿವರ್ತಿತವಾಗಿದೆಯೋ? ಯಾವ ವೇದಿಕೆಯಲ್ಲೂ ತಾತ್ವಿಕ ಚರ್ಚೆಯಾಗದೆ ಕೇವಲ ವ್ಯಕ್ತಿ ನಿಂದೆಯಲ್ಲೆ ಪರ್ಯಾವಸಾನವಾಗುತ್ತಿರುವುದಕ್ಕೆ ಕಾರಣವೇನು?

○ಜ. ಹೊ. ನಾರಾಯಣ ಸ್ವಾಮಿ



ಅಹಿಂದ ಮತ್ತು ಕರ್ನಾಟಕದ ರಾಜಕಾರಣ (ಚರ್ಚೆ)

ಸೆಪ್ಟಂಬರ್ 26ರ ರಂದು ನಡೆದ ಹಾಸನದ ಅಹಿಂದ ಬೃಹತ್‌ಸಭೆ ದೇವೇಗೌಡರನ್ನು ನಿಂದಿಸುವುದರಲ್ಲೆ ತೃಪ್ತಿಗೊಂಡು ತನ್ನ ಶಕ್ತಿಯನ್ನು ವ್ಯಯಿಸಿ ಹಾದಿತಪ್ಪಿತು. ಅದು ಯಾವ ಹಂತಕ್ಕೆ ಹೋಯಿತೆಂದರೆ ಮಾಜಿಮಂತ್ರಿ ದಿವಂಗತ ನಾಗೇಗೌಡರ ಹೆಂಡತಿ ನಾಗಮಣಿ "ದೇವೇಗೌಡರು ನನ್ನ ಗಂಡನಿಗೆ ಮಂತ್ರ-ಮಾಟ ಮಾಡಿಸಿ ಪರಲೋಕಕ್ಕೆ ಕಳುಹಿಸಲು ಕಾರಣರು. ನಾನು ನನ್ನ ಗಂಡನ ಸಾವಿನ ನಂತರ ೧೭ ತಿಂಗಳಿನಿಂದ ನಾಗರಹಾವಿನ ದ್ವೇಷದಂತೆ ಕಾಯುತ್ತಿದ್ದೇನೆ" ಎನ್ನುವವರೆಗೆ. ದೇವೇಗೌಡರ ಸ್ವಜಿಲ್ಲೆ ಎನ್ನುವ ಕಾರಣಕ್ಕೆ ಜನಸಾಗರವೆ ಸೇರಿತ್ತು. ಆದರೆ ಆ ಬೃಹತ್ ಸಭೆಗೆ 'ಅಹಿಂದ'ದ ನೆಲೆಯನ್ನ, ಮುಂದಿನ ಹೆಜ್ಜೆಗಳನ್ನು ಮನವರಿಕೆ ಮಾಡಿಕೊಡುವಲ್ಲಿ ಯಶಸ್ವಿಯಾಗಲಿಲ್ಲ.

ಇಂಥ ಮಹತ್ವದ ಸಭೆಗಳು ಹೀಗಾಗಲು ಇರುವ ಕಾರಣಗಳನ್ನು ಬಹುಸ್ಪಷ್ಟವಾಗಿ ಫ್ರಾನ್ಸ್ ದೇಶದ ನೊಬೆಲ್ ಪ್ರಶಸ್ತಿ ವಿಜೇತರಾದ ಡಾ॥ ಅಲೆಕ್ಸಿಸ್ ಕೆರೆಲ್ ತಮ್ಮ 'MAN THE UNKNOWN' (ಅವ್ಯಕ್ತ ಮಾನವ) ಕೃತಿಯಲ್ಲಿ ಹೀಗೆ ಹೇಳುತ್ತಾರೆ: "ಪ್ರಪಂಚದ ರಾಜಕಾರಣಿಗಳ ಹಾಗೂ ರಾಷ್ಟ್ರೀಯ ನಾಯಕರ ಮನಃಶಕ್ತಿ ದಾರ್ಢ್ಯಗಳು ಸಾಕಷ್ಟು ಬೆಳೆದಿಲ್ಲವಾದುದರಿಂದಲೇ ಅವರು ನಿತ್ಯವೂ ಟೀಕೆಗೆ ಗುರಿಯಾಗುತ್ತಾರೆ. ಸ್ವಭಾವತಃ ದುರ್ಬಲರಾದ ಇಂಥ ರಾಜಕಾರಣಿಗಳು ಛಲವಾದಿಗಳಾದರಂತೂ ಅವರು ಸಮಾಜದ ಶತ್ರುಗಳಾಗುವುದರಲ್ಲಿ ಆಶ್ಚರ್ಯವಿಲ್ಲ". ಡಾ॥ ಅಲೆಕ್ಸಿಸ್ ಕೆರೆಲ್‌ರ ಈ ಮಾತುಗಳು ಭಾರತದ ಅದರಲ್ಲೂ ಮುಖ್ಯವಾಗಿ ಕರ್ನಾಟಕದ ರಾಜಕಾರಣಿಗಳಿಗೆ ಹಾಗೂ ಚಳವಳಿ ಹೆಸರಿನ ಬೆದೆಬಂದ ಕರುಗಳಿಗೆ ಹೆಚ್ಚು ಆಪ್ಯಾಯಮಾನವಾದುದಾಗಿದೆ.

ಮತ್ತೊಂದು ಮುಖ್ಯವಾಗಿ ಗಮನಿಸಬೇಕಾದ ಅಂಶ ಎಂದರೆ 'ಅಹಿಂದ'ದ ಅರ್ಥವ್ಯಾಪ್ತಿ. ಈ ಅಹಿಂದ ಅರ್ಥವ್ಯಾಪ್ತಿಯನ್ನು ಅತ್ಯಂತ ಸಂಕುಚಿತವಾದ ಅರ್ಥದಲ್ಲಿ ವ್ಯಾಖ್ಯಾನಿಸುತ್ತಿದೆ. 'ಅ' ಎಂದರೆ ಅಲ್ಪಸಂಖ್ಯಾತರು-ಅಲ್ಪಸಂಖ್ಯಾತರು ಎಂದರೆ ಕೇವಲ ಮುಸ್ಲಿಮರು ಎಂದು ಭಾವಿಸಲಾಗುತ್ತಿದೆ. ಅಂಥ ಸಂಕುಚಿತ ದೃಷ್ಟಿಯನ್ನು ಹೊಂದಿರುವ ಪೇಜಾವರ ವಿಶ್ವೇಶತೀರ್ಥ 'ಅ' ತೆಗೆದು 'ಕೊ' (ಕೊಳಗೇರಿ) ಹಾಕಿ ಎಂದು ಬಿಜೆಪಿಗೆ ತಾಕೀತು ಮಾಡಿ ತಮ್ಮ ಕುಹಕರ್ತನನ್ನ ಕುಣಿಯ ಬಿಟ್ಟಿದ್ದಾರೆ. 'ಹಿಂ' ಎಂದರೆ ಹಿಂದುಳಿದವರು. ಯಾರು ಆ ಹಿಂದುಳಿದವರು? ಆರ್ಥಿಕವಾಗಿಯೇ? ಸಾಮಾಜಿಕವಾಗಿಯೆ? ಶೈಕ್ಷಣಿಕವಾಗಿಯೆ? ರಾಜಕೀಯವಾಗಿಯೆ? ವರ್ಗಪ್ರಜ್ಞೆ ಅರ್ಥರಹಿತ. ಇಡೀ ದೇಶವೇ ಶೂದ್ರಮಯವಾಗಿದೆ ಎಂದು ವಿವೇಕಾನಂದರು ದೇಶದ ಸ್ಥಿತಿಯನ್ನು ಮನವರಿಕೆ ಮಾಡಿದ್ದಾರೆ. ಯಾವ ಜಾತಿಯಲ್ಲಿ-ಹಾರುವರೂ ಸೇರಿ-ಯಾವ ಧರ್ಮದಲ್ಲಿ ಹಿಂದುಳಿದವರು ಇಲ್ಲ? ಆದಕಾರಣ ಅಹಿಂದ

ದೊಳಗೆ ಬರುವ ಹಿಂದುಳಿದವರು ಅಂದರೆ ಯಾರು? 'ದ' ಎಂದರೆ ದಲಿತ. ಯಾರು ದಲಿತ? ಪರಿಶಿಷ್ಟ ಜಾತಿ, ಪಂಗಡಗಳಲ್ಲಿರುವವರೆ? ದಲಿತ ಪದದ ಸ್ಪಷ್ಟ ವ್ಯಾಖ್ಯೆ ಯಾವುದು? ಇವು ಸ್ಪಷ್ಟವಾದಲ್ಲದೆ 'ಅಹಿಂದ'ಕ್ಕೆ ಅರ್ಥ ಬರುವುದಿಲ್ಲ. ಇದು ಮಾನವೀಯ ನೆಲೆಯಲ್ಲಿ ನಿಲ್ಲದೆ ಮತ್ತೆ ವರ್ಗಸಂಘರ್ಷವನ್ನು ಇನ್ನೂ ಸೂಕ್ಷ್ಮವಾಗಿ ಹೇಳುವುದಾದರೆ ಸಂಕೀರ್ಣವಾದ ಜಾತಿ ಸಂಘರ್ಷವನ್ನ ಗಟ್ಟಿಗೊಳಿಸುತ್ತದೆ: ಸಂಘಟನೆಗೆ ಬದಲು ವಿಘಟನೆಗೆ ಒತ್ತು ಕೊಡುತ್ತದೆ. ಈ ಅಪಾಯದ ಬಗ್ಗೆ ಎಚ್ಚರ ವಹಿಸಬೇಕಾಗುತ್ತದೆ. ಇಲ್ಲವಾದರೆ ಅರಿವಿಗೆ ಬಾರದಂತೆ ಅದು ತನ್ನನ್ನು ತನ್ನೊಳಗೆ ತಾನೆ ತಿಂದು ಹಾಕುತ್ತದೆ.

ಜಾತಿಯನ್ನು ಮೇಲ್ಮಾಡಿಕೊಂಡು ದೇವರು ಧರ್ಮದ ಹೆಸರಿನಲ್ಲಿ ಸ್ವಹಿತಾಸಕ್ತಿಯನ್ನು ಎಲ್ಲ ಸ್ತರಗಳಲ್ಲಿ ಸಾಧಿಸಕೊಂಡ ಮೇಲ್ವರ್ಗದ ಹಾಗೂ ಪುರೋಹಿತಶಾಹಿಯ ಕ್ರೌರ್ಯದಡಿಸಿಕ್ಕಿ ನುಚ್ಚುನೂರಾದ ದೇಶ ಭಾರತ. ಸ್ವಾತಂತ್ರ್ಯ ಬಂದಮೇಲೆ ಧಾರ್ಮಿಕ ಭಾಷಿಕ ಹಾಗೂ ಸಾಂಸ್ಕೃತಿಕ ಅಲ್ಪಸಂಖ್ಯಾತರನ್ನು ನಮ್ಮ ಸಂವಿಧಾನ ಗುರುತಿಸಿದೆ. ಸಾಮಾಜಿಕ ನ್ಯಾಯದಿಂದ, ಆರ್ಥಿಕ ಸಮಾನತೆಯಿಂದ ವಂಚಿತರಾಗಿ ಹಿಂದುಳಿದಿರುವ ಅಲ್ಪಸಂಖ್ಯಾತರು ಎಲ್ಲ ಜಾತಿಗಳಲ್ಲಿ, ಎಲ್ಲ ಧರ್ಮಗಳಲ್ಲಿ, ಎಲ್ಲ ಸಮಾಜಗಳಲ್ಲಿ ನಿಸ್ಸಂಶಯವಾಗಿ ಇದ್ದಾರೆ.

ದಲಿತರು ಎಂದರೆ ಯಾರು? ಎಂಬುದನ್ನು ೧೯೮೨ ರಷ್ಟು ಹಿಂದೆಯೇ ಬರೆದ ತಮ್ಮ "ಬದಲಾವಣೆ" ವಿಮರ್ಶಾಕೃತಿಯಲ್ಲಿ ಪ್ರೊ॥ ಕೆ.ಎಸ್.ಭಗವಾನ್ ಸ್ಪಷ್ಟವಾಗಿ ಮನವರಿಕೆ ಮಾಡಿದ್ದಾರೆ. ಅವರ ಪ್ರಕಾರ "ಸದ್ಯದ ಸಂದರ್ಭದಲ್ಲಿ ದಲಿತ ಶಬ್ದ ಅತಿಯಾಗಿ ಬಳಕೆಯಾಗುತ್ತಿದೆ. ಅದು 'ಹೊಲೆಯ' ಎಂಬ ಅರ್ಥದಲ್ಲಿ ವಿಪರೀತವಾಗಿ ಪ್ರಯೋಗವಾಗುತ್ತಿದ್ದು ಜಾತಿ ಸೂಚಕವಾಗಿ ಬಿಟ್ಟಿದೆ. ಈ ಅರ್ಥಸಮಸ್ಯೆಯನ್ನು ಸೀಮಿತಗೊಳಿಸುತ್ತದೆ. 'ದಲಿತ' ಎಂದರೆ ಹಿಂಸೆಗೆ ಒಳಗಾದವನು ಎಂದು ಅರ್ಥ. ದೈಹಿಕ ಮಾನಸಿಕ ಹೊಡೆತಕ್ಕೆ ಗುರಿಯಾದ, ಆರ್ಥಿಕ ಸಾಮಾಜಿಕ ಶೋಷಣೆಗೆ ಬಲಿಯಾದ, ಸಾಂಸ್ಕೃತಿಕವಾಗಿ ದಿವಾಳಿಯಾದ ಜನರೇ ದಲಿತರು. ದಲಿತರೆಂದರೆ ಕೇವಲ ಪರಿಶಿಷ್ಟಜಾತಿ ಬುಡಕಟ್ಟುಗಳಲ್ಲ, ವ್ಯವಸ್ಥೆಯ ಪೀಡನೆಯನ್ನು ತಾಳಲಾರದೆ ಕಣ್ಣೀರಿಗೆ ಬದಲು ರಕ್ತ ಸುರಿಸುವ ದುರ್ಬಲ ವರ್ಗವೇ ದಲಿತರು" ಭಗವಾನ್ ಅವರು ಹೇಳುವಂತೆ ನಿಜವಾದ ಅರ್ಥದಲ್ಲಿ ಹಿಂದುಳಿದವರು ಎಂದರೆ ಇವರೆ.

ಸದ್ಯದ ಪರಿಸ್ಥಿತಿಯಲ್ಲಿ ಜಾತಿ ಮತ ಧರ್ಮಗಳೆನ್ನದೆ ಎಲ್ಲೆಡೆಯೂ ವ್ಯವಸ್ಥೆಯ ಪೀಡನೆಗೆ ಗುರಿಯಾಗಿರುವ ಬಹುಸಂಖ್ಯಾತ ವರ್ಗವನ್ನು ಅಲ್ಪ ಸಂಖ್ಯಾತರಾದ ಪುರೋಹಿತಶಾಹಿ, ಬಂಡವಾಳಶಾಹಿ, ಅಧಿಕಾರಶಾಹಿ ಹಾಗೂ ತಿಕ್ಕಲು ರಾಜಕೀಯ ಅರೆದು ಕುಡಿಯುತ್ತಿದೆ. ಹೀಗೆ ಶೋಷಣೆಗೆ ಒಳಗಾಗಿರುವ ಬಹು ಸಂಖ್ಯಾತ ವರ್ಗದಲ್ಲಿ ಎಲ್ಲ ಜಾತಿಯ, ಎಲ್ಲ ಮತದ, ಎಲ್ಲ ಧರ್ಮದ ಜನರಿರುವಂತೆ ಶೋಷಣೆ ಮಾಡುತ್ತಿರುವ ಪುರೋಹಿತಶಾಹಿ, ಬಂಡವಾಳಶಾಹಿ, ಅಧಿಕಾರಶಾಹಿ ಹಾಗೂ ರಾಜಕಾರಣದಲ್ಲೂ ಇದ್ದಾರೆ. ಶೋಷಣೆ ಮಾಡುತ್ತಿರುವ ಅಲ್ಪಸಂಖ್ಯಾತರೊಂದಿಗೆ ಮೀಸಲಾತಿ ಪಡೆದುಕೊಂಡು ಆರ್ಥಿಕವಾಗಿ ಸಬಲರಾದವರು ತಾವು ಬೆಂದು ಬಂದ ನೆಲದ ಕಡೆ ಹಿಂದಿರುಗಿ ನೋಡದೆ ಎಲ್ಲ ಹಾರುವ ಗುಣವನ್ನೂ ಮೈಗೂಡಿಸಿಕೊಂಡು ನವಹಾರುವರಾಗಿ ಪುರೋಹಿತ ಶಾಹಿಯ ಪಡೆಗೆ ಸೇರ್ಪಡೆಯಾಗಿದ್ದಾರೆ.

ಸದ್ಯದ ಪರಿಸ್ಥಿತಿಯಲ್ಲಿ ಜಾತಿ ಮತ ಧರ್ಮಗಳೆನ್ನದೆ ಎಲ್ಲೆಡೆಯೂ ವ್ಯವಸ್ಥೆಯ ಪೀಡನೆಗೆ ಗುರಿಯಾಗಿರುವ ಬಹುಸಂಖ್ಯಾತ ವರ್ಗವನ್ನು ಅಲ್ಪ ಸಂಖ್ಯಾತರಾದ ಪುರೋಹಿತಶಾಹಿ, ಬಂಡವಾಳಶಾಹಿ, ಅಧಿಕಾರಶಾಹಿ ಹಾಗೂ ತಿಕ್ಕಲು ರಾಜಕೀಯ ಅರೆದು ಕುಡಿಯುತ್ತಿದೆ. ಹೀಗೆ ಶೋಷಣೆಗೆ ಒಳಗಾಗಿರುವ ಬಹು ಸಂಖ್ಯಾತ ವರ್ಗದಲ್ಲಿ ಎಲ್ಲ ಜಾತಿಯ, ಎಲ್ಲ ಮತದ, ಎಲ್ಲ ಧರ್ಮದ ಜನರಿರುವಂತೆ ಶೋಷಣೆ ಮಾಡುತ್ತಿರುವ ಪುರೋಹಿತಶಾಹಿ, ಬಂಡವಾಳಶಾಹಿ, ಅಧಿಕಾರಶಾಹಿ ಹಾಗೂ ರಾಜಕಾರಣದಲ್ಲೂ ಇದ್ದಾರೆ. ಶೋಷಣೆ ಮಾಡು ತ್ತಿರುವ ಅಲ್ಪಸಂಖ್ಯಾತರೊಂದಿಗೆ ಮೀಸಲಾತಿ ಪಡೆದು ಕೊಂಡು ಆರ್ಥಿಕವಾಗಿ ಸಬಲರಾದವರು ತಾವು ಬೆಂದು ಬಂದ ನೆಲದ ಕಡೆ ಹಿಂದಿರುಗಿ ನೋಡದೆ ಎಲ್ಲ ಹಾರುವ ಗುಣವನ್ನೂ ಮೈಗೂಡಿಸಿಕೊಂಡು ನವಹಾರುವರಾಗಿ ಪುರೋಹಿತ ಶಾಹಿಯ ಪಡೆಗೆ ಸೇರ್ಪಡೆಯಾಗಿದ್ದಾರೆ. ಈಗ ಅಗತ್ಯ ಆಗ ಬೇಕಾಗಿರುವುದು ಶೋಷಿಕ ಶೋಷಿತರಿರದ ಸಮಾಜತೆಯನ್ನು ಪ್ರೀತಿಸಿ ಅಪ್ಪಿ ಒಪ್ಪುವ ಮನುಷ್ಯ ಸಮಾಜ. ಇಂಥ ಆರ್ಥಿಕ, ಸಮಾಜಿಕ, ಧಾರ್ಮಿಕ ನ್ಯಾಯವನ್ನೂ ಒದಗಿಸಬಲ್ಲ ವಿಶಾಲ ವೇದಿಕೆ 'ಅಹಿಂದ' ಆಗ ಬಲ್ಲದೆ?

ಈಗ ಅಗತ್ಯ ಆಗ ಬೇಕಾಗಿರುವುದು ಶೋಷಿಕ ಶೋಷಿತರಿರದ ಸಮಾಜತೆಯನ್ನು ಪ್ರೀತಿಸಿ ಅಪ್ಪಿ ಒಪ್ಪುವ ಮನುಷ್ಯ ಸಮಾಜ. ಇಂಥ ಆರ್ಥಿಕ, ಸಮಾಜಿಕ, ಧಾರ್ಮಿಕ ನ್ಯಾಯವನ್ನೂ ಒದಗಿಸಬಲ್ಲ ವಿಶಾಲ ವೇದಿಕೆ 'ಅಹಿಂದ' ಆಗ ಬಲ್ಲದೆ?

ಈಗ 'ಅಹಿಂದ' ಹೆಸರಿನಲ್ಲಿ ಬಂಡೆದ್ದಿರುವ ರಾಜಕೀಯ ಸಂಘರ್ಷ ಯಾವ ನೆಲೆಯಲ್ಲಿ ನಿಲ್ಲಲು ಯತ್ನಿಸುತ್ತಿದೆ? ಮೇಲೆ ಹೇಳಿದ ಗಂಭೀರ ವಿಷಯವನ್ನು ತನ್ನ ಒಡಲಲ್ಲಿ ಹೊತ್ತು ವಿಶಾಲ ನೆಲೆಯಲ್ಲಿ ಅಜೆಂಡಾ ಆಗಿಸಿಕೊಂಡಿದೆಯೆ? ಜಾತಿ ಧರ್ಮಗಳೊಳಗೇ ಜನರು ಒಡೆದು ಛಿದ್ರವಾಗಿ ಹೋಗಿದ್ದಾರೆ. ಜಾತಿಯ ಒಳಗೆ ಉಪಜಾತಿಗಳಿರುವಂತೆ ಮೀಸಲಾತಿಯೊಳಗೆ ಒಳಮೀಸಲಾತಿಯ ಹೋರಾಟ ಪ್ರಾರಂಭವಾಗಿದೆ. ಇವನ್ನು ಮಾನವೀಯ ನೆಲೆಯಲ್ಲಿ ಒಂದಾಗಿ ಬೆಸೆಯ ಬಲ್ಲ ಯಾವ ದೃಷ್ಟಿಯನ್ನು ಅಹಿಂದ ಒಳಗೊಂಡಿದೆ. 'ಅಹಿಂದ' ಎನ್ನುವ ಹೆಸರೇ ಸೀಮಿತ ಒಲಯವನ್ನು ಪ್ರತಿನಿಧಿಸುತ್ತಿಲ್ಲವೆ? ಒಡಕನ್ನೆ ಉಸಿರಾಗಿಸಿಕೊಂಡಿರುವ ಅಲ್ಪಸಂಖ್ಯಾತರನ್ನ, ಹಿಂದುಳಿದಿರುವವರನ್ನ ದಲಿತರನ್ನ ಒಲಿದು ಒಂದಾಗುವಂತೆ ಮಾಡುವ ಅಯಸ್ಕಾಂತ ಶಕ್ತಿಯಾವುದು?

ರಾಜಕೀಯವಾಗಿ ಎಲ್ಲ ಪಕ್ಷಗಳೂ ಛಿದ್ರವಾಗಿವೆ. ಅವುಗಳ ಅಂತರಂಗದಲ್ಲಿ ಅಸಮಾಧಾನದ ಹೊಗೆಯಾಡುತ್ತಿದ್ದು ಯಾವ ಕ್ಷಣದಲಾದರೂ ಸಿಡಿದೇಳಲು ಸಿದ್ಧವಾಗಿವೆ. ಪ್ರತಿಯೊಂದು ಪಕ್ಷದ ನಾಯಕರೂ– ಇತ್ತೀಚೆಗೆ ಹುಟ್ಟಿಕೊಂಡಿರುವ ಪಕ್ಷಗಳೂ ಸೇರಿದಂತೆ – ಮುಖ್ಯಮಂತ್ರಿಯಾಗಬೇಕೆಂಬ ಏಕೈಕ ಉದ್ದೇಶದಿಂದ ಎಲ್ಲ ರೀತಿಯ ಸರ್ಕಸ್‌ಗಳನ್ನೂ ಮಾಡುತ್ತಿದ್ದಾರೆ. ಎಲ್ಲರ ಸ್ಲೋಗನ್ನೂ ಅಲ್ಪಸಂಖ್ಯಾತರನ್ನೂ, ಹಿಂದುಳಿದವರನ್ನು, ದಲಿತರನ್ನೂ ಉದ್ಧಾರ ಮಾಡುವುದೇ ಆಗಿದೆ. ಹಾಗಾಗಿ ಏಕಮನಸ್ಕ ಧ್ರುವೀಕರಣ ಸಾಧ್ಯವೆ? ಸಾಧ್ಯ ಎನ್ನುವುದಾದರೆ ಸರ್ವ ಸಮ್ಮತ ಮುಖ್ಯಮಂತ್ರಿಯಾರು? ಇಂಥ ಏಕೈಕ ಗುರಿಯಿಂದ ಹೊರಟ ಎಲ್ಲ ಚಳವಳಿಗಳೂ ಒಡೆದು ಹೋಗಿವೆ. ದಲಿತ ಸಂಘಟನೆಗಳಂತೂ ಎಣಿಕೆಗೂ ಸಿಗದಷ್ಟು ಛಿದ್ರವಾಗಿ ದಿಕ್ಪಾಪಾಲಾಗಿದೆ. ಹಾಗಾಗಿ ವಾಸ್ತವ ಕಟುಸತ್ಯ ಯಾವುದೆಂದರೆ ಅವಕಾಶವಾದಿ ಧ್ರುವೀಕರಣ, "ಅಹಿಂದ" ಅದಕ್ಕೆ ಕುದುರೆ ಅಷ್ಟೆ.

ಸದ್ಯದ ಪರಿಸ್ಥಿತಿ ಬಂಡಾಯದ ಅನಿವಾರ್ಯತೆಯನ್ನು ಒತ್ತಾಯಿಸುತ್ತದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ಅಂಥ ಬಂಡಾಯ ಎನ್ನುವುದು ಶತಶತಮಾನಗಳಿಂದ ಮನುಷ್ಯರನ್ನು ಮೃಗಗಳಿಗಿಂತ ಕೀಳಾಗಿ ಕಂಡ ದುಷ್ಟ ಮನಸ್ಸುಗಳ ವಿರುದ್ಧ ತಾತ್ವಿಕವಾಗಿ ಬಂಡೇಳುವ ಹೃದಯದ ಕೂಗಾಗಬೇಕು, ಕರುಳಿನ ಕರೆಯಾಗಬೇಕು. ತ್ಯಾಗದ ತೈಲ ಕ್ರಾಂತಿಯ ಪಂಜನ್ನು ಉಜ್ವಲವಾಗಿ ಉರಿಸಬೇಕು. ಬಂಡಾಯ ಎನ್ನುವುದು ಅಧಿಕಾರದ ಆತುರವಾಗಬಾರದು. ಮೊದಲಿಗೆ ಅದು ಆದಿಯಿಂದ ಅನ್ಯಾಯಕ್ಕೆ ಒಳಗಾಗಿರುವ ವರ್ಗವನ್ನ ಎಲ್ಲ ಬಂಧನಗಳಿಂದ ಬಿಡುಗಡೆಗೊಳಿಸುವ ಸಾಂಸ್ಕೃತಿಕ ಕೀಲಿ ಕೈಯಾಗಬೇಕು. ಅದು ರಕ್ತದಲ್ಲಿ ಸಂಚಲನಗೊಂಡಾಗ ಪಡೆದುಕೊಳ್ಳಬೇಕಾದ ರಾಜಕೀಯ ಶಕ್ತಿ ತಾನಾಗಿಯೆ ಹರಿದು ಬರುತ್ತದೆ. ಆದಕಾರಣವೆ ಸತ್ಯವನ್ನು ಅರಿತಿದ್ದ ಡಾ॥ ಅಂಬೇಡ್ಕರ್ ಶಿಕ್ಷಣ, ಸಂಘಟನೆ, ಹೋರಾಟ ಎಂಬ ಸೂತ್ರವನ್ನು ಕೊಟ್ಟರು. ತರಬೇತು ಶಿಬಿರಗಳ ಮೂಲಕ ಶಿಕ್ಷಣ ನೀಡಿ ಜಾಗೃತಿ ಮೂಡಿಸಿ ಸಂಘಟನೆ ಮಾಡಿ ಹೋರಾಟಕ್ಕೆ ಸಜ್ಜುಗೊಳಿಸುವ ಸಾಂಸ್ಕೃತಿಕ ಕ್ರಿಯೆ ಮೊದಲಾಗಬೇಕು.

ಬಿಡುಗಡೆಗಾಗಿ ಹಂಬಲಿಸಿ 'ಅಹಿಂದ' ಸಮಾವೇಶಕ್ಕೆ ಬರುತ್ತಿರುವ ಜನಸಮುದಾಯಕ್ಕೆ ಭರವಸೆಯ ಬೆಳಕು ಕಾಣುತ್ತಿಲ್ಲ. ಅವರ ಭಾಗವಹಿಸುವಿಕೆ ಕೇವಲ ಕುತೂಹಲದಲ್ಲಿ ಕರಗಿ ಹೋಗದಂತೆ ನೋಡಿಕೊಳ್ಳಬೇಕು. ಜನಸಾಮಾನ್ಯರು ಈಗ ಒಂದು ರೀತಿಯ ವಿಡಂಬನೆಗೆ ಒಳಗಾಗುತ್ತಿದ್ದಾರೆ. ಅವರ ಮನಸ್ಥಿತಿಯನ್ನು ಡಾ॥ ಅಲೆಕ್ಸಿಸ್ ಕೆರೆಲ್ "ಇಂದಿನ ಆರ್ಥಿಕ, ಸಾಮಾಜಿಕ ನಿಯಮ ನಿರ್ಬಂಧಗಳ ದೆಸೆಯಿಂದಲೂ ಮತ್ತು ದಿನ ದಿನಕ್ಕೂ ವಿಶೇಷತಃ ಹೆಚ್ಚುತ್ತಿರುವ ಅವರ ಮನೋದೌರ್ಬಲ್ಯದ ದೆಸೆಯಿಂದಲೂ ಎಲ್ಲ ರಾಷ್ಟ್ರಗಳಲ್ಲಿ ಸಾಮಾನ್ಯ ಮಾನವನಿಗೆ ತನ್ನ ಸನ್ನಿವೇಶದಲ್ಲಿ ಹೊಂದಿಕೊಳ್ಳಲಾರದಂತಹ ವಿಡಂಬನಾತ್ಮಕ ಪ್ರಸಂಗವೊದಗಿದೆ" ಎಂದು ಸರಿಯಾಗಿಯೆ ಗುರುತಿಸಿದ್ದಾರೆ. ಈಗ ನಮ್ಮ ಮುಂದಿರುವ ನಿಜವಾದ ಸವಾಲೆಂದರೆ ಜನಸಾಮಾನ್ಯರನ್ನೂ ಈ ವಿಡಂಬನೆಯಿಂದ ಮುಕ್ತ ಗೊಳಿಸುವುದು. ಅದನ್ನು 'ಅಹಿಂದ' ಮಾಡಬಲ್ಲುದೆ? □

ಪರ್ಯಾಯ ರಾಜಕಾರಣ

> ಅಹಿಂದ ವರ್ಗಗಳು ತಮ್ಮ ನಡುವಿನ ಜಾತಿಯ ಅಂತರಗಳನ್ನು, ತಾರತಮ್ಯಗಳನ್ನು ಇಲ್ಲವಾಗಿಸಿ ಕೊಳ್ಳುವುದರ ಜೊತೆಗೇ ಸಮಾಜದಲ್ಲಿನ ಬಗೆ ಬಗೆಯ ಅನ್ಯಾಯದ ಬೇರುಗಳನ್ನು ಹುಡುಕಿ ಅವುಗಳನ್ನು ನಿರ್ಮೂಲನಗೊಳಿಸುವಂಥ ತೀವ್ರ ಥರವಾದ ಬದ್ಧತೆಯನ್ನು, ಹಠವನ್ನು ಹೊಂದಬೇಕಿದೆ. ಮುಖ್ಯವಾಗಿ ಇವು ತಮ್ಮದೇ ವರ್ಗದ ಭ್ರಷ್ಟ ರಾಜಕಾರಿಣಿ, ಅಧಿಕಾರಿಗಳ ವಿರುದ್ಧ ಹೋರಾಡುವ ಮೂಲಕ ತಮ್ಮ ಬದ್ಧತೆಗಳನ್ನು ತೋರಬೇಕಿದೆ. ನೈತಿಕತೆ ಎಂಬುದು ತೀವ್ರವಾಗಿ ಕುಸಿಯುತ್ತಿರುವ ಇಂದಿನ ದಿನಗಳಲ್ಲಿ ಇಂಥ ಬದ್ಧತೆಗಳಿಂದ ಮಾತ್ರವಷ್ಟೇ ನಮ್ಮ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಇನ್ನೂ ಮುಂತಾದ ರಂಗಗಳಲ್ಲಿ ಮಾನವೀಯತೆಯನ್ನು ಕಾಣಲು ಸಾಧ್ಯ.

ಅಹಿಂದ ಚರ್ಚೆ ಮತ್ತು ಕರ್ನಾಟಕದ ರಾಜಕಾರಣ

○ಸಿ. ಹರೀಶ್ ಕುಮಾರ್,
ಗಂಗನ ಬೀಡು

ಮತಾಂಧತೆ, ಕೋಮುದ್ವೇಷಗಳು ದೇಶವನ್ನು ಇನ್ನಿಲ್ಲದಂತಹ ವಿಕಾರ ತುಂಬದ ಅವನತಿಗೆ ತಳ್ಳುತ್ತಿದ್ದ ಭಯಂಕರ ಸ್ಥಿತಿಯಲ್ಲಿ ಅದಕ್ಕೆ ಪ್ರತಿರೋಧವೊಡ್ಡಲು ದ.ಸಂ.ಸ. ರೈತ ಸಂಘಟನೆಗಳೂ ಹಾಗೂ ಇತರೆ ಸಮಾನ ಮನಸ್ಕ ಜಾತ್ಯತೀತ ಪ್ರಗತಿಪರ ಸಂಘಟನೆಗಳು ಒಟ್ಟಾಗಿ ಸೇರಿ ಕೋಮುದ್ವೇಷದ ವಿರುದ್ಧ ನಿರಂತರವಾಗಿ ದಿಟ್ಟ ಪ್ರತಿಭಟನೆಗಳನ್ನು ಮಾಡಿದ್ದವು. ಇದರಿಂದ ಕೋಮುವಾದಕ್ಕೆ ಕೊಂಚ ಹಿನ್ನಡೆಯದರೂ ಅದು ಬಹುಸಂಖ್ಯಾತರಾಗಿರುವ ಹಿಂದುಳಿದ ವರ್ಗಗಳನ್ನು ಹಿಂದು ಒಂದು ಎಂಬ ತನ್ನ ನಯವಂಚನೆಯ ಘೋಷಣೆಯಡಿಯಲ್ಲಿ ತನ್ನಲ್ಲೆ ಬಂಧಿಸಿಟ್ಟುಕೊಂಡಿತ್ತು. ಕನಕಗೋಪುರ ಧ್ವಂಸದ ನಂತರ ವಿಶ್ವನಾಥ್ ಹಾಗೂ ಸಿದ್ಧರಾಮಯ್ಯನವರ ಪರಿಶ್ರಮದಿಂದಾಗಿ ಬಹುತೇಕ ಹಿಂದುಳಿದ ವರ್ಗಗಳು ಕೋಮುವಾದಿ ಮುಷ್ಠಿಗಳಿಂದ ಬಿಡಿಸಿಕೊಂಡಿದ್ದಲ್ಲದೆ ಹೊಸ ರಾಜಕೀಯ ಪ್ರಜ್ಞೆಯನ್ನು ಪಡೆಯುವ ದಿಕ್ಕಿನಲ್ಲಿ ಯೋಚಿಸಲಾರಂಭಿಸಿ ಅಹಿಂದದಂತಹ ಸಂಘಟನೆಗೆ ಹೊಸ ಚೈತನ್ಯ ಹಾಗೂ ಚಾಲನೆಯನ್ನು ನೀಡಲಾರಂಭಿಸಿವೆ.

ಇದುವರವಿಗೂ ಯಾವುದೇ ಪಕ್ಷ ಸಮಗ್ರ ಸಮಾನತೆಯನ್ನು ಒಂದು ಆದರ್ಶವನ್ನಾಗಿ ಪಾಲಿಸಲೇ ಇಲ್ಲ. ಇವು ಜಾತ್ಯತೀತೆಯ ಬಗ್ಗೆ ಮಾತನಾಡುತ್ತಲೇ ಸ್ವಜನ ಪಕ್ಷಪಾತವನ್ನು ಸಾಮಾಜಿಕ ನ್ಯಾಯದ ಬಗ್ಗೆ ಹೇಳುತ್ತಲೇ ಅಧಿಕಾರ ಹಾಗೂ ಸಂಪತ್ತಿನ ಕೇಂದ್ರೀಕರಣವನ್ನು ಇಲ್ಲಿಯವರೆವಿಗೂ ನಡೆಸಿಕೊಂಡು ಬಂದಿವೆ. ಶೋಷಿತ ವರ್ಗಗಳು ಗೌರವದಿಂದ ಬದುಕುವ ಹಕ್ಕನ್ನು ಈ ಪಕ್ಷಗಳು ನಿರಂತರವಾಗಿ ಕಿತ್ತುಕೊಳ್ಳುತ್ತಲೇ ಬಂದಿದ್ದು ಶೋಷಿತವರ್ಗಗಳು ತಮ್ಮಲ್ಲಿನ ಜಾತಿ ವೈಷಮ್ಯ ಹಾಗೂ ಪ್ರತ್ಯೇಕ ವಾದಗಳನ್ನು ಮರೆತು ಒಗ್ಗಟ್ಟಾಗಿ ಒಂದೇ ವೇದಿಕೆಯಡಿ ಬಾರದೇ ಇದ್ದುದೇ ಇದಕ್ಕೆ ಕಾರಣವಾಗಿತ್ತು. ಅಹಿಂದದಿಂದ ಈ ಸಮಸ್ಯೆ ಕೊಂಚ ಮಟ್ಟಿಗಾದರೂ ನೀಗಿ ಶೋಷಿತ ವರ್ಗ ಸಾಮಾಜಿಕ ನ್ಯಾಯಕ್ಕಾಗಿ ಒಟ್ಟಾಗಿ ಹೋರಾಟಕ್ಕೆ ಮುಂದಾಗಿರುವುದು ಕರ್ನಾಟಕ ರಾಜಕಾರಣದ ಸಂದರ್ಭದಲ್ಲಿ ಐತಿಹಾಸಿಕ ಘಟನೆಯಾಗಿದೆ. ರಾಜಕಾರಿಣಿಗಳ ಭಾಷಣದಲ್ಲಿ ಬಂಧಿತವಾಗಿರುವ ಸಾಮಾಜಿಕ ನ್ಯಾಯವನ್ನು ಬಿಡಿಸಿತಂದು ಈ ನೆಲದಲ್ಲಿ ಅದನ್ನು ವಾಸ್ತವವನ್ನಾಗಿಸಬೇಕಾಗಿರುವುದು ಅಹಿಂದದ ಮೇಲಿರುವ ಇಂದಿನ ಜವಾಬ್ದಾರಿಯಾಗಬೇಕಿದೆ.

ಪ್ರಗತಿಪರ ಸಮಾಜ ನಿರ್ಮಾಣದ ಆಶಯವನ್ನು ಹೊತ್ತು ವಿವಿಧ ಶೋಷಿತ ಜನ ಸಮುದಾಯವನ್ನು ಸಂಘಟಿಸುತ್ತಿರುವ ಅಹಿಂದದ ನಾಯಕರು ಸಮಾಜದಲ್ಲಿ ಅಮೂಲಾಗ್ರ ಬದಲಾವಣೆ ತರಲು ಅತ್ಯವಶ್ಯಕವಾದ ರಾಜಕೀಯ ನಿಲುವನ್ನು ಹೊಂದಲೇಬೇಕಿದೆ. ಅಹಿಂದದ ಇಂದಿನ ಬಂಡಾಯ ಮನೋಧರ್ಮ ಪರ್ಯಾಯವಾದ ಒಂದು ರಾಜಕೀಯ ಶಕ್ತಿಗೆ ಪ್ರೇರಣೆಯಾಗುವ ಮೂಲಕ ಕರ್ನಾಟಕದಲ್ಲಿ ಪರ್ಯಾಯ ರಾಜಕಾರಣವನ್ನು ಹುಟ್ಟು ಹಾಕಬಹುದಾಗಿದೆ. ಅಹಿಂದದ ಸಾಮಾಜಿಕ ನ್ಯಾಯದ ಸಫಲತೆ ಇರುವುದೇ ಅದು ಮತಬ್ಯಾಂಕ್ ಆಗಿ ರಾಜ್ಯಧಿಕಾರವನ್ನು ಗಳಿಸುವುದರಲ್ಲಿ, ಈ ರಾಜ್ಯದ ಎರಡು ಪ್ರಮುಖ ಜಾತಿಗಳು ಬಿ.ಜೆ.ಪಿ ಮತ್ತು ಜನತಾದಳಕ್ಕೆ ಮತಬ್ಯಾಂಕ್‌ಗಳಾಗಿ ತಮ್ಮ ತಮ್ಮ ಸಮುದಾಯಗಳ ಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳುತ್ತಿರುವುದನ್ನು ಅಹಿಂದದ ನಾಯಕರು ಗಮನಿಸಬೇಕಿದೆ. ಇದು ಸಾಧ್ಯವಾಗದೇ ಹೋದರೆ ಈ ವರ್ಗಗಳು ಹಲವು ಹತ್ತು ಪಕ್ಷಗಳಲ್ಲಿ ಹಂಚಿಹೋಗಿ ಭವಿಷ್ಯದಲ್ಲಿ ಸಾಮಾಜಿಕ ನ್ಯಾಯದ ಬಗ್ಗೆ ದನಿ ಎತ್ತುವ ಶಕ್ತಿಯನ್ನು ಕಳೆದುಕೊಳ್ಳುವುದಲ್ಲದೆ ಬಲಿಷ್ಠ ಜಾತಿಗಳು ದಯಪಾಲಿಸುವ ಅಧಿಕಾರವನ್ನು ಪಡೆಯಲು ಪರಸ್ಪರ ಗುಂಪು ಕಟ್ಟಿಕೊಂಡು ತಮ್ಮ ತಮ್ಮಲ್ಲೇ ಬಡಿದಾಡಿಕೊಳ್ಳುತ್ತಾ ನಾಶವಾಗಿ ಹೋಗುತ್ತವೆ. ಸದಾ ಶೋಷಿತ ಸಮುದಾಯಗಳಿಗೆ ಅಧಿಕಾರ ತಪ್ಪಿಸುವ ಅವರ ಒಗ್ಗಟ್ಟನ್ನು ನಾಶ ಮಾಡಲು ಹವಣಿಸುವ ಬಲಿಷ್ಠ ವರ್ಗಗಳಿಗೆ ಇದರಿಂದಾಗಿ ತಮ್ಮ ಶೋಷಣೆಯ ಹಾಗೂ ಸ್ವಜನ ಪಕ್ಷಪಾತದ ರಾಜಕಾರಣವನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗಲು ಅನುಕೂಲವಾಗುತ್ತದೆ.

ಅಹಿಂದ ವರ್ಗಗಳು ತಮ್ಮ ನಡುವಿನ ಜಾತಿಯ ಅಂತರಗಳನ್ನು, ತಾರತಮ್ಯಗಳನ್ನು ಇಲ್ಲವಾಗಿಸಿ ಕೊಳ್ಳುವುದರ ಜೊತೆಗೇ ಸಮಾಜದಲ್ಲಿನ ಬಗೆ ಬಗೆಯ ಅನ್ಯಾಯದ ಬೇರುಗಳನ್ನು ಹುಡುಕಿ ಅವುಗಳನ್ನು ನಿರ್ಮೂಲನಗೊಳಿಸುವಂಥ ತೀವ್ರ ಥರವಾದ ಬದ್ಧತೆಯನ್ನು, ಹಠವನ್ನು ಹೊಂದಬೇಕಿದೆ. ಮುಖ್ಯವಾಗಿ ಇವು ತಮ್ಮದೇ ವರ್ಗದ ಭ್ರಷ್ಟರಾಜಕಾರಿಣಿ, ಅಧಿಕಾರಿಗಳ ವಿರುದ್ಧ ಹೋರಾಡುವ ಮೂಲಕ ತಮ್ಮ ಬದ್ಧತೆಗಳನ್ನು ತೋರಬೇಕಿದೆ. ನೈತಿಕತೆ ಎಂಬುದು ತೀವ್ರವಾಗಿ ಕುಸಿಯುತ್ತಿರುವ ಇಂದಿನ ದಿನಗಳಲ್ಲಿ ಇಂಥ ಬದ್ಧತೆಗಳಿಂದ ಮಾತ್ರವಷ್ಟೇ ನಮ್ಮ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಇನ್ನೂ ಮುಂತಾದ ರಂಗಗಳಲ್ಲಿ ಮಾನವೀಯತೆಯನ್ನು ಕಾಣಲು ಸಾಧ್ಯ.

ಅಹಿಂದವು ಬಲಿಷ್ಠವಾಗಬೇಕಾದರೆ ಅದು ರೈತ, ದಲಿತ ಸಂಘಟನೆಗಳಂತೆ ಪ್ರತಿಯೊಂದು ಗ್ರಾಮದಲ್ಲೂ ತನ್ನ ಶಾಖೆಗಳನ್ನು ತೆರೆಯಲು ಮುಂದಾಗಬೇಕಿದೆ. ಗ್ರಾಮ ಹಾಗೂ ಹೋಬಳಿ ಮಟ್ಟದಲ್ಲಿ ತನ್ನ ಕಾರ್ಯಕರ್ತರಿಗೆ ಭ್ರಷ್ಟಾಚಾರ ಜಾತೀಯತೆ, ಧಾರ್ಮಿಕ ಕೋಮುವಾದ ಮತ್ತು ಜಾಗತೀಕರಣದ ವಿರುದ್ಧವಾದ ಚರ್ಚೆ, ವಿಚಾರ ಗೋಷ್ಠಿ ಮುಂತಾದ ಕಾರ್ಯಗಾರಗಳನ್ನು ಏರ್ಪಡಿಸಿ ಅವರನ್ನು ಬೌದ್ಧಿಕವಾಗಿ ಸಶಕ್ತರನ್ನಾಗಿಸ ಬೇಕಿದೆ.

ಸದಾ ಜಾತಿ ನಿಷ್ಠವಾಗೇ ಬದುಕುತ್ತಾ ಜಾತಿ ಶ್ರೇಷ್ಠತೆಯ ಪೈಪೋಟಿಯಲ್ಲಿ ಮಠಗಳನ್ನು, ಸ್ವಾಮೀಜಿಗಳನ್ನು ಹುಟ್ಟುಹಾಕುತ್ತಾ ಆ ಮೂಲಕವೇ ತಮ್ಮ ಮುಂದುವರೆದ ಐಡೆಂಟಿಟಿಯನ್ನು ತೋರಿಸುತ್ತಿರುವ ಶೂದ್ರ ವರ್ಗಗಳು ಸರ್ವರ ಸುಖವನ್ನು ಬಯಸಿದ ಅಂಬೇಡ್ಕರ್, ಪೆರಿಯಾರ್ ಹಾಗೂ ಲೋಹಿಯಾರನ್ನು ಅರಿತುಕೊಳ್ಳಲು ಇದು ಸಕಾಲ. ಪ್ರಸ್ತುತ ಅಹಿಂದ ನಾಯಕರು ಈ ಮಹಾನ್ ಮಾನವೀಯ ಚೇತನಗಳನ್ನು ಶೂದ್ರ ವರ್ಗಗಳಿಗೆ ಪರಿಚಯಿಸುವ ಕೆಲಸದಲ್ಲಿ ಪ್ರಾಮಾಣಿಕವಾಗಿ ಶ್ರಮಿಸಬೇಕಿದೆ.

ಇಂದು ಅಹಿಂದರಿಂದ ಇಷ್ಟು ದೊಡ್ಡ ಮಟ್ಟದ ಸಮಾವೇಶಗಳು ನೆಡೆಯುತ್ತಿದ್ದರೂ ದಲಿತರ ಮೇಲಿನ ದೌರ್ಜನ್ಯಗಳು ಈ ಕ್ಷಣದಲ್ಲೂ ಕೂಡ ನಿಂತಿಲ್ಲ. ಈ ಸಮಾವೇಶಗಳಿಂದ ಹಿಂದುಳಿದ ವರ್ಗಗಳಲ್ಲಿ ದಲಿತರ ಬಗೆಗೆ ತಣ್ಣನೆ ಚಿಂತನೆಯ ಪ್ರಕ್ರಿಯೆ ಶುರುವಾಗಿದೆ ಎಂದುಕೊಂಡವರಿಗೆ ಹಿಂದುಳಿದ ವರ್ಗಗಳ ನಡುವಳಿಕೆಗಳು ಭ್ರಮನಿರಸನವನ್ನುಂಟು ಮಾಡುತ್ತಿವೆ. ಸಿದ್ಧರಾಮಯ್ಯನವರ ಪರವಾಗಿ ಈ ವರ್ಗಗಳು ಅಲ್ಪಸಂಖ್ಯಾತ, ದಲಿತ ಸಮುದಾಯಗಳ ಬೆಂಬಲ ಪಡೆದು ಪ್ರತಿಭಟನೆ, ಮೆರವಣಿಗೆಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿವೆ, ಆದರೆ ದಲಿತರ ಮೇಲಿನ ದೌರ್ಜನ್ಯಗಳ ವಿರುದ್ಧ ಹಿಂದುಳಿದ ಸಮುದಾಯಗಳಿಂದ ಒಂದೇ ಒಂದು ಪ್ರತಿಭಟನೆ ಬಂದಿಲ್ಲ. ಸ್ವತಃ ಅಹಿಂದ ಕಣ್ಮಣಿಯಾಗಿರುವ ಸಿದ್ಧರಾಮಯ್ಯನವರಿಂದಲೂ ಕೂಡ ಇದರ ವಿರುದ್ಧ ಒಂದು ಹೇಳಿಕೆ ಹೊರ ಬಂದಿಲ್ಲ. ದಲಿತರಿಗೆ ಗ್ರಾಮ ಗ್ರಾಮಗಳೇ ಬಹಿಷ್ಕರಿಸುವ ದಬ್ಬಾಳಿಕೆ, ಖಾನವಳಿ, ಚಹಾಖಾನೆಗಳಲ್ಲಿ ಅನ್ನ ಕೇಳಿದರೆ ಅವರನ್ನು ದಂಡಿಸುವುದು ಅವರ ಆಸ್ತಿ ಪಾಸ್ತಿಗಳನ್ನು ನಷ್ಟ ಮಾಡುವುದು ಇತ್ಯಾದಿಗಳ ವಿರುದ್ಧ ಹೋರಾಟ ಹಮ್ಮಿಕೊಳ್ಳುವಲ್ಲಿ ಅಹಿಂದ ಮುಂಚೂಣಿಯಲ್ಲಿರ ಬೇಕಿದೆ. ಇಲ್ಲದೆ ಹೋದರೆ ಅಹಿಂದ ಎನ್ನುವುದಕ್ಕೆ ಅರ್ಥವೂ, ಭವಿಷ್ಯವೂ ಇಲ್ಲದಂತಾಗುತ್ತದೆ. □

ಡೀಸೆಲ್ ಫ್ಯಾಕ್ಟರಿಯ ಹಿಂಬೆಳಕಿನಲಿ



ಅಲ್ಲಿ–ಗಾಲಿಗಳಿಲ್ಲದ, ಮುರಿದ ನೂರಾರು ಟ್ರಾಲಿಗಳು ಯುದ್ಧದಲ್ಲಿ
ಮಡಿದ ವೀರಯೋಧರ ಹೆಣಗಳ ರಾಶಿಯಂತೆ ಒಂದರ
ಮೇಲೊಂದು ಬಿದ್ದಿವೆ. ಲಾನ್‌ಮೂವರ್ ಹಿಡಿದು ಹುಲ್ಲು ಕತ್ತ–
ರಿಸುವ ಕೂಲಿಹೆಣ್ಣುಗಳು ಮಧ್ಯಾಹ್ನದ ಹಿಮದ ಮಳೆಯಲ್ಲೂ
ಸಂಜೆಯ ರೊಟ್ಟಿ ಕುರಿತಾಗಿಯೇ ದುಡಿಯುತ್ತಾರೆ; ರಾತ್ರೆಯ
ಸಂಭೋಗಕ್ಕಾಗಿಯೇ ತುಕ್ಕಿಡಿಯದ ಉಕ್ಕಿನಿಂದ ಗಡಸಾಗುತ್ತಾರೆ.
ಡೀಸೆಲ್‌ನಿಂದ ತೋಯ್ದು ತೊಪ್ಪೆಯಾದ ಕಾರ್ಮಿಕನೊಬ್ಬನ ಬಟ್ಟೆ–
ಗಳ ಮೇಲೆ ತೇಲಾಡುವ ಬಣ್ಣದ ಚಿಟ್ಟೆಗಳನ್ನು ಹೆಣ್ಣೊಬ್ಬಳು
ಯಾಕೋ ದಿನವೂ ಹಿಡಿದು ಕೊಲ್ಲುತ್ತಿರುತ್ತಾಳೆ. ಸಂಜೆಯ
ಸೈರನ್ ಪಕ್ಕದ ಗ್ರಾಮದ ಎಲ್ಲ ವರಸೆಗಳನ್ನು ಎಂದಿನಂತೆ
ಆರಂಭಿಸಿ ಬೆಚ್ಚಗುಳಿದುಬಿಡುತ್ತದೆ. ಅಷ್ಟೊತ್ತಿಗಾಗಲೇ
ಅಲ್ಲಿ ನೂಕು ನುಗ್ಗಲು–ಬದುಕ ಬಯಸಿದವರಲಿ. ಕನಸುಗಳು
ಒಲೆಯೊಳಗಿನ ಕೆಂಡಗಳಂತೆ ರಂಜಿಸತೊಡಗುತ್ತವೆ! ನೀರು
ಬಿದ್ದೊಡನೆ ಆರಿಹೋಗಿ, ಇದ್ದಿಲುಗಳಾಗಿ ಮಾರಾಟಕ್ಕಿಳಿಯುತ್ತವೆ.

○ಮಂಜುನಾಥ ವಿ.ಎಂ

ರಾಜಕೀಯ ಪಕ್ಷವಾಗಲಿ

(೨೭ನೇ ಪುಟದಿಂದ)

...ಗಿರುವ ಸಂಸ್ಥೆಗಳಿಗೆ ಮಾತ್ರ ರಾಜಕೀಯದಲ್ಲಿ ಪ್ರವೇಶ ...ಗಬೇಕು ಜಾತಿ, ಧರ್ಮಗಳ ದುರ್ಬಳಕೆ ತಡೆಗಟ್ಟಬೇಕು ...ಷ್ಟ ರಾಜಕಾರಣ ನಡೆಯಬೇಕು. ಭ್ರಷ್ಟಚಾರ, ಸ್ವಜನ ಪಕ್ಷಪಾತಗಳ ವಿರುದ್ಧ ಸಿಡಿದೇಳಬೇಕು

ಮಂತ್ರಿಗಳ ಶಾಸಕರ ವೈಭವೀಕರಣ, ದುಂದುವೆಚ್ಚ, ...ಡ್ಡ ಬಂಗಲೆ, ಬೆಲೆಬಾಳುವ ಕಾರು, ಅತಿ ಬೆಲೆಯ ...ರೋಪಕರಣಗಳು, ಇವುಗಳನ್ನೂ ಸರ್ಕಾರ ನಿಷೇಧಿ...ಬೇಕು, ನಿಷೇಧಿಸುವಂತೆ ಒತ್ತಾಯ ತರಬೇಕು. ...ನಾವಣೆ ನಿಯಮಗಳನ್ನೂ ಆಮೂಲಾಗ್ರವಾಗಿ ತಿದ್ದಿ...ರೆಯಬೇಕು. ಚುನಾವಣೆಯ ವೆಚ್ಚ ಸರ್ಕಾರ ಭರಿಸ...ಬೇಕು. ಅಧಿಕಾರ ವಿಕೇಂದ್ರೀಕರಣ ಆರ್ಥಿಕವಾಗಿ ಸ್ವದೇಶಿ ...ವಂಭನೆಯ ಗ್ರಾಮರಚನೆ ಆಗಬೇಕು ಗ್ರಾಮಸ್ವರಾಜ್ಯ ...ಪನೆ ಆಗಬೇಕು. ಸಂಪನ್ಮೂಲಗಳ ದುರ್ಬಳಕೆ ಹಾಗೂ ...ೋಚುವುದನ್ನೂ ತಡೆಗಟ್ಟಬೇಕು. ಬೃಹತ್‌ಯಂತ್ರಗಳು ...ಮೋದ್ಯೋಗಕ್ಕೆ ಸವಾಲಾಗದಂತೆ ನಿಯಂತ್ರಣ ...ಡಬೇಕು.

ಮನೆಹಾಳು ಪೈಪೋಟಿಗೆ ಎಡೆಕೊಡದ ...ಂತ್ರೋದ್ಯಮ ಮಾತ್ರ ಬೆಳೆಸಬೇಕು. ಶ್ರಮಕ್ಕೆ ಸಮಾಜದಲ್ಲಿ ಗೌರವಸ್ಥಾನ ಸಿಗಬೇಕು. ಶ್ರಮನಿಷ್ಠೆ ಸಮಾಜದಲ್ಲಿ ಬೆಳೆಯಲು ಶಿಕ್ಷಣ ನೀಡಬೇಕು. ಜಾಗತೀಕರಣ ಗಾಂಧಿ ತತ್ವಗಳ ಆಧಾರದಮೇಲೆ ರೂಪುಗೊಳ್ಳಬೇಕು. Appropriate Technology ಗೆ ಒತ್ತು ಕೊಡಬೇಕು.

ಹಣ ಕೆಲವರ ಕೈಯಲ್ಲೇ ಸಂಗ್ರಹವಾಗದಂತೆ ಕ್ರಮ ಕೈಗೊಳ್ಳಬೇಕು. ಆರ್ಥಿಕ ವಿಷಮತೆ ಬೆಳೆಸುವ ಪಟ್ಟಭದ್ರರಿಗೆ ಶಿಕ್ಷಣ, ಶಿಕ್ಷೆ ಎರಡೂ ಆಗಬೇಕು. ಬಹುರಾಷ್ಟ್ರೀಯರನ್ನೂ ನಮ್ಮಲ್ಲಿಲ್ಲದ ಉದ್ಯಮ ಆರಂಭಿಸಲು ಮಾತ್ರ ಕರೆಸಬೇಕು. ಒಂದುಕಾಲಾವಧಿಯೊಳಗೆ ನಮಗೆ know how ಕೊಟ್ಟು ಅವರು ವಾಪಸಾಗಬೇಕು. ಇದಕ್ಕೆ ಶಾಸನ ಆಗಬೇಕು.

ಪಾನೀಯಗಳು, ಸೋಪು, ಸೌಂದರ್ಯ ಸಾಮಗ್ರಿಗಳು, ಮುಂತಾದ ದಿನನಿತ್ಯದ ಅಗತ್ಯತೆಗಳನ್ನೂ ಪೂರೈಸುವ ಉದ್ಯಮಗಳು ಭಾರತಕ್ಕೆ ಬರದಂತೆ ತಡೆಗಟ್ಟಬೇಕು. ಬಂದಿರುವ ಉದ್ಯಮಗಳನ್ನು ಹೊರಗಟ್ಟಬೇಕು. Survival of the fittest ನೀತಿಯನ್ನೂ ನಾವು ಅನುಸರಿಸುವುದಾದರೆ, Jungle Law ಗೆ ಸ್ವಾಗತ ಮಾಡಿದಂತೆ.

ಲಾಭಗಳಿಸುತ್ತಿರುವ ಸರ್ಕಾರಿ, ಅರೆಸರ್ಕಾರಿ ಉದ್ಯಮಗಳನ್ನೂ ಮುಚ್ಚಿಹಾಕುವ ಹುಚ್ಚುಹವ್ಯಾಸಕ್ಕೆ ಕಡಿವಾಣ ಹಾಕಬೇಕು. ಶ್ರಮಶಕ್ತಿ, ಬುದ್ಧಿಶಕ್ತಿ, ಹಣದಶಕ್ತಿಗೆ ಸಮಾನಸ್ಥಾನ ಸಮಾನಮರ್ಯಾದೆ ದೊರಕಿಸಬೇಕು.

ಗ್ರಾಮಯೋಜನೆಯ ಜೊತೆ ಜೊತೆಗೇ ಪ್ರತಿ ಕುಟುಂಬಕ್ಕೆ ಒಂದುಯೋಜನೆ ರೂಪಿಸಬೇಕು. ಯುದ್ಧ ಸಾಮಗ್ರಿಗಳ ಮಾರಾಟ ಕೈ ಬಿಡಬೇಕು. ವಿಶ್ವಶಾಂತಿಗೆ ಭಾರತ ನಾಯಕತ್ವವಹಿಸಬೇಕು. ಆರ್ಥಿಕ, ರಾಜಕೀಯ ವಿಕೇಂದ್ರೀರಣ ಆಗಬೇಕು. ಹಳ್ಳಿಗಳು ಬಿಟ್ಟು ಕೊಟ್ಟ Residency Power ಅನ್ನೂ ಮಾತ್ರ ರಾಜ್ಯ ಮತ್ತು ರಾಷ್ಟ್ರ ಸರ್ಕಾರಗಳು ನಿರ್ವಹಿಸಬೇಕು.

ಈಗ ನಡೆಯುತ್ತಿರುವುದು ಪ್ರಜಾಪ್ರಭುತ್ವ ಅಲ್ಲ ಪ್ರಜಾಪ್ರತಿನಿಧಿ ಪ್ರಭುತ್ವ ಪಾಂಚ್‌ಸಾಲ್ ಗುತ್ತಿಗೆ ರಾಜ್ಯ ನಮ್ಮದು. ಕುಂಭಕರ್ಣ ಪ್ರಜಾಪ್ರಭುತ್ವ ಓಟುಹಾಕಿ ಮಲಗುವುದು ನಮ್ಮ ಮತದಾರನ ಕೆಲಸ. ಪ್ರಜೆ ಜಾಗೃತನಾಗಿರಬೇಕು. ಅನ್ಯಾಯ, ಆದಾಗ ಸರ್ಕಾರವನ್ನೂ ವಿರೋಧಿಸಬೇಕು. ಈ ಮನೋಭಾವವನ್ನೂ ಬೆಳೆಸಲು ಕಾರ್ಯಕ್ರಮ ಹಾಕಿಕೊಳ್ಳಬೇಕು. □

ಕಾಲ

ಕಥೆ

○ ನಾ. ಡಿಸೋಜ



ಮಗ ಕಚೇರಿಯಿಂದ ಬರುವುದಕ್ಕೂ ಮೊದಲೇ ಪೀವನ್ ಇದ್ರೂಸ ಒಂದು ಪ್ಯಾಕೆಟನ್ನು ಹಿಡಿದುಕೊಂಡು ಬಂದ. ""ಬಾರೋ! ಇದ್ರೂಸ... ಏನದು?"

ಎಂದು ಮೈಲಮ್ಮ ಅವನನ್ನು ಮನೆ ಬಾಗಿಲಲ್ಲಿಯೇ ಸ್ವಾಗತಿಸಿದಳು.

"ಫೋಟೋ! ಅಮ್ಮ... ಸಾಹೇಬ್ರಿಗೆ ಪ್ರಮೋಷನ್ ಸಿಗ್ತಲ್ಲ... ಅವಾಗ ತೆಗೆಸಿದ್ದು..."

ಇದ್ರೂಸ ಪ್ಯಾಕೆಟ್ ತೆರೆದು ಲ್ಯಾಮಿನೇಷನ್ ಮಾಡಿದ ಫೋಟೋವನ್ನು ಮೈಲಮ್ಮನ ಕೈಗಿತ್ತ.

'ಸಾಹೇಬ್ರು ನೋಡಿ ಅಮ್ಮ ಎಷ್ಟೊಂದು ದಿಲ್‌ದಾರ್ ಆಗಿ ಕುಂತವ್ರೆ... ಈ ಅಯ್ಯಂಗಾರಿ, ಆಚಾರಿ, ಪರಶಿವಣ್ಣ, ಫರ್ನಾಂಡಿಸ್ಸು ಎಲ್ಲ ಹೆಂಗೆ ಮುದುಡಿ ಕೊಂಡು ಕುಂತವ್ರೆ ನೋಡಿ.. ಎ.ಸಿ. ಸಾಹೇಬ್ರು ಅಂದ್ರೆ ಸುಮ್ನೆ ಅಗತ್ತೈತ...'

ಎಂದು ಇದ್ರೂಸ ತನ್ನದೇ ಧಾಟಿಯಲ್ಲಿ ಆ ಫೋಟೋಗೆ ವ್ಯಾಖ್ಯಾನ ಕೂಡ ನೀಡಲಾರಂಭಿಸಿದ. ತನ್ನ ಸಾಹೇಬರ ಬಗ್ಗೆ ಅವನಿಗೆ ಅಭಿಮಾನ ಗೌರವ. ತನ್ನ ಸಾಹೇಬರು ಎಸ್.ಸಿ. ಎಂಬ ಕಾರಣಕ್ಕೆ ಕಚೇರಿಯ ಕೆಲವರು ಅವರನ್ನು ತಿರಸ್ಕಾರದಿಂದ ಕಾಣುವುದು, ಹಿಂದೆ ಹೀನಾಯವಾಗಿ ಮಾತನಾಡುವುದು ಎಂದರೆ ಸಿಟ್ಟು. ಈ ವಿಷಯನ್ನು ಮನಸ್ಸಿನಲ್ಲಿ ಇರಿಸಿಕೊಂಡೇ ಅವನ ವ್ಯಾಖ್ಯಾನ ಮುಂದುವರಿಯಿತು.

"ಅಮ್ಮ ಸಾಹೇಬ್ರು ತುಂಬಾ ಬುದ್ಧಿವಂತರು... ಸ್ಟ್ರಿಕ್ಟು... ನಮ್ಮ ಜಿಲ್ಲೇನಲ್ಲೇ ಅಂತಹ ಆಫೀಸರ್ ಇಲ್ಲ... ಬಡವರಿಗಂತೂ ತುಂಬಾ ಸಹಾಯ ಮಾಡುತ್ತಾರೆ... ಅಸಿಸ್ಟೆಂಟ್ ಆಗಿ ಕೆಲಸ ಮಾಡತಿದ್ದೋರಿಗೆ ಅದೇ ಆಫೀಸಿನಲ್ಲಿ ಬಡ್ತಿ ಸಿಕ್ಕಿದ್ದು ಬೇರೆಯವರಿಗೆ ಸರಿ ಅನ್ಸಿಲ್ಲ... ಆದರೆ ನನಗೆ ಸಂತೋಷ... ಅಗೈತೆ..."

ಆಗ ತೆರೆದ ಮನಸ್ಸಿನಿಂದ ಎಲ್ಲವನ್ನೂ ಹೇಳಿ 'ನಾನು ಬರತೀನಿ ಅಮ್ಮ... ಸಾಹೇಬ್ರು ಇನ್ನೇನು ಬರ ಬೋದು' ಎಂದು ನುಡಿದು ಮತ್ತೊಮ್ಮೆ ಮೈಲಮ್ಮನಿಗೆ ಕೈ ಮುಗಿದು ಹೊರಟ.

ಮಗನ ಬಗ್ಗೆ ಒಳ್ಳೆಯ ಮಾತುಗಳನ್ನು ಆಲಿಸಿದ ಮೈಲಮ್ಮ ಒಂದುಬಾರಿ ಸೀರೆಯ ಸೆರಗಿನಿಂದ ಫೋಟೋವನ್ನು ಮಮತೆಯಿಂದ ಒರೆಸಿದಳು. ಹಾಗೆಯೇ ಅದನ್ನು ಹಿಡಿದುಕೊಂಡು ಅದರ ಮೇಲೆ ಕಣ್ಣಾಡಿಸಿದಳು.

ಮಗ ಮಾರಯ್ಯ ನಟ್ಟ ನಡುವೆ ಕೋಟು ಟೈ ಹಾಕಿಕೊಂಡು ಕುಳಿತಿದ್ದ, ಅವನು ಕುಳಿತುಕೊಂಡ ಭಂಗಿ ಕೂಡ ಆಕರ್ಷಕವಾಗಿತ್ತು, ಮಗ ನಡೆಯುವುದಾಗಲಿ ನಿಲ್ಲುವುದಾಗಲಿ ಅದು ನೋಡುವಂತಿರುತ್ತದೆ. ಅಭಿಮಾನದಿಂದ ಮಗ ನಡೆಯುತ್ತಾನೆ. ಇವನ ತಂದೆಯಲ್ಲಿ ಈ ಗುಣ ಇರಲಿಲ್ಲ, ಪಾಲಯ್ಯ ತಗ್ಗಿಬಗ್ಗಿ ನಡೆಯುತ್ತಿದ್ದ. ಸದಾ ಕೈ ಮುಗಿದುಕೊಂಡೇ ಬರುತ್ತಿದ್ದ. ಸ್ವಾಮಿ ತಂದೆ ಎಂದೇ ಇತರರನ್ನು ಮಾತನಾಡಿಸುತ್ತಿದ್ದ. ಅವನು ಮಗನನ್ನು ಓದಿಸಿದ್ದು, ಕೆಲಸಕ್ಕೆ ಸೇರಿಸಿದ್ದು, ಮಗನಿಗೊಂದು ಗೌರವದ ಸ್ಥಾನ ದೊರಕಿಸಿದ್ದು ಹೀಗೆಯೆ. ಆದರೆ ಮಗ ಬೇರೆಯಾದ. ಯಾರ ಎದುರೂ ತಲೆತಗ್ಗಿಸಿ ಗೊತ್ತಿಲ್ಲ ಮಗನಿಗೆ. ಇದಕ್ಕೆ ತಕ್ಕ ಹಾಗೆ ಅವನಿಗೆ ಅಧಿಕಾರ ಕೂಡ ಸಿಕ್ಕಿದೆ. ಡಿಪಾರ್ಟಮೆಂಟಿನಲ್ಲಿ ಒಳ್ಳೆಯವ ಅನ್ನಿಸಿಕೊಂಡಿದ್ದಾನೆ. ಲಂಚ ಮುಟ್ಟುವುದಿಲ್ಲ. ಯಾರಿಗೂ ಕಿರುಕುಳ ಕೊಡುವುದಿಲ್ಲ. ಬಡವರ ಕೆಲಸವೆಂದರೆ ಕೂಡಲೇ ಮಾಡಿಕೊಡುತ್ತಾನೆ.

ಮಗ ಮಾರಯ್ಯ ನಟ್ಟ ನಡುವೆ ಕೋಟು ಟೈ ಹಾಕಿಕೊಂಡು ಕುಳತಿದ್ದ, ಅವನು ಕುಳತುಕೊಂಡ ಭಂಗಿ ಕೂಡ ಆಕರ್ಷಕವಾಗಿತ್ತು, ಮಗ ನಡೆಯುವುದಾಗಲಿ ನಿಲ್ಲುವುದಾಗಲಿ ಅದು ನೋಡುವಂತಿರುತ್ತದೆ. ಅಭಿಮಾನದಿಂದ ಮಗ ನಡೆಯುತ್ತಾನೆ. ಇವನ ತಂದೆಯಲ್ಲಿ ಈ' ಗುಣ ಇರಲಿಲ್ಲ, ಪಾಲಯ್ಯ ತಗ್ಗಿಬಗ್ಗಿ ನಡೆಯುತ್ತಿದ್ದ. ಸದಾ ಕೈ ಮುಗಿದುಕೊಂಡೇ ಬರುತ್ತಿದ್ದ. ಸ್ವಾಮಿ ತಂದೆ ಎಂದೇ ಇತರರನ್ನು ಮಾತನಾಡಿಸುತ್ತಿದ್ದ. ಅವನು ಮಗನನ್ನು ಓದಿಸಿದ್ದು. ಕೆಲಸಕ್ಕೆ ಸೇರಿಸಿದ್ದು, ಮಗನಿಗೊಂದು ಗೌರವದ ಸ್ಥಾನ ದೊರಕಿಸಿದ್ದು ಹೀಗೆಯೆ. ಆದರೆ ಮಗ ಬೇರೆಯಾದ. ಯಾರ ಎದುರೂ ತಲೆತಗ್ಗಿಸಿ ಗೊತ್ತಿಲ್ಲ ಮಗನಿಗೆ. ಇದಕ್ಕೆ ತಕ್ಕ ಹಾಗೆ ಅವನಿಗೆ ಅಧಿಕಾರ ಕೂಡ ಸಿಕ್ಕಿದೆ.

ಕೆಲವರು ಇವನ ಹಿಂದೆ ಮಾತನಾಡುತ್ತಾರಂತೆ.

ಹಿಂದುಳಿದ ಜಾತಿಯವ ಎತ್ತರದ ಸ್ಥಾನಕ್ಕೆ ಬಂದು ಕುಳಿತಿದ್ದಾನೆ ಎಂಬ ಕಾರಣಕ್ಕೆ ಅವನ ಹಿಂದೆ ಮಾತನಾಡುವ ನುಡಿಗಳು ಅವು. ಇವನ ತಂದೆ ಕೂಡ ಈ ಬಗೆಯ ಮಾತುಗಳನ್ನು ಕೇಳಿದವರು. ಈ ಬಗೆಯ ಮಾತುಗಳಿಂದ ಪಾಲಯ್ಯ ನೊಂದುಕೊಳ್ಳುತ್ತಿದ್ದ, ಕಣ್ಣೀರು ಸುರಿಸುತ್ತಿದ್ದ. ಆದರೆ ಮಗ?

"ನನಗೆ ಗೊತ್ತು ಯಾರು ಏನು ಮಾತಾಡ್ತಾರೆ ಅಂತ ಅದಕ್ಕೆ ನಾನು ಕೇರ್ ಮಾಡೋದಿಲ್ಲ" ಎಂದು ಹೇಳುತ್ತಾನೆ ಮಗ.

ಮೈಲಮ್ಮ ಮತ್ತೆ ಮತ್ತೆ ಆ ಫೋಟೋ ನೋಡಿದಳು.

ಹೇಳಿಕಳುಹಿಸಿದ ಹಾಗೆ ಸೊಸೆ ಕೂಡ ಒಳಗಿನಿಂದ ಬಂದಳು.

"ಅತ್ತೆ, ಏನು ಇದ್ರೂಸ ಬಂದದ್ದು?" ಎಂದು ಕೇಳಿದವಳು ಇದ್ರೂಸ ಬಂದು ಹೋದದನ್ನು ಗಮನಿಸಿ

"ಇಕಾ... ಈ ಫೋಟೋ ಕೊಟ್ಟು ಹೋದ... ಮ್ಮಯ್ಯನಿಗೆ ಬಡ್ತಿ ಸಿಕ್ತಲ್ಲ ಅವಾಗ ತೆಗೆದದ್ದಂತೆ...."

ನಿಧಾನವಾಗಿ ಫೋಟೋವನ್ನು ಸೊಸೆಯ ಗಿತ್ತಳು ಮೈಲಮ್ಮ. ಸೊಸೆ ಫೋಟೋ ಮೇಲೆ ಣ್ಣಾಡಿಸಿದಳು, ತನ್ನ ಗಂಡನನ್ನು, ಅವನ ಅಕ್ಕ ಪಕ್ಕ ಳಿತವರನ್ನು, ಹಿಂದೆ ನಿಂತವರನ್ನು ಗಮನಿಸಿದಳು.

"ಫೋಟೋ ಚೆನ್ನಾಗಿ ಬಂದಿದೆ, ಅಲ್ಲ?"

ಎಂದು ಸೊಸೆಯನ್ನು ಕೇಳಿದಳು ಮೈಲಮ್ಮ

"ಹೌದು... ಇದನ್ನು ನೋಡಲಿಕ್ಕೆ ನಿನ್ ಮಾವ ದಬೇಕಿತ್ತು...."

ಎಂದು ಹೇಳುತ್ತ ಮೈಲಮ್ಮ ಮುಖ ಬಾಡಿಸಿ ಂಡಳು.

"ಅವರಿಗೆ ತುಂಬಾ ಸಂತೋಷ ಆಗಿರೋದು..."

ಎಂದು ಮಾತು ಸೇರಿಸಿದಳು.

"ಅವರದ್ದೂ ಒಂದು ಫೋಟೋ ಇತ್ತು... ಆದರೆ ದರಾಗೆ ಅವರೇ ಇರಲಿಲ್ಲ..." ಎಂದು ವಿಷಾದದಿಂದ ಳು.

"ಅವರ ಫೋಟೋದಲ್ಲಿ ಅವರೇ ಇರಲಿಲ್ಲ ಂದರೆ ಏನು ಅತ್ತೆ?"

ಅಚ್ಚರಿಯಿಂದಲೇ ಕೇಳಿದಳು ಸೊಸೆ.

"ಇದನ್ನು ಒಳಗೆ ಇಟ್ಟು ಬಾ ಹೇಳುತೀನಿ"

ಂದಳು ಮೈಲಮ್ಮ.

ಸೊಸೆ ಆ ಫೋಟೋ ತೆಗೆದುಕೊಂಡು ಹೋಗಿ ಲಿನಲ್ಲಿ ಇರಿಸಿ ಬಂದಳು. ಸುಮಾರು ನಲವತ್ತು ವರ್ಷ ಷ್ಟು ಹಿಂದಿನ ದಿನಮಾನಗಳಿಗೆ ಹೋದ ಮೈಲಮ್ಮ ಪಿನ ಕೊಂಡಿಗಳನ್ನು ಜೋಡಿಸ ತೊಡಗಿದ್ದಳು. ದ್ದನ್ನು ನೋಡಿದ್ದನ್ನು ನೆನಪಿಸಿ ಕೊಂಡಳು.

* * *

ಶರಾವತಿ ಯೋಜನೆಯಲ್ಲಿ ಕೆಲಸ ಮಾಡುತ್ತಿದ್ದ ರಾರು ಸಫಾಯಿ ಕರ್ಮಚಾರಿಗಳಲ್ಲಿ ತಿರುಪಾಲ ನೂ ಓರ್ವ. ದಿನನಿತ್ಯ ಕಾಲೋನಿಯ ಒಂದು ಗವನ್ನು ಈ ತುದಿಯಿಂದ ಆ ತುದಿಯವರೆಗೂ ಶುಚಿ ಳಿಸುವುದು ಅವನ ಕೆಲಸ. ಈ ಕೆಲಸ ಮಾಡಿ ಂಡಿದ್ದ ಅವನಿಗೆ ತಟ್ಟನೆ ಬೇರೊಂದು ಕೆಲಸವನ್ನು ಸಲಾಯಿತು. ಕಾರ್ಗಲ್ಲಿನಲ್ಲಿದ್ದ ಸುಮಾರು ಇಪ್ಪತ್ತು ತ್ತೈದು ಸರಕಾರಿ ಕಚೇರಿಗಳ ಲ್ಯಾವೆಟ್ರಿಗಳನ್ನು ಶುಚಿ ಡಿ ಇಡುವ ಕೆಲಸ ಇವನಿಗೆ ವಹಿಸಲಾಹಿತು. ಒಂದು ಟು, ಒಂದು ಪೊರಕೆ, ಫಿನಾಯಿಲು ಬಾಟಲಿ ದು ಆತ ಹೊರಟರೆ ಮೂರು ನಾಲ್ಕು ಗಂಟೆ ವರೆಗೂ ಇದೇ ಕೆಲಸ. ಕಚೇರಿಗಳು ಒಂದೇ ಕಡೆ ಲ್ಲಿಲ್ಲ. ಗಣೇಶನ ಗುಡಿಯ ಹತ್ತಿರ ಕೆಲ ಕಚೇರಿ ದರೆ, ವರ್ಕ್‌ಶಾಪಿನ ಬಳಿ ಕೆಲ ಕಚೇರಿಗಳು. ಕಾಳ ಮೆಸ್ ಬಳಿ ಕೆಲ ಕಚೇರಿಗಳಾದರೆ ಕ್ಯಾಂಟೀನ ಬಳಿ ದ ಕಚೇರಿಗಳು. ಕೆಲ ಕಚೇರಿಗಳಿಗೆ ಮೂರು ನಾಲ್ಕು ಗಳು. ಕೆಲವೆಡೆ ಮ್ಯಾನೇಜರು ಬಂದು ನಿಂತು

'ಕ್ಲೀನಾಗಿ ಮಾಡಯ್ಯ ಕೆಲಸಾನ... ನೀನು ಎರಡು ಟು ನೀರು ಹಾಕಿ ಹೋಗತೀಯ... ಸಾಹೇಬ್ರು ನಂತರ ಬೆಂಡ್ ಎತ್ತುತ್ತಾರೆ, ಕ್ಲೀನಾಗಿ ಎಲ್ಲ ತೊಳಿ.' ಮು ಹೇಳುತ್ತಿದ್ದರು.

ಹೀಗಾಗಿ ತಿರುಪಾಲಯ್ಯನಿಗೆ ರಸ್ತೆ ಗುಡಿಸುವುದೇ ಏನಿಸಿತು. ಆದರೆ ಪಾಲಿಗೆ ಬಂದ ಕೆಲಸ. ಹೆಕ್ಕರು ಹೇಳಿರುವ ಕೆಲಸ, ಕೆಲಸ ಯಾವುದೇ ಇರಲಿ

ಸೊಸೆ ಆ ಫೋಟೋ ತೆಗೆದುಕೊಂಡು ಹೋಗಿ ಹಾಲಿನಲ್ಲಿ ಇರಿಸಿ ಬಂದಳು. ಸುಮಾರು ನಲವತ್ತು ವರ್ಷಗಳಷ್ಟು ಹಿಂದಿನ ದಿನಮಾನಗಳಿಗೆ ಹೋದ ಮೈಲಮ್ಮ ನೆನಪಿನ ಕೊಂಡಿಗಳನ್ನು ಜೋಡಿಸ ತೊಡಗಿದ್ದಳು. ಕೇಳಿದ್ದನ್ನು ನೋಡಿದ್ದನ್ನು ನೆನಪಿಸಿಕೊಂಡಳು.

ಚೆನ್ನಾಗಿ ಮಾಡಬೇಕು ಎಂಬ ನಿರ್ಧಾರ ಬೇರೆ. ಹೀಗಾಗಿ ಆತ ಈ ಕೆಲಸವನ್ನು ಸಮರ್ಪಕವಾಗಿ ಮಾಡಿಕೊಂಡು ಬಂದ.

ಈ ಕೆಲಸ ಮಾಡುವಾಗಲೇ ಅವನಿಗೆ ಕೆಲ ಸಾಹೇಬರುಗಳ ಪರಿಚಯವಾಯಿತು. ಅವರು ಚೇಂಬರಿನಲ್ಲಿ ಇರುವಾಗಲೇ ಅವರ ಮುಂದಿನಿಂದ ನಡೆದು ಹೋಗಿ ಈತ ಕಕ್ಕಸು ಕ್ಲೀನ ಮಾಡಬೇಕಾಗುತ್ತಿತ್ತು. ಇವನು ಅವರ ಗುರುತನ್ನು ನೆನಪಿರಿಸಿಕೊಂಡ. ಅವರೂ ಇವನನ್ನು ಮರೆಯಲಿಲ್ಲ. ಆದರೆ ಎಲ್ಲರೂ ಒಂದೇ ಥರ ಇರಲಿಲ್ಲ. ಬಹಳ ಜನ ಇವನ ಕಡೆ ತಿರುಗಿಯೂ ನೋಡುತ್ತಿರಲಿಲ್ಲ. ನೋಡಿದರೂ ಗಂಟು ಮುಖ. ತಿರಸ್ಕಾರದ ನೋಟ.

ಆಗಲೇ ತಿರುಪಾಲಯ್ಯನ ಮಗ ಪಾಲಯ್ಯ ನಾಲ್ಕೋ ಐದೋ ತರಗತಿಯವರೆಗೆ ಅಕ್ಷರ ತಿದ್ದಿ ಮುಂದೆ ಶಾಲೆಗೆ ಹೋಗುವುದಿಲ್ಲ ಎಂದು ಮನೆಗೆ ಬಂದಿದ್ದ. ಇದೇ ದಿನ ಕಾರ್ಗಲ್ ಅಣೆಕಟ್ಟಿನ ಬಳಿ, ಬೆಣ್ಣೆಮನೆ ಹಳ್ಳದ ಬಳಿ ಮೀನು ಹಿಡಿಯಲು ಹೋಗುತ್ತಿದ್ದ.

ತಿರುಪಾಲಯ್ಯನ ತಲೆಯಲ್ಲಿ ಒಂದು ಹುಳ ಹೊಕ್ಕಿತು.

ಆತ ಒಂದು ದಿನ ಬೆಳಗ್ಗೆ ಇಂಜಿನಿಯರ್ ಆನಂದರಾಜು ಸಾಹೇಬರ ಮನೆ ಮುಂದಿನ ಬೇಲಿಗೆ ಒರಗಿ ನಿಂತ.

ಸಾಹೇಬರು ಮನೆ ಮುಂದಿನ ವರಾಂಡದಲ್ಲಿ ವಾಕ್ ಮಾಡುತ್ತಿದ್ದವರು ಎಷ್ಟೋ ಹೊತ್ತಿನ ನಂತರ ಇವನತ್ತ ತಿರುಗಿ–

'....ಓ! ನೀನಾ... ಏನು ?' ಎಂದು ಕೇಳಿದರು.

ಆನಂದರಾಜು ಸಾಹೇಬರಿಗೆ ಪ್ರಾಜೆಕ್ಟಿನಲ್ಲಿ ಒಳ್ಳೆಯ ಹೆಸರಿತ್ತು. ಎಷ್ಟೋ ಜನ ನೌಕರರು ಅವರನ್ನು ದೇವರು ಎಂದು ಕೈ ಮುಗಿಯುತ್ತಿದ್ದರು. ನಿತ್ಯ ಅವರ ಚೇಂಬರಿನ ಟಾಯ್ಲೆಟ್ ಕ್ಲೀನ ಮಾಡಲು ಹೋಗುತ್ತಿದ್ದ ತಿರುಪಾಲಯ್ಯನ ಮುಖನೋಡಿ ಅವರು ಮುಗುಳು

ಸಮಾರಂಭಕ್ಕೆ ಪಾಲಯ್ಯ ಕುರ್ಚಿ ಹೊತ್ತ, ಮೇಜು ಜೋಡಿಸಿದ. ಹಿಂದೆ ಪರದೆ ಕಟ್ಟಿದ. ಉಳಿದವರ ಅಭಿಪ್ರಾಯ ಏನೇ ಇರಲಿ ಪಾಲಯ್ಯನಿಗೆ ಸಂಕಟವಾಗಿತ್ತು, ದುಃಖ ವಾಗಿತ್ತು. ಅವನನ್ನು ಈವರೆಗೆ ಚನ್ನಾಗಿ ನೋಡಿಕೊಂಡವರೇ ಆನಂದರಾಜು ಸಾಹೇಬರು. ಅವನಿಗೆ ಗೌರವ ಕೊಡುತ್ತಿದ್ದರು. ಅವನ ಬಗ್ಗೆ ಪ್ರೀತಿ ವ್ಯಕ್ತಪಡಿಸುತ್ತಿದ್ದರು

ನಗುತ್ತಿದ್ದರು, ಈ ಸಲಿಗೆಯನ್ನೇ ಬಳಸಿಕೊಳ್ಳಲು ನೋಡಿದ ತಿರುಪಾಲಯ್ಯ.

"ಓ! ನೀನಾ.... ಏನು?"

ಎಂದವರು ಕೇಳಿದಾಗ ತಿರುಪಾಲಯ್ಯ–

"ಸ್ವಾಮಿ ನನ್ನ ಮಗ ಪಾಲಯ್ಯ...."

ಎಂದು ರಾಗ ಎಳೆದ.

"ಏನು... ಓದಿದಾನೆ?"

"ಐದನೇ ಕಳಾಸ ತನಕ ಓದಿದಾನೆ..."

"ನಾಳೆ ಕಳಿಸು ಆಫೀಸಿಗೆ..."

ತಿರುಪಾಲಯ್ಯ ಕುಣಿದಾಡಿಬಿಟ್ಟ

ಪಾಲಯ್ಯ ಐದನೇ ಕ್ಲಾಸ್ ಮುಗಿಸಿ ಕೆಲವರುಷಗಳು ಆಗಿದ್ದವು. ಶಾಲೆಗೆ ಸೇರಿದ್ದು ತಡವಾಗಿ. ಅಲ್ಲಿ ಕೂಡ ಒಂದೊಂದು ತರಗತಿಯಲ್ಲಿ ಎರಡೆರಡು ವರುಷ. ಹೀಗಾಗಿ ಸರಕಾರಿ ಕೆಲಸಕ್ಕೆ ಅರ್ಹವಾದ ವಯೋಮಿತಿಯನ್ನು ಆತ ಪಡೆದಿದ್ದ. ಆನಂದರಾಜು ಸಾಹೇಬರ ಕಚೇರಿಯಲ್ಲಿ ಪಾಲಯ್ಯ ಪೀವನ್ ಆದ.

ಸಾಹೇಬರೇನೋ ತಿರುಪಾಲಯ್ಯನ ಮಗ ಪಾಲಯ್ಯನಿಗೆ ಸರಕಾರಿ ಕೆಲಸ ಕೊಟ್ಟಿದ್ದರು. ಆದರೆ ಕಚೇರಿಯ ಇತರರು ಅವನನ್ನು ಸುಲಭವಾಗಿ ಒಪ್ಪಿಕೊಳ್ಳಲಿಲ್ಲ,

ಅವನಿಂದ ಯಾರೂ ನೀರು ತರಿಸಿಕೊಳ್ಳುತ್ತಿರಲಿಲ್ಲ. ಅವನ ಕೈಗೆ ಕೆಲವರು ಫೈಲುಗಳನ್ನು ಕೊಡುತ್ತಿರಲಿಲ್ಲ, ಹತ್ತಿರ ನಿಂತರೆ, ಮೇಜು ಕುರ್ಚಿಗೆ ಆತ ಒರಗಿ ನಿಂತರೆ ಕೆಲವರು ಸಿಡಿ ಮಿಡಿಗೊಳ್ಳುತ್ತಿದ್ದರು. ಕಚೇರಿಯ ಬೇರೆ ಪೀವನ್‌ಗಳು ಏನು ಕೆಲಸ ಮಾಡುತ್ತಿದ್ದರೊ ಆ ಕೆಲಸವನ್ನು ತಿರುಪಾಲಯ್ಯ ಮಾಡುವಂತಿರಲಿಲ್ಲ. ನೌಕರರ ಮನೆಗೆ ತರಕಾರಿ ತರುವ, ನೀರು ತುಂಬುವ, ಸಾಮಾನು ತರುವ, ರಾತ್ರಿ ಇಸ್ತ್ರೀ ಮಾಡಿಕೊಂಡು ಬರುವ ಕೆಲಸಗಳನ್ನು ಇವನಿಗೆ ಯಾರೂ ಹೇಳುತ್ತಿರಲಿಲ್ಲ.

ಕಚೇರಿಯ ಕಸ ಹೊಡೆಯುವುದು, ಕವರುಗಳಿಗೆ ಅಂಟು ಹಚ್ಚುವುದು ಇಂತಹ ಕೆಲಸಗಳನ್ನೇ ಪಾಲಯ್ಯ ಮಾಡಬೇಕಿತ್ತು.

ಪಾಲಯ್ಯ ಈ ಕೆಲಸಗಳನ್ನು ವಿಧೇಯತೆ ನಮ್ರತೆಗಳಿಂದ ಮಾಡಿಕೊಂಡು ಬಂದ.

ತಿರುಪಾಲಯ್ಯ ತನ್ನ ಮಗನನ್ನು ಹೆಮ್ಮೆಯಿಂದ ಕಾಣುತ್ತಿದ್ದ. ಸ್ಕ್ಯಾವೆಂಜರ್ ತಿರುಪಾಲಯ್ಯನ ಮಗ ಪಾಲಯ್ಯ ಕಚೇರಿಯೊಂದಲ್ಲಿ ಪೀವನ್ ಅನ್ನುವುದು ಹೆಮ್ಮೆಯ ವಿಷಯವಲ್ಲವೆ? ಬಿಳಿ ಡ್ರೆಸ್ ಹಾಕಿಕೊಂಡು ಆತ ಕಚೇರಿ ಬಾಗಿಲಲ್ಲಿ ನಿಲ್ಲುತ್ತಾನೆ. ಸಾಹೇಬರ ಕಾರಿನ ಬಾಗಿಲು ತೆರೆಯುತ್ತಾನೆ. ಅವರ ಫೈಲು ಹಿಡಿದು ಒಳಒಯ್ಯುತ್ತಾನೆ. ಟಪಾಲು ತರುತ್ತಾನೆ. ಈ ಭಾಗ್ಯ ಎಷ್ಟು ಜನರಿಗಿದೆ?

ಈ ಹುರುಪಿನಲ್ಲಿಯೇ ಆತ ಪಾಲಯ್ಯನ ಮದುವೆ ಮಾಡಿದ. ಲಿಂಗನಮಕ್ಕಿ ಪರಸಯ್ಯನ ಮಗಳು ಮೈಲಮ್ಮ ಪಾಲಯ್ಯನ ಹೆಂಡತಿಯಾಗಿ ಬಂದಳು, ಒಂದು ವರ್ಷದಲ್ಲಿ ಪಾಲಯ್ಯ ತಂದೆ ಕೂಡ ಆದ.

* * *

ಆನಂದರಾಜು ಸಾಹೇಬರಿಗೆ ಶರಾವತಿ ಯೋಜನೆಯಿಂದ ಮಲಪ್ರಭಾ ಯೋಜನೆಗೆ ವರ್ಗವಾಯಿತು.

ಕಚೇರಿಯಲ್ಲಿ ಅವರಿಗೊಂದು ಬೀಳ್ಕೊಡುಗೆ.

ಈ ಸಮಾರಂಭಕ್ಕೆ ಪಾಲಯ್ಯ ಕುರ್ಚಿ ಹೊತ್ತ,

ಮೇಜು ಜೋಡಿಸಿದ. ಹಿಂದೆ ಪರದೆ ಕಟ್ಟಿದ. ಉಳಿದವರ ಅಭಿಪ್ರಾಯ ಏನೇ ಇರಲಿ ಪಾಲಯ್ಯನಿಗೆ ಸಂಕಟವಾಗಿತ್ತು, ದುಃಖವಾಗಿತ್ತು. ಅವನನ್ನು ಈವರೆಗೆ ಚೆನ್ನಾಗಿ ನೋಡಿಕೊಂಡವರೇ ಆನಂದರಾಜು ಸಾಹೇಬರು. ಅವನಿಗೆ ಗೌರವ ಕೊಡುತ್ತಿದ್ದರು. ಅವನ ಬಗ್ಗೆ ಪ್ರೀತಿ ವ್ಯಕ್ತಪಡಿಸುತ್ತಿದ್ದರು.

ಸಮಾರಂಭ ಪ್ರಾರಂಭವಾಗುವ ಮುನ್ನ ಒಂದು ಗ್ರೂಪ್ ಫೋಟೋ ಕಾರ್ಯಕ್ರಮ. ಅದಕ್ಕೂ ಸಾಲು ಸಾಲಾಗಿ ಕುರ್ಚಿಗಳನ್ನು ಜೋಡಿಸಿದ ಪಾಲಯ್ಯ. ಎಲ್ಲರೂ ಕೋಟು ಪ್ಯಾಂಟು ಟೈ ಧರಿಸಿ ಬಂದು ಸಿದ್ಧರಾದರು, ಅಕೌಂಟೆಂಟ್ ರಾಮಾನುಜಾಚಾರ್ಯರು, ಮ್ಯಾನೇಜರ್ ಕೃಷ್ಣಮೂರ್ತಿ, ಸ್ಟೆನೋ ಗೋಪಾಲರಾವ್ ಇನ್ನೂ ಕೆಲವರು ಕುರ್ಚಿಗಳಲ್ಲಿ ಕುಳಿತರು. ಉಳಿದವರು ಹಿಂಬದಿಯಲ್ಲಿ ಸಾಲಾಗಿ ನಿಂತರು. ಸ್ಟುಡಿಯೋದ ಪಳನಿಯಪ್ಪ ಮೂರು ಕಾಲಿನ ಮಣೆ ಜೋಡಿಸಿ, ಅದರ ಮೇಲೆ ಕ್ಯಾಮರಾ ಇರಿಸಿ ಕಪ್ಪು ಮುಸುಕು ಧರಿಸಿ ನೀವು ಇಲ್ಲಿ ಬನ್ನಿ ನೀವು ಅಲ್ಲಿ ನಿಲ್ಲಿ ಎಂದು ಹೇಳುವಾಗ ಆನಂದ ರಾಜು ಸಾಹೇಬರು ಬಂದು ಮಧ್ಯದ ಕುರ್ಚಿಯಲ್ಲಿ ಕುಳಿತರು.

ಪಾಲಯ್ಯ ಇದು ತನಗೆ ಸಂಬಂಧ ಪಟ್ಟದಲ್ಲ ಅನ್ನುವ ಹಾಗೆ ದೂರ ನಿಂತಿದ್ದ, ಪಳಿನಿಯಪ್ಪನ ಹಿಂದೆ ಒಂಟಿಗಾಲಲ್ಲಿ ನಿಂತು ಆತ ಎಲ್ಲ ನೋಡುತ್ತಲಿದ್ದ.

ಪಳನಿಯಪ್ಪ–

"ಎಲ್ಲ ರೆಡಿ"

ಎಂದು ಹೇಳುತ್ತಿರಲು ಆನಂದರಾಜು

ಸಾಹೇಬರು–

"ಪಾಲಯ್ಯ... ಪಾಲಯ್ಯ"

ಎಂದು ಕೂಗಿದರು.

"ಅಲ್ಲಿ ಯಾಕೆ ನಿಂತಿದೀಯ; ನೀನೂ ಸೇರ್ಕೋ;

ಬಾ.... ಬಾ...."

ಉಳಿದವರೂ ಆಗ ದನಿ ಸೇರಿಸಿದರು.

ಪಾಲಯ್ಯ ಸಂತಸದಿಂದ ಬಂದು ಕೊನೆಯ ಸಾಲಿನಲ್ಲಿ ಕೊನೆಯವನಾಗಿ ನಿಂತ.

ಆನಂದರಾಜು ಸಾಹೇಬರು ಹೋಗುತ್ತಿದ್ದಾರೆ ಎಂಬ ನೋವಿನ ನಡುವೆಯೂ ಅವನಿಗೆ ತುಂಬ ಸಂತೋಷವಾಯಿತು. ಮನೆಗೆ ಬಂದ ಆತ ತನ್ನ ತಾಯಿ, ತಂದೆ, ಹೆಂಡತಿಯ ಎದುರು ಇದನ್ನೇ ಹೇಳಿಕೊಂಡ.

"ರಾಜು ಸಾಹೇಬರ ಜೊತೀಲಿ... ನಾನೂ ಇದೀನಿ... ಫೋಟೋದಲ್ಲಿ' ಆತ ಮತ್ತೆ ಮತ್ತೆ ಹೇಳಿಕೊಂಡ.

* * *

ಸಮಾರಂಭ ಪ್ರಾರಂಭವಾಗುವ ಮುನ್ನ ಒಂದು ಗ್ರೂಪ್ ಫೋಟೋ ಕಾರ್ಯಕ್ರಮ. ಎಲ್ಲರೂ ಕೋಟು ಪ್ಯಾಂಟು ಟೈ ಧರಿಸಿ ಬಂದು ಸಿದ್ಧರಾದರು, ಅಕೌಂಟೆಂಟ್ ರಾಮಾನುಜಾಚಾರ್ಯರು, ಮ್ಯಾನೇಜರ್ ಕೃಷ್ಣಮೂರ್ತಿ, ಸ್ಟೆನೋ ಗೋಪಾಲರಾವ್ ಇನ್ನೂ ಕೆಲವರು ಕುರ್ಚಿಗಳಲ್ಲಿ ಕುಳಿತರು.

ಕಥೆ

ಆನಂದರಾಜು ಸಾಹೇಬರು ಹೊಸ ಜಾಗಕ್ಕೆ ಹೊರಟುಹೋದರು. ಅವರ ಸ್ಥಳಕ್ಕೆ ಇನ್ನೋರ್ವ ಸಾಹೇಬರು ಬಂದರು. ಈ ನಡುವೆ ಸ್ಟುಡಿಯೋ ಪಳನಿಯಪ್ಪ ಕಚೇರಿಗೆ ಬಂದು '...ಯಾರು ಯಾರಿಗೆ ಫೋಟೋ ಬೇಕು.... ಹೇಳಿ..' ಎಂದು ಮುಂಗಡ ಹಣ ಇಸಿದು ಕೊಂಡು ಹೋದ.

ಪಾಲಯ್ಯ ಪೂರ್ತಿ ಹಣ ಕೊಟ್ಟು ತನ್ನ ಹೆಸರನ್ನು ಬರೆಸಿದ, ಸ್ಟುಡಿಯೋದಿಂದ ಫೋಟೋಗಳೂ ಬಂದವು. ಫೋಟೋ ಕೆಳಗೆ ಎಲ್ಲರ ಹೆಸರುಗಳನ್ನೂ ಮುದ್ರಿಸಲಾಗಿತ್ತು. ಎಲ್ಲರೂ ಅವರವರು ನಿಂತಿರುವ ಕುಳಿತಿರುವ ಭಂಗಿ ಕುರಿತು ಮಾತಾಡುವಾಗ ಪಾಲಯ್ಯ ತಾನು ಎಲ್ಲಿದ್ದೇನೆ ಎಂದು ಹುಡುಕಾಡಿದ. ಅವನು ನಿಂತ ಜಾಗದಲ್ಲಿ ಒಂದು ಅಸ್ಪಷ್ಟ ಆಕೃತಿ ಇತ್ತು. ಸಣ್ಣದೊಂದು ಗೆರೆ, ಅಲ್ಲಿ ಅವನಿರಲಿಲ್ಲ.

ಸಂಜೆ ಪಾಲಯ್ಯ ಕಾರ್ಗಲ್ ಪೇಟೆಗೆ ಹೋದ. ಪೊಲೀಸ್ ಸ್ಟೇಷನ್ ಮುಂಭಾಗದಲ್ಲಿಯೇ ಪಳನಿಯಪ್ಪನ ಸ್ಟುಡಿಯೋ. ಪಾಲಯ್ಯನ ಮುಖ ನೋಡಿಯೆ! ಪಳನಿಯಪ್ಪನಿಗೆ ಎಲ್ಲ ಅರ್ಥವಾಯಿತು,

"ನಿಮ್ಮ ಆಫೀಸಿನ ಅಕೌಂಟೆಂಟು, ಮ್ಯಾನೇಜರು, ಸ್ಟೆನೋ ಎಲ್ಲ ಬಂದಿದ್ರು... ನಮಗೆಲ್ಲ ಫೋಟೋ ಬೇಕು... ಮೂವತ್ತು ಕಾಪಿ ಬೇಕು.... ಆದರೆ, ಆದರೆ..."

"ಗೊತ್ತಾಯ್ತು ಪಳನಿಯಣ್ಣ"

ಎಂದ ಪಾಲಯ್ಯ ಗದ್ಗದಿತನಾಗಿ,

"ಅಲ್ಲ ನನಗೂ ವ್ಯಾಪಾರ ಆಗ ಬೇಕಲ್ಲ..."

"ಗೊತ್ತಾಯ್ತು... ಗೊತ್ತಾಯ್ತು..."

ಪಾಲಯ್ಯ ಆ ಫೋಟೋ ಹಿಡಿದು ಮನೆಗೆ ಬಂದ..

ಮೈಲಮ್ಮ ಅವನಿಗೆ ಸಾಂತ್ವನ ಹೇಳಿದಳು.

ಆದರೆ ಈ ನೋವು ಯಾವ ಸಾಂತ್ವನಕ್ಕೂ ಮಾಗುವುದಾಗಿರಲಿಲ್ಲ.

"ಮೈಲಿ ನನ ಮಗನಿಗೆ ಈ ಸ್ಥಿತಿ ಬರಬಾರದು"

ಎಂದು ಹೇಳುತ್ತಿದ್ದ ಪಾಲಯ್ಯ.

ಹೀಗೆಂದೇ ಆತ ಮಗನನ್ನು ಓದಿಸಿದ. ಮಗ ವಿಭಾಗಾಧಿಕಾರಿಯಾಗುವುದನ್ನು ನೋಡಲು ಮಾತ್ರ ಪಾಲಯ್ಯ ಉಳಿಯಲಿಲ್ಲ.

"ಈ ಫೋಟೋ ನೋಡಾಕೆ ಅವರು ಇರಬೇಕಿತ್ತು" ಎಂದು ಮೈಲಮ್ಮ ಕಣ್ಣೊರೆಸಿಕೊಂಡಳು.

ಇವರು ಮಾತನಾಡುತ್ತಿರಬೇಕಾದರೇನೆ ಎ.ಸಿ. ಸಾಹೇಬರ ಜೀಪು ಮನೆ ಮುಂದೆ ಬಂದು ನಿಂತಿತು. ಚಾಲಕ ರಾಮಕೃಷ್ಣ ಕೆಳಗೆ ಇಳಿದು ಜೀಪಿನ ಬಾಗಿಲು ತೆರೆದ, ಸಾಹೇಬರು ಕೆಳಗೆ ಇಳಿದು–

"ನೀನಿನ್ನು ಹೋಗು"

ಎಂದಾಗ ಚಾಲಕ ನಮಸ್ಕರಿಸಿದ

ಸಾಹೇಬರು ಮನೆಯ ಒಳಗೆ ಕಾಲಿರಿಸಿದರು.

"ಇದ್ರೂಸ ಫೋಟೋ ತಂದು ಕೊಟ್ನೊ?"

ಎಂದವರು ಕೇಳಿದರು, □



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.



ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ:

ಸಂಪಾದಕರು, 'ಸಂವಾದ' ಮಾಸಪತ್ರಿಕೆ,

ಸ್ಫೂರ್ತಿಧಾಮ, ಅಂಜನಾನಗರ,

ವಿಶ್ವನೀಡಂ ಅಂಚೆ, ಬೆಂಗಳೂರು - ೫೬೦ ೦೯೧

ದೂರವಾಣಿ : ೩೨೮ ೭೪೪೩ / ೯೪೪೪೮೦೪೪೮೦೬

ಬದುಕು

ದೇವರಾಯ ನಮ್ಮ ಬಹಳಷ್ಟು ದಲಿತ ಹೋರಾಟಗಾರರಿಗೆ ಅಪರಿಚಿತ ಹೆಸರು. ಅಂಬೇಡ್ಕರರ ವಿಚಾರ ಬಲಕ್ಕಿಂತ ಹೆಸರು ಬಲವನ್ನಷ್ಟೇ ನಂಬಿರುವ ಈ ಹೋರಾಟಗಾರರಿಗೆ ಮಾರ್ಗದರ್ಶಕವಾಗಬೇಕಾಗಿರುವ ದೇವರಾಯರ ಬದುಕು ಅನನ್ಯವಾದುದು. ಅಂಬೇಡ್ಕರ್ ಅವರ ಸಮಕಾಲೀನರಾಗಿದ್ದ ದೇವರಾಯ, ಅಂಬೇಡ್ಕರ್ ಮಹಾರಾಷ್ಟ್ರದಲ್ಲಿ ಆರಂಭಿಸಿದ ಚಳವಳಿಯನ್ನು ಉತ್ತರ ಕರ್ನಾಟಕದಲ್ಲಿ ಮುಂದುವರೆಸಿದರು. ವಿಶೇಷವಾಗಿ ಬೆಳಗಾವಿ ಜಿಲ್ಲೆ ದೇವರಾಯರ ಹೋರಾಟದ ಕ್ಷೇತ್ರವಾಗಿತ್ತು. ಜೀವನ ಪರ್ಯಂತ ಅವಿರತ ಹೋರಾಟ ನಡೆಸುತ್ತಲೇ ಸಮುದಾಯದ ದಿವ್ಯನಿರ್ಲಕ್ಷ್ಯಕ್ಕೊಳಗಾಗಿ ದೇವರಾಯ ಕೊನೆಯುಸಿರೆಳೆದರು. ಇದು ಅವರ ಜೀವನ ಗಾಥೆ.

ಡಾ॥ ಸರಜೂ ಕಾಟ್ಕರ್

ಕತ್ತಲೆ ಕಳೆಯಲು ಹುಟ್ಟಿದ ಸೂರ್ಯ

ದೇವರಾಯ ೨

ಡಾ॥ ಸರಜೂ ಕಾಟ್ಕರ್

ಸನಾತನಿಗಳು ಚಾತುರ್ವರ್ಣ್ಯವನು ಚಾಚೂ ತಪ್ಪದಂತೆ ಜಾರಿಗೊಳ್ಳಿಸಲು ಯತ್ನಿಸುತ್ತಿರುವಂತೆಯೇ ಅದನ್ನು ವಿರೋಧಿಸುವ ಧ್ವನಿಗಳೂ ಕಾಲಕಾಲಕ್ಕೆ ಇತಿಹಾಸದಲ್ಲಿ ಮೂಡಿ ಬಂದಿವೆ. ಈ ಧ್ವನಿಗಳು ಬಲಿಷ್ಠ ಸಮಾಜವನ್ನು ವಿರೋಧಿಸಿ, ಜನಸಾಮಾನ್ಯರ ಪ್ರತಿನಿಧಿಯಾಗಿ ಕೆಲಸ ಮಾಡಿವೆ. ಮನುಸ್ಮೃತಿಯನ್ನು ಅಕ್ಷರಶಃ ಜಾರಿಗೊಳ್ಳಿಸಲು ಯತ್ನಿಸಿದ ಪೇಶ್ವೆಗಳ ನಾಡಿನಿಂದಲೇ ಅದನ್ನು ಪ್ರಬಲವಾಗಿ ವಿರೋಧಿಸಿದ ಜ್ಯೋತಿಬಾಫುಲೆ ಮತ್ತು ಡಾ॥ ಬಾಬಾಸಾಹೇಬ ಅಂಬೇಡ್ಕರ್‌ರು ಹುಟ್ಟಿಬಂದುದು ಇತಿಹಾಸದ ಅಣಕವಾಗಿದೆ. ಈ ಧ್ವನಿಗಳು ಹುಟ್ಟಿ ಬರದಿದ್ದಿದ್ದರೆ ಭಾರತ ಇನ್ನೂ ೧೬ ನೆಯ ಶತಮಾನದಲ್ಲಿಯೇ ಉಳಿಯುವ ಸಾಧ್ಯತೆಯನ್ನು ಅಲ್ಲಗಳೆಯಲಾಗುವುದಿಲ್ಲ.

ಸನಾತನಿಗಳ ಅಟ್ಟಹಾಸವನ್ನು ಮೊಟ್ಟ ಮೊದಲ ಬಾರಿಗೆ ಮುರಿದು ಹಾಕಿದವರು ಜ್ಯೋತಿಬಾ ಫುಲೆಯವರು. ಮನುಸ್ಮೃತಿಯನ್ನು ಬೆಂಕಿಗೆ ಹಾಕಿ ಫುಲೆ ವೈಚಾರಿಕತೆಯನ್ನು ಮೆರೆದವರು. ಇಡಿ ಶೂದ್ರರ ಪ್ರತಿನಿಧಿಯಾಗಿ ಫುಲೆ ವೈದಿಕರನ್ನು ಎದುರು ಹಾಕಿಕೊಂಡು ಅವರ ಅರ್ಥಹೀನ ಆಚಾರ-ವಿಚಾರಗಳನ್ನು ಖಂಡಿಸಿದವರು. ಶೂದ್ರರ ಅವನತಿಗೆ ಅವರ ಅನಕ್ಷರತೆಯೇ ಕಾರಣವೆಂದು ಬಗೆದ ಫುಲೆ ಸ್ವತಃ ಶಾಲೆಗಳನ್ನು ಆರಂಭಿಸಿ, ಶೂದ್ರ ಹುಡುಗರ-ಹುಡುಗಿಯರ ಶಿಕ್ಷಣಕ್ಕೆ ಬಾಗಿಲು ತೆರೆದರು. ತಮ್ಮ ಹೆಂಡತಿ ಸಾವಿತ್ರಿಬಾಯಿಯನ್ನು ಹುಡುಗಿಯರಿಗೆ ಕಲಿಸಲೆಂದು ತರಬೇತಿ ನೀಡಿದರು. ಹೆಣ್ಣು ಮಕ್ಕಳು ಶಾಲೆ ಕಲಿಯುವುದನ್ನು ವಿರೋಧಿಸಿದ ಸನಾತನಿಗಳು ಸಾವಿತ್ರಿಬಾಯಿಗೆ ನಾನಾ ರೀತಿಯಲ್ಲಿ ತೊಂದರೆ ನೀಡಿದರು. ಸಾವಿತ್ರಿಬಾಯಿಯ ಮೇಲೆ ಸಗಣಿ ತೂರಲಾಯಿತು; ಕಲ್ಲು ಹೊಡೆಯಲಾಯಿತು. ಇದಾವುದನ್ನು ಲೆಕ್ಕಿಸದೆ ಸಾವಿತ್ರಿಬಾಯಿ-ಜ್ಯೋತಿಬಾ ಫುಲೆ ತಮ್ಮ ಕಾರ್ಯವನ್ನು ಮುಂದುವರೆಸಿದರು. ಈ ಇಬ್ಬರ ಪ್ರಯತ್ನದ ಫಲವಾಗಿಯೇ ಭಾರತಕ್ಕೆ ಡಾ॥ ಬಾಬಾಸಾಹೇಬ ಅಂಬೇಡ್ಕರ್‌ರು ಲಭ್ಯವಾದದ್ದು.

ಆ ಕಾಲದಲ್ಲಿ ದಲಿತರ ಬದುಕು ಅಸಹನೀಯವಾಗಿತ್ತು. ಅವರಿಗೆ ಎಲ್ಲಿಯೂ ಪ್ರವೇಶವಿರಲಿಲ್ಲ; ಬೆನ್ನ ಹಿಂದೆ ಕಸಬರಿಗೆ ಕಟ್ಟಿಕೊಂಡು ಕೊರಳಿಗೆ ಗಡಿಗೆ ಕಟ್ಟಿಕೊಂಡು ಅವರು ಹೊರಬೀಳಬೇಕಾಗಿತ್ತು. ಅವರು ರಸ್ತೆಯಲ್ಲಿ ಮೂಡಿಸಿದ ಹೆಜ್ಜೆಗಳನ್ನು ಕಸಬರಿಗೆ ಅಳಿಸಿ ಹಾಕುವುದೆಂದೂ, ಉಗುಳು ಬಂದರೆ ಗಡಿಗೆಯಲ್ಲಿ ಉಗುಳಬೇಕೆಂದೂ ಅವರ ಮೇಲೆ ಸಮಾಜ ನಿರ್ಬಂಧ ಹೇರಿತ್ತು. ದಲಿತರ ಹೆಜ್ಜೆಗಳನ್ನು ಸಮಾಜ ಸಹಿಸುವ ಸ್ಥಿತಿಯಲ್ಲಿರಲಿಲ್ಲ. ಅವರು ರಸ್ತೆಯಲ್ಲಿ ನಡೆಯುವಾಗ 'ಜೋಹಾರ್ ಮಾಯ್ ಬಾಪ್' ಎಂದು ಕೂಗಬೇಕಾಗಿತ್ತು. ಇದು ಎದುರಿಗೆ ಬರುವ ಸವರ್ಣಿಯನಿಗೆ 'ನಿಮ್ಮ ಎದುರು ಒಬ್ಬ ದಲಿತ ಬರುತ್ತಿದ್ದಾನೆಂದು' ನೀಡುವ ಸಂದೇಶವಾಗಿತ್ತು. ದಲಿತರನ್ನು ಊರ ಹೊರಗೆ ಹಾಕಿ ಅವರನ್ನು ಅಪರಾಧಿ ಜನಾಂಗವೆಂಬ ರೀತಿಯಲ್ಲಿ ನಡೆಸಿಕೊಳ್ಳಲಾಗಿತ್ತು. ಊರಲ್ಲಿ ಕಳುವು, ದರೋಡೆಗಳಾದರೆ ಅವುಗಳಿಗೆ ದಲಿತರನ್ನೇ ಜವಾಬ್ದಾರಿ ಮಾಡಲಾಗುತ್ತಿತ್ತು. ಬರಗಾಲ ಬಂದಾಗಲೂ ಅದಕ್ಕೆ ದಲಿತರೇ ಕಾರಣವೆಂದು ಹೇಳಲಾಗುತ್ತಿತ್ತು. ಒಂದು ವೇಳೆ ಅತಿವೃಷ್ಠಿಯಾಗಿದ್ದರೂ ಅದಕ್ಕೂ ದಲಿತರನ್ನೇ ದೂಷಿಸಲಾಗುತ್ತಿತ್ತು.

ದಲಿತರಿಗೆ ನಿರ್ದಿಷ್ಟವಾದ ಕೆಲಸಗಳೂ ಇರಲಿಲ್ಲ. ಅವರು ಸಾರ್ವಜನಿಕ ಬಾವಿಯಿಂದ ನೀರು ಸೇದುವ ಹಾಗಿರಲಿಲ್ಲ. ದೇವಸ್ಥಾನಗಳಲ್ಲಿ ಅವರಿಗೆ ಪ್ರವೇಶವಿರಲಿಲ್ಲ. ಸತ್ತ ದನವನ್ನು ಅವರು ತಿನ್ನಬೇಕಾಗುತ್ತಿತ್ತು. ಧರ್ಮಶಾಸ್ತ್ರಗಳು ಅವರಿಗೆ ಪಶುವಿಗಿಂತಲೂ ಕಡೆಯದಾದ ಜೀವನ ಕ್ರಮವನ್ನು ವಿಧಿಸಿದ್ದವು.

ಸಮಾಜದ ಈ ಕಟ್ಟಳೆಗಳನ್ನು ವಿರೋಧಿಸಿದ ಜ್ಯೋತಿಬಾ ಫುಲೆಯವರಿಗೆ ಒತ್ತಾಸೆಯಾಗಿ ನಿಂತವರು ಕೊಲ್ಲಾಪುರದ ಆಗಿನ ಛತ್ರಪತಿಗಳಾಗಿದ್ದ ಶಾಹು ಮಹಾರಾಜರು. ದಲಿತ ಮತ್ತು ಶೂದ್ರರ ಸುಧಾರಣೆಗಾಗಿ ಅನೇಕ ಜನಪರ ಕಾರ್ಯಕ್ರಮಗಳನ್ನು ಜಾರಿಗೆ ತಂದ ಶಾಹು ಮಹಾರಾಜರು ದಲಿತರ ಕೈವಾರಿಗಳೆಂದು ಇತಿಹಾಸದಲ್ಲಿ ನಮೂದಾಗಿದ್ದಾರೆ. ಅವರ ಈ ಕ್ರಮಗಳನ್ನು ಒಳಗಿಂದೊಳಗೆ ಸನಾತನಿಗಳು ವಿರೋಧಿಸಿದ್ದರು. ಶಾಹು ಮಹಾರಾಜರ ಕೈಯಲ್ಲಿ ಅಧಿಕಾರ ಇದ್ದುದರಿಂದ ಅವರು ಏನೂ ಮಾಡುವಂತಿರಲಿಲ್ಲ. ಜ್ಯೋತಿಬಾ ಫುಲೆ ಕಂಡ ಕನಸುಗಳನ್ನು ನನಸನ್ನಾಗಿ ಮಾಡಲು ಶಾಹು ಮಹಾರಾಜರು ಯತ್ನಿಸಿ ಅದರಲ್ಲಿ ಬಹುಪಾಲು ಯಶಸ್ವಿಯೂ ಆದರೂ. ಶೂದ್ರರಿಗಾಗಿ, ದಲಿತರಿಗಾಗಿ ಅಲ್ಲಲ್ಲಿ ಶಾಲೆಗಳನ್ನು ಆರಂಭಿಸಲಾಯಿತು.

ಇಂತಹ ಸಂಕ್ರಮಣ ಪರಿಸ್ಥಿತಿಯಲ್ಲಿ ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲೂಕಿನ ಇಂಗಳಿ ಗ್ರಾಮದಲ್ಲಿ ೧೮೮೯ ಜುಲೈ ತಿಂಗಳಿನಲ್ಲಿ ದೇವರಾಯ ಹುಟ್ಟಿದ. ಇಂಗಳಿ ಕೊಲ್ಲಾಪುರಕ್ಕೆ ತೀರ ಸಮೀಪದ ಹಳ್ಳಿ. ದೇವರಾಯನ ತಂದೆ ರಾಮರಾಯ. ಹೊಲೆಯರು ಮನೆಯಲ್ಲಿ ಹುಟ್ಟಿದ ದೇವರಾಯ ಸ್ವಾಭಾವಿಕವಾಗಿ ಬಡತನದಲ್ಲಿಯೇ ಬೆಳೆಯಬೇಕಾಯಿತು. ಕೊಲ್ಲಾಪುರದ ಸುಧಾರಣೆಯ

जाहीर खबर

कर्नाटकांतील सर्व बहिष्कृत विद्यार्थ्यांना कळविण्यांत येतें की, भारतीय-बहिष्कृत-समाज-शिक्षण-प्रसारक-मंडळ, याच्या विद्यमाने येत्या जून महिन्यापासून इंग्रजी शिकणाऱ्या अस्पृश्य विद्यार्थ्यांकरितां धारवाडास १५ मुलांचे फ्री बोर्डिंग उघडण्यांत येणार आहे. करितां बोर्डिंगांत दाखल होऊं इच्छिणाऱ्या विद्यार्थ्यांनी वरील मंडळाचे सेक्रेटरी याच्या नांवे ता. २० मे १९२९ च्या आंत खालील पत्यावर अर्ज पाठवावेत. अर्जासोबत पास झालेल्या परिक्षेंतील मार्कांचे लिस्ट व वयाचा दाखला पाठवावा. तसेच ता. १८ ते २० मे. निपाणीस समक्ष भेट घ्यावी.
ता. ९-मे-१९२९ इ.

अर्ज पाठविण्याचा पत्ता– श्री. बळवंत हनुमंत वराळे
मु. पो. बेनाडी ता. चिकोडी
जि. बेळगांव

धारवाड ಟೀಚರ್ಸ್ ಟ್ರೈನಿಂಗ್ ಕಾಲೇಜ್ ಜಾಹೀರಾತು

ಗಾಳಿ ಇಂಗಳಿ ಊರಿಗೂ ಬೀಸಿತ್ತು. ತನ್ನ ಮಗ ಶಾಲೆ ಕಲಿತರೆ ದೊಡ್ಡ ಸಾಹೇಬನಾಗಬಹುದೆಂಬ ಆಸೆಯಿಂದ ರಾಮರಾಯ, ದೇವರಾಯನಿಗೆ ಶಾಲೆಗೆ ಹಾಕಿದ. ಆಗ ದಲಿತರ ಮಕ್ಕಳು ಕ್ಲಾಸಿನ ಹೊರಗಡೆ ಕುಳಿತುಕೊಂಡು ಅಕ್ಷರ ಕಲಿಯಬೇಕಾಗುತ್ತಿತ್ತು. ಒಳಗಡೆ ಶಿಕ್ಷಕರು ಹೇಳಿದ್ದನ್ನು ಏಕಾಗ್ರವಾಗಿ ಕೇಳಿ ಅದನ್ನು ಅನುಸರಿಸಬೇಕಾಗುತ್ತಿತ್ತು. ಕುಶಾಗ್ರಮತಿಯಾದ ದೇವರಾಯ ಒಂದೆರಡು ಐದನೆಯ ತರಗತಿವರೆಗೆ ಶಾಲೆ ಕಲಿತ. ಮುಂದೆ ಕಲಿಯಬೇಕೆಂದರೆ ಆತ ಚಿಕ್ಕೋಡಿಗೆ ಹೋಗಬೇಕಾಗಿತ್ತು. ಆದರೆ ಮನೆಯಲ್ಲಿದ್ದ ಅಸಾಧ್ಯ ಬಡತನ ಅವನನ್ನು ಚಿಕ್ಕೋಡಿಗೆ ಹೋಗದಂತೆ ತಡೆಯಿತು.

ತನ್ನ ತಂದೆಗೆ ಅದು-ಇದು ಸಹಾಯ ಮಾಡುತ್ತ ದೇವರಾಯ ಒಂದೆರಡು ವರ್ಷ ಹಳ್ಳಿಯಲ್ಲಿಯೇ ಕಳೆದ. ಆದರೆ ಬಂಡಾಯದ ಅವನ ಮನಸ್ಸು ಅವನನ್ನು ಹಳ್ಳಿಯಲ್ಲಿ ಉಳಿಯಗೊಡುವಂತಿರಲಿಲ್ಲ. ದೇವರಾಯ ಕೊಲ್ಲಾಪುರಕ್ಕೆ ಹೋಗುವದೆಂದು ನಿರ್ಧರಿಸಿದ. ಹಳ್ಳಿಯಲ್ಲಿದ್ದಷ್ಟು ನಿರ್ಬಂಧಗಳು ಕೊಲ್ಲಾಪುರದಲ್ಲಿರಲಿಲ್ಲ. ಆ ಈ ಕೆಲಸ ಮಾಡುತ್ತ ದೇವರಾಯ ಮರಾಠಿ, ಹಿಂದಿ, ಇಂಗ್ಲೀಷ್ ಹಾಗೂ ಮೋಡಿ ಭಾಷೆಗಳನ್ನು ಕಲಿತ. ಆ ಕಾಲದಲ್ಲಿ ಮರಾಠಿ ಮತ್ತು ಮೋಡಿ ಗೊತ್ತಿರುವವರಿಗೆ ಸುಲಭದಲ್ಲಿ ಶಿಕ್ಷಕವೃತ್ತಿ ಸಿಗುತ್ತಿತ್ತು. ದೇವರಾಯ ಮಾಸ್ತರನಾಗಿ ವಾಪಸ್ಸು ಇಂಗಳಿಗೆ ಬಂದ; ನಂತರ ಅಲ್ಲಲ್ಲಿ ವರ್ಗಾವರ್ಗಿಗಳೂ ನಡೆದವು. ಆದರೆ ಸವರ್ಣಿಯ ಶಿಕ್ಷಣಾಧಿಕಾರಿ ಜೊತೆಗೆ ನಡೆದ ಆತನ ಮತಭೇದ ಅವನು ತನ್ನ ಶಿಕ್ಷಕ ವೃತ್ತಿಗೆ ರಾಜೀನಾಮೆ ನೀಡುವಂತೆ ಮಾಡಿತು.

ಇದರಿಂದ ದೇವರಾಯ ಧೈರ್ಯಗೆಡಲಿಲ್ಲ. ಆ ಹೊತ್ತಿಗಾಗಲೇ ಪ್ರತಿದಿನ ದಿನಚರಿ ಬರೆಯುತ್ತಿದ್ದ ದೇವರಾಯ 'ಈ ಘಟನೆ ನನ್ನಲ್ಲಿ ಇನ್ನಷ್ಟು ಆತ್ಮವಿಶ್ವಾಸವನ್ನು ಹೆಚ್ಚಿಸಲು ಸಹಾಯಕಾರಿಯಾಯಿತು; ಅನ್ಯಾಯವನ್ನು ಎದುರಿಸಲು ಹೆಚ್ಚಿನ ಶಕ್ತಿಯನ್ನು ನೀಡಿತು' ಎಂದು ನಮೂದಿಸಿದ.

ಶಿಕ್ಷಕ ವೃತ್ತಿಯಿಂದ ಹೊರಬಿದ್ದ ದೇವರಾಯ ಈಗ ಇಡಿ ಬೆಳಗಾವಿ ಜಿಲ್ಲೆ ಮತ್ತು ದಕ್ಷಿಣ ಮಹಾರಾಷ್ಟ್ರ ಅಡ್ಡಾಡಿದ. ದಲಿತರ ಅಸಹನೀಯವಾದ ಬದುಕನ್ನು ಕಣ್ಣಾರೆ ಕಂಡ. ಅಷ್ಟೊತ್ತಿಗಾಗಲೇ ಮಹಾರಾಷ್ಟ್ರದಲ್ಲಿ ಡಾ॥ ಬಾಬಾಸಾಹೇಬ ಅಂಬೇಡ್ಕರ್‌ರ ಧ್ವನಿ ಮೊಳಗಲಾರಂಭಿಸಿತ್ತು. ತೀಕ್ಷ್ಣಮತಿಯಾದ ಅಂಬೇಡ್ಕರ್‌ರ ವೈಚಾರಿಕ ವಿಚಾರಗಳು ದಂತ ಕಥೆಗಳಾಗಿ ದಲಿತ ಕೇರಿಗಳಲ್ಲಿ ಪ್ರವೇಶಿಸಲಾರಂಭಿಸಿದ್ದವು. ದೇವರಾಯ ಬಾಬಾಸಾಹೇಬರಿಗಿಂತ ಎರಡು ವರ್ಷ ದೊಡ್ಡವ. ಅಂಬೇಡ್ಕರ್‌ರಲ್ಲಿ ಆತ ದಲಿತರ ನೋವಿನ ಮುಕ್ತಿಯನ್ನು ಕಂಡ. ಅಂಬೇಡ್ಕರ್‌ರು ಮಾತ್ರ ಜ್ಯೋತಿಬಾ ಫುಲೆಯವರ ಆದರ್ಶ ಮತ್ತು ವೈಚಾರಿಕತೆಗಳನ್ನು ಮುಂದುವರೆಸಬಲ್ಲರೆಂಬ ಸತ್ಯದ ಅರಿವು ಆತನಿಗಾಯಿತು. ಕೂಡಲೇ ಆತ ಅಂಬೇಡ್ಕರ್‌ರಿಗೆ ಪತ್ರವನ್ನು ಬರೆದ.

ಆತನಿಗೆ ಅಚ್ಚರಿಯೆನ್ನಿಸುವಂತೆ ಅಂಬೇಡ್ಕರ್ ಅವನಿಗೆ ಉತ್ತರವನ್ನು ಬರೆದರು. ಆಗ ಅಂಬೇಡ್ಕರ್ ಯುವಕರಾಗಿದ್ದರು. ದಲಿತರ ಬಗ್ಗೆ ಏನಾದರೂ ಮಾಡಬೇಕೆಂಬ ಅಚಲ ನಿರ್ಧಾರದವರಾಗಿದ್ದರು. ದಲಿತರ ಅವನತಿಗೆ ಅವರ ಅಜ್ಞಾನ, ನಿರಕ್ಷರತೆ, ಬಡತನ, ಮೂಢ ನಂಬಿಕೆ ಹಾಗೂ ಹಿಂದೂ ಧರ್ಮದಲ್ಲಿರುವ ಕಟ್ಟಳೆಗಳೆಂದು ಅವರು ಅರಿತಿದ್ದರು. ಈ ವಿಷಯಗಳ ಬಗ್ಗೆ ಅವರು ದೇವರಾಯನ ಜೊತೆಗೆ ಮುಕ್ತವಾಗಿ ಚರ್ಚಿಸಿದರು. ದಲಿತ ಮಕ್ಕಳು ಶಾಲೆ ಕಲಿಯುವಂತಾಗಲು ಪ್ರತಿ ತಾಲೂಕಿನಲ್ಲಿ ಒಂದಾದರೂ ಹಾಸ್ಟೆಲ್ ಇರಬೇಕೆಂದು ಅವರು ಸೂಚಿಸಿದರು. ಈ ವಿಚಾರ ದೇವರಾಯನಿಗೆ ನಾಟಿತು.

ದೇವರಾಯ ದಂಪತಿಗಳು

ಅಷ್ಟರಲ್ಲಿ ನಿಪ್ಪಾಣಿ, ಚಿಕ್ಕೋಡಿ ಭಾಗಗಳಲ್ಲಿ ದತ್ತಾ ಕಟ್ಟಿ, ಬಳವಂತರಾವ ವರಾಳೆ, ಚಂಪಾಬಾಯಿ ಭೋಗಲೆ, ಪಿ.ಪಿ. ಹೆಗ್ರೆ, ಭವಾನೆ ಮುಂತಾದ ಹೊಸ ವಿಚಾರದ ದಲಿತ ಯುವಕ-ಯುವತಿಯರು ಡಾ॥ ಅಂಬೇಡ್ಕರ್-ಫುಲೆ ವಿಚಾರ ಪ್ರಚೋದಿತರಾಗಿ ಕೆಲಸ ಮಾಡಲು ಮುಂದೆ ಬಂದರು. ಈ ಎಲ್ಲ ಯುವಕರಿಗೆ ಮೂಲತಃ ಹಿಂದೂ ಧರ್ಮದ ಚಾತುರ್ವಣ್ಯ ಪದ್ಧತಿಯ ಬಗ್ಗೆ ಅಸಾಧ್ಯವಾದ ಕೋಪವಿತ್ತು. ತಮ್ಮ ಸಮಾಜದ ಅಕ್ಕ-ತಂಗಿಯರು ದೇವದಾಸಿಯರಾಗಿ ಕೆಂಪು ಪ್ರದೇಶದಲ್ಲಿ ಮುದುಡಿ ಹೋಗುತ್ತಿರುವುದನ್ನು ಈ ಯುವಕರು ಕಂಡಿದ್ದರು. ತಮ್ಮ ಶಾರೀರಿಕ ಮತ್ತು ಮಾನಸಿಕ ದಾಸ್ಯವನ್ನು ಡಾ. ಅಂಬೇಡ್ಕರ್ ಮಾತ್ರ ಕಿತ್ತೊಗೆಯಬಲ್ಲರೆಂಬ ವಿಶ್ವಾಸವೂ ಈ ಯುವಕರಲ್ಲಿತ್ತು. ದೇವರಾಯ, ಡಾ. ಅಂಬೇಡ್ಕರ್ ಜೊತೆಗೆ ನೇರವಾಗಿ ಸಂಪರ್ಕ ಇಟ್ಟುಕೊಂಡಿದ್ದನ್ನು ಇವರು ಅರಿತಿದ್ದರು. ದೇವರಾಯನ ಕೆಲಸದಲ್ಲಿ ತಮ್ಮ ಕೈಲಾದಷ್ಟು ಸಹಾಯ ಸಹಕಾರಗಳನ್ನು ನೀಡಬೇಕೆಂದು ಈ ಯುವಕರ ತಂಡ ನಿರ್ಧರಿಸಿತು.

ಇದರಿಂದ ದೇವರಾಯನಿಗೆ ಭೀಮಬಲ ಬಂದಂತಾಯಿತು. ಹಳ್ಳಿ ಹಳ್ಳಿಗೆ ಹೋಗಿ ದಲಿತರನ್ನು ಭೇಟಿಯಾದ, 'ನಿನ್ನ ಮಕ್ಕಳು ನಿಮ್ಮಂತೆ ಹೇಲು ಉಚ್ಚಿ ಬಳಿಯಬೇಕೇ? ನಿಮ್ಮಂತೆ ಸತ್ತ ದನಗಳ ಚರ್ಮ ಬಿಡಿಸುತ್ತ ಕೂಡಬೇಕೇ? ಅಥವಾ ಬಾಬಾಸಾಹೇಬರಂತೆ ಬ್ಯಾರಿ-ಸ್ಟರ್ ರಾಗಬೇಕೆ? ಎಂದು ಜನರಿಗೆ ಕೇಳುತ್ತಿದ್ದ. ಬಾಬಾಸಾಹೇಬರ ಬಗ್ಗೆ ಪ್ರಚಂಡ ಗೌರವ ಹೊಂದಿದ್ದ ಈ ಜನ ಸ್ವಾಭಾವಿಕವಾಗಿ ಬಾಬಾಸಾಹೇಬರಂತಾಗ ಬೇಕೆನ್ನುತ್ತಿದ್ದರು. 'ಅವರಂತಾಗಬೇಕಾದರೆ ನಿಮ್ಮ ಮಕ್ಕಳಿಗೆ ಶಾಲೆಗೆ ಕಳಿಸಿ' ಎನ್ನುತ್ತಿದ್ದ. 'ನಾವು ಗರೀಬರು; ನಮಗೇ ತಿನ್ನ... ಕೂಳಿಲ್ಲ; ಇನ್ನು ಅವರನ್ನು ಶಾಲೆಗೆಲ್ಲಿಂದ ಕ... ಬೇಕು?' ಎಂದು ಅವರು ತಗಾದೆ ತೆಗೆಯುತ್ತಿದ್ದ... 'ಬೋರ್ಡಿಂಗ್ ಸುರು ಮಾಡುವವನಿದ್ದೇನೆ; ... ಊಟ-ವಸತಿ ಫುಕಟ್. ಮ್ಯಾಲೆ ಸಾಲಿ' ಎನ್ನುತ್ತಿ... ಅವರು ಅದನ್ನು ಸಮ್ಮತಿಸುತ್ತಿದ್ದರು. ಹೀ... ಊರಿಂದ ಊರಿಗೆ ಇವನ ಪ್ರಯಾಣ ಮುಂದು... ರೆಯುತ್ತಿತ್ತು.

ದೇವರಾಯನ ಇಂಗ್ಲೀಷ ಭಾಷೆಯ ಜ... ಅವನಿಗೆ ಸರ್ಕಾರಿ ಅಧಿಕಾರಿಗಳ ಜೊತೆ ಒಳ್ಳೆ... ಸಂಬಂಧ ಕುದುರಿಸಲು ಸಹಾಯಕ... ಯಾಯಿತು. ಅನೇಕ ಸಲ ಆತ ಬೆಳಗಾ... ಬಂದು ಕಲೆಕ್ಟರ್‌ರನ್ನು ಭೇಟಿಯಾಗುತ್ತಿದ್ದ. ದೇ... ರಾಯ ಜೊತೆ ಕಲೆಕ್ಟರ್ ಇಂಗ್ಲೀಷ್‌ನಲ್ಲಿ ಮಾ... ನಾಡಿದ' ಎಂಬ ಕಥೆಗಳು ಹುಟ್ಟಿ ಅವುಗಳಿಗೆ ... ಪುಕ್ಕ ಮೂಡಿ ಮುಂದೆ ಅವು ದಂತಕಥೆಗಳ... ದಲಿತರ ಕಿವಿ ಮುಟ್ಟುತ್ತಿದ್ದವು. ಈ ರೀತಿಯ ...ಗಳು ತಹಶೀಲ್ದಾರ್ ಅಥವಾ ಪ್ರಾಂತ ಸಾಹೇಬ... ದೇವರಾಯನ ಬಗ್ಗೆ ಗೌರವ ಮೂಡಿಸಲು ಸ... ಯಕಾರಿಯಾದವು. ತನ್ನ ಇಂಗ್ಲೀಷ್ ಭಾಷೆಯಿಂದ... ಸರ್ಕಾರಿ ಕಚೇರಿಗಳಲ್ಲಿ ಯಾವ ಅಡೆತಡೆಗಳೂ ಇಲ್ಲದ... ಆತ ಓಡಾಡಲಾರಂಭಿಸಿದ.

ಬೋರ್ಡಿಂಗ್ ಶಾಲೆ ಆರಂಭಿಸುವ ಮೊದ... ದೇವರಾಯ ತಹಶೀಲ್ದಾರ್‌ರ ಜೊತೆಗೆ ಚರ್ಚಿಸಿ... ಅವರು ಸರ್ಕಾರಿ ರೇಶನ್ ಮಂಜೂರು ಮಾಡಬೇಕಿ... 'ಇಂತಿಷ್ಟು ಮಕ್ಕಳು ಅಂತ ಹೇಳಿದರೆ ನಾನು ಸರ್ಕಾ... ಪ್ರಪೋಸಲ್ ಕಳಿಸುತ್ತೇನೆ' ಎಂದು ಅವರು ಹೇಳಿದ... ಅವರ ಈ ಆಶ್ವಾಸನೆಯಿಂದ ಸಂತೋಷಗೊಂಡ ದೇ... ರಾಯ ಕಾರದಗಾದಲ್ಲಿ ಬೋರ್ಡಿಂಗ್ ಶಾಲೆಯ... ಆರಂಭಿಸಿಯೇ ಬಿಟ್ಟ. ಆ ಭಾಗದ ದಲಿತ ಜನ ಹಿಂ... ಕಟ್ಟಿಕೊಂಡು ಈ ಬೋರ್ಡಿಂಗ್ ಶಾಲೆ ನೋಡಲೆಂ... ಬಂದರು. ಅವರಿಗೆ ಇದೊಂದು ಪವಾಡ ನಡೆದ... ಅನ್ನಿಸಿತ್ತು. ಆರಂಭದಲ್ಲಿ ೧೦ ಹುಡಗರನ್ನು ಶಾ... ಸೇರಿಸಿಕೊಳ್ಳಬೇಕೆಂದು ನಿರ್ಧರಿಸಿದ್ದ ದೇವರಾಯ ಹು... ಗರ ಸಂಖ್ಯೆ ಜಾಸ್ತಿಯಾದಾಗ ನಿಪ್ಪಾಣಿ ಮತ್ತು ಚಿಕ್ಕೋ... ಯಲ್ಲಿ ಬೋರ್ಡಿಂಗ್ ಶಾಲೆ ಆರಂಭಿಸುವ ನಿರ್ಧಾ... ಮಾಡಿದ. ತಮ್ಮ ಮಕ್ಕಳನ್ನು ಬಾಬಾಸಾಹೇಬರ ಪ್ರೇಮಿನ... ಊಹಿಸಿದ್ದ ದಲಿತರು, ತಾವು ಎಷ್ಟೇ ಕಷ್ಟಪಟ್ಟರೂ ತ... ಮಕ್ಕಳು ಶಾಲೆಗೆ ಹೋಗಲೇಬೇಕೆಂಬ ಉತ್ಸಾಹದಿಂ... ಹುಡುಗರನ್ನು ಈ ಶಾಲೆಗೆ ಸೇರಿಸಿದರು.

ಈ ಶಾಲೆಗಳಿಗೆ ರೇಶನ್ ಮಂಜೂರು ಮಾಡ... ಇಂಗ್ಲೀಷ ಸರ್ಕಾರ ಮೀನ-ಮೇಷ ಎಣಿಸಲಿಲ್ಲ. ಕೆಲ... ಕಡೆ ಶಿಕ್ಷಕರನ್ನೂ ಸರ್ಕಾರ ನೀಡಿತು. ಒಂದೆರಡು ವ... ಸ್ವತಃ ದೇವರಾಯನೇ ಶಿಕ್ಷಕನಾಗಿ ಶಾಲೆಯಲ್ಲಿ ದುಡಿ... ಮುಂದೆ ಇದೇ ರೀತಿ ಬೋರ್ಡಿಂಗ್ ಶಾಲೆ ಬೆಳಗಾ... ಅರ್.ಟಿ.ಓ. ಕಚೇರಿ ಹತ್ತಿರ ಆರಂಭಿಸಿದ. ಬೆಳಗಾ... ಗೋವಾವೇಸ್ ಬಳಿ ಹುಡುಗಿಯರಿಗಾಗಿಯೇ ಇಂತ... ದೊಂದು ಶಾಲೆಯನ್ನು ಶುರುಮಾಡಿದ.

ದೇವರಾಯನ ಉತ್ಸಾಹ ಪ್ರಯತ್ನದಿಂ... ದಲಿತರಿಗಾಗಿಯೇ ಅಲ್ಲಲ್ಲಿ ಶಾಲೆಗಳು ಆರಂಭವಾದ... ಈ ಶಾಲೆಗಳ ಉಸ್ತುವಾರಿ ದಲಿತರ ಕೈಯ...

ಇರಬೇಕೆಂದು ದೇವರಾಯ ಸರ್ಕಾರಕ್ಕೆ ಕೇಳಿಕೊಂಡ. ಶಾಹು ಮಹಾರಾಜರು ತಮ್ಮ ಸಂಸ್ಥಾನದಲ್ಲಿ ಆರಂಭಿಸಿದ ಶಾಲೆಗಳ ಉಸ್ತುವಾರಿಯನ್ನು ಆಯಾ ಜಾತಿಯವರಿಗೆ ನೀಡಿದ್ದರು. ಈ ಉದಾಹರಣೆಯನ್ನು ನೀಡಿ ದಲಿತರ ಶಾಲೆಗಳಲ್ಲಿ ದಲಿತ ಶಿಕ್ಷಕರು ಇರಬೇಕೆಂದು ದೇವರಾಯ ಆಗ್ರಹಿಸಿದ್ದರಲ್ಲಿ ಯಾವ ಅಚ್ಚರಿಯೂ ಇರಲಿಲ್ಲ.

ಧಾರವಾಡ ಟೀಚರ್ಸ್ ಟ್ರೇನಿಂಗ್ ಕಾಲೇಜಿನಲ್ಲಿ ದಲಿತರು ಔಷಧಕ್ಕೂ ಸಿಗುತ್ತಿರಲಿಲ್ಲ. ತಮ್ಮ ಶಾಲೆಗಳ ಉಳಿಯಬೇಕಾದರೆ ಅವುಗಳಿಗೆ ದಲಿತ ಶಿಕ್ಷಕರು ಇರಬೇಕೆಂದು ಮನಗಂಡಿದ್ದ ದೇವರಾಯ ಶಿಕ್ಷಕರ ನಿರ್ಮಾಣದ ಕೇಂದ್ರವಾದ ಟೀಚರ್ಸ್ ಟ್ರೇನಿಂಗ್ ಕಾಲೇಜಿಗೆ ಲಗ್ಗೆ ಹಾಕಿದ. ಈ ಕಾಲೇಜಿನಲ್ಲಿ ಇಂತಿಷ್ಟು ಪ್ರಮಾಣದ ಸ್ಥಳಗಳು ದಲಿತ ವಿದ್ಯಾರ್ಥಿಗಳಿಗೆ ಮೀಸಲಿರಿಸಬೇಕೆಂದು ಸರ್ಕಾರದ ಮುಂದೆ ಬೇಡಿಕೆ ಮಂಡಿಸಿದ. ಅದರ ಜೊತೆಗೆ ಈ ದಲಿತ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಹಾಗೂ ಉಚಿತ ಬೋರ್ಡಿಂಗ್ ನೀಡಬೇಕೆಂದೂ ಒತ್ತಾಯ ತಂದ.

ದೇವರಾಯನ ದೂರದೃಷ್ಟಿತ್ವ ವಿಶೇಷವಾಗಿತ್ತು. ಬಾಬಾಸಾಹೇಬ ಅಂಬೇಡ್ಕರ್‌ರು ಕಂಡ ಕನಸುಗಳನ್ನು ಈತ ನನಸನ್ನಾಗಿ ಮಾಡುತ್ತಿದ್ದ. ಈತ ಕಂಡ ಕನಸುಗಳನ್ನು ಅವರು ನನಸಾಗಿಸುತ್ತಿದ್ದರು. ದೇವರಾಯನ ಟ್ರೇನಿಂಗ್ ಕಾಲೇಜು ಮೀಸಲಾತಿ ಬೇಡಿಕೆಯನ್ನು ಸರ್ಕಾರ ಭಾಗಶಃ ಒಪ್ಪಿಕೊಂಡು ಜಾರಿಗೆ ತಂದಿತ್ತು. ಅದರ ಪರಿಣಾಮವಾಗಿ ನೂರಾರು ದಲಿತರು ಟ್ರೇನಿಂಗ್ ಕಾಲೇಜು ಸೇರಿ ಶಿಕ್ಷಕರಾಗಿ ಹೊರಗೆ ಬಂದರು.

ಈ ಶಿಕ್ಷಕರಿಗೆ ಕೂಡಲೇ ನೌಕರಿಗಳು ಸಿಕ್ಕವು. ದಲಿತ ಪ್ರಜ್ಞೆಯ ಈ ಶಿಕ್ಷಕರು ಸಾವಿರಾರು ದಲಿತ ವಿದ್ಯಾರ್ಥಿಗಳಿಗೆ ಅಕ್ಷರಜ್ಞಾನ ಕಲಿಸಲು ಮುಂದಾದರು.

ಧಾರವಾಡದ ಬೋರ್ಡಿಂಗ್‌ಗೆ ನಿಪ್ಪಾಣಿ ಬಿ.ಎಚ್. ವರಾಳೆಯವರನ್ನು ಸುಪರಿಂಟೆಂಡೆಂಟ್‌ರೆಂದು ನೇಮಿಸಲಾಯಿತು. ವರಾಳೆ ಮತ್ತು ದೇವರಾಯ ಇಬ್ಬರೂ ಹೆಗಲಿಗೆ ಜೋಳಿಗೆ ಹಾಕಿ ಜನರಿಂದ ಹಣ ಮತ್ತು ಕಾಳು ಕಡ್ಡಿಯನ್ನು ಸಂಗ್ರಹಿಸಿ ಬೋರ್ಡಿಂಗಿಗೆ ತಂದು ಸುರಿದದ್ದೂ ಉಂಟು.

ನಿಪ್ಪಾಣಿಯ ಎಸ್. ಎನ್. ಮಾನೆ ಕೊಲ್ಲಾಪುರದ ರಾಜಾರಾಂ ಕಾಲೇಜಿನಲ್ಲಿ ಡಿಗ್ರಿ ಮುಗಿಸಿದರು. ಅವರಿಗೆ ಇಂಗ್ಲೆಂಡಿನಲ್ಲಿ ಬಾರ್-ಅಟ್-ಲಾ ಮಾಡುವುದಿತ್ತು. ಕೈಯಲ್ಲಿ ಒಂದು ಪೈಸೆಯೂ ಇಲ್ಲದೆ ಅವರು ಇಂಗ್ಲೆಂಡಿನ ಕನಸನ್ನು ಕಾಣುತ್ತಿದ್ದರು. ಈ ವಿಷಯ ದೇವ ರಾಯನಿಗೆ ಗೊತ್ತಾದಾಗ ಆತ ನೇರವಾಗಿ ಮಾನೆಯವರಲ್ಲಿಗೆ ಹೋದ. ಮಾನೆಯವರು ಬಿ.ಎ. ಪ್ರಥಮ ವರ್ಗದಲ್ಲಿ ಪಾಸಾಗಿದ್ದರು. 'ಇಷ್ಟು ಮಾರ್ಕ್ಸ್‌ಗಳಿಸಿದ ಮಾನೆ ಇಂಗ್ಲೆಂಡಿಗೆ ಹೋಗಲೇಬೇಕು' ಎಂದು ದೇವರಾಯ ನಿರ್ಧರಿಸಿದ. ಹೆಗಲಿಗೆ ಮತ್ತೆ ಜೋಳಿಗೆ ಬಂತು. ಹದಿನೈದು ದಿನ ಇಡೀ ಜಿಲ್ಲೆ ಅಡ್ಡಾಡಿದ ದೇವರಾಯ, 19,000 ರೂಪಾಯಿ ಕೂಡಿಸಿದ. ಒಟ್ಟು 20,000 ರೂಗಳನ್ನು ಮಾನೆಯವರಿಗೆ ನೀಡಲಾಯಿತು. ಮಾನೆಯವರು ಇಂಗ್ಲೆಂಡಿಗೆ ಹೋಗಿ ಬಾರ್-ಅಟ್-ಲಾ ಪದವಿ ಪಡೆದು ವಾಪಸ್ಸು ನಿಪ್ಪಾಣಿಗೆ ಬಂದರು. ತಮ್ಮ ಪದವಿಯನ್ನು ದೇವರಾಯನ ಪದತಲದಲ್ಲಿ ಇಟ್ಟು ನಮಸ್ಕರಿಸಿದ ಮಾನೆ 'ಇದು ನಿಮ್ಮದು; ನಿಮಗೆ ಸೇರಿದ್ದು' ಎಂದರು.

(ಮುಂದುವರಿಯುವುದು)☐



ನೋವಿದ್ದ ಹಲ್ಲಿನ ಕಡೆಗೆ ಹೊರಳುವುದು ನಾಲಿಗೆ ಮತ್ತೆ ಮತ್ತೆ
ನೋವುಂಡ ದಲಿತರ ಜೊತೆ ಕಾವ್ಯ ಬೆಳೆಸುವುದು ಸಲಿಗೆ ಮತ್ತೆ ಮತ್ತೆ
ಮುಳ್ಳಿನ ಬಾಯಿಯಲ್ಲಿ ಹೂ ನಾಲಿಗೆಯಿಟ್ಟು ನಾವು
ಹಾಡಿದರೆ ಮೂಡುವುದು ಜೀವನ ಸಮರ ಸಗಾನ ಮತ್ತೆ ಮತ್ತೆ

ಅವರಿಗೊಂದೇ ಈಗ ನಗುವ ಹಕ್ಕಿದೆ
ಯಾರು ಯುಗಗಳಿಂದ ನರಳಿ ಅಳುತ್ತಿರುವರು
ಅವರಿಗೊಂದೇ ಈಗ ಆಳುವ ಹಕ್ಕಿದೆ
ಯಾರು ಆಳಾಗಿ ನಿತ್ಯ ಆಳಿಸಿಕೊಂಡಿರುವರು

ನಡೆಯುತ್ತಿದ್ದಂತೆ ದಾರಿಯಲಿ ಕತ್ತಲಾಗಬಹುದು
ಇದೇ ದಾರಿಯಲಿ ಸೂರ್ಯ ಕಂಡರೂ ಕಾಣಬಹುದು
ಅರುಳುವ ಮುನ್ನ ಹೂಗಳು ಅರಳದೆ ಉರುಳಬಹುದು
ಇದರಲಿ ಬಿರು ಗಾಳಿಯ ರಾಜಕೀಯ ಕಾಣಬಹುದು

ಉಚ್ಚರಿಸಿದರೂ ಶಬ್ದ ಶಬ್ದಯಂತ್ರದಂತೆ ಮುಕ್ತಿಯದು ಸಿಗಲಿಲ್ಲ
ಸೂರ್ಯನ ಹೆಸರಿಟ್ಟರೂ ಬೆಳಕಿನ ಶಕ್ತಿಯದು ಸಿಗಲಿಲ್ಲ
ಕತ್ತಲೆ ಜೊತೆ ಒಂದಾಗಿ ಅಸ್ತಿತ್ವವಿಲ್ಲದ ಜನರನು
ಬೆಳಕಿನ ರಾಯಭಾರಿಗಳೆಂದೂ ಕರೆಯಲಾಗುವುದಲ್ಲ

ಒಂದು ಬೀಜದಲಿ ನೂರಾರು ಬೀಜದ ಮೊಳಕೆಗಳು
ಒಂದು ನೋವಿನ ಕಂಠದಲಿ ನೂರಾರು ಸಿಡಿಯುತ ಕಂಠಗಳು
ಜೀವನ, ಗತ ನೆನೆಪುಗಳ ಮ್ಯೂಜಿಯಂ ತಾನಲ್ಲ
ಕೆಡವಿದಂತೆ ಮತ್ತೆ ಕಟ್ಟುವ ಶ್ರಮದ ವಾಸ್ತವ ಕ್ರಿಯಾ ಶಕ್ತಿಯದು

○ಜಂಬಣ್ಣ ಅಮರಚಿಂತ

ದಲಿತತ್ವ ಮತ್ತು ಬುದ್ಧತ್ವದ ೨ ಸಾಂಸ್ಕೃತಿಕ ರಾಜಕಾರಣ

(ಕಳೆದ ಸಂಚಿಕೆಯಿಂದ)

ಹೀಗೆ ಅಖಂಡವಾಗಿರಲಾಗದ ಇಂತಹ ಸಮುದಾಯಗಳು ರಾಜಕೀಕರಣಗೊಳ್ಳುತ್ತಿರುವ ರೀತಿಯು ತಾತ್ವಿಕವಾಗಿ ತತ್ವದ ಚೌಕಟ್ಟಿನಲ್ಲಿ ಕಂಡರೂ ಈ ಬಗೆಯ ಪಯಣವೇ ಮುಂದಿನ ಹಂತದಲ್ಲಿ ರಾಜಕೀಯವಾಗಿ ಇವೆಲ್ಲವು ಕಳಚಿದ ಕೊಂಡಿಗಳಾಗಿ ಬಿಡುವುದಕ್ಕೆ ಬೇಕಾದ ಸ್ವಭಾವವನ್ನು ಒಳಗೇ ಉಳಿಸಿಕೊಂಡಿರುತ್ತವೆ. ಸಾಮಾಜಿಕ ವ್ಯವಸ್ಥೆಯ ಮೂಲ ಪಾಯ ಎಂದರೆ ವಿಶ್ವಾಸ. ಅಪನಂಬಿಕೆಯಲ್ಲಿ ಬೆಳೆದ ಸಾಮಾಜಿಕ ವರ್ತನೆಯು ಸ್ವತಃ ತನ್ನನ್ನು ತಾನೇ ಕಾಯ್ದುಕೊಳ್ಳಲಾರದ ಸ್ಥಿತಿಯಲ್ಲಿರುತ್ತದೆ. ನಂಬಿಕೆ ಇಲ್ಲದ ಸಮಾಜದಲ್ಲಿ ಎಲ್ಲವೂ ಕೃತಕ ಮಾನವ ಒಪ್ಪಂದಗಳಲ್ಲಿ ನಡೆಯುತ್ತಿರುತ್ತದೆ. ಜಾತಿ ವ್ಯವಸ್ಥೆಯು ಈ ಕಾರಣದಿಂದಲೆ ಯಾರನ್ನು ಒಪ್ಪದ ಪ್ರೀತಿಸದ ಕ್ರಮದಲ್ಲಿ ಜಾಲರೂಪಿಸುತ್ತಿರುತ್ತದೆ.

ಹೀಗಾಗಿಯೆ ಕಲ್ಪಿತ ಸ್ವಾತಂತ್ರ್ಯದಲ್ಲಿ ಬಹುಪಾಲು ಎಲ್ಲ ಸಮುದಾಯಗಳು ವಿಹರಿಸುತ್ತಿರುತ್ತವೆ. ದಲಿತ ವರ್ಗಗಳ ಸ್ವಾತಂತ್ರ್ಯವು ಯಾವುದೇ ಹೊತ್ತಿನಲ್ಲಿ ಬಲಿಷ್ಠ ಕೋಮುಗಳಿಂದ ಹರಣವಾಗುವುದು ಇದರಿಂದಲೆ. ಜಾತಿ ಸಮಾಜವು ವ್ಯಕ್ತಿಗಳಿಗೆ ಮೂಗುದಾರ ಬಿಗಿದಿರುತ್ತದೆಯಾದ ಕಾರಣ ಪ್ರತಿ ಸಮುದಾಯವು ಅದರ ಎಲ್ಲೆಯಲ್ಲೆ ವ್ಯವಹರಿಸಬೇಕಾಗಿರುತ್ತದೆ. ಕಟ್ಟಿರುವ ಹಗ್ಗದಷ್ಟು ವ್ಯಾಪ್ತಿಯಲ್ಲಿ ಅದು ತನ್ನ ಅನನ್ಯತೆಯನ್ನು ಸಬಲೀಕರಣವನ್ನು ಮಾಡಿಕೊಳ್ಳಬೇಕಾಗಿರುತ್ತದೆ. ಈ ನಿಯಮ ಮೇಲು ಜಾತಿಗಳಿಗೆ ಅನ್ವಯಿಸುವುದಿಲ್ಲವಾದ್ದರಿಂದ ಅವು ನಿರಂಕುಶ ಸಮುದಾಯಗಳಾಗಿಯೆ ಅಧಿಕಾರವನ್ನು ಉಳಿಸಿಕೊಂಡು ಅಪರಿಮಿತ ಸ್ವಾತಂತ್ರ್ಯವನ್ನು ಪಡೆದಿರುತ್ತವೆ. ಹೀಗೆ ಸ್ವಾತಂತ್ರ್ಯ ಕೂಡ ಜಾತಿಯ ಲೆಕ್ಕದಲ್ಲಿ ವಿಭಜನೆಗೊಂಡು ಸಮಾನತೆಯ ಹೋರಾಟವು ಕೊನೆಗೂ ಜಾತಿಯಿಂದಲೆ ಪರ್ಯವಸಾನಗೊಳ್ಳುವುದಿದೆ.

ಮರಳಿ ಜಾತಿಗೆ ಪಯಣಿಸುವ ಈ ಬಗೆಯ ವಿರಾಟ್ ಹಿಮ್ಮುಖ ಚಲನೆಯು ಭಾಗಶಃ ಪ್ರತಿರೋಧದ ಮತ್ತೊಂದು ಸ್ವರೂಪವಿರಬೇಕು. ಹನ್ನೆರಡನೇ ಶತಮಾನದಲ್ಲಿ ನಡೆದ ವಚನ ಚಳುವಳಿಯು ದಲಿತತ್ವದ ಚಾರಿತ್ರಿಕ ಹಂತ. ಕಾಯಕದ ಈ ಚಳುವಳಿಯ ಆಳದಲ್ಲಿ ಜಾತ್ಯತೀತತೆಯು ಪ್ರಧಾನ ಧ್ಯಾನವಾಗಿ ಧ್ವನಿ ಹೊರಡಿಸಿತ್ತು. ತಳ ಸಮುದಾಯಗಳ ಬಿಡುಗಡೆಯ ತಾತ್ವಿಕತೆಯೂ ಇದರಲ್ಲಿತ್ತು. ಅದಕ್ಕೆ ಬೇಕಾದ ಬೌದ್ಧಿಕತೆಯೂ ಆ ಕಾಲದ ದಲಿತ ಸಮಾಜದಲ್ಲಿ ಇತ್ತು. ಅಲ್ಲದೆ ಸಾಂಸ್ಕೃತಿಕವಾದ ಹುಸಿ ಅನನ್ಯತೆಗಳನ್ನು ಭಂಗಪಡಿಸಿ ಒಂದು ವಿಶಾಲ ತಳಹದಿಯ ಕಾಯಕ ಚಹರೆಗೆ ಒಳಪಡಿಸುವ ಯತ್ನವನ್ನು ಬಸವಣ್ಣ ಮಾಡಿದ್ದರು. ಬಹು ಅನನ್ಯತೆಗಳು ವೈದಿಕ ಯಾಜಮಾನ್ಯವನ್ನು ಗೆಲ್ಲಲಾರವು ಎಂಬುದು ಬಸವಣ್ಣನವರಿಗೆ ಚೆನ್ನಾಗಿ ತಿಳಿದಿತ್ತು. ಆದ್ದರಿಂದಲೇ ಮೊರದೈವ ಮಡಕೆ ದೈವಗಳ ನಿರಾಕರಿಸಿದ್ದ ಅವರು ಜಾತ್ಯತೀತ ವಚನ ತತ್ವವನ್ನು ಸಾಮಾಜಿಕ ಮೌಲ್ಯ ವ್ಯವಸ್ಥೆಯನ್ನಾಗಿಸಲು ಹೋರಾಡಿದರು.

ಈ ಪರಿಯ ಯತ್ನ ಮುಂದೆ ಏನೇನಾಗಿ ಇಂದು ಯಾವ ಹಂತದಲ್ಲಿದೆ ಎಂಬುದು ತಿಳಿದ ಸಂಗತಿಯೇ. ಆದರೆ ಹನ್ನೆರಡನೆ ಶತಮಾನದ ಸಾಂಸ್ಕೃತಿ ರಾಜಕಾರಣವಾಗಿ ವಚನ ಚಳುವಳಿಯು ಅನೇಕ ಪಾಠಗಳನ್ನು ಬಿಟ್ಟು ಹೋಗಿದೆ. ವಚನ ಚಳುವಳಿ ನಿಜವಾದ ಅರ್ಥದಲ್ಲಿ ಸಾಂಸ್ಕೃತಿಕ ರಾಜಕಾರಣದ ಕ್ರಾಂತಿಯನ್ನು ಪ… ವಿಫಲಗೊಂಡ ಕಾಲ. ಕ್ರಾಂತಿಯನ್ನು ಹೀಗೆ ಜಾತಿ ನಿಷ್ಠ ಸಮಾಜದ… ಮಾಡುವುದೇ ಮಹಾಕಷ್ಟ. ಆದರೆ ಅಂತಹ ಜೀವನ್ ಮರಣ… ಸವಾಲಿನ ಕ್ರಾಂತಿ ಕೂಡ ವಿಫಲವಾಗುತ್ತದೆ ಯಾಕೆ ಎಂದ… ಯೋಚಿಸಿದರೆ; ಭಾಗಶಃ ಎಲ್ಲ ಬಗೆಯ ಅವೈದಿಕ ಹೋರಾಟಗ… ಹುಟ್ಟಿನ ಜೊತೆಯಲ್ಲೇ ಆ ಸಾಹಸವನ್ನು ನಿಶ್ಫಲಗೊಳಿಸುವ ಶಕ್ತಿಗಳ… ನಮ್ಮ ಒಳಗೆಯೇ ಬೆಳೆದಿರುತ್ತವೆ. ಬಸವಣ್ಣನ ಜೊತೆಯ… ಕ್ರಾಂತಿಯನ್ನು ವಿಕಾರಗೊಳಿಸುವ ಜಾತಿ ಶಕ್ತಿಗಳು ಅಡಗಿದ್ದ… ಜಾತಿಯನ್ನು ನಾಶಪಡಿಸಲು ಸಿದ್ಧವಾದ ಕೂಡಲೆ ಅದರ ಅಮೂರ್ತ… ಕೈಗಳು ನಮ್ಮ ಎಲ್ಲ ಪ್ರತಿತಂತ್ರಗಳನ್ನು ಮರಳಿ ತನ್ನ ರೂಪ… ಎರಕವಾಗುವಂತೆ ಜಾಲ ರೂಪಿಸಬಲ್ಲದು. ಹೀಗಾಗಿಯೆ ಶೈ… ಚಳುವಳಿ ಧಾರ್ಮಿಕವಾದ ಮತಬೇಧಗಳಿಂದ ಜಾತಿಯ ಎರಕ… ಹೊಂದಿಕೊಂಡದ್ದು

ಆದರೆ ಶೈವ ಪರಂಪರೆಯ ಆದಿ ಸ್ವರೂಪದಲ್ಲಿದ್ದ ದಲಿ… ಸಮಾಜಕ್ಕೆ ಮರಳಿ ಜಾತಿಗೆ ಹೋಗುವುದೇ ಇದ್ದ ಏಕೈಕ ಅವಕಾ… ಮೇಲು ಜಾತಿಗಳಿಗೆ ಅವು ಮತಾಂತರಗೊಳ್ಳುವುದು ಸಾಧ್ಯವಿರಲಿಲ್ಲ… ಬಸವಣ್ಣನವರು ಕೆಳ ಜಾತಿಗಳನ್ನು ಶೈವ ತತ್ವದ ರೀತಿನೀತಿಗೆ ಬಹ… ಸುಲಭವಾಗಿ ಮತಾಂತರಗೊಳಿಸಿದ್ದರು. ಇದು ಕೂಡ ಸಲೀಸಿದ್ದಿತು… ಯಾಕೆಂದರೆ ಮೂಲದಲ್ಲಿ ಶೈವಾಚಾರಗಳಿಗೆ ನೆಲೆಯಾಗಿದ್ದ ದಲಿ… ಸಮುದಾಯಗಳು ಲಿಂಗಧಾರಣೆ ಮಾಡಿಕೊಳ್ಳುವುದು ಕಷ್ಟವೇ… ರಲಿಲ್ಲ. ದಲಿತತ್ವದ ಆಳದಲ್ಲಿ ಶೈವ ಪರಂಪರೆಯ ಗುಣಗಳಿದ್ದವು… ಆದರೆ ಇಂತಹ ಸ್ವರೂಪ ಕೂಡ ಜಾತಿಯ ಜಾಲದಲ್ಲಿ ವಿರೂ… ಗೊಂಡಿತು. ಬಸವಣ್ಣ ದಲಿತತ್ವವನ್ನೆ ಸಂಘಟಿಸಲು ಹೋರಾಡಿದ್ದು… ಈ ಯತ್ನದಲ್ಲಿ ವಿಶೇಷವಾಗಿ ದಲಿತ ಸಮುದಾಯಗಳು ಭಾಗಿಯಾ… ದ್ದುದು ಸಮಷ್ಟಿಯಾದ ನ್ಯಾಯದ ಒಪ್ಪಂದಗಳಿಂದಲೇ.

ಬಸವಣ್ಣನ ಕ್ರಾಂತಿಯ ವಿಫಲತೆಯ ಬೆನ್ನ ಹಿಂದೆಯ… ಕಾಯಕ ಸಮುದಾಯಗಳಲ್ಲಿ ಯಾಜಮಾನ್ಯದ ಪೈಪೋಟಿ ನಡೆದು… ಲಿಂಗಾಯಿತ ಜಾತಿಯು ಪ್ರವರ್ಧಮಾನಕ್ಕೆ ಬಂದು ಇದ್ದ ಎ… ಕಾಯಕ ಸಮುದಾಯಗಳನ್ನು ತನ್ನ ಹಿಡಿತಕ್ಕೆ ತಂದುಕೊಂಡಿತು… ಇದು ದಲಿತತ್ವದ ಸಾಂಘಿಕ ಯತ್ನಕ್ಕೆ ಬಿದ್ದ ನಿರ್ಣಾಯಕವಾದ ಪೆಟ್ಟು… ಮಧ್ಯಕಾಲೀನ ಸಮಾಜದಲ್ಲಿ ಇಂತಹ ಜಾತಿಯ ಯಾಜಮಾನ್ಯದ… ಕಾರಣವಾಗಿಯೇ ಹೊಸ ಜಾತಿಗಳು ನೂರಾರು ಹೆಸರಿನಲ್ಲಿ ಹುಟ… ಕೊಂಡವು. ಕೆಲವು ಹಳೆಯ ಜಾತಿನಾಮವನ್ನು ಬದಲಿಸಿ ಹೊಸ… ಜಾತಿ ಚಹರೆಯನ್ನು ಅಂಟಿಸಿಕೊಂಡು ಸಾಮಾಜಿಕ ರಚನೆಯ… ಮೇಲು ಸ್ತರಗಳಲ್ಲಿ ಸೇರಿಕೊಂಡವು. ಈ ಮಧ್ಯಕಾಲೀನ ಸಮಾಜದ… ಕಾಲದಲ್ಲಿಯೇ ಅನೇಕ ಬಗೆಯ ಹಿಂದುಳಿದ ಜನವರ್ಗಗಳು ಅತ… ತೀರ ಮೇಲುಜಾತಿಗಳಲ್ಲೂ ಜಾಗ ಪಡೆಯಲಾಗದೆ ಇತ್ತ ಕೆಳಜಾತಿಗಳ… ಜೊತೆಗೂ ಕೂಡಲಾಗದೆ ಅತಂತ್ರ ಸ್ಥಿತಿಯಲ್ಲಿ ಮಧ್ಯಮ ಸ್ಥಾನಕ್ಕಾ… ಸಾಂಸ್ಕೃತಿಕವಾದ ಏನೇನೊ ಒಪ್ಪಂದಗಳನ್ನು ಎಲ್ಲ ಮೇಲುಜಾತಿಗಳ… ಜೊತೆ ಮಾಡಿಕೊಂಡು ದಿಕ್ಕಾಪಾಲಾಗಿಬಿಟ್ಟವು.

ಅಲ್ಪಸಂಖ್ಯಾತವಾದ ಹಿಂದುಳಿದ ವರ್ಗಗಳಿಗೆ ಯಾವ… ಆಯ್ಕೆಯು ಇರಲಿಲ್ಲ. ಮೇಲು ಜಾತಿಗಳು ಬೇಡ ಎಂದು ಬಿಟ್ಟ… ಜಾಗದಲ್ಲಿ ಅವು ತಮ್ಮ ಅಸ್ತಿತ್ವವನ್ನು ರೂಪಿಸಿಕೊಳ್ಳಬೇಕಿತ್ತು. ಅತ…

ಜಿಜ್ಞಾಸೆ

ಹಿಂದುಳಿದ ವರ್ಗಗಳ ಶಕ್ತಿಯು ಯಾರ ವಿರುದ್ಧವೂ ಇಲ್ಲದಂತೆ ಹಾಗೆಯೆ ಯಾರ ಪರವಾಗಿಯೂ ಇಲ್ಲದಂತೆ ಸಂದರ್ಭಕ್ಕೆ ತಕ್ಕಂತೆ ವರ್ತಿಸಬೇಕಾದ ಸ್ಥಿತಿಯಲ್ಲಿರುವುದು ದಲಿತ ಸಮುದಾಯಗಳು ಅನುಭವಿಸುವ ಯಾತನೆಗಿಂತಲೂ ದೊಡ್ಡದು. ಆಧುನಿಕ ಭಾರತದ ರಾಜಕಾರಣದಲ್ಲಿ ದಲಿತರು ನಿರ್ಧಿಷ್ಟವಾದ ಆಯ್ಕೆಯನ್ನು ಮಾಡಿಕೊಳ್ಳುವುದು ಸಾಧ್ಯವಿದೆ. ಆದರೆ ಹಿಂದುಳಿದ ವರ್ಗಗಳು ನಿರ್ಣಾಯಕವಾದ ಯಾವ ಆಯ್ಕೆಯಲ್ಲಿ ಪಾಲುಗೊಳ್ಳಲಾರರು ಎಂದರೆ ಅದು ಸ್ವತಃ ತಮ್ಮ ಅಸ್ತಿತ್ವವನ್ನು ಅವರೇ ನಿರಾಕರಿಸಿಕೊಂಡಂತೆ.

ಡಾ॥ ಮೊಗಳ್ಳಿ ಗಣೇಶ್

ದಲಿತ ಸಮಾಜದಲ್ಲಿ ಸ್ಥಾನಮಾನಗಳಲ್ಲಿ ಅವರು ಹೋಗುವಂತಿರಲಿಲ್ಲ. ಈ ಅವಸ್ಥೆಯಲ್ಲಿ ಹಿಂದುಳಿದ ವರ್ಗಗಳು ನಿರ್ಣಾಯಕವಾದ ಸಮುದಾಯಗಳಾಗಿ ಪಾತ್ರ ವಹಿಸಲು ಸಾಧ್ಯವೇ ಆಗದಾಗಿ ಇವತ್ತಿಗೂ ಅದೇ ಸ್ಥಿತಿಯಲ್ಲಿ ಅವು ವ್ಯವಹರಿಸಬೇಕಾದ ವಿಪರ್ಯಾಸವಿದೆ.

ಜಾತಿ ವ್ಯವಸ್ಥೆಯಲ್ಲಿ ಹೀಗೆ ಅತ್ತ ಇತ್ತ ಎತ್ತಲೂ ಸೇರಿದಂತೆ ವಿಚಿತ್ರ ಅನ್ಯತೆಯಿಲ್ಲ ತೊಳಲುವ ಇಂತಹ ಸಮುದಾಯಗಳ ಒಟ್ಟು ಶಕ್ತಿಯು ವ್ಯರ್ಥವಾಗು ತ್ತಿರುತ್ತದೆ. ಅದರಲ್ಲೂ ಜಾತಿ ಕೋಟೆಯ ಸಮಾಜದಲ್ಲಿ ಈ ಬಗೆಯಲ್ಲಿ ಇಷ್ಟೊಂದು ಹಿಂದುಳಿದ ವರ್ಗಗಳ ಶಕ್ತಿಯು ಯಾರ ವಿರುದ್ಧವೂ ಇಲ್ಲದಂತೆ ಹಾಗೆಯೆ ಯಾರ ಪರವಾಗಿಯೂ ಇಲ್ಲದಂತೆ ಸಂದರ್ಭಕ್ಕೆ ತಕ್ಕಂತೆ ವರ್ತಿಸಬೇಕಾದ ಸ್ಥಿತಿಯಲ್ಲಿರುವುದು ದಲಿತ ಸಮುದಾಯಗಳು ಅನುಭವಿಸುವ ಯಾತನೆಗಿಂತಲೂ ದೊಡ್ಡದು. ಆಧುನಿಕ ಭಾರತದ ರಾಜಕಾರಣದಲ್ಲಿ ದಲಿತರು ನಿರ್ದಿಷ್ಟವಾದ ಆಯ್ಕೆಯನ್ನು ಮಾಡಿಕೊಳ್ಳುವುದು ಸಾಧ್ಯವಿದೆ. ಆದರೆ ಹಿಂದುಳಿದ ವರ್ಗಗಳು ನಿರ್ಣಾಯಕವಾದ ಯಾವ ಆಯ್ಕೆಯಲ್ಲಿ ಪಾಲುಗೊಳ್ಳಲಾರರು ಎಂದರೆ ಅದು ಸ್ವತಃ ತಮ್ಮ ಅಸ್ತಿತ್ವವನ್ನು ಅವರೇ ನಿರಾಕರಿಸಿಕೊಂಡಂತೆ. ಇದಕ್ಕಿಂತ ಮಿಗಿಲಾದದ್ದೇನೆಂದರೆ; ತೀರ ಮೇಲಿರುವ ಜಾತಿಗಳ ಸಮೀಪಕ್ಕೆ ತೀರ ಕೆಳಗಿರುವ ಜಾತಿಗಳು ಹೋಗದಂತೆ ತಡೆಯಲು ಇಂತಹ ಹಿಂದುಳಿದ ವರ್ಗಗಳನ್ನು ಜಾತಿನಿಷ್ಠ ಸಮಾಜವು ರಚಿಸಿ ಕೊಂಡಿರುತ್ತದೆ.

ಈ ಒಂದೊಂದು ಜಾತಿಯ ಕೋಟೆಗಳನ್ನು ದಾಟಿಕೊಂಡು ಮೇಲಿನ ಉಪ್ಪರಿಗೆಯ ಜಾತಿಗಳವರೆಗೆ ಏರುವಷ್ಟರಲ್ಲಿ ಆ ಪ್ರತಿರೋಧವೆಲ್ಲ ಕರಗಿ ಹೋಗಿರುತ್ತದೆ. ಇಲ್ಲವೆ ಆಯಾ ಜಾತಿಗಳೆ ಕದನದಲ್ಲಿ ಸದಾ ನಿರತವಾಗಿರುತ್ತವೆ. ಭಾರತದ ಬಹುಪಾಲು ಎಲ್ಲ ಹಿಂದುಳಿದ ವರ್ಗಗಳ 'ವಿಧಿ' ಇದೇ ಇರಬೇಕು. ಈ ಗುಂಪುಗಳು ಪೂರ್ಣ ಪ್ರಮಾಣದಲ್ಲಿ ತನ್ನ ಕೆಳಗಿನ ದಲಿತ ಸಮುದಾಯವನ್ನು ನಿರಾಕರಿಸಲಾರವು. ಅಂತೆಯೇ ಗಾಢವಾಗಿ ಮೇಲು ಜಾತಿಗಳ ಜೊತೆ ವಿಶ್ವಾಸವನ್ನು ಮಾಡಲಾರವು ಒಂದು ವೇಳೆ ಹಿಂದುಳಿದ ವರ್ಗಗಳು ವಿಶ್ವಾಸ ಮಾಡಿದರೂ ಅದಕ್ಕೆ ತಕ್ಕ ಫಲಸಿಗುವುದೇ ಇಲ್ಲ ವಿಶ್ವಾಸ ಘಾತುಕ ಸಾಮಾಜಿಕ ವಾಸ್ತವದಲ್ಲಿ ತಲೆ ಮರೆಸಿ ಕೊಂಡು ಅಂದರೆ ಚಹರೆಗೆಟ್ಟು ಪಲಾಯನ ಮಾಡಬೇಕಾದ್ದನ್ನೆ ಮೇಲು ಜಾತಿಗಳು ಇಂತಹ ಹಿಂದುಳಿದ ವರ್ಗಗಳಿಗೆ ಕಲಿಸಿರುತ್ತವೆ.

ವಚನ ಚಳುವಳಿಯ ವೈಫಲ್ಯದಲಿದ್ದ ಸಾಮಾಜಿಕ ರಾಜಕೀಯ ಹಾಗೂ ಚಾರಿತ್ರಿಕ ಸನ್ನಿವೇಶಗಳು ಇಂತಹ ಸ್ಥಿತಿಗೆ ಹಿಂದುಳಿದ ವರ್ಗಗಳನ್ನು ನೂಕಿವೆ. ಈ ಮಧ್ಯಕಾಲೀನ ಚರಿತ್ರೆಯಲ್ಲೆ ಅನೇಕ ಬಗೆಯ ಅಲ್ಪ ಸಂಖ್ಯಾತ ಜಾತಿಗಳು ಬುಡಕಟ್ಟುಗಳು ಹಿಂದುಳಿದ ವರ್ಗಗಳು ಅಸ್ತಿತ್ವವನ್ನು ಹುಡುಕುತ್ತಾ ಪಾಲಿನ ವ್ಯವಸ್ಥೆಗೆ ತಮ್ಮನ್ನು ತಾವು ಪ್ರಧಾನ ವ್ಯವಸ್ಥೆಯ ಜೊತೆ ಹೊಂದಿಸಿಕೊಂಡಿವೆ. ಅನೇಕ ದನಗಾಹಿ ಸಮುದಾಯಗಳು ಕರ್ನಾಟಕದ ಉದ್ದಕ್ಕೂ ಮಧ್ಯಕಾಲೀನ ಸಮಾಜದಲ್ಲಿ ರೂಪಾಂತರಗೊಂಡು ಜಾತಿಶ್ರೇಣಿಯಲ್ಲಿ ಕಿರು ಸ್ಥಾನಗಳನ್ನು ಅಲಂಕರಿಸಿ ಕಲ್ಪಿತ ಸ್ವಾತಂತ್ರ್ಯವನ್ನು ಪಡೆದಿವೆ. ಹಿಂದುಳಿದ ವರ್ಗಗಳು ಹೀಗೆ ಮತ್ತೆ ಮತ್ತೆ ಅಸಂಘಟಿತವಾಗಿರಲು ಅವು ನಡೆದು ಬಂದ ದಾರಿಯೂ ಕಾರಣವಾಗಿದೆ. ಸಂಘಟಿತವಾಗುವುದರಲ್ಲಿಯು ಈ ಸಮುದಾಯಗಳು ಬಿಡಿಯಾಗಿಯೆ ಹೋರಾಟವನ್ನು ಹೂಡುವುದರಿಂದ ದಲಿತತ್ವದ ಅಖಂಡತೆಯಲ್ಲಿ ಇವು ಸಂಯೋಗವಾಗುವುದೇ ಇಲ್ಲ. ಆಧುನಿಕ ರಾಜ್ಯಾಂಗ ಪದ್ಧತಿಯಲ್ಲಿ ಇಂತಹ ಸಮುದಾಯಗಳು ಯಾವುದರ ಕಡೆಗೂ ಸ್ಪಷ್ಟವಾಗಿ ಗುರುತಿಸಿಕೊಳ್ಳಲಾರವು.

'ಅಹಿಂದ'ದ ಸಂಯುಕ್ತ ಪ್ರತಿರೋಧವು ಅನೇಕ ಬಾರಿ ಆದರ್ಶವಾಗಿದ್ದು ಒಳಗೆ ಬಿರುಕಿನಿಂದಲೆ ಅನುಮಾನದಿಂದಲೆ ರಾಜಕೀಯ ಸಮಾನತೆಯನ್ನು ಕೇಳುವುದು ಕೂಡ ದೀರ್ಘಕಾಲೀನ ಎಚ್ಚರದ ಲಕ್ಷಣವಲ್ಲ. ರಾಜಕೀಯ ಅಧಿಕಾರವನ್ನು ಬಲಿಷ್ಠ ಜಾತಿಗಳು ಈ ಕೈಯಲ್ಲಿ ಕೊಟ್ಟು ಆಚೆ ಕೈಯಲ್ಲಿ ಕಿತ್ತುಕೊಂಡಿರುತ್ತವೆ. ಕಪಟಾಧಿಕಾರದಲ್ಲಿ ಪಳಗಿದ ಬಲಿಷ್ಠ ರಾಜಕಾರಣವು ಯಾವುತ್ತು ಕೂಡ ಹಿಂದುಳಿದ ವರ್ಗಗಳನ್ನು ತಮ್ಮ ರಕ್ಷಣೆಗೆ ಇಟ್ಟುಕೊಂಡಿರುತ್ತವೆ. ದಲಿತ ಸಮುದಾಯಗಳ ಜೊತೆ ಅಧಿಕಾರ ಹಂಚಿಕೊಳ್ಳುವುದು ಯಾವ ರಾಜಕೀಯ ಪಕ್ಷಕ್ಕು ಒಪ್ಪಗೆಯಾಗದ ಸಂಗತಿ.

ಅಲ್ಪಸಂಖ್ಯಾತ, ಹಿಂದುಳಿದ, ದಲಿತ ಎಂಬ ಈ ಮೂರು ಪ್ರಧಾನ ಗುಂಪುಗಳೂ ಒಟ್ಟಾಗುವುದಕ್ಕೆ ಯಾವ ಹಂತದಲ್ಲಿ ತೊಡಕುಗಳಿವೆ ಎಂಬುದು ಸುಲಭಕ್ಕೆ ಗೋಚರವಾಗುವುದಿಲ್ಲ. ಪ್ರತಿಯೊಂದು ಸಮುದಾಯವು ಅವಿಶ್ವಾಸಗಳಿಂದಲೆ ಆಧುನಿಕತೆಯನ್ನು ಪ್ರವೇಶಿಸಿವೆ. ಆಧುನಿಕತೆಯು ಹೇಳಿಕೇಳಿ ವ್ಯಕ್ತಿ ವಿಕಾಸಕ್ಕೆ ಹಾಗೂ ಅಂತಹ ಸ್ವಾತಂತ್ರ್ಯಕ್ಕೆ ಬೇಕಾದ ಜರೂರನ್ನು ಮುಂದಿಡುತ್ತದೆ. ಈ ಬಗೆಯ ಜರೂರಿನಿಂದಲೆ ಸಮುದಾಯಗಳು ವರ್ತಮಾನದ ಜೊತೆ ಸೆಣಸುತ್ತವೆ. ಹೀಗಾಗಿ ಈ ಮೂರು ಬಗೆಯ ಪ್ರಧಾನ ಶಕ್ತಿಗಳು ಸಮಷ್ಟಿಯಾಗಿ ಹೋರಾಡುವುದರಿಂದ ತಮ್ಮ ಗುರಿ ಸಾಧ್ಯ ಎಂದು ತಾತ್ವಕವಾಗಿ ಒಪ್ಪಿಕೊಂಡರು ಕಾರ್ಯಗತವಾಗಿ ಇವು ಒಂದೇ ಧ್ಯಾನದಲ್ಲಿ ಕಾಳಜಿಯಲ್ಲಿ ಕೆಲಸ ನಿರ್ವಹಿಸಲಾರವು. ಇವುಗಳ ಸಮಸ್ಯೆಯ ಸ್ವರೂಪದಲ್ಲೆ ವೈರುದ್ಯಗಳಿವೆ. ತಾವು ಹೊಣೆಯಾಗಬೇಕಾಗಿಲ್ಲದ ಅಪರಾಧಗಳಿಗೆ ಈ ಮೂರು ಸಮುದಾಯಗಳು ಹೊಣೆಯಾಗಿರುತ್ತದೆ. ಹಿಂದುಳಿದ ವರ್ಗಗಳ ಎಷ್ಟೋ ನಡವಳಿಕೆಗಳು ದಲಿತ ಸಮುದಾಯಗಳಿಗೆ ಶಾಪವೂ ಆಗಿರುತ್ತದೆ.

ಶೋಷಕರೂ ಶೋಷಣೆಗೆ ಒಳಪಡುವವರು ಒಟ್ಟಾಗಿಯೇ ಕೂಡಿ ಇವರಿಬ್ಬರಿಗಿಂತಲೂ ಬಲವಾದ ಇನ್ನೊಂದು ಶಕ್ತಿಯ ವಿರುದ್ಧ ಹೋರಾಡುವುದು ರಮ್ಯ ವೈಚಾರಿಕತೆಯ ದರ್ಶನವಾಗಿದ್ದರು ಹೋರಾಟದ ಮಧ್ಯ ದಾರಿಯಲ್ಲೆ ಇವು ಕವಲು ದಾರಿಯನ್ನು ಕಂಡುಕೊಳ್ಳಲು ಹಾತೊರೆಯುತ್ತಿರುತ್ತವೆ. ವಚನ ಚಳುವಳಿಯೆ ಮೊದಲ ಹಂತದಲ್ಲಿ ಎಲ್ಲ ರೀತಿಯಲ್ಲು ಇದೇ ಮೂರು ಪ್ರಧಾನ ಜನವರ್ಗಗಳು ಶೈವ ತತ್ವದಡಿ ದೊಡ್ಡ ಕ್ರಾಂತಿಯನ್ನೆ ಮಾಡಿದರೂ ಅದರ ಜೊತೆ ಜೊತೆಯಲ್ಲೆ ಕವಲು ದಾರಿಯಲ್ಲಿ ದೂರ ಸರಿಯುವುದಕ್ಕೆ ಅವಕಾಶಗಳನ್ನು ಅದೇ ಸಮುದಾಯಗಳು ಮಾಡಿಕೊಂಡಿವೆ.

ಹನ್ನೆರಡನೆ ಶತಮಾನದ ನಂತರಕ್ಕೆ ಇದೇ ಈ ಮೂರು ಗುಂಪುಗಳು ಮರಳಿ ಜಾತಿಗೆ ಹಿಂತಿರುಗಿದ್ದು ಕೇವಲ ಕ್ರಾಂತಿಯ ವೈಫಲ್ಯದಿಂದ ಮಾತ್ರವೇ ಆಗಿತ್ತೇನು? ಅಂತಹ ಬಲವತ್ತರವಾದ ಆಕಾಂಕ್ಷೆ ಅಥವಾ ಹತಾಶೆ ಈ ಸಮುದಾಯಗಳಿಗೆ ಹೇಗೆ ಉಂಟಾಯಿತು? ಜಾತಿಗೆ ಮರಳಿದ ಮಾತ್ರಕ್ಕೆ ತಾವು ಸುರಕ್ಷಿತ ಎಂದು ಯಾಕೆ ಈ ಸಮುದಾಯಗಳಿಗೆ ಗಾಢವಾಗಿ ಅನಿಸಿದೆ? ಅಸಂಘಟಿತವಾಗಿದ್ದುಕೊಂಡೇ ಸಮುದಾಯ ನಿಷ್ಠ ಕಿರು ದಾರಿಗಳಲ್ಲೆ ತಮ್ಮ ಅಸ್ತಿತ್ವವನ್ನು ಕಾಯ್ದುಕೊಳ್ಳುವುದು ಹೆಚ್ಚು ಸುರಕ್ಷಿತವೆ? ಬಹುರೂಪಿಯಾಗಿದ್ದುಕೊಂಡೇ ಪ್ರತಿರೋಧವನ್ನು ಕೂಡ ಇಂತಹ ಅಂತರಗಳಿಂದ ವ್ಯಕ್ತ ಪಡಿಸಲು ಸಾಧ್ಯ ಎಂದು ಈ ಸಮುದಾಯಗಳು ನಂಬಿದವೇ ಇಂತಹ ಹತ್ತಾರು ಪ್ರಶ್ನೆಗಳಿಗೆ ಇವತ್ತಿಗೂ ಸರಿಯಾದ ಉತ್ತರ ಸಿಕ್ಕಿಲ್ಲ.

'ಅಹಿಂದ'ದ ಸಂಯುಕ್ತ ಪ್ರತಿರೋಧವು ಅನೇಕ ಬಾರಿ ಆದರ್ಶವಾಗಿದ್ದು ಒಳಗೆ ಬಿರುಕಿನಿಂದಲೆ ಅನುಮಾನದಿಂದಲೆ ರಾಜಕೀಯ ಸಮಾನತೆಯನ್ನು ಕೇಳುವುದು ಕೂಡ ದೀರ್ಘಕಾಲೀನ ಎಚ್ಚರದ ಲಕ್ಷಣವಲ್ಲ. ರಾಜಕೀಯ ಅಧಿಕಾರವನ್ನು ಬಲಿಷ್ಠ ಜಾತಿಗಳು ಈ ಕೈಯಲ್ಲಿ ಕೊಟ್ಟು ಆಚೆ ಕೈಯಲ್ಲಿ ಕಿತ್ತುಕೊಂಡಿರುತ್ತವೆ. ಕಪಟಾಧಿಕಾರದಲ್ಲಿ ಪಳಗಿದ ಬಲಿಷ್ಠ ರಾಜಕಾರಣವು ಯಾವುತ್ತು ಕೂಡ ಹಿಂದುಳಿದ ವರ್ಗಗಳನ್ನು ತಮ್ಮ ರಕ್ಷಣೆಗೆ ಇಟ್ಟುಕೊಂಡಿರುತ್ತವೆ. ದಲಿತ ಸಮುದಾಯಗಳ ಜೊತೆ ಅಧಿಕಾರ ಹಂಚಿಕೊಳ್ಳುವುದು ಯಾವ ರಾಜಕೀಯ ಪಕ್ಷಕ್ಕು ಒಪ್ಪಗೆಯಾಗದ ಸಂಗತಿ.

ಮಾಯವತಿಯ ಜೊತೆಗೆ ಅಧಿಕಾರ ಹಂಚಿಕೊಂಡಿದ್ದಕ್ಕೆ ಬಿಜೆಪಿಗೆ ಇದ್ದ ಬಾಧವ್ಯ ಎಂದರೆ ಈ ಬಗೆಯ ಹಿಂದುಳಿದ ವರ್ಗಗಳ ಮೇಲಿನ ಗುರಿಯಿಂದ. ಹಿಂದುಳಿದ ವರ್ಗಗಳು ದಲಿತ ಸಮುದಾಯಗಳ ಜೊತೆ ಕೂಡುವುದನ್ನು ಕೂಡ ಯಾವ ಬಲಿಷ್ಠ ಜಾತಿಯು ಸಹಿಸುವುದಿಲ್ಲ. ಬಿಎಸ್‌ಪಿಯು ಒಂದು ಬಲಿಷ್ಠ

ರಾಜಕೀಯ ಪಕ್ಷವಾಗುವ ಮೂಲಕ ದಲಿತರು ಗದ್ದುಗೆಯ ಸಮೀಪ ಬಂದೇ ಬಿಟ್ಟರು ಎಂದಾಗ ಅಂತಹ ಬಿಎಸ್‌ಪಿ ಜೊತೆ ರಾಜಕೀಯ ಸಂಧಾನ ಮಾಡಿಕೊಳ್ಳುವುದು ಅಧಿಕಾರ ರಾಜಕಾರಣದ ತಂತ್ರ ಅಷ್ಟೆ. ಈ ತಂತ್ರವನ್ನು ಬಿಎಸ್‌ಪಿಯೂ ಮಾಡಿದ್ದು ವಿಪರ್ಯಾಸವಲ್ಲ. ಆಧುನಿಕ ಜಾತಿ ವ್ಯವಸ್ಥೆಯ ರಾಜಕಾರಣದಲ್ಲಿ ಯಾವ ಜಾತಿಯಾದರೂ ಇಂತಹ ಕ್ರಮಗಳಲ್ಲೇ ತನ್ನ ನಾಳಿನ ದಾರಿಯನ್ನು ಹುಡುಕಿಕೊಳ್ಳಬೇಕಾಗಿದೆ.

ವಚನ ಚಳುವಳಿಯ ಭಗ್ನತೆಯಲ್ಲಿ ದಾರಿ ತಪ್ಪಿದ ಎಷ್ಟೋ ಸಮುದಾಯಗಳು ಇವತ್ತಿಗೂ ನರಳುತ್ತಿವೆ. ಸಾಂಸ್ಕೃತಿಕವಾದ ಅಂತಹ ಶೈವ ರಾಜಕಾರಣವು ಜಾತಿಯು ವರ್ತುಲದಲ್ಲಿ ಸಿಲುಕಿದ್ದು ಇಂದಿಗೂ ಅಂತದೇ ಪರಿಣಾಮವನ್ನು ಉಂಟುಮಾಡುತ್ತದೆ. ಚಳುವಳಿ ಕೂಡ ಸಾಂಸ್ಕೃತಿಕವಾದ ರಾಜಕಾರಣವನ್ನು ಸಂಘಟಿಸಲು ಹೋಗಿ ವಿಫಲವಾದದ್ದು ಅದರ ಉಗ್ರಜಾತಿ ನಿರಾಕರಣೆ ಹಾಗೂ ಧರ್ಮ ನಿರಾಕರಣೆಯಿಂದ. ಈ ಸಾಮಾಜಿಕ ವ್ಯವಸ್ಥೆಯಲ್ಲಿ ಯಾವುದನ್ನು ಉಗ್ರವಾಗಿ ಮುನ್ನುಗ್ಗಿ ಸದೆ ಬಡಿಯಲು ಸಾಧ್ಯವಿಲ್ಲ. ಸೌಮ್ಯವಾದ ಶೈವ ಶರಣರ ಚಳುವಳಿಯಾಗಲಿ ಭಕ್ತಿ ಪಂಥದ ಸಾಮಾಜಿಕ ಸ್ವಾಸ್ಥ್ಯದ ಚಳುವಳಿಯಾಗಲಿ ಆಳದಲ್ಲಿ ದಲಿತತ್ವದ ಮಾನವೀಯತೆಯನ್ನು ಆತ್ಯಂತಿಕವಾಗಿ ಹಂಬಲಿಸಿದ್ದಂತಲೇ ಆಗಿದ್ದವು. ಉಗ್ರವಾಗಿ ಪ್ರತಿಭಟಿಸಿದ ಕೂಡಲೆ ಇಡೀ ಸಮಾಜದ ಜಾತಿನೆಲೆಗಳು ತಂತಾನೆ ಎದ್ದುನಿಂತು ಅದಕ್ಕೆ ಪರ್ಯಾಯವಾದ ಪ್ರತಿದಾಳಿಗೆ ಸಜ್ಜಾಗುತ್ತವೆ. ಹಿಂದುಳಿದ ಕೋಮುಗಳು ಇಂತಹ ಸ್ಥಿತಿಯಲ್ಲಿ ಅಲಿಪ್ತ ನೀತಿಯನ್ನು ತಳೆಯುವುದು ಹಿಂದಿನಿಂದಲೂ ಬಂದ ರೂಢಿ. ಹಾಗೆಯೆ 'ಕೆಳ' ಜಾತಿಗಳಿಗೆ ನೀಡುವ ಸದಾಕಾಲದ ದಂಡನೆಯು ಹಿಂದುಳಿದ ವರ್ಗಗಳಿಗೆ ಕೊಡುವ ದೈನಂದಿನ ಎಚ್ಚರಿ ಕೆಯೂ ಆಗಿರುತ್ತದೆ. ಹೀಗಾಗಿ ವಿನಾಕಾರಣ ಅನೇಕ ಸಂದರ್ಭಗಳಲ್ಲಿ ದಲಿತ ಸಮುದಾಯಗಳಿಗೆ ದಂಡಿಸುತ್ತಾ ಹೋಗುವುದು ಉಳಿದೆಲ್ಲರಿಗೂ ಕೊಡವ 'ಉಷಾರ್' ಸೂಚನೆಯೂ ಆಗಿರುತ್ತದೆ.

ಇಂತಹ ದಂಡನೆಯ ವಾತಾವರಣವು ರಾಜಕಾರಣದಲ್ಲಿ ಕಣ್ಣೊರೆಸುವ ನಾಟಕವನ್ನು ಹುಟ್ಟು ಹಾಕುತ್ತಿರುತ್ತದೆ. ಬಸವಣ್ಣನ ಕಾಲಕ್ಕೆ ಇಂತಹ ನಾಟಕಗಳು ಇರಲಿಲ್ಲ. ಬದಲಿಗೆ ಬಹುಪಾಲು ಎಲ್ಲ ದಲಿತ ಸಮುದಾಯಗಳು ದುರಂತ ನಾಟಕದ ಮೇಳದಂತೆ ದುರಂತವನ್ನು ಹಾಡಿಕೊಳ್ಳುತ್ತಲೆ ಮರಳಿ ತಮ್ಮ ಜಾತಿಗಳಿಗೆ ಹಿಂತಿರುಗಿವೆ. ಹೀಗೆ ಹಿಂತಿರುಗಿದ ದಲಿತ ಸಮುದಾಯಗಳಲ್ಲಿ ವಿಶೇಷವಾಗಿ ಕಂಡು ಬರುವ ಮಹಾ ಕಾವ್ಯಗಳು ಸಾಂಸ್ಕೃತಿಕ ರಾಜಕಾರಣ ಮಹಾಕಾವ್ಯ ಕಥನಗಳಾಗಿವೆ ಎಂಬುದನ್ನು ಪರಿಶೀಲಿಸಿ ತಿಳಿಯಬೇಕು. ಹೊಲೆ ಮಾದಿಗರ ಇಬ್ಬರು ಕ್ರಾಂತಿಕಾರಿ ಸಂತರಾದ ಮಲೆ ಮಾದೇಶ್ವರ ಮತ್ತು ಮಂಟೇಸ್ವಾಮಿ – ಇವರಿಬ್ಬರು ಚದುರಿದ ವಿವಿಧ ತಳ ಜಾತಿಗಳನ್ನು ಜಾತ್ಯತೀತವಾದ Epic Organisation ಗೆ ಒಳಪಡಿಸಲು ತುಂಬ ಕಷ್ಟಪಟ್ಟಿದ್ದಾರೆ. ಜಾತಿ ವಿನಾಶಕ್ಕೆ ಭಕ್ತಿ ಪಂಥದ ದಾಸವರೇಣ್ಯರು ಹಾಡಿದ್ದು ಒಂದು ಹಂತದ ಘನತೆಯಾದರೆ ಮಂಟೇಸ್ವಾಮಿ ಮತ್ತು ಮಾದೇಶ್ವರರ ಜಾತ್ಯತೀತೆಯ 'ವಕ್ಕಲು ಪಡೆದ' ಪವಾಡದ ಕಾಯಕವು ಬಸವಣ್ಣನ ಕ್ರಾಂತಿಕವಾದ ರಾಜಕಾರಣವನ್ನು ಮಾಡಿದ್ದಾರೆ. ಕೃಷಿ ಪ್ರಧಾನವಾದ ಸಮುದಾಯಗಳನ್ನು ತನ್ನ ಅನುಯಾಯಿಗಳನ್ನಾಗಿ ಪರಿವರ್ತಿಸುವುದು ಅಷ್ಟು ಸುಲಭದ ಸಂಗತಿಯಲ್ಲ.

ವಚನ ಚಳುವಳಿಯ ಭಗ್ನತೆಯಲ್ಲಿ ದಾರಿ ತಪ್ಪಿದ ಎಷ್ಟೋ ಸಮುದಾಯಗಳು ಇವತ್ತಿಗೂ ನರಳುತ್ತಿವೆ. ಸಾಂಸ್ಕೃತಿಕವಾದ ಅಂತಹ ಶೈವ ರಾಜಕಾರಣವು ಜಾತಿಯು ವರ್ತುಲದಲ್ಲಿ ಸಿಲುಕಿದ್ದು ಇಂದಿಗೂ ಅಂತದೇ ಪರಿಣಾಮವನ್ನು ಉಂಟುಮಾಡುತ್ತದೆ. ಚಳುವಳಿ ಕೂಡ ಸಾಂಸ್ಕೃತಿಕವಾದ ರಾಜಕಾರಣವನ್ನು ಸಂಘಟಿಸಲು ಹೋಗಿ ವಿಫಲವಾದದ್ದು ಅದರ ಉಗ್ರಜಾತಿ ನಿರಾಕರಣೆ ಹಾಗೂ ಧರ್ಮ ನಿರಾಕರಣೆಯಿಂದ. ಈ ಸಾಮಾಜಿಕ ವ್ಯವಸ್ಥೆಯಲ್ಲಿ ಯಾವುದನ್ನು ಉಗ್ರವಾಗಿ ಮುನ್ನುಗ್ಗಿ ಸದೆ ಬಡಿಯಲು ಸಾಧ್ಯವಿಲ್ಲ.



ಕೆಳ ಜಾತಿಯಿಂದ ಬಂದ ಇವರಿಗೆ ಮೇಲು ಜಾತಿಗಳ ಯಾಜಮಾನ್ಯವನ್ನು ಭಗ್ನಗೊಳಿಸುವುದೇ ನಿಜವಾದ ಮುಕ್ತಿ ಮಾರ್ಗವಾಗಿತ್ತು ಆರಾಧನೆ ಆಚರಣೆ ಮಂತ್ರ ವಿದ್ಯೆಗಳ ಮೂಲಕವೆ ಒಂದು ಸಮುದಾಯದ ಮನಸ್ಸನ್ನು ಪಳಗಿಸುವುದು ಇವರ ತಂತ್ರವಾಗಿತ್ತು. ಜಾತಿ

ಜಾತಿಯ ಹೆಸರಿನಿಂದ ಸಂಘಟಿತವಾಗುವುದೇ ಹೆಚ್ಚು ಲಾಭಕರ ಹಾಗೂ ಸುಲಭ ಎಂಬುದು ಇಂದಿನ ವಾಸ್ತವ. ಇವನ್ನು ಮೀರಿದರೆ ರಾಜಕಾರಣದಲ್ಲಿ ಉಳಿಯಲು ಸಾಧ್ಯವೇ ಇಲ್ಲ ಎಂಬ ಬಲವಾದ ನಂಬಿಕೆ ಎಲ್ಲ ರಾಜಕೀಯ ಪಕ್ಷಗಳಿಗೂ ಬಂದು ಬಿಟ್ಟಿದೆ. ಹೀಗಾಗಿಯೆ ಈ ಕಾಲದಲ್ಲಿ ಒಂದೊಂದು ಸಣ್ಣ ಗುಂಪಿನ ಜನವರ್ಗ ವನ್ನು ಜಾತಿ ಹೆಸರಿನಿಂದ ಸಂಘಟಿಸಲು ಸ್ವತಃ ರಾಜಕೀಯ ಪಕ್ಷಗಳೆ ಬೆಂಬಲಕೊಟ್ಟು ತಮ್ಮ ಅನುಕೂಲಕ್ಕೆ ಸಾಕಿಕೊಳ್ಳುವುದು ನಡೆದಿದೆ.

ಇರುವುದೇ ಮನಸ್ಸಿನ ತಳದಲ್ಲಿ. ಅದರ ಬೇರನ್ನು ಮಂತ್ರ ವಿದ್ಯೆಯಿಂದ ಅಂದರೆ ಮನಃಪರಿವರ್ತನೆಯ ಮೂಲಕ ತನಗೆ ತಾನೇ ಕಿತ್ತುಕೊಳ್ಳುವಂತೆ ಮಾಡುವುದು ಇವರಿಬ್ಬರ ಗುರಿಯಾಗಿತ್ತು. ಜಾತಿಯ ಮೂಲವನ್ನು ಜಾತಿಯ ಶಾಪಕ್ಕೆ ಒಳ ಪಟ್ಟವರು ಕಿತ್ತು ಹಾಕುವುದು ಸಲೀಸಲ್ಲ. ಜಾತಿಯನ್ನು ಬಿತ್ತಿದವರೆ ಜಾತಿಯನ್ನು ಕಿತ್ತುಕೊಂಡಾಗ ಅದು ಬುಡಸ ಮೇತ ಉರುಳಬಲ್ಲದು. ಮನಸ್ಸಿನ ಪರಿವರ್ತನೆಯಲ್ಲಿ ಮಾತ್ರ ಇಂತಹ ಬುಡಮೇಲು ಮಂತ್ರ ಸಾಧ್ಯ. ಮಂಟೇಸ್ವಾಮಿ, ಮಾದೇಶ್ವರರು ಈ ಬಗೆಯ ಹಾದಿಯಲ್ಲಿ ಜಾತ್ಯ ತೀತ ಸಮಾಜವನ್ನು ಕಟ್ಟಲು ತೊಡಗಿದರು. ಆ ಮೂಲಕ ಬೃಹತ್ ಆದ ಸಮಾಜವನ್ನು ಜಾತ್ಯತೀತವಾಗಿ ಸಂಘಟಿಸಲು ಪವಾಡಗಳ ಮೊರೆ ಹೊಕ್ಕರು. ಹಳೆ ಮೈಸೂರಿನ ಪ್ರಾಂತ್ಯದಲ್ಲಿರುವ ಹಿಂದುಳಿದ ವರ್ಗಗಳನ್ನು ಇವತ್ತಿಗೂ ಇವರಿಬ್ಬರ ಜನಪದ ಕಾವ್ಯಗಳು ಪ್ರಭಾವಿಸುತ್ತಲೆ ಬಂದಿವೆ. ಈ ಅಂಶವನ್ನಿಲ್ಲಿ ವಿಸ್ತರಿಸಿದ್ದಕ್ಕೆ ಕಾರಣವಿದೆ. ವಚನ ಚಳುವಳಿಯಲ್ಲಿ ಕ್ರಿಯಾಶೀಲವಾಗಿದ್ದು ದಲಿತರ ಜೊತೆ ಹೊಂದಿಕೊಂಡಿದ್ದ ಹಿಂದುಳಿದ ವರ್ಗಗಳ ಜೊತೆ ಮತ್ತೊಂದು ಹಂತದಿಂದ ವಿಶ್ವಾಸದ ತೆಕ್ಕೆಗೆ ತೆಗೆದುಕೊಳ್ಳಲು ಈ ಇಬ್ಬರು ಸಾಂಸ್ಕೃತಿಕ ನಾಯಕರು ಸಾದ್ಯಂತ ಯತ್ನಿಸಿದ್ದು; ಇದು ಚಾರಿತ್ರಿಕವಾದ ಪಲ್ಲಟವೊಂದಕ್ಕೆ ನಡೆಸಿದ ಜಗಿತವೆ ಆಗಿತ್ತು ಎಂಬುದನ್ನು ನೆನಪಿಸಲು.

ಮಂಟೇಸ್ವಾಮಿ ಮತ್ತು ಮಾದೇಶ್ವರರ ಯತ್ನಗಳು ಕೂಡ ಕೇವಲ ಆಚರಣೆಗೆ ಮಾತ್ರ ಸೀಮಿತವಾಗಿ, ವಾಸ್ತವ ಸಮಾಜದ ರಚನೆಯಲ್ಲಿದ್ದ ಯತಾಸ್ಥಿತಿಯನ್ನೆ ಹಿಂದುಳಿದ ವರ್ಗಗಳು ಒಪ್ಪಿಕೊಳ್ಳುವಂತೆ ವಿಫಲಗೊಂಡದ್ದು ಸಾಂಸ್ಕೃತಿಕವಾಗಿ ಹೆಚ್ಚು ಕಡಿಮೆ ಮುನ್ನೂರು ವರ್ಷಗಳ ಹಿಂದಿನ ಅನುಭವ. ಹದಿನೇಳನೇ ಶತಮಾನದ ಕೊನೆಯ ವೇಳೆಗೆ ಇಂತಹದೊಂದು Epic Struggle ನಿಂತೇ ಹೋಯಿತು. ಇವತ್ತಿನ ಮಂಟೇಸ್ವಾಮಿ ಮತ್ತು ಮಹದೇಶ್ವರರ ಕಾವ್ಯದ ಮಹಾ ಜಾತ್ರೆಗಳಲ್ಲಿ ಎಲ್ಲ ಹಿಂದುಳಿದ' ವರ್ಗಗಳು ನೆನಪಿಗಾಗಿ ಮಾತ್ರ ಭಾಗವಹಿಸಿ ದೂರವನ್ನು ಹಾಗೇ ಕಾಯ್ದುಕೊಳ್ಳುತ್ತವೆ. ಈ ದೂರವು ಆಧುನಿಕ ರಾಜಕಾರಣದಲ್ಲಿ ಮತ್ತು ಅಂತರದಿಂದ ಶಕ್ತಿ ರಾಜಕಾರಣದಲ್ಲಿ ವಿಶ್ವಾಸವನ್ನು ಹೊಂದಿದ್ದರೂ –ಒಳಗೆ ಬೇರೆಯದೇ ಆಗುವುದು ನಡೆಯುತ್ತಲೇ ಇದೆ. ಜಾತಿಯ ಹೆಸರಿನಿಂದ ಸಂಘಟಿತವಾಗುವುದೇ ಹೆಚ್ಚು ಲಾಭಕರ ಹಾಗೂ ಸುಲಭ ಎಂಬುದು ಇಂದಿನ ವಾಸ್ತವ. ಇವನ್ನು ಮೀರಿದರೆ ರಾಜಕಾರಣದಲ್ಲಿ ಉಳಿಯಲು ಸಾಧ್ಯವೇ ಇಲ್ಲ ಎಂಬ ಬಲವಾದ ನಂಬಿಕೆ ಎಲ್ಲ ರಾಜಕೀಯ ಪಕ್ಷಗಳಿಗೂ ಬಂದು ಬಿಟ್ಟಿದೆ. ಹೀಗಾಗಿಯೆ ಈ ಕಾಲದಲ್ಲಿ ಒಂದೊಂದು ಸಣ್ಣ ಗುಂಪಿನ ಜನವರ್ಗವನ್ನು ಜಾತಿ ಹೆಸರಿನಿಂದ ಸಂಘಟಿಸಲು ಸ್ವತಃ ರಾಜಕೀಯ ಪಕ್ಷಗಳೆ ಬೆಂಬಲಕೊಟ್ಟು ತಮ್ಮ ಅನುಕೂಲಕ್ಕೆ ಸಾಕಿಕೊಳ್ಳುವುದು ನಡೆದಿದೆ.

ಇಂತಲ್ಲಿ ದಲಿತ ರಾಜಕಾರಣವು ಮರುಭೂಮಿಯ ಮೃಗಜಲದಂತೆ ತೋರುತ್ತಿದೆ. ದಲಿತ ಸಮುದಾಯಗಳಿಗೆ ರಾಜಕೀಯ ಇಚ್ಛಾಶಕ್ತಿ ಇಲ್ಲವೆಂದು ಇದರರ್ಥವಲ್ಲ. ಈ ಸಮಾಜವನ್ನು ಆಳುವ ಬಲಿಷ್ಠ ಜಾತಿಗಳು ತಮ್ಮ ಉಳಿವಿಗಾಗಿ ಜಾತಿಗಳನ್ನು ಸದಾ ಜಾತಿಯ ಪಂಜರದಲ್ಲೇ ಇಟ್ಟು ಸಾಕುತ್ತಿರುತ್ತವೆ. ಬೇಕೆನಿಸಿದಾಗ ಒಂದಿಷ್ಟು ಆಹಾರಕೊಟ್ಟು ಹತ್ತಿರ ಕರೆದು ದುಡಿಸಿಕೊಂಡು ಮತ್ತೆ

ಪಂಜರದಲ್ಲಿ ಜೋಪಾನ ಕಾಯ್ದಿಡುತ್ತವೆ. ಇಂತಹ ಪಂಜರದಲ್ಲಿ ಸ್ವತಃ ಬಾಬಾಸಾಹೇಬ ಅಂಬೇಡ್ಕರ್‌ರನ್ನು, ಬಾಬು ಜಗಜೀವನರಾಂಜೀ ಅವರನ್ನು ಭಾರತದ ಪಕ್ಷ ರಾಜಕಾರಣವು ಪಳಗಿಸಲು ನೋಡಿ ಆಗದೆ ಕೊನೆಗೆ ಜಗಜೀವನರಾಂಜೀ ಅವರನ್ನೆ ಅಂಬೇಡ್ಕರ್ ವಿರುದ್ಧ ಎತ್ತಿ ಕಟ್ಟುವಂತೆ ಜಾಲ ರೂಪಿಸಿತು. ಒಂದೇ ದೇಹವನ್ನು ತುಂಡು ಮಾಡಿ ಒಂದೊಂದು ಅಂಗಕ್ಕೆ ಇಷ್ಟಿಷ್ಟು ಪಾಲು ಎಂಬ ತತ್ವವನ್ನು ಜಾತಿನಿಷ್ಠ ರಾಜಕಾರಣವು ಎಸಗುತ್ತಿರುತ್ತದೆ. ದಲಿತ ಸಮುದಾಯಗಳೆಲ್ಲವು ಅಂತಿಮವಾಗಿ ಒಂದೇ ದೇಹದವು. ಈ ಒಂದೇ ದೇಹವನ್ನು ಸ್ವಾತಂತ್ರ್ಯಾನಂತರದ ರಾಜಕಾರಣವು ಎಷ್ಟೊಂದೂ ಕ್ರೂರವಾಗಿ ಸೀಳಿ ವಿಂಗಡಿಸಿ ಪ್ರತಿಹಂತದಲ್ಲಿ ಈ ಸೀಳಿಕೊಳ್ಳುವ ಹತ್ಯಾತ್ಮಕ ಹಿಂಸೆಗೆ ಇಂಬುಕೊಡುತ್ತಿರುತ್ತದೆ ಎಂದರೆ ಒಂದೇ ಜೀವವನ್ನು ಕೂಡ ವಿಭಜಿಸಲು ಅದು ಹಿಂದೆ ಮುಂದೆ ನೋಡುವುದಿಲ್ಲ. ದೇಹವನ್ನು ಸೀಳಿದರೆ ಹೇಗಾದರೂ ಬದುಕುಳಿಯ ಬಹುದು. ಆದರೆ ಪ್ರಾಣವನ್ನೆ ಸೀಳಿ ಬಿಟ್ಟರೆ ಮತ್ತಿನ್ನೇನು ಉಳಿಯುವುದು. ಇಂತಹ ಸ್ಥಿತಿಯಲ್ಲಿ ದಲಿತರಾಜಕಾರಣವು ಇನ್ನೂ ಎಂದಿಷ್ಟಾದರೂ ಜೀವದಿಂದ ಎದ್ದು ನಿಲ್ಲಲು ಯತ್ನಿಸುತ್ತಿರುವುದು ಇಪ್ಪತ್ತೊಂದನೆ ಶತಮಾನದ ದೊಡ್ಡ ಸಾಧ್ಯತೆ.

ಈ ತೆರನ ವರ್ತಮಾನದ ಇಕ್ಕಟ್ಟುಗಳಲ್ಲಿ ದಲಿತತ್ವದ ಪರಿಕಲ್ಪನೆಯನ್ನು ಗಾಯಗೊಂಡ ಬೆಳಗು ಎಂದೇ ಕರೆಯಬೇಕಾಗುತ್ತದೆ. ಗಾಯಗೊಂಡ ಈ ಬೆಳಗು ಮಾಗಿ ವಾಸಿಯಾಗುವುದಕ್ಕೆ ಬುದ್ಧತ್ವದಲ್ಲಿ ದಾರಿ ಇದೆ ಎಂಬುದೆ ದೊಡ್ಡ ವಿಶ್ವಾಸ. ದಲಿತ ಸಮುದಾಯಗಳಿಗೆ ಪರ್ಯಾಯ ರಾಜಕಾರಣವೆಂದರೆ ಮರಳಿ ಜಾಕಿಗೆ ಹಿಂತಿರುಗುವುದು ಎಂದಲ್ಲ. ಮರಳಿ ಬುದ್ಧತ್ವದ ಕಡೆಗೆ ಹೊರಳುವುದೇ ಭವಿಷ್ಯದಲ್ಲಿ ಅದಕ್ಕಿರುವ ಏಕೈಕ ದಾರಿ. ದಲಿತ ಪರಂಪರೆಗಳು ಬಹುರೂಪಿಯಾಗಿದ್ದರೂ ಅವೆಲ್ಲವೂ ಮುಕ್ತಿಯ ದಾಹದಲ್ಲಿ ಒಂದೇ ದಿಕ್ಕಿನ ಪಯಣದವು. ಅತಕಾಲದ ಅವುಗಳ ಸ್ಮೃತಿಯನ್ನು ವರ್ತಮಾನದ ಸತ್ತಡಗಳು ಮರೆಗೆ ಸರಿಸಿರುವುದು ದಿಟ. ಆದರೆ ಇದು ವಿಸ್ಮೃತಿಯಲ್ಲ. ಬಿಡುಗಡೆಯ ದಾರಿಯಲ್ಲಿ ಮಾಡಿಕೊಳ್ಳುವ ಆಯ್ಕೆ ಮತ್ತು ಒಪ್ಪಂದ.

ಬುದ್ಧತ್ವ ಈ ನಿಟ್ಟಿನಲ್ಲಿ ಮರೆಗೆ ಸರಿಸಲ್ಪಟ್ಟಿರುವ ಮುಕ್ತಿಯ ಸಮಷ್ಠಿ ಧ್ಯಾನವನ್ನು ಏಕೀಕರಣಗೊಳಿಸಬಹುದು. ಬುದ್ಧತ್ವ ಎಂದರೆ ತಮ್ಮ ಅಸ್ತಿತ್ವದ ವಿಸ್ತರಣೆಗೆ ಹಾಗೂ ಪುನರ್‌ಸೃಷ್ಟಿಗೆ ಇರುವ ಅಪಾರ ಆಯ್ಕೆಯ ಸ್ವಾತಂತ್ರ್ಯ. ಬುದ್ಧ ಭಾರತದ ಎಲ್ಲ ತಳಸಮುದಾಯಗಳನ್ನು ಬದುಕುವ ಹಕ್ಕಿನ ಆಯ್ಕೆಯನ್ನು ಪ್ರತಿಪಾದಿಸಿದಾತ. ಬದುಕು ಹಸನಾಗುವುದು ಆಯ್ಕೆಯ ಸ್ವಾತಂತ್ರ್ಯವಿದ್ದಾಗ. ಆಯ್ಕೆಯ ಸ್ವಾತಂತ್ರ್ಯವಿಲ್ಲದ ಸಮಾಜ ವ್ಯಕ್ತಿಯ ಮುಕ್ತಿಯ ಹಾದಿಯನ್ನೆ ಮುಚ್ಚಿಬಿಟ್ಟಿರುತ್ತದೆ. ಆಯ್ಕೆ ಎಂದರೆ ಸ್ವಾತಂತ್ರ್ಯದ ಮೊದಲ ಹಂತ. ಈ ಆಯ್ಕೆಯು ಅವರವರ ಅಸ್ತಿತ್ವದ ನೆಲೆಯಾಗಿರುತ್ತದೆ. ಜೀವ ಜಾಲದಲ್ಲಿ ಆಯ್ಕೆಯ ಅವಕಾಶ ಮತ್ತು ಸ್ವಾತಂತ್ರ್ಯವಿದ್ದಾಗ ಜೀವ ಸರಪಳಿಯು ನಿಸರ್ಗದ ತಕ್ಕ ಕ್ರಮದಲ್ಲಿ ವಿಕಾಸವಾಗುತ್ತದೆ. ಭಾರತೀಯ ಸಮಾಜವು ಮೊದಲಿಗೆ ಕೊಡಲಿ ಪೆಟ್ಟನ್ನು ಹಾಕುವುದೇ ಆಯ್ಕೆಯ ವಿಷಯದಲ್ಲಿ ಆಯ್ಕೆಯು ಇಲ್ಲ ಎಂದರೆ ಇದ್ದು ಸತ್ತಕ್ಕೇ ದಾಸ್ಯವಾಗಿ ಬದುಕುವುದು ಎಂದರ್ಥ. ಇಲ್ಲವೆ ತನ್ನ ಅಸ್ತಿತ್ವವನ್ನು ತಾನೇ ನಿರಾಕರಿಸಿಕೊಳ್ಳುವುದೆಂದಾಗುತ್ತದೆ. ಶಕ್ತಿಗಳು ಸದಾ ಒಂದರ ಆಯ್ಕೆಯನ್ನು ಮತ್ತೊಂದು ನಿರ್ವರಿಸುತ್ತಿರುತ್ತವೆ. (ಮುಂದುವರಿಯುವುದು) □

ಪ್ಯಾರಿಸ್ ಪ್ರಳಯ?

(8ನೇ ಪುಟದಿಂದ)

ಕೆಲವು ಮಾನವೀಯ ಸೇನಾ ದಂಡಾಧಿಕಾರಿಗಳು ಫ್ರಾನ್ಸ್ ಸರ್ಕಾರದ ಆದೇಶವನ್ನು ಉಲ್ಲಂಘಿಸಿ ಕೆಲವು ಸಾವಿರ ಹರ್‌ಕಿಸ್‌ಗಳನ್ನು ಹಡಗು ಹತ್ತಿಸಿಕೊಂಡು ಫ್ರಾನ್ಸಿಗೆ ಕರೆತಂದಿದ್ದರು, ಅವರು ಕೂಡ ಪ್ಯಾರಿಸ್ಸಿನ ಅಮಾನವೀಯ ಗೆಟ್ಟೋಗಳಲ್ಲಿ ಫ್ರೆಂಚರ ಸೇವೆ ಮಾಡುತ್ತಲೇ ಕಳೆದಿದ್ದಾರೆ.

ಹೆಚ್ಚುತ್ತಿರುವ ಸಂಕಷ್ಟಕ್ಕೆ ಆಫ್ರೋ-ಅರಬ್ಬ್ ವಲಸಿಗರಿಗೆ ಸರ್ಕಾರ ಕೊಡುತ್ತಿರುವ ಸೌಲಭ್ಯಗಳೇ ಕಾರಣವೆಂದು ಪ್ರಚಾರ ಮಾಡಲಾಗುತ್ತಿದೆ. (ನಮ್ಮಲ್ಲಿ ಮೇಲ್ಜಾತಿಗಳ ನಿರುದ್ಯೋಗಕ್ಕೆ ದಲಿತರಿಗೆ ಕೊಡುತ್ತಿರುವ ಮೀಸಲಾತಿಯೇ ಕಾರಣ ಎನ್ನುತ್ತಾರಲ್ಲ-ಹಾಗೆ ಇದರಿಂದಾಗಿ ಫ್ರಾನ್ಸಿನ ಬಿಳಿಸಮಾಜದಲ್ಲಿ ಜನಾಂಗೀಯ ವಿರೋಧಿ-ಮುಸ್ಲಿಂ ವಿರೋಧಿ-ನವ ನಾಜಿ ಸಂಘಟನೆಗಳು ಹುಟ್ಟಿಕೊಳ್ಳುತ್ತಿವೆ ಈ ಸಾರ್ಕೋಜಿ ಅಂತ ಹವರ ಪ್ರತಿನಿಧಿ. 2007ರ ಚುನಾವಣೆಯಲ್ಲಿ ಆತನೇ ಅಧ್ಯಕ್ಷನಾಗುವ ಸಾಧ್ಯತೆ ಹೆಚ್ಚಿದೆಯಂದೂ ಹೇಳಲಾಗುತ್ತಿದೆ.

ಈ ಬಗೆಯ ಜನಾಂಗೀಯ ವಿರೋಧಿ ಫ್ಯಾಸಿಸ್ಟ್ ಪ್ರವೃತ್ತಿಗಳು ಫ್ರಾನ್ಸಿನ ನಾಗರೀಕ ವ್ಯವಸ್ಥೆಯ ಹಿನ್ನಲೆಯಲ್ಲಿ ಮೊದಲಿಂದಲೂ ಇದ್ದೇ ಇತ್ತು. ಆದರೆ ಇದಕ್ಕೆ ಮೊದಲು ಹದವಾದ ವಾತಾವರಣವಿರಲಿಲ್ಲ ಅಷ್ಟೆ. ಏಕೆಂದರೆ ಎರಡನೇ ಮಹಾಯುದ್ಧದ ನಂತರ ಫ್ರಾನ್ಸಿನಲ್ಲಿ ಕೆಲಸ ಮಾಡಬಲ್ಲ ಬಿಳಿ ಪುರುಷರ ಸಂಖ್ಯೆ ಅಗತ್ಯಕ್ಕಿಂತ ಕಡಿಮೆ ಇತ್ತು. ಇದ್ದವರೂ ಸಹ ಬಲಿಷ್ಠ, ಮಿಲಿಟೆಂಟ್ ಟ್ರೇಡ್ ಯೂನಿಯನ್‌ಗಳ ಭಾಗವಾಗಿದ್ದರು. ಅದು ಆರ್ಥಿಕ ಚಟುವಟಿಕೆಗಳ ವಿಸ್ತರಿಸಬೇಕಾಗಿದ್ದ-ಬಂಡವಾಳಶಾಹಿ ವಿಸ್ತರಣೆಯ ಕಾಲವಾಗಿತ್ತು. ಹಾಗಾಗಿ ಫ್ರಾನ್ಸಿನ ಹೊಸ ಉದ್ಯಮಿಗಳಲ್ಲಿ ಟ್ರೇಡ್ ಯೂನಿಯನ್‌ಗಳ ಸೋಂಕಿಲ್ಲದ, ಕಡಿಮೆ ಕೆಲಸ ಮಾಡುವ ಕಾರ್ಮಿಕರ ಅಗತ್ಯವಿತ್ತು. ಈ ಬಂಡವಾಳಶಾಹಿಗಳ ಅಗತ್ಯಕ್ಕೆ ಪೂರಕವಾಗಲೆಂದೇ ವಲಸೆ ನೀತಿಯನ್ನು ಸಡಿಲಿಸಿ ಕಠಿಣ ದುಡಿಮೆ ಮಾಡುವ ಆಫ್ರೋ-ಅರಬ್ಬರನ್ನು ಮೊರಾಕ್ಕೊ ಅಲ್ಜೀರಿಯಾ ಇತ್ಯಾದಿ ಉತ್ತರ ಆಫ್ರಿಕಾ ದೇಶಗಳಿಂದ ಬರಮಾಡಿಕೊಳ್ಳಲಾಯಿತು. ಅವರು ಅನಕ್ಷರಸ್ಥರಾಗಿದ್ದರೆ ಬೇಗ ಕೆಲಸ ಸಿಗುತ್ತಿತ್ತು. ಏಕೆಂದರೆ ಸುಶಿಕ್ಷಿತರಾಗಿದ್ದರೆ ಭಯ. ಈಗಲೂ ಫ್ರಾನ್ಸಿನಲ್ಲಿ ಪೌರ ಕಾರ್ಮಿಕ, ಇನ್ನಿತ್ಯಾದಿ ದೈಹಿಕ ಶ್ರಮದ ಕೆಲಸಗಳಲ್ಲಿ ಬಹುಸಂಖ್ಯೆಯಲ್ಲಿರುವವರು ಈ ಆಫ್ರೋ-ಅರಬ್ಬಿಯನ್ನರೇ. ಆದರೂ, ಫ್ರಾನ್ಸಿನ ಸಂಪತ್ತನ್ನು ಹೆಚ್ಚಿಸಿದ ಈ ಆಫ್ರೋ-ಅರಬ್ಬಿನ್ನರಿಗೆ ಫ್ರಾನ್ಸಿನಲ್ಲಿ ಮೊದಲಿಂದಲೂ ಎರಡನೇ ದರ್ಜೆ ಪ್ರಜೆಗಳ ಸ್ಥಾನಮಾನವೇ. "ಆ ಸುವರ್ಣ ನೂರು ದಶಕಗಳಲ್ಲಿ" ವಲಸೆ ಬಂದವರು ಫ್ರಾನ್ಸ್ ಅನ್ನೇ ಮನೆ ಮಾಡಿಕೊಂಡಿದ್ದಾರೆ. ಮೂರನೇ ಪೀಳಿಗೆಯ ಯುವಕರು ಅಪಾರ ನಿರುದ್ಯೋಗ-ಅಸಹನೀಯ ಅಪಮಾನಕ್ಕೆ ಗುರಿಯಾಗುತ್ತಿದ್ದಾರೆ.

1980 ದಶಕದಿಂದೀಚೆಗೆ ಫ್ರಾನ್ಸಿನ ಆರ್ಥಿಕತೆ ಬಿಕ್ಕಟ್ಟಿನಲ್ಲಿದೆ. ವಿಸ್ತರಣೆ ಕುಗ್ಗುತ್ತಿದೆ. ಲಾಭದ ದರ ಜಾಸ್ತಿ ಮಾಡಿಕೊಳ್ಳಬೇಕೆಂದರೆ ಕಾರ್ಮಿಕರಿಗೆ, ಜನತೆಗೆ ಕೊಡುತ್ತಿರುವ ಸೌಲಭ್ಯ ಕತ್ತರಿಸಿ ತಮಗೆ ಕೊಡಬೇಕೆಂದು ಬಂಡವಾಳಶಾಹಿಗಳ ಒತ್ತಡ ಹೆಚ್ಚುತ್ತಿದೆ. ಆದ್ದರಿಂದಲೇ ವಲಸೆಗಾರ ವಿರೋಧಿ ಬಲಪಂಥೀಯ ಶಕ್ತಿಗಳಿಗೆ ಬೆಂಬಲ ಘೋಷಿಸುತ್ತಿದ್ದಾರೆ. ಇದರ ನೇರ ಹೊಡೆತ ಬೀಳುತ್ತಿರುವುದೇ ಆಫ್ರೋ-ಅರಬ್ ಸಮುದಾಯದ ಮೇಲೆ. ನಿರುದ್ಯೋಗ, ಜೀವನಾವಶ್ಯಕವಾದ ಕನಿಷ್ಠ ಸೌಲಭ್ಯಗಳ ಕೊರತೆ, ಹಸಿವು ಅಪಮಾನ ಫ್ರಾನ್ಸಿನ ಬಂಡವಾಳಶಾಹಿ-ಸಾಮ್ರಾಜ್ಯಶಾಹಿ ವ್ಯವಸ್ಥೆಯ ಆರ್ಥಿಕ ಬಿಕ್ಕಟ್ಟಿನಿಂದಲೇ ನೇರವಾಗಿ ಉದ್ಭವಿಸಿದೆ.

ಬಿಕ್ಕಟ್ಟಿನಲ್ಲಿರುವ ಬಂಡವಾಳಶಾಹಿ ತನ್ನ ಪ್ರಜಾತಂತ್ರದ ಮುಸುಕನ್ನೆಲ್ಲಾ ಬದಿಗಟ್ಟಿ ತನ್ನ ಭಯೋತ್ಪಾದನ, ಫ್ಯಾಸಿಸ್ಟ್ ದಮನಕ್ಕಿಳಿಯುವುದು ಇತಿಹಾಸದಲ್ಲಿ ಮತ್ತೆ-ಮತ್ತೆ ಮರುಕಳಿಸಿದೆ. ಈಗಲೂ ಫ್ರಾನ್ಸಿನಲ್ಲಿ ನಡೆಯುತ್ತಿರುವ ಪ್ರಭಾವದ ಭಯೋತ್ಪಾದನೆ, ಹಾಗೂ ಬಿಳಿ ಸಮಾಜದ ಈ ಫ್ಯಾಸೀಕರಣದ ಪ್ರಕ್ರಿಯೆಯ ಭಾಗವಾಗಿದೇ ಆದ್ದರಿಂದಲೇ ತನ್ನ ವಸಾಹತುವಾಗಿದ್ದ ಅಲ್ಜೀರಿಯದ ವಿಮೋಚನಾ ಹೋರಾಟವನ್ನು ದಮನ ಮಾಡಲು ರಚಿಸಿದ್ದ ಕಾಯಿದೆಯನ್ನು ಈಗ ಪುನರುಜ್ಜೀನಗೊಳಿಸಲಾಗಿದೆ. ಈ ಬಗೆಯ ಅಮಾನವೀಯ ನೀತಿಗಳಲ್ಲಿ ಫ್ರಾನ್ಸಿಗೆ ಮೊದಲಿಂದಲೂ ಕೆಟ್ಟ ಇತಿಹಾಸವಿದೆ. ಅಲ್ಜೀರಿಯಾ ಫ್ರಾನ್ಸಿನ ಕಾಲೋನಿಯಾಗಿದ್ದಾಗ, ತನ್ನನ್ನು ಬೆಂಬಲಿಸುವ ಅಲ್ಜೀರಿಯನ್ನರ ಸಮುದಾಯವೊಂದನ್ನು ಬೆಳೆಸಿ ಕೊಂಡಿತ್ತು. ಆದರೆ ಅವರನ್ನು 'ಹರ್‌ಕಿಸ್' ಎಂದು ಕರೆಯಲಾಗುತ್ತಿತ್ತು. ಆದರೆ 1960 ರ ಸುಮಾರಿಗೆ ಅಲ್ಜೀರಿಯಾ ವಿಮೋಚನಾ ಹೋರಾಟಗಟ್ಟಿಗೊಂಡು ಫ್ರೆಂಚರು ದೇಶ ಬಿಡಲೇಬೇಕಾಗಿ ಬಂತು. ಆಗ ಕೂಡಲೇ ಹಡಗು ಹತ್ತಿ ಅಲ್ಜೀರಿಯಾ ಬಿಟ್ಟು ಹೊರಟ ಫ್ರೆಂಚರು ತಮ್ಮ ಬೆಂಬಲಕ್ಕೆ ನಿಂತಿದ್ದ ಹರ್‌ಕಿಸ್‌ಗಳನ್ನು ಹಡಗು ಹತ್ತಲು ಬಿಡಲೇ ಇಲ್ಲ. ಇದರಿಂದಾಗಿ ಅಲ್ಜೀರಿಯಾದ ವಿಮೋಚನಾ ಹೋರಾಟಗಾರರ ಕಣ್ಣಲ್ಲಿ ದ್ರೋಹಿಗಳೇ ಆಗಿದ್ದ ಹತ್ತಾರು ಸಾವಿರ ಹರ್‌ಕಿಸ್‌ಗಳು ವಿಮೋಚನಾ ಹೋರಾಟಗಾರರ ಕೈಯಲ್ಲಿ ಸಿಕ್ಕಿ ಕೊಲ್ಲಲ್ಪಟ್ಟರು.

ಕೆಲವು ಮಾನವೀಯ ಸೇನಾ ದಂಡಾಧಿಕಾರಿಗಳು ಫ್ರಾನ್ಸ್ ಸರ್ಕಾರದ ಆದೇಶವನ್ನು ಉಲ್ಲಂಘಿಸಿ ಕೆಲವು ಸಾವಿರ ಹರ್‌ಕಿಸ್‌ಗಳನ್ನು ಹಡಗು ಹತ್ತಿಸಿಕೊಂಡು ಫ್ರಾನ್ಸಿಗೆ ಕರೆತಂದಿದ್ದರು, ಅವರು ಕೂಡ ಪ್ಯಾರಿಸ್ಸಿನ ಅಮಾನವೀಯ ಗೆಟ್ಟೋಗಳಲ್ಲಿ ಫ್ರೆಂಚರ ಸೇವೆ ಮಾಡುತ್ತಲೇ ಕಳೆದಿದ್ದಾರೆ.

ತನ್ನ ಬಂಡವಾಳಶಾಹಿ ವ್ಯವಸ್ಥೆಗೆ ಬೇಕಾಗಿದ್ದಾಗ ಆಫ್ರೋ-ಅರಬ್ಬರ ಶ್ರಮವನ್ನು ಬಳಸಿಕೊಂಡ ಫ್ರೆಂಚ್ ಬಂಡವಾಳಶಾಹಿ ವ್ಯವಸ್ಥೆ ಈಗ ಅವರನ್ನು ತಿಂದೆಲೆಯಂತೆ ಬಿಸಾಕುತ್ತಿದೆ. ಗುಂಡಿಟ್ಟು ಸಾಯಿಸುತ್ತಿದೆ. ಕೊಚ್ಚೆಗುಂಡಿಯನ್ನಾಗಿಸಿದೆ. ಬಂಡವಾಳಶಾಹಿ ಪ್ರಜಾತಂತ್ರದ ನೆರಳಲ್ಲೇ ಫ್ಯಾಸಿಸಂ ಇರುತ್ತದೆ. ಆರ್ಥಿಕ ಬಿಕ್ಕಟ್ಟು ಆ ಫ್ಯಾಸಿಸ್ಟ್ ಪ್ರವೃತ್ತಿಯನ್ನು ಬೆಳಕಿಗೆ ತರುತ್ತದೆ. ಆದ್ದರಿಂದಲೇ ಜನಾಂಗೀಯ ಭೇದ ನಿವಾರಣೆಯಾಗಬೇಕೆಂದರೆ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆ ನಾಶವಾಗಬೇಕಿದೆ.

ಇದು ಪ್ಯಾರಿಸ್ ಕಲಿಸುವ ಪಾಠ □

ಸಣ್ಣದೆಂದು ಮೂಗು ಮುರಿಯುವುದೇಕೆ?

ದಲಿತ್ ಡೈರಿ

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಹೊಸ ಆರ್ಥಿಕ ಯುಗದಲ್ಲಿ, ಸಣ್ಣ ಕೈಗಾರಿಕೆಗಳು ದೊಡ್ಡ ಮಾರುಕಟ್ಟೆ ಪಾತ್ರಧಾರಿಗಳಾಗಿ ರೂಪುಗೊಳ್ಳುತ್ತಿದ್ದಾರೆ. ಸರಬರಾಜು, ಡೀಲರ್‌ಶಿಪ್. ಮತ್ತು ಗುತ್ತಿಗೆ ಸಂಪರ್ಕಗಳಿಂದ ದಲಿತರು ಹೊರಗೆಯೇ ಉಳಿದಿರುವುದರಿಂದಾಗಿ ಈ ಹೊಸ ಆರ್ಥಿಕ ಉದ್ಯಮಾನದಿಂದ ಅವರೇನೂ ಪ್ರಯೋಜನ ಪಡೆಯಲಾರರು. ೨೦೦೨ರಲ್ಲಿ ನಾನು ಅಮೆರಿಕಕ್ಕೆ ಭೇಟಿ ಕೊಟ್ಟಾಗ ಬೋಯಿಂಗ್ ಕಂಪನಿ ತಯಾರಿಸುವ ಪ್ರತಿಯೊಂದು ವಿಮಾನ, ಫೋರ್ಡ್ ಕಂಪನಿ ತಯಾರಿಸುವ ಪ್ರತಿಯೊಂದು ಕಾರಿನಲ್ಲೂ ಒಬ್ಬ ಕಪ್ಪು ವ್ಯಕ್ತಿಯ ಶ್ರಮ ಇರುತ್ತದೆ. ಇದು ಸಾಧ್ಯವಾದದ್ದು ಗುತ್ತಿಗೆಯಲ್ಲಿನ ವೈವಿಧ್ಯತೆಯಿಂದಲೇ ಸರಿ

ಅನು: ಡೊಮಿನಿಕ್ ಮತ್ತು ವಿದ್ಯಾ

ಈ ವಾರ ಅಮೆರಿಕಾದ ಇತ್ತೀಚಿನ ಆರ್ಥಿಕ ವಿದ್ಯಮಾನಗಳ ಬಗ್ಗೆ ಸಂಶೋಧನೆ ನಡೆಸುತ್ತಿರಬೇಕಾದರೆ ಅಕಸ್ಮಾತ್ತಾಗಿ ಹೊಸ ಸಂಗತಿಯೊಂದಕ್ಕೆ ಮುಖಾಮುಖಿಯಾದೆ. ಅಮೆರಿಕಾದ 23.7 ಮಿಲಿಯನ್ ಬಿಸಿನೆಸ್ ವ್ಯವಹಾರಗಳಲ್ಲಿ 17.5 ಮಿಲಿಯನ್ ಅಥವಾ ಶೇ.73.83 ರಷ್ಟು ಸಣ್ಣ ವ್ಯವಹಾರಗಳಿಂದ ಕೂಡಿದೆ

ಈ ಸಣ್ಣ ವ್ಯವಹಾರಗಳಲ್ಲಿ ಖಾಸಗಿವಲಯದ ಶೆ. 50% ರಷ್ಟು ಶ್ರಮ ಶಕ್ತಿಯನ್ನು ಬಳಸುತ್ತಿದೆ. ಈ ವ್ಯವಹಾರದ ವರ್ಗದಲ್ಲಿ ಅಮೆರಿಕದ ಶೇ.40 ರಷ್ಟೇ ಆರ್ಥಿಕತೆಯು ನಡೆದಿದೆ. ಅಂದರೆ ಕಳೆದ ದಶಕದಲ್ಲಿ ಅಮೆರಿಕದಲ್ಲಿ ಸೃಷ್ಟಿಯಾದ ಉದ್ಯೋಗಗಳಲ್ಲಿ ಶೇ.70 ರಷ್ಟು ಈ ಸಣ್ಣ ಉದ್ಯಮಗಳಿಂದಲ್ಲೇ ಸೃಷ್ಟಿ ಆದದ್ದು.

ಅಮೆರಿಕದಂಥ ಅಭಿವೃದ್ಧಿಗೊಂಡ ಬಂಡವಾಳಶಾಹಿ ಆರ್ಥಿಕತೆಯಲ್ಲಿ ದೊಡ್ಡ ನಿಗಮಗಳದ್ದೇ ಕಾರುಭಾರೆಂದು, ಸಣ್ಣ ಉದ್ಯಮಗಳಿಗೆ ಅಲ್ಪಮಟ್ಟಿನ ಅವಕಾಶ ಮಾತ್ರ ಇರುತ್ತದೆ ಎಂದು ನಂಬಿದ್ದ ನನಗೆ ಮೇಲಿನ ಸಂಗತಿ ಅಚ್ಚರಿ ಎನಿಸಿತು. ಅಲ್ಲದೆ, ಜಾಗತೀಕರಣದ ಈ ಯುಗದಲ್ಲೂ ಅಮೆರಿಕದ ಆರ್ಥಿಕ ಕ್ಷೇತ್ರದಿಂದ ಈ ಸಣ್ಣ ಉದ್ದಿಮೆಗಳು ಕಣ್ಮರೆಯಾಗಿದ್ದವೆಂದೇ ಭಾವಿಸಿದ್ದೆ. ಅಮೆರಿಕದ ಇತ್ತೀಚಿನ ವಿದ್ಯಮಾನವೆಂದರೆ ಸ್ವ ಉದ್ಯೋಗಕ್ಕೆ ಹೆಚ್ಚು ಒತ್ತು ನೀಡಿರುವುದೇ ಕಾಣಿಸುತ್ತದೆ

ಕೆಲವು ವಾರಗಳ ಹಿಂದಷ್ಟೇ ನನ್ನ ಸ್ನೇಹಿತನಿಂದ ತಿಳಿದ ಸಂಗತಿಯೆಂದರೆ, ಜಾಗತೀಕರಣದ ಕಾರಣದಿಂದಾಗಿ ಸಂಘಟಿತ ವಲಯದಲ್ಲಿ ಉದ್ಯೋಗಗಳು ಕಮ್ಮಿಯಾಗಿದ್ದಕ್ಕಿಂತಲೂ ಜಡಗೊಂಡಿದೆ. ಅಧಿಕೃತ ವರದಿಗಳನ್ನು ನಾನು ಪರಿಶೀಲಿಸಿದಾಗ ನನ್ನ ಸ್ನೇಹಿತ ಹೇಳಿದ್ದು ಸರಿ ಎನಿಸಿತು. ಆದರೆ ಅಮೆರಿಕದ ವಿದ್ಯಮಾನದ ಬಗ್ಗೆ ತಿಳಿದುಕೊಂಡ ನಾನು ಭಾರತದ ಪರಿಸ್ಥಿತಿಯನ್ನು ಅಧ್ಯಯನ ಕ್ಕೊಳಪಡಿಸಿದ್ದೆ. ಮತ್ತೊಮ್ಮೆ ನಾನು ಮುಖಾಮುಖಿಯಾದೆನೆನಿಸಿತು

ಭಾರತದಲ್ಲಿನ ಖಾಸಗಿ ವಲಯದ ಒಟ್ಟು ಉದ್ಯೋಗದಲ್ಲಿ ಶೇ.66.47 ರಷ್ಟು ಉದ್ಯೋಗಗಳು ಸಣ್ಣ ಕೈಗಾರಿಕೆಗಳಿಂದಲೇ ಬಂದಿದೆ. 1991-97ರ ನಡುವೆ, ಸಂಘಟಿತ ಖಾಸಗಿ ವಲಯದ ಉದ್ಯೋಗದ ಬೆಳವಣಿಗೆ ಕೇವಲ 0.86 ಮಾತ್ರವಾಗಿದೆ. ಆದರೆ ಅದೇ ಅವಧಿಯಲ್ಲಿ; ಸಣ್ಣ ಉದ್ಯಮಗಳಿಂದ ಉದ್ಯೋಗ ಕ್ಷೇತ್ರದ ಬೆಳವಣಿಗೆಯಲ್ಲಿ ಶೇ.03.5 ರಷ್ಟು ನನಗೆ ಗೊತ್ತಾದ ಮತ್ತೊಂದು ಸಂಗತಿ ಎಂದರೆ ತಯಾರಿಕಾ ವಲಯ/ಸೇವಾವಲಯಕ್ಕೆ ಶೇ.40 ರಷ್ಟರ ಕೊಡುಗೆಯಲ್ಲಿ ಸಣ್ಣ ಕೈಗಾರಿಕೆಯಿಂದಲೇ ಬಂದದ್ದು. ಈ ವಲಯದಿಂದ ಶೇ.45 ರಷ್ಟು ಕೊಡುಗೆಯು ರಫ್ತು ವಲಯಕ್ಕೆ ಸಂದಿದೆ. 1990 ರಿಂದೀಚೆಗೆ ಪ್ರತೀ ವರ್ಷ 100 ಸಾವಿರದಷ್ಟು ಸಣ್ಣ ಉದ್ಯಮಗಳು ತಲೆ ಎತ್ತುತ್ತಿವೆ.

ಇದು ಎಲ್ಲವೂ ಬಿಪಿಓ (ವ್ಯಾಪಾರ ಪ್ರಕ್ರಿಯೆ ಹೊರಗುತ್ತಿಗೆ) ಆಗಿದೆ. ಬಿಪಿಓವು ಅಂತಾರಾಷ್ಟ್ರೀಯ ಸಿದ್ಧಾಂತ ಮಾತ್ರವಲ್ಲ. ವಾಸ್ತವವಾಗಿ ರಾಷ್ಟ್ರಗಳೊಳಗಿನ ಸಿದ್ಧಾಂತವಾಗಿದೆ. ಸ್ಪರ್ಧಾತ್ಮಕತೆ ಹೆಚ್ಚುತ್ತಿರುವ ಈ ಯುಗದಲ್ಲಿ, ದೊಡ್ಡ ಕಂಪನಿಗಳು ಅನುಷ್ಠಾನ ವೆಚ್ಚವನ್ನು ಕಡಿಮೆ ಮಾಡಲು ಪ್ರಯತ್ನಿಸುತ್ತಿದೆ. ಮತ್ತು ಕೆಲವು ವ್ಯಾಪಾರ ಕಾರ್ಯಗಳನ್ನು ಹೊರಗುತ್ತಿಗೆ ನೀಡುತ್ತವೆ.

ಉದಾಹರಣೆಗೆ ಮೊದಲು ಒಂದು ಕಂಪನಿಯಲ್ಲಿ ತನ್ನದೆ, ಕಾರು, ಡ್ರೈವರ್, ಗ್ಯಾರೇಜುಗಳು ಮತ್ತು ನಿರ್ವಹಣಾ ಸಿಬ್ಬಂದಿಯನ್ನು ಹೊಂದಿರುತ್ತಿತ್ತು. ಈಗ, ಅವರು ಟ್ರಾವೆಲ್ ಕಂಪನಿ ಅಥವಾ ಟ್ಯಾ ಸ್ಟಾಂಡ್‌ಗಳ ಜೊತೆ ಸೇರಲು ಬಯಸುತ್ತಾರೆ. ಇದರಿಂದಾಗಿ, ಹೊ ಟ್ರಾವೆಲ್ ಕಂಪನಿಗಳು, ಟ್ಯಾಕ್ಸಿ ಸ್ಟಾಂಡ್‌ಗಳು ಅಸ್ತಿತ್ವಕ್ಕೆ ಬರುತ್ತದೆ.

ಬಹುತೇಕ ಸಣ್ಣ ಕೈಗಾರಿಕೆಗಳು ಬಿಡಿಭಾಗ ತಯಾರಿಕ ವರ್ಗದಲ್ಲೇ ಬರುತ್ತವೆ; ದೊಡ್ಡ ಕಂಪನಿಗಳು ಸಣ್ಣ ತಯಾರಕರಿ ಸಣ್ಣ ಭಾಗಗಳ ತಯಾರಿಕೆಗೆ ಹೊರಗುತ್ತಿಗೆ ನೀಡುತ್ತದೆ. ಈ ಕಾರಣ ದಿಂದಲೇ ಸಣ್ಣ ಕೈಗಾರಿಕಾ ವಲಯವು ಮುಂದೆ ಹೆಜ್ಜೆಯಿಟ್ಟು ಹೊ ಹೊಸ ಅವಕಾಶಗಳನ್ನು ಹೊಸ ಉದ್ಯಮಗಳಿಗೆ ತೆರೆಯುತ್ತಿದೆ.

ಅಮೆರಿಕದಲ್ಲಿ ಕಪ್ಪುವರ್ಣೀಯರು ಹೊಂದಿರುವ ವ್ಯಾಪಾರದಲ್ಲಿ ಏನು ನಡೆಯುತ್ತಿದೆ ಎಂದು ತಿಳಿಯಲು ನಾನು ಮತ್ತೆ ಹಿಂ ಹೋಗುತ್ತೇನೆ. ಕಪ್ಪುವರ್ಣೀಯರು ಹೊಂದಿರುವ 1.20 ಮಿಲಿಯನ್ ಕಂಪೆನಿಗಳಿವೆ. ಇದರಲ್ಲಿ 92.1 ಶೇ. ಯಾವುದೇ ಕೆಲಸಗಾರರನ್ನು ಇಟ್ಟುಕೊಳ್ಳದ ಒಬ್ಬನ ಒಡೆತನದಲ್ಲಿದೆ. ಇನ್ನೊಂದು ರೀತಿಯ ಹೇಳುವುದಾದರೆ ಬಹುತೇಕ ಕಪ್ಪು ವರ್ಣೀಯರ ಕಂಪೆನಿಗಳು ಗೃಹ ಕೃತ್ಯದ ಉದ್ಯಮಗಳಾಗಿವೆ. ಬಹುತೇಕ ಅಮೆರಿಕದ ನಿಗಮ ಹಾಗೂ ಸರ್ಕಾರವು ಸರಬರಾಜುದಾರ, ಡೀಲರ್‌ಶಿಪ್ ಮತ್ತು ಗುತ್ತಿಗೆ ವೈವಿಧ್ಯತೆಯನ್ನು ಅನುಸರಿಸುತ್ತಿರುವುದರಿಂದ, ಬಹುತೇಕ ಕಪ್ಪು ವರ್ಣೀಯರ ಕಂಪೆನಿಗಳು ಭಾರತದ ಸಣ್ಣ ಕೈಗಾರಿಕೆಗಳಂತೆ ಬಿಡಿಭಾಗ ತಯಾರಕರು ಅಥವಾ ಸೇವೆ ಒದಗಿಸುವವರ ಗುಂಪಲ್ಲೇ ಬರುತ್ತದೆ.

ಹೊಸ ಆರ್ಥಿಕ ಯುಗದಲ್ಲಿ, ಸಣ್ಣ ಕೈಗಾರಿಕೆಗಳು ದೊಡ್ಡ ಮಾರುಕಟ್ಟೆ ಪಾತ್ರಧಾರಿಗಳಾಗಿ ರೂಪುಗೊಳ್ಳುತ್ತಿದ್ದಾರೆ. ಸರಬರಾಜು ಡೀಲರ್‌ಶಿಪ್. ಮತ್ತು ಗುತ್ತಿಗೆ ಸಂಪರ್ಕಗಳಿಂದ ಹೊರಗೆಯೇ ದಲಿತರು ಉಳಿದಿರುವುದರಿಂದಾಗಿ ಈ ಹೊಸ ಆರ್ಥಿಕ ವಿದ್ಯಮಾನದಿಂದ ಅವರೇನೂ ಪ್ರಯೋಜನ ಪಡೆಯಲಾರರು. 2002ರಲ್ಲಿ ನಾನು ಅಮೆರಿಕಕ್ಕೆ ಭೇಟಿ ಕೊಟ್ಟಾಗ ಬೋಯಿಂಗ್ ಕಂಪನಿ ತಯಾರಿಸುವ ಪ್ರತಿಯೊಂದು ವಿಮಾನ, ಫೋರ್ಡ್ ಕಂಪನಿ ತಯಾರಿಸುವ ಪ್ರತಿಯೊಂದು ಕಾರಿನಲ್ಲೂ ಒಬ್ಬ ಕಪ್ಪು ವ್ಯಕ್ತಿಯ ಶ್ರಮ ಇರುತ್ತದೆ. ಇದು ಸಾಧ್ಯವಾದದ್ದು ಗುತ್ತಿಗೆಯಲ್ಲಿನ ವೈವಿಧ್ಯತೆಯಿಂದಲೇ ಸರಿ ಎನ್ನುವುದನ್ನು ಗಮನಿಸಿದೆ.

ಈ ಹೊಸ ಆರ್ಥಿಕ ಉದ್ಯಮವನ್ನು ಪರಿಚಯಿಸಿದ್ದು 199 ರಿಂದೀಚೆಗೆ ಅಷ್ಟೇ. ಅಲ್ಲಿಂದೀಚೆಗೆ ಟನ್‌ಗಟ್ಟಲೆ ಮುದ್ರಣ, ಸುದ್ದಿ ಮಾಧ್ಯಮಗಳು ಹಾಗೂ ಮಿಲಿಯನ್‌ಗಟ್ಟಲೆ ಶ್ರಮದಿನಗಳು ಆರ್ಥಿಕ ಉದಾರೀಕರಣವನ್ನು ವಿರೋಧಿಸಲು ಬಳಸಿಕೊಳ್ಳಲಾಗಿದೆ. ಹೀಗೆ ಒಂದೂವರೆ ದಶಕಗಳು ಕಳೆದುಬಿಟ್ಟಿವೆ. ಆದರೂ ಆರ್ಥಿಕ ಉದಾರೀಕರಣ ಮಾತ್ರ ಬೆಳೆಯುತ್ತಲೇ ಸಾಗಿದೆ.

ಈ ಹೊಸ ಆರ್ಥಿಕ ನೀತಿಗಳು ತೀವ್ರವಾಗಿ ಬೆಳೆಯುವುದನ್ನು ವಿರೋಧ ಮಾಡುವವರಿಂದ ತಪ್ಪಿಸಲಾಗಿದೆ. ಒಬ್ಬ ಕೆಟ್ಟ ಆದರ್ಶವಾದಿ ಮಾತ್ರ ಇದಕ್ಕೆ ಸಕಾರಾತ್ಮಕವಾಗಿ ಉತ್ತರಿಸಬಲ್ಲ. ನಮಗೆ ಇಷ್ಟವಿರಲಿ ಇಲ್ಲದಿರಲಿ ಆರ್ಥಿಕ ಉದಾರೀಕರಣವು ಜಾಗತಿಕ ಮಟ್ಟದ ವಾಸ್ತವವಾಗಿದೆ. ಈ ವಾಸ್ತವ ದಲಿತರಿಗೆ ತಮ್ಮ ಪಾಲನ್ನು ನೀಡುವುದಾದರೆ ಹೊಸ ಆರ್ಥಿಕತೆಯು ಮತ್ತಷ್ಟು ಜನಪ್ರಿಯತೆಯನ್ನು ಪಡೆಯುತ್ತದೆ.

ನನ್ನ ಅಂದಾಜಿನ ಪ್ರಕಾರ, ಸರ್ಕಾರಿ ಉದ್ಯೋಗಗಳಿಂದ 10 ದಲಿತರು ನಿವೃತ್ತರಾದರೆ ಕೇವಲ ಇಬ್ಬರು ಹೊಸಬರು ಮಾತ್ರ ಒಳಗೆ ಸೇರುತ್ತಿದ್ದಾರೆ.

ಈ ರೀತಿಯಲ್ಲೇ ಮುಂದುವರಿದರೆ, 2025 ರ ಹೊತ್ತಿಗೆ ಶೇ 85 ರಷ್ಟು ದಲಿತರು ಸರ್ಕಾರಿ ಉದ್ಯೋಗಗಳಿಂದ ಹೊರಗೆ ಎಸೆಯಲ್ಪಡುತ್ತಾರೆ ಹೀಗಿರುವಲ್ಲಿ ನಮ್ಮ ಉದಾರವಾದಿಗಳು ತಮ್ಮ ಮನಸ್ಸನ್ನೇಕೆ ಮುಕ್ತವಾಗಿಸಿಕೊಂಡು ಸಣ್ಣ ಉದ್ದಿಮೆಗಳಲ್ಲಿ ದಲಿತರು/ಆದಿವಾಸಿಗಳಿಗೆ ಉದ್ಯೋಗ ಒದಗಿಸಬಾರದು?

ಬಿಸಿಸಿಐ ಸಭೆಯಲ್ಲಿ ಉನ್ನತ ಮಟ್ಟದ ಅಧಿಕಾರದ ಆಟ ನಡೆಯುತ್ತಿರುವಾಗ, ಅದರಲ್ಲಿ ಮಾಜಿ ಮುಖ್ಯಮಂತ್ರಿಗಳು, ಉದ್ಯಮಪತಿಗಳು, ನೌಕರ ಶಾಹಿಗಳು, ಹೂಡಿಕೆದಾರರೊಡನೆ ಅನೇಕ ಪತ್ರಿಕಾ ಹೇಳಿಕೆಗಳನ್ನು ವಿನಿಮಯ ಮಾಡಿಕೊಂಡರಲ್ಲದೆ ಕೈಕೈ ಮಿಲಾಯಿಸುವುದಕ್ಕೂ ಮುಂದಾಗಿ ನೋಡುಗರಿಗೆ 'ತಮಾಷೆ'ಯಾಗಿ ಕಂಡಿತು. ಈ ಕ್ರೂರ ನಡತೆಯು ಕ್ರಿಕೆಟ್ ಪ್ರೇಮಿಗಳನ್ನು ನಾಚಿಸಿದೆ.

ನಮ್ಮ ಅಧಿಕಾರರೂಢ ಪ್ರಚಾರಕರು ಎಷ್ಟು ನಾಚಿಕೆ ಹೀನರಾಗಿದ್ದಾರೆ? ಆಟವು ಕೆಳಗೆ ಕುಸಿದಿದೆ. ಅದನ್ನು ಗಮನಿಸುವವರಾರು? ಕೋಚ್ ಮತ್ತು ಕ್ಯಾಪ್ಟನ್ ಜಗಳವಾಡುತ್ತಿದ್ದಾರೆ. ಆದರೇನು? ಈ ದೇಶದ ಶ್ರೀಮಂತ ಮಂಡಲಿ ಸದಸ್ಯರು ಸಣ್ಣ ಪುಟ್ಟ ಸಂಗತಿಗಳಲ್ಲಿ ಮುಳುಗಿ ಬಿಟ್ಟಿದ್ದಾರೆ. ಇದರ ಬಗ್ಗೆ ಗಮನ ಹರಿಸುವವರ್ಯಾರು?

ಕೋಲ್ಕತ್ತಾದಲ್ಲಿ ಈ ಅಧಿಕಾರ ದಾಹಿ ದಲ್ಲಾಳಿಗಳು ಕಚ್ಚಾಡುವುದನ್ನು ಕಂಡಾಗ ಭಾರತೀಯ ಜನ ಹೇಸಿಗೆಪಟ್ಟುಕೊಳ್ಳುವಂತಾಯಿತು. ಇಂಥದ್ದು ಹಿಂದೆಂದೂ ಆಗಿರಲಿಲ್ಲ. ಕೋಚ್ ಮತ್ತು ಕ್ಯಾಪ್ಟನ್‌ಗಳ ನಡುವೆ ನಡೆಯುತ್ತಿದ್ದ ಆಟದಲ್ಲಿ ಯಾರ್ಯಾರು ಎಷ್ಟೆಷ್ಟು ಖುಷಿ ಪಡಬಹುದೆಂಬುದೊಂದೇ ಅವರ ಕಾಳಜಿಯಾಗಿತ್ತು.

ಇತ್ತೀಚಿನ ಈ ಕ್ರಿಕೆಟ್ ತಂಡದ ತೊಂದರೆಗೆ ಒಂದು ರಾಜಕೀಯ ಪರಿಹಾರವೆಂಬಂತೆ ಮಾಧ್ಯಮಗಳಲ್ಲಿ ರಚಲಾಯಿತು. ಹೀಗೆ ದೊಡ್ಡ ಮಟ್ಟದಲ್ಲಿ ಗ್ರೇಗ್ ಮತ್ತು ಸೌರವ್ ಮಾಧ್ಯಮಗಳಲ್ಲಿ ಉಗಿಯುತ್ತಿದ್ದಾಗ BCCI ಪರಿಶೀಲನಾ ಸಮಿತಿ ಬೇಗನೆ ಎಲ್ಲವನ್ನು ಮುಚ್ಚಿ ಹಾಕುವ ನಾಟಕವಾಡಿತು.

ವಿಚಿತ್ರ ರೀತಿಯೆಂಬಂತೆ ಆಯ್ಕೆ ತಂಡದಲ್ಲಿ ಎಲ್ಲಾ ಆಸಕ್ತರಿಗೂ ಖುಷಿಯಾಗುವಂತೆ ಮಾಡಿ, ಅಂತಿಮವಾಗಿ 2007ರ ವರ್ಲ್ಡ್‌ಕಪ್‌ಗೆ ತಂಡ ಆಯ್ಕೆ ಮಾಡುವುದನ್ನು ದೂರವಿಟ್ಟು ಬಿಟ್ಟರು. ಸೌರವ್ ಒಳಗೆ ಬರುವುದು ಖಚಿತವೆನಿಸಿದಾಗ ದಾಲ್ಮಿಯಾ ಖುಷಿಯಾಗಿ ಸುಮ್ಮನಾದ. ಹಾಗೆಯೇ ಕೋಚ್ ಉಳಿದುಕೊಂಡದ್ದು ಖಚಿತವಾದಾಗ ಪವಾರ್ ಸಂತೋಷಗೊಂಡ.

ದುರಂತವೆಂಬಂತೆ ಭಾರತೀಯ ಕ್ರಿಕೆಟ್‌ಗೆ BCCI ಮತ್ತೊಮ್ಮೆ ಮರೆಯಲಾಗದ ಪೆಟ್ಟು ನೀಡಿದೆ. ವರ್ಲ್ಡ್‌ಕಪ್ ಯುಸುವ ತಂಡವನ್ನು ತಯಾರಿಸುವ ಸಲುವಾಗಿ ದೊಡ್ಡ ಬೆಲೆತೆತ್ತು ಕೋಚ್‌ನನ್ನು ಬಾಡಿಗೆಗೆ ತಂದದ್ದು ಇತ್ತೀಚಿಗಷ್ಟೆ. ಹೀಗೆ ಮಾಡುವಾಗ ಬಲಿಷ್ಟನಾದ ಮಹೀಂದರ್ ಅಮರ್‌ನಾಥನನ್ನು ಬದಿಗೆ ಸರಿಸಲಾಯಿತು.

ಅಂದರೆ ಈ ದೇಶದ ಘನತೆ ಹೆಚ್ಚಿ, ಕ್ರಿಕೆಟ್ ಆಟಕ್ಕೆ ಒಳಿತಾಗಲು ಕೋಚ್‌ಗೆ ಆಯ್ಕೆ ಮತ್ತು ಸಲಹೆ ನೀಡುವ ಸ್ವತಂತ್ರ್ಯವನ್ನು ನೀಡಲಾಗಿತ್ತು. ಈ ಆಟದಲ್ಲಿ ಮುಖ್ಯವಾದ ಸಂಗತಿಯೆಂದರೆ ಕ್ಯಾಪ್ಟನ್‌ನ ಆಯ್ಕೆ. ಅದು ಮುಕ್ತ ಮನಸ್ಸಿನಿಂದ ಕೋಚ್ ಆದವನ್ನು ವರ್ತಿಸಬೇಕಾದುದು ಯಷ್ಟೆ. ಇದು ಆಯ್ಕೆಗಾರರ ವಿಷಯವೇನೂ ಅಲ್ಲ.

ಕ್ರಿಕೆಟ್ ಆಟವನ್ನು ಆಕಾಶ ಮಾಡುವುದು ಹೇಗೆ?

ಸೌರವ್ ಹೋಗಬೇಕೆಂಬುದೇ ಗ್ರೇಗ್‌ನ ಆಸೆ. ಅದೇ ಸೌರವ್‌ನ ಅಭಿಮಾನಿಗಳೂ ಸಹ ಬಯಸಿದ್ದರು. ಕಳೆದ 5 ವರ್ಷಗಳಲ್ಲಿ ಸೌರವ್ ಕ್ಯಾಪ್ಟನ್ ಆಗಿ ಅತ್ಯುತ್ತಮವಾದ ಕೊಡುಗೆ ನೀಡಿದ್ದ. ಆದರೂ ತಂಡ ಮಾತ್ರ ಉನ್ನತಿಗೇರಿರಲಿಲ್ಲ. ಈಗ ಅದು ನೆಲಕಚ್ಚಿದೆ. ಆಸ್ಟ್ರೇಲಿಯಾದಲ್ಲಿರುವ ವ್ಯವಸ್ಥೆಯೆಂದರೆ ಎಂಥ ದೊಡ್ಡ ಬಾರ್ಡರ್, ಟೈಲರ್ ಮತ್ತು ಸ್ಟೀವ್‌ವಾಗಳೂ ಸಹ ಬಿಟ್ಟು ಕೊಡಲೇಬೇಕಾಗಿದೆ. ಆಗ ಯುವ ಬಳಗ ಒಳಗೆ ಬರುತ್ತದೆ ಮತ್ತು ಸ್ಥಿರತೆ ತಂಡಕ್ಕೆ ಬರುತ್ತದೆ. ಇದು ಗ್ರೇಗ್‌ಗೆ ಚೆನ್ನಾಗಿ ತಿಳಿದಿದೆ.

ಆದರೆ ಭಾರತೀಯ ಪರಂಪರೆ ಭಿನ್ನವಾದುದು. ಒಬ್ಬ ಆಟಗಾರ ಒಮ್ಮೆ ಚೆನ್ನಾಗಿ ಆಡಿದಲ್ಲಿ ತಂಡದಲ್ಲೇ ಉಳಿಯುತ್ತಾನೆ. ಮ್ಯಾಚ್ ಒಂದರಲ್ಲಿ ಸರಿಯಾಗಿ ಆಡದಿದ್ದರೂ ಸಹ ಆತನನ್ನು ಉಳಿಸಿಕೊಳ್ಳಲಾಗುತ್ತದೆ. ಗ್ರೇಗ್ ಇದನ್ನು ಅರ್ಥೈಸಿ, ಆಗೊಮ್ಮೆ ಈಗೊಮ್ಮ ತಂಡ ಒಳ್ಳೆ ಪ್ರದರ್ಶನ ನೀಡುವಂತೆ ಮಾಡಿದರೆ ಸಾಕು. ಇದು ದೇಶಕ್ಕೆ ದುರಂತವೇ ಸರಿ. ಇದೇ ಅಂಶ ಕ್ರಿಕೆಟ್ ಪ್ರೇಮಿಗಳಿಗೂ ಅನ್ವಯಿಸುತ್ತದೆ. ಅವರಿಗೆ ಸ್ಟಾರ್‌ಗಳು ದೊರೆತರೆ ಸಾಕು! ಕ್ರೀಡೆಗಳಿಂದ ರಾಜಕಾರಣಿಗಳನ್ನು ಮತ್ತು ಉದ್ಯಮಿಗಳನ್ನು ನಿಷೇಧಿಸಬೇಕು. ಹಾಗೆಯೇ ಉನ್ನತ ಅಧಿಕಾರಿಗಳೂ ಸಹ ಏನಾದರು ಕೆಲಸ ಮಾಡುವುದನ್ನು ಬಿಟ್ಟು ಹೊಲಸು ಸಂಗತಿಗಳಲ್ಲಿ ತೊಡಗುವುದು ನಾಚಿಕೆಗೇಡು.

ಇದರಿಂದಲೇ ಇರಬೇಕು ದೇಶ ಅಭಿವೃದ್ಧಿ ಹೊಂದುತ್ತಲೇ ಇರುವುದು. ದುರಂತವೇ ಸರಿ! ಟಿ.ವಿಯಲ್ಲಿ ಒಬ್ಬ ವ್ಯಕ್ತಿ ಹೇಳಿದಂತೆ, "ಕ್ರಿಕೆಟ್ ಆಟವು ನಾಯಿಗಿಂತ ಕಡೆಯಾಗಿದೆ" ಹಾಗದರೆ ಸಾರ್ವಜನಿಕರು ರಕ್ತ ಪೀಪಾಸುಗಳೇ ಸರಿ!

ಚರಿತ್ರೆ ಒದೆಯಿತ್ತೆಂದರೆ ಅದು ತನ್ನೆಲ್ಲಾ ಹಿಂಸೆಯಿಂದಾಗಿ ಅಟ್ಟಹಾಸದಿಂದ ಕೇಕೆ ಹಾಕುತ್ತಿರುತ್ತದೆ. ಆಗ ಅದು ಭವಿಷ್ಯವನ್ನು ಭೂತದ ತಕ್ಕೆಗೆ ಕೊಂಡೊಯ್ಯುತ್ತದೆ. ಈ ಪ್ರಕ್ರಿಯೆಯಲ್ಲಿ ಭೂತವು ವರ್ತಮಾನದಲ್ಲಿ ಅವಿತುಕೊಳ್ಳುತ್ತದೆ. ಹೀಗೆ ಭವಿಷ್ಯವನ್ನು ಅದು ನಿಯಂತ್ರಿಸುತ್ತದೆ. ಈ ಹೊಸ ಸನ್ನಿವೇಶದಲ್ಲಿ ಭೂತ ಮತ್ತು ಭವಿಷ್ಯದ ನಡುವಿನ ದ್ವಂದ್ವಗಳು ಸಂಘರ್ಷಗಳಾಗಿ ಪಲ್ಲಟಗೊಳ್ಳುತ್ತವೆ. ದ್ವಂದ್ವಗಳು ಬದಲಾವಣೆಯನ್ನು ಪ್ರೇರೆಪಿಸಿದರೆ, ಸಂಘರ್ಷಗಳು ಆ ಬದಲಾವಣೆಯ ಸಾಧ್ಯತೆಗಳನ್ನು ಹೊಸಕಿಹಾಕುತ್ತವೆ.

ನಮ್ಮ ಅಧಿಕಾರರೂಢ ಪ್ರಚಾರಕರು ಎಷ್ಟು ನಾಚಿಕೆ ಹೀನರಾಗಿದ್ದಾರೆ? ಆಟವು ಕೆಳಗೆ ಕುಸಿದಿದೆ. ಅದನ್ನು ಗಮನಿಸುವವರಾರು? ಕೋಚ್ ಮತ್ತು ಕ್ಯಾಪ್ಟನ್ ಜಗಳವಾಡುತ್ತಿದ್ದಾರೆ. ಆದರೇನು? ಈ ದೇಶದ ಶ್ರೀಮಂತ ಮಂಡಲಿ ಸದಸ್ಯರು ಸಣ್ಣ ಪುಟ್ಟ ಸಂಗತಿಗಳಲ್ಲಿ ಮುಳುಗಿ ಬಿಟ್ಟಿದ್ದಾರೆ. ಇದರ ಬಗ್ಗೆ ಗಮನ ಹರಿಸುವವರ್ಯಾರು?

ಪ್ರಸ್ತುತ ಭಾರತದ ಮೇಲೆ ಭೂತವು ಸವಾರಿ ಮಾಡಿದಂತೆ ಕಾಣುತ್ತಿದೆ. ಅಂದರೆ ಭೂತ ಮತ್ತು ಭವಿಷ್ಯದ ನಡುವಿನ ದ್ವಂದ್ವಗಳು ಪಲಾಯನ ಮಾಡಿದಂತೆ ತೋರುತ್ತಿದೆ. ಆದ್ದರಿಂದ, ಮುಂದಿನ ದಶಕಗಳಲ್ಲಿ ದಲಿತರು ಅಥವಾ ಸಾಮಾಜಿಕವಾಗಿ ಪ್ರತ್ಯೇಕಗೊಂಡವರು ಮತ್ತು ಭಾರತದ ಮುಖ್ಯವಾಹಿನಿಯಲ್ಲಿರುವವರ ನಡುವೆ ಸಂಘರ್ಷಗಳು ಪದೇ ಪದೇ ಮರುಕಳಿಸುತ್ತಿರುತ್ತವೆ.

1950 ರಿಂದೀಚೆಗೆ ಭಾರತದ ಗಣರಾಜ್ಯ ತನ್ನ ದ್ವಂದ್ವಗಳನ್ನು ನೀಗಿಕೊಳ್ಳುವ ಅನಿವಾರ್ಯತೆ ಉಂಟಾಗಿದ್ದು ಹಿಂದಿನ ಬ್ರಿಟಿಷ್ ಸಾಮ್ರಾಜ್ಯದ ನೀತಿಯಿಂದಾಗಿಯಷ್ಟೆ. ಸಾಮಾಜಿಕವಾಗಿ ಪ್ರತ್ಯೇಕಿತರಾದವರನ್ನು ಭವಿಷ್ಯದ ಗರ್ಭದಲ್ಲಿ ಮೌನವಾಗಿ ಕೂರಿಸಲಾಯಿತು. ಹೀಗೆ ಒಬ್ಬ ದಲಿತ ಭಾರತದ ರಾಷ್ಟ್ರಪತಿಯಾಗುವಂತಾಯಿತು. ನೂರಾರು ಮಂದಿ ಎಂ.ಪಿ.ಗಳು, ಎಂ.ಎಲ್.ಎ ಗಳು, ನಾಗರೀಕ ಸೇವಾ ವ್ಯಕ್ತಿಗಳು ಸಾರ್ವಜನಿಕವಾಗಿ ಕಾಣಿಸಿಕೊಂಡರು ಸಾವಿರಾರು ಮಂದಿ ವೈದ್ಯವೃತ್ತಿಗಿಳಿದರು. ಹಾಗೆಯೇ ಇಂಜಿನಿಯರ್‌ಗಳು, ನಿರ್ಮಾಪಕರು, ಬ್ಯಾಂಕ್ ಅಧಿಕಾರಿಗಳು, ಪ್ರೊಫೆಸರ್‌ಗಳು ತಮ್ಮ ಸ್ಥಾನಗಳನ್ನು ಅಲಂಕರಿಸಿದರು. ಸುಮಾರು 4 ಮಿಲಿಯನ್ ಜನ ಇನ್ಸ್‌ಪೆಕ್ಟರ್ಸ್, ಗುಮಾಸ್ತರು ಮತ್ತು ಶಾಲಾ ಟೀಚರ್‌ಗಳಾದರು. ಈ ಬದಲಾವಣೆ ನಿಧಾನವಾದರೂ ಆಗಿದೆ.

ಹೀಗೆ ಈ ಸಾಮಾಜಿಕ ಬಹಿಷ್ಕೃತರು ಸಾರ್ವಜನಿಕ ಆಗಮನ ಆಘಾತಗೊಂಡ 'ಭೂತ'ವನ್ನು ಸಿಟ್ಟಿಗೆಬ್ಬಿಸಿದೆ. ಇದು ಗ್ರಾಹ್ಯವೇ ಸರಿ ಈ ರೀತಿಯ ರೌಡಿ ಭೂತ ಕಾಲವನ್ನು ಉಸಿರುಗಟ್ಟುವಂತೆ ಮಾಡುವಲ್ಲಿ ಗಣರಾಜ್ಯದ "ಒಳಗೊಳ್ಳುವ ಕ್ರಿಯೆ" ಮತ್ತಷ್ಟು ತೀವ್ರವಾಗುವುದು ಅನಿವಾರ್ಯವಾಗಿತ್ತು. ದುರಂತವೆಂಬಂತೆ ಮೇಲಿನ ಪ್ರಕ್ರಿಯೆಗೆ ತದ್ವಿರುದ್ಧವಾಗಿ 1991 ರ ನಂತರದ ಸುಧಾರಣೆಯು ಚರಿತ್ರೆಯನ್ನು ಪುನಃ ಭೂತಕಾಲಕ್ಕೆ ಸಿಲುಕಿಸಿತು.'

ಈ 'ಹೊಸ', 'ಸುಧಾರಣೆ'ಗೊಂಡ ಸ್ಪರ್ಧಾತ್ಮಕ ಭಾರತವಾಗ ಈ ಉದಯೀಮಾನ ಸಾಮಾಜಿಕ ಬಹಿಷ್ಕೃತರನ್ನು ತಿರಸ್ಕರಿಸಲೇಬೇಕಿದೆ. ಭಾರತವೆನ್ನುವ ಈ ಸಾಮಾಜಿಕ ಜಗತ್ತು ಒಂದು 'ಸುಧಾರಣವಾದಿ'ಯೇ ಆಗಿದ್ದು, ಅದು ಇಸ್ಲಾಂನ್ನು ಹಾಗೂ ಕ್ರಿಶ್ಚಿಯನ್ ಧರ್ಮವನ್ನೂ ಸಹ ತನ್ನ ಕಪಿಮುಷ್ಟಿಯಲ್ಲಿ ಹಿಡಿದಿದೆ.

ಈ ಆರ್ಥಿಕ ಸುಧಾರಣೆ ಹೀಗೆ ಭಾರತದ ಸುಧಾರಣಾ ನೀತಿಗೆ ಒಳಗಾಗಲೇ ಬೇಕಾಗಿದೆ. ಈ ಹೊಸ ಹೊಂದಾಣಿಕೆ ಭಾರತವನ್ನು 1950 ರ ಗಣರಾಜ್ಯ ಪೂರ್ವಕ್ಕೆ ಹೊಯ್ದು ಸಾಮಾಜಿಕ ಬಹಿಷ್ಕೃತರು ಎಲ್ಲಿ

ವರ್ತಮಾನವನ್ನು ಕಾಡುತ್ತಿರುವ ಭೂತ

ದ್ದರೋ ಅಲ್ಲಿಗೆ ಅವರನ್ನು ಹೊಗೆಯಬೇಕೆಂದು ನಿರ್ಧರಿಸಿದಂತಿದೆ.

'ಭಾರತದಲ್ಲಿ ಬ್ರಿಟಿಷರ ಆಳ್ವಿಕೆ'ಯಲ್ಲಿ ಕಾರ್ಲ್‌ಮಾರ್ಕ್ಸ್ ಪ್ರತಿಪಾದಿಸಿದ 'ಬದಲಾಗದ ಭಾರತ'ವು "ಯಾವುದೇ ಅರಿವಿನ ಚರಿತ್ರೆ" ಇಲ್ಲದ್ದು. (ನ್ಯೂಯಾರ್ಕ್ ಡೈಲಿ ಟ್ರಿಬ್ಯೂನ್, ಆಗಸ್ಟ್ 8, 1853).

'ಬದಲಾವಣೆ'ಯ ಗೈರುಹಾಜರಿಯಲ್ಲಿ ಯಾವುದೇ ಚರಿತ್ರೆ ಅಸ್ತಿತ್ವಕ್ಕೆ ಬರಲು ಸಾಧ್ಯವಿಲ್ಲ. ಆದರೂ ಭಾರತವು 'ಬದಲಾವಣೆ' ಮತ್ತು 'ಅಚಾರಿತ್ರಿಕತೆ'ಗಳೆರಡನ್ನು ಹೊಂದಿದೆ. ಗಣರಾಜ್ಯ ಒಂದೆಡೆ ಬದಲಾವಣೆಗಳನ್ನು ತರುವ ಪ್ರಯತ್ನ ನಡೆಸಿದರೆ 'ಸಮಾಜ'ವು ಅದನ್ನು ಧಿಕ್ಕರಿಸುತ್ತಿದೆ. ಇದಕ್ಕೆ ತಕ್ಕ ಅವಕಾಶ ಒದಗಿಬಂದದ್ದು ಜಾಗತೀಕರಣದಿಂದ. ಆದ್ದರಿಂದ ಇಡೀ ಭಾರತ ಈ ಕೆಳಗಿನ ಕ್ರಮದಲ್ಲೇ ನಡೆಯಬೇಕಿದೆ:

1. ಬಿ.ಎಸ್.ಇ (ಮುಂಬಾಯಿ ಸ್ಟಾಕ್ ಎಕ್ಸ್‌ಚೇಜ್) 1875 ರಲ್ಲಿ ಸ್ಥಾಪನೆಗೊಂಡಿತ್ತು. 3500 ಕಂಪನಿಗಳು ಅಲ್ಲಿ ಪ್ರತಿನಿತ್ಯ ವಹಿವಾಟು ನಡೆಸುತ್ತಿವೆ. 1875 ರಿಂದ 2005 ರವರೆಗೂ ಒಬ್ಬ ದಲಿತನೂ ಸಹ ಒಂದು ಕಂಪನಿಯ ಒಡೆತನವನ್ನು ಹೊಂದಿಲ್ಲ.

2. ಸಿ.ಐ.ಐ (ಭಾರತ ಉದ್ಯಮ ಮಂಡಲಿ)ಯು 1895 ರಲ್ಲಿ ಅಸ್ತಿತ್ವಕ್ಕೆ ಬಂತು. ಅದರಲ್ಲಿ 57,00 ಸದಸ್ಯ ಸಂಸ್ಥೆಗಳು ಮತ್ತು 80,000 ಸದಸ್ಯ ವ್ಯಕ್ತಿಗಳು ಇದ್ದಾರೆ. ಇವತ್ತಿನವರೆಗೂ ಅವರಲ್ಲಿ ಒಬ್ಬ ದಲಿತನೂ ಇಲ್ಲ.

'ASSOCHAM (ಭಾರತೀಯ ವಾಣಿಜ್ಯ ಮತ್ತು ಉದ್ಯಮ ಚೇಂಬರ್ಸ್) 1920 ರಲ್ಲಿ ಆರಂಭವಾಯಿತು. ಅದರಲ್ಲಿ ಒಂದು ಲಕ್ಷ ಸದಸ್ಯ ಕಂಪನಿಗಳಿದ್ದರೂ ಒಂದೇ ಒಂದು ದಲಿತ ಕಂಪನಿ ಸದಸ್ಯತ್ವ ಪಡೆದಿಲ್ಲ.

4. FICCI (ಫೆಡರೇಷನ್ ಆಫ್ ಇಂಡಿಯನ್ ಚೇಂಬರ್ಸ್ ಆಫ್ ಕಾಮರ್ಸ್ ಮತ್ತು ಇಂಡಸ್ಟ್ರಿ) 1927 ರಲ್ಲಿ ಸ್ಥಾಪನೆಗೊಂಡಿತು. ಇದರಲ್ಲಿ 1,500 ಕಾರ್ಪೊರೇಟ್ ವ್ಯಕ್ತಿಗಳು, ಮತ್ತು 500 ಕ್ಕಿಂತಲೂ ಹೆಚ್ಚು ವಾಣಿಜ್ಯ ಚೇಂಬರ್ಸ್ ಇದ್ದಾಗ್ಯೂ ಇಂದಿಗೂ ಒಬ್ಬ ದಲಿತ ಅಲ್ಲಿ ಇಲ್ಲ.

5.IIC (ಇಂಡಿಯ ಇಂಟರ್‌ನ್ಯಾಷನಲ್ ಸೆಂಟರ್) ಅಸ್ತಿತ್ವಕ್ಕೆ ಬಂದದ್ದು 1962. ಅದರಲ್ಲಿ 4828 ವ್ಯಕ್ತಿಗಳು ಮತ್ತು 296 ಕಾರ್ಪೊರೇಟ್ ಸದಸ್ಯತ್ವ ಹೊಂದಿದ್ದರೂ ಇವತ್ತಿನವರೆಗೂ ಒಬ್ಬ ದಲಿತನಿಗೂ ಅಲ್ಲಿ ಅವಕಾಶವಿಲ್ಲ.

ಭಾರತ ಎಂದೂ ತನ್ನ 'ಭೂತ'ದಿಂದ ಮುಕ್ತವಾಗಿಲ್ಲ. 'ಆಧುನಿಕತೆ'ಯ ಮೂಗಿನ ಕೆಳಗೆ 'ಸಮಾಜ ಒಳಗೊಳ್ಳದೇ' ಸಾಗಿದೆ. ಆಗೊಮ್ಮೆ ಈಗೊಮ್ಮೆ ಭೇಟಿ ನೀಡುವ ತೆರಿಗೆ ಅಧಿಕಾರಿಗಳು ಸ್ವಲ್ಪ ಮಟ್ಟಿಗೆ ಕೈಗಾರಿಕೆ ಮತ್ತು ಮಾಲೀಕರನ್ನು ಬೆಚ್ಚಿಬೀಳಿಸಿದೆಯಷ್ಟೆ.

1991 ರಲ್ಲಿ ಆರಂಭವಾದ ಸುಧಾರಣೆಗಳು ಕೇವಲ 'ಇನ್ಸ್‌ಪೆಕ್ಟರ್ ರಾಜ್'ನನ್ನು ಮಾತ್ರ ಗುರಿಯಾಗಿಸಿ ಕೊಂಡಿವೆ. ಏಕೆಂದರೆ ಈ ಸಾಮಾಜಿಕ ಬಹಿಷ್ಕೃತರು ಗದ್ದಲವೆಬ್ಬಿಸಿ ಅವರ ತಳಪಾಯಕ್ಕೆ ಅಡ್ಡಿಯಾದರೆಂಬ ಹೆದರಿಕೆ ಇದೆ. ಖಾಸಗೀಕರಣವೆಂಬ ಆಕ್ರಮಣಕಾರಿ ನೀತಿಯು ಸಮರೋಪಾದಿಯಲ್ಲಿ ಕ್ರಿಯಾಶೀಲಗೊಂಡು ಅದು ಬಂಡವಾಳ ಹೂಡಿಕೆ ಹಿಂತೆಗೆತವೆಂಬ ವಿಷ ವರ್ತುಲವನ್ನು ಆಚರಣೆಗೆ ತಂದಿದೆ.

ಆದ್ದರಿಂದ BSE, CII, ASSOCHAM, FICC ಹಾಗೂ IICಗಳ ಪರಿಶುದ್ಧ, ಮೈಲಿಗೆಯಿಲ್ಲದ, ಸಾಮಾಜಿಕ ಬಹಿಷ್ಕೃತರನ್ನು ಹೊರತು ಪಡಿಸಿದ ಜಗತ್ತನ್ನು ಸುಧಾರಣೆಗೊಂಡ ಭಾರತ ಜೀರ್ಣಿಸಿಕೊಳ್ಳುತ್ತಿದೆ. ಈ ನವಭಾರತ, ಉದಾರೀಕರಣಗೊಂಡ ಭಾರತ ಹೀಗೆ ಚಾರಿತ್ರಿಕ ಪುಟಗಳಲ್ಲಿ ಸೇರಿಕೊಳ್ಳಲು ದಾಪುಗಾಲ ಇಡುತ್ತಿದೆ. ಪಾಪಿಗಳೂ ಸಹ ಭೋದಕರಾಗಬಹುದು ಆದರೆ ಪಾಪ ಮತ್ತು ಭೋದನೆ ಒಟ್ಟೊಟ್ಟಿ ಸಾಗಲಾರವು.

ಒಂದು ಲಿಬರಲ ಸಾಮಾಜಿಕ ವ್ಯವಸ್ಥೆಗೆ ಲಿಬ ಲ್ಲಾದ ಆರ್ಥಿಕತೆ ಇರಲೇ ಬೇಕು. ಸುಧಾರಣೆಗೊಂಡವರು ಆರ್ಥಿಕ ಸುಧಾರಣೆಯನು ಕೈಗೆತ್ತಿಕ್ಕೊಳ್ಳಬೇಕು. ಇದಕ್ಕೆ ತದ್ವಿರುದ್ಧ ಆಗುತ್ತಿದೆ ದಲಿತರನ್ನು ಬಿಡಿ. ಈ ಹೊಸ ಆರ್ಥಿಕತೆ ನಿಜವಾ ಗಿಯೂ ಬೆಳೆಯುತ್ತಿದೆಯೇ? ಸತ್ಯ ದಂದ್ವಾತ್ಮಕ ಮತ್ತು ಸಂಘರ್ಷಮಯ ಸಮಾಜಗಳಲ್ಲಿ ಅಡಗಿ ಕೂತಿದೆ. ಹೀಗ 'ಭೂತ'ವು ತಲೆಯೊಳಗೆ ತೂರಿಕೊಂಡು ಸಮಾಜವನು ಮತ್ತಷ್ಟು ಅಧೋಗತಿಗೆ ದೂಡುತ್ತದೆ.

ಆಧುನಿಕ ಭಾರತದ ಪಿತಾಮಹನಾದ ಥಾಮಸ ಬಾಬಿಂಗ್‌ಟನ್ ಮೆಕಾಲೆಯ ಜನ್ಮದಿನಾಚರಣೆ ಕಳೆದ ಅಕ್ಟೋಬರ್ 25 ರಂದು ನಡೆಯಿತು. ಮೆಕಾಲೆಯ ನಂತ ರದ ವಾಸ್ತವಗಳನ್ನು ಬ್ರಾಹ್ಮಣ-ಭಾರತ ಮಾತನಾಡುತ್ತಿದೆ ಈ ಲಾರ್ಡ್ ಮೆಕಾಲೆ ಬ್ರಾಹ್ಮಣ್ಯದ ಮೇಲೆ ಮ್ಯಾನ್‌ಹಟ್ಟನ್ ಯೋಜನೆಯನ್ನು ತನ್ನ ಶೈಕ್ಷಣಿಕ ನೀತಿಯಲ್ಲಿ ಹೂಡುತ್ತಿ ದ್ದಾನೆಂದು ತಿಳಿದುಕೊಂಡ ಪ್ರಥಮ ಭಾರತೀಯರೆಂದರ ಈ ಬ್ರಾಹ್ಮಣರೇ ಇರಬೇಕು.

ಮೆಕಾಲೆಯಿಂದಾಗಿ ಇಂಗ್ಲಿಷ್ ಮತ್ತು ವರ್ನಾಕ್ಯುಲರ್ ಶಿಕ್ಷಣ ಮಾಧ್ಯಮ ನಮಗೆ ದೊರೆಯಿತು ಆದರೂ ಆತನೆಂದು ಈ ಎರಡು ಮಾಧ್ಯಮಗಳಿಗಾಗಿ ವಾದಿಸಿರಲಿಲ್ಲ. ಆತ ಇಂಗ್ಲಿಷ್, ವಿಜ್ಞಾನ ಮತ್ತು ಪಾಶ್ಚಿಮಾತ್ಯ ತತ್ವಶಾಸ್ತ್ರಗಳನ್ನು ಇಲ್ಲಿ ಪರಿಚಯಿಸಿ

> **ಲಾರ್ಡ್ ಮೆಕಾಲೆ, ತನ್ನ 'ಶಿಕ್ಷಣದ ಮೇಲಿನ ಟಿಪ್ಪಣಿ'ಗಳಲ್ಲಿ "ಎಲ್ಲಾ ಮದ್ರಸಗಳನ್ನು ಮತ್ತು ಸಂಸ್ಕೃತ ಶಾಲೆಗಳನ್ನು ಮುಚ್ಚಿಬಿಡುತ್ತೇನೆ" ಎಂದು ಬೆದರಿಕೆ ಒಡ್ಡಿದ್ದ. ಆತ ಬನರಾಸಿನ ಸಂಸ್ಕೃತ ಪಠ್ಯ ಕ್ರಮವನ್ನು ಹೀಗೆಂದು ಪ್ರಶ್ನಿಸಿದ್ದ; "ಒಂದು ಕತ್ತೆಯನ್ನು ಮುಟ್ಟಿದಾಗ, ಅದರಿಂದ ಶುದ್ಧರಾಗುವುದು ಹೇಗೆ ಎಂಬುದನ್ನು ಕಲಿಯಲು ಅವರ ಯೌವ್ವನವನ್ನು ಕಳೆಯುವುದು ಅಥವಾ ಒಂದು ಮೇಕೆಯನ್ನು ಕೊಂದ ಅಪರಾಧವನ್ನು ಹೇಗೆ ಪರಿಹರಿಸಿ ಕೊಳ್ಳುವುದೆಂಬ ವೇದಗಳ ಶ್ಲೋಕವನ್ನು ಪದೇ ಪದೇ ಪಠಣಮಾಡುವುದು ನಿಷ್ಪ್ರಯೋಜಕವಾದುದು."**

ಅವುಗಳನ್ನು ರೂಢಿಸಿಕೊಂಡ ಶಿಕ್ಷಿತ ಭಾರತೀಯರು ಅವನ್ನು ಜನ ಪ್ರಿಯಗೊಳಿಸುತ್ತಾರೆಂಡು ಭಾವಿಸಿದ್ದ.

ಇಂಗ್ಲಿಷ್-ವರ್ನಾಕ್ಯುಲರ್ ವೈರುಧ್ಯಗಳು ಸ್ಪಷ್ಟವಾಗಿವೆ. ಇದಕ್ಕೆ ಯೂರೋಪಿನಲ್ಲಿ ಗುಲಾಮ ವ್ಯಾಪಾರವನ್ನು ವಿರೋಧಿಸಿದ ಮೆಕಾಲೆ ಕಾರಣನೇನು ಅಲ್ಲ. ಈ ಮೆಕಾಲೆ ಇರದಿದ್ದಲ್ಲಿ ಅಥವಾ ಭಾರತದಲ್ಲಿ ಮೆಕಾಲೆ ಆಧುನಿಕ ಶಿಕ್ಷಣವನ್ನು ಜಾರಿಯಾಗಿಸದೇ ಇದ್ದಲ್ಲಿ ಏನಾಗುತ್ತಿತ್ತು?

ಭಾರತೀಯ ಚರಿತ್ರೆಯನ್ನು ಮೆಕಾಲೆ ಇಲ್ಲದೆ ಓದುವುದೆಂದರೆ ವಿಜ್ಞಾನವನ್ನು ಆಲ್ಬರ್ಟ್ ಐನ್‌ಸ್ಟೀನ್ ಇಲ್ಲದೆ ಓದಿದಂತಾಗುತ್ತದೆ. ಹೀಗಿರುವಲ್ಲಿ ಮೆಕಾಲೆಯೊಡನೆ ಚರಿತ್ರೆ ಓದುವುದು ನೋವಿನ ಸಂಗತಿ. ಏಕೆಂದರೆ ಅದು ಭೂತಕಾಲದ ಬ್ರಾಹ್ಮಣ ಜಗತ್ತಿನ ಕತ್ತಲ ನೆಲೆಗಳನ್ನು ಅನಾವರಣ ಮಾಡುತ್ತದೆ.

ಲಾರ್ಡ್ ಮೆಕಾಲೆ, ತನ್ನ 'ಶಿಕ್ಷಣದ ಮೇಲಿನ ಟಿಪ್ಪಣಿ'ಗಳಲ್ಲಿ "ಎಲ್ಲಾ ಮದ್ರಸಗಳನ್ನು ಮತ್ತು ಸಂಸ್ಕೃತ ಶಾಲೆಗಳನ್ನು ಮುಚ್ಚಿಬಿಡುತ್ತೇನೆ" ಎಂದು ಬೆದರಿಕೆ ಒಡ್ಡಿದ್ದ. ಆತ ಬನರಾಸಿನ ಸಂಸ್ಕೃತ ಪಠ್ಯ ಕ್ರಮವನ್ನು ಹೀಗೆಂದು ಪ್ರಶ್ನಿಸಿದ್ದ; "ಒಂದು ಕತ್ತೆಯನ್ನು ಮುಟ್ಟಿದಾಗ, ಅದರಿಂದ ಶುದ್ಧರಾಗುವುದು ಹೇಗೆ ಎಂಬುದನ್ನು ಕಲಿಯಲು ಅವರ ಯೌವ್ವನವನ್ನು ಕಳೆಯುವುದು ಅಥವಾ ಒಂದು ಮೇಕೆಯನ್ನು ಕೊಂದ ಅಪರಾಧವನ್ನು ಹೇಗೆ ಪರಿಹರಿಸಿಕೊಳ್ಳುವುದೆಂಬ ವೇದಗಳ ಶ್ಲೋಕವನ್ನು ಪದೇ ಪದೇ ಪಠಣಮಾಡುವುದು ನಿಷ್ಪ್ರಯೋಜಕವಾದುದು."

ಏಪ್ರಿಲ್ 17, 1781ರಲ್ಲಿ ಜೋನಾಥಾನ್ ಡೆಕ್ಕನ್ ಬನರಾಸಿನ ಸಂಸ್ಕೃತ ಕಾಲೇಜನ್ನು ಸ್ಥಾಪಿಸುತ್ತಾನೆ. ಬ್ರಿಟಿಷ್ ಕಂಪನಿಯು ಈತನನ್ನು ಬನರಾಸಿನ ರೆಸಿಡೆಂಟನನ್ನಾಗಿ ನೇಮಿಸಿತ್ತು. ಏಕೆಂದರೆ ಅಂದಿನ ಕಾಲಕ್ಕೆ ಆತ ಜಾತ್ಯತೀತ ಆಧುನಿಕತೆಯ ವಕ್ತಾರನಾಗಿದ್ದ.

ಈ ಕಾಲೇಜು ಸರ್ಕಾರದ ವತಿಯಿಂದ ನಡೆಸಲ್ಪಟ್ಟಿದ್ದು, ಬ್ರಾಹ್ಮಣ ಶಿಕ್ಷಣ ವ್ಯವಸ್ಥೆಯನ್ನು ಮನಸ್ಸಿನಲ್ಲಿಟುಕೊಂಡು, ಬ್ರಿಟಿಷ್ ಆಡಳಿತ ತುಂಬಾ ಕಾಲ ಮುಂದುವರೆಯುವಂತೆ ಆಶಿಸಲಾಗಿತ್ತು. ಆದ್ದರಿಂದ ಡೆಕ್ಕನ್ ಕಾಲೇಜಿನ ನಿಯಮಾ ವಳಿಯನ್ನು ಈ ಕೆಳಗಿನಂತೆ ರೂಪಿಸಿದ್ದ;

ಔಷಧ ಪ್ರಾಧ್ಯಾಪಕನಾದವನು ಒಬ್ಬ ವೈದ್ಯನಾಗಿರಬೇಕು. ಅಲ್ಲದೆ, ಆತ ವ್ಯಾಕರಣವನ್ನು ಕಲಿಸಲು ಶಕ್ತನಾಗಿರಬೇಕು. ಆದರೆ ಆತ ಪಾಣಿನಿಯಲ್ಲಿ ಕಲಿಸಲಾರದವನಾಗಿರುವುದರಿಂದ ಫಿಸಿಶಿಯನ್‌ನೊಬ್ಬನನ್ನು ಹೊರತು ಪಡಿಸಿ ಉಳಿದವರೆಲ್ಲಾ ಬ್ರಾಹ್ಮಣರಾಗಿರಬೇಕು.

✦ಉನ್ನತ ಹುದ್ದೆಗಳಿಗೆ ಸಂಬಂಧಿಸಿದಂತೆ ಪರೀಕ್ಷೆಗಳಲ್ಲಿ ತೇರ್ಗಡೆಯಾದ ಉಳಿದ ಟೀಚರ್‌ಗಿಂತ ಬ್ರಾಹ್ಮಣರನ್ನೇ ಪ್ರೋತ್ಸಾಹಿಸಿ, ಅದೇ ವಿದ್ಯಾರ್ಥಿಗಳು ಪ್ರಾಧ್ಯಾಪಕರಾಗುವಂತೆ ಅವಕಾಶ ಒದಗಿಸತಕ್ಕದ್ದು.



ಶಿಕ್ಷಣದ ಬೆಳಕು

✦ಪವಿತ್ರವೆಂದು ಪರಿಗಣಿಸದ ಜ್ಞಾನ ಶಿಸ್ತುಗಳಿಗೆ ಸಂಬಂಧಿಸಿದಂತೆ ಎಲ್ಲಾ ವಿದ್ಯಾರ್ಥಿಗಳನ್ನು ವರ್ಷದಲ್ಲಿ 4 ಬಾರಿ ರೆಸಿಡೆಂಟ್ ಅಧಿಕಾರಿಯೆದುರಲ್ಲೇ ಪರೀಕ್ಷೆ ನಡೆಸತಕ್ಕದ್ದು. ಈ ಸಂದರ್ಭದಲ್ಲಿ ಬ್ರಾಹ್ಮಣರು ಮಾತ್ರ ಹಾಜರಿರತಕ್ಕದ್ದು.

✦ನಿಗೂಢ ಜ್ಞಾನ ಶಿಸ್ತುಗಳಲ್ಲಿ ಅಭ್ಯಾಸಿಸುತ್ತಿರುವ ವಿದ್ಯಾರ್ಥಿಗಳ ಪರೀಕ್ಷೆಗಳನ್ನು ರೆಸಿಡೆಂಟನಿಂದ ನೇಮಿತರಾದ ಬ್ರಾಹ್ಮಣ ಸಮಿತಿಯು ವರ್ಷಕ್ಕೆ ನಾಲ್ಕು ಬಾರಿ ನಡೆಸುವುದು.

✦'ಶಿಕ್ಷಣ'ವಿಷಯಕ್ಕೆ ಸಂಬಂಧಿಸಿದಂತೆ ಧರ್ಮಶಾಸ್ತ್ರದ ಎಲ್ಲಾ ನಿಯಮಗಳನ್ನು ಕಾಲೇಜು ಶಿಸ್ತುಬದ್ಧವಾಗಿ ಅನುಸರಿಸುವುದು. ಮನುವಿನ ಎರಡನೇ ಪುಸ್ತಕವು ಶಿಸ್ತಿನ ಎಲ್ಲಾ ನಿಯಮಗಳನ್ನು ಒಳಗೊಂಡಿದೆ.

ಈ ಮೇಲಿನ ಬನರಾಸ್ ಸಂಸ್ಕೃತಿ ಕಾಲೇಜಿನ ಎಲ್ಲಾ ನಿಯಮಗಳನ್ನು ಗಮನಿಸಿದ್ದಲ್ಲಿ ತಿಳಿಯುವ ಸಂಗತಿಯೆಂದರೆ ದೇಶೀ ಶಿಕ್ಷಣ ವ್ಯವಸ್ಥೆ ಏನ್ನೋದು ಕೇವಲ ಬ್ರಾಹ್ಮಣ (ಹಿಂದೂ) ದೈವಶಾಸ್ತ್ರವಾಗಿತ್ತಷ್ಟೆ. ಇದರಲ್ಲಿ ಅಸ್ಪೃಶ್ಯರಿಗೇನಾದರು ಪ್ರವೇಶವಿತ್ತೇ? ಮೆಕಾಲೆ ಇಲ್ಲದಿದ್ದಲ್ಲಿ ಹಾಗೂ ಅದೇ ದೇಶೀ ವ್ಯವಸ್ಥೆ 1947ರವರೆಗೆ ಮುಂದುವರೆದಿದ್ದಲ್ಲಿ ಏನಾಗುತ್ತಿತ್ತೆಂದು ಯೋಚಿಸಲಾದೀತೆ.

ಮೆಕಾಲೆಯ ಕಾಲದಲ್ಲಿ ಕಂಪನಿಯ ಅಧಿಕಾರಿಗಳು ಎರಡು ಶಿಬಿರಗಳಲ್ಲಿ ಹಂಚಿಕೆಯಾಗಿದ್ದರು: 1) ಓರಿಯಂಟಲಿಸ್ಟ್ ಶಿಬಿರ 2) ಬ್ರಿಟಿಷ್ ಮತ ಪ್ರಚಾರಕ ನೀತಿಯನ್ನು ಪ್ರತಿಪಾದಿಸುತ್ತಿದ್ದ ಆಧುನಿಕರ ಶಿಬಿರ ಓರಿಯಂಟಲಿಸ್ಟರ ಪ್ರಕಾರ, "ಎಲ್ಲಾ ಜನರಂತೆ ಹಿಂದೂಗಳು ಸಹ ಒಳ್ಳೆಯ ನೈತಿಕ ನಂಬಿಕೆಗಳನ್ನು ಹಾಗೂ ವ್ಯವಸ್ಥೆಯನ್ನು ಹೊಂದಿದ್ದಾರೆ. ಆದ್ದರಿಂದ ಅವರನ್ನು ಪರಿವರ್ತಿಸುವುದು ಹುಚ್ಚುತನದ ಪ್ರಯತ್ನವಾದೀತು ಅಥವಾ ಅವರಿಗೆ ಮತ್ತೇನನ್ನೋ ಕಲಿಸುವುದು ಅಥವಾ ಅವರಲ್ಲಿರುವುದನ್ನು ಬಿಟ್ಟು ಇತರ ಕಲಿಕಾಕ್ರಮಗಳನ್ನು ವಿವರಿಸುವುದು ಸರಿಯಲ್ಲ".

ಮೆಕಾಲೆ ಹುಟ್ಟುವ ಮೊದಲೇ ಆತನ ಗುರು ಮತ್ತು ಆಧುನಿಕ ಭಾರತದ ಮುತ್ತಾತನಾದ ವಿಲ್ಲಿಯಂ ವಿಲ್ಬರ್ ಫೋರ್ಸ್ 1793ರಲ್ಲಿ ಬ್ರಿಟಿಷ್ ಪಾರ್ಲಿಮೆಂಟ್‌ನಲ್ಲಿ ಹೀಗೆಂದು ಪ್ರತಿಪಾದಿಸಿದ್ದ, "ಬ್ರಿಟಿಷ್ ಭಾರತದ ಪ್ರಜೆಗಳ ಸುಖವನ್ನು ಪ್ರೋತ್ಸಾಹಿಸುವುದು ಸೂಕ್ತವಾದುದು ಮತ್ತು ನ್ಯಾಯಯುತವಾದುದು. ಬ್ರಿಟಿಷ್ ಶಾಸನಸಭೆಗೆ ಇದೊಂದು ವಿಚಿತ್ರವಾದ ಕರ್ತವ್ಯವೂ ಆಗಿದೆ. ಆದ್ದರಿಂದ ಆ ಜನರ ಪ್ರಗತಿ ಮತ್ತು ಜ್ಞಾನದ ಒಳಿತಿಗಾಗಿ ಅವರ ಧರ್ಮ ಮತ್ತು ನೈತಿಕತೆಯನ್ನು ವೃದ್ಧಿ ಪಡಿಸುವಂತಹ ಕ್ರಮಗಳನ್ನು ತೆಗೆದು ಕೊಳ್ಳುವುದು ಸೂಕ್ತವಾದುದು.

ಅಲ್ಲದೆ, ಆತ ಭಾರತಕ್ಕೆ ಶಾಲಾ ಶಿಕ್ಷಕರನ್ನು ಕಳುಹಿಸಿ ಕೊಡುವಂತೆಯು ಒತ್ತಾಯಿಸಿದ್ದನಾದರೂ ಅದಕ್ಕೆ ಬೆಂಬಲ ದೊರೆಯದೇ ಹೋಯಿತು. ಹೀಗೆ ಭಾರತವು ಆಧುನಿಕ ಶಿಕ್ಷಣದ ಬೆಳಕನ್ನು ಕಾಣದೆ ಕಳೆದ 50 ವರ್ಷಗಳನ್ನು ಕಳೆದು ಕೊಂಡಿದೆ.

ಈ ವಿಲ್ಬರ್‌ಫೋರ್ಸ್‌ನಂತೆ, 1835 ಫೆಬ್ರವರಿಯಲ್ಲಿ ಮೆಕಾಲೆಯೂ ಸಹ ತನ್ನ ನಿರ್ಧಾರದಲ್ಲಿ ಸೋತಿದ್ದೇ ಆಗಿದ್ದಲ್ಲಿ ಮತ್ತು ಓರಿಯಂಟಲಿಸ್ಟರು ಗೆದ್ದಿದ್ದಲ್ಲಿ ಏನಾಗುತ್ತಿತ್ತು? ಆದ್ದರಿಂದ ಅಕ್ಟೋಬರ್ 25 ಅನ್ನು ಎಲ್ಲಾ ಭಾರತೀಯರು ಬೆಳಕಿನ ದಿನವನ್ನಾಗಿ ಆಚರಿಸಬಾರದೇಕೆ? □

'ಸಂವಾದ' ದೊರೆಯುವ ಸ್ಥಳ

ನವಕರ್ನಾಟಕ ಪ್ರಕಾಶನ ಪುಸ್ತಕ ಮಳಿಗೆ

✦ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ ಬೆಂಗಳೂರು- 560 001, ☎ : 22203580

✦ಗಾಂಧಿನಗರ, ಬೆಂಗಳೂರು-560 009, ☎: 22250382, ✦ಸ್ಟೇಷನ್ ರಸ್ತೆ, ಗುಲ್ಬರ್ಗ-2, ☎: 424302

✦ಕೆ.ಎಸ್.ರಾವ್.ರಸ್ತೆ, ಮಂಗಳೂರು-1, ☎: 2441016, ✦ರಾಮಸ್ವಾಮಿ ವೃತ್ತ ಮೈಸೂರು-24, ☎: 2424094

✦ಕೆ.ಎಸ್.ಆರ್.ಟಿ.ಸಿ. ಬುಕ್ ಸ್ಟಾಲ್, ಫ್ಲಾಟ್ ಫಾರ್ಮ್ ನಂ.1, ಸ್ಟಾಲ್ ನಂ.7, ಕೆಂಪೇಗೌಡ ಬಸ್ ನಿಲ್ದಾಣ, ಬೆಂಗಳೂರು.

ಬುದ್ಧಾಯಣ

ಎಲ್ಲ ಧರ್ಮಗಳ ಮೀರಿ ನಿಂತವನೆ ಪರಿಪೂರ್ಣ

ಜನಕ್ಕೇ ಬೆಳಕಾದ ಬುದ್ಧನ ಕಥೆಗಳು ಅಪಾರ. ಬುದ್ಧ ತನ್ನ ಪ್ರವಾಸದ ಕಾಲದಲ್ಲಿ ಜನರ ಸಮಸ್ಯೆಗಳನ್ನು ಬಗೆಹರಿಸಲು ಹಾಗೂ ಅವರಿಗೆ ಮಾರ್ಗದರ್ಶನ ಮಾಡಲು ಕಥೆಗಳನ್ನು ಹೇಳುತ್ತಿದ್ದ. ಇದು ಜನರನ್ನು ತಿದ್ದಲು ಅತ್ಯಂತ ಸಮರ್ಥ ಮಾರ್ಗವೆಂದೇ ಇಂದಿಗೂ ಜನ ತಿಳಿದಿದ್ದಾರೆ. ಬುದ್ಧ ಹೇಳಿದ ಇಂಥ ನೂರಾರು ಕಥೆಗಳು ಇಂದು ವಿವಿಧ ರೂಪದಲ್ಲಿ ಲಭ್ಯವಿದೆ. ಸಿ.ಎಚ್. ರಾಜಶೇಖರ್ ಅಂಥ ಹಲವು ಕಥೆಗಳನ್ನು ಸಂಗ್ರಹಿಸಿದ್ದಾರೆ. ಅವುಗಳನ್ನು 'ಸಂವಾದ' ಓದುಗರಿಗಾಗಿ ನೀಡುತ್ತಿದ್ದೇವೆ.

○ಸಿ.ಎಚ್.ರಾಜಶೇಖರ್

ಬೌದ್ಧ ದರ್ಮದ ಮುಖ್ಯ ಸಾರವೇ ನೈತಿಕ ನೆಲೆಗಟ್ಟು! ಬುದ್ಧ ಬಯಸಿದ್ದು ಪ್ರತಿ ವ್ಯಕ್ತಿಯ ಬದಲಾವಣೆಯನ್ನು, ಪರಿವರ್ತನೆಯನ್ನು, ಅದರಲ್ಲಿಯೆ ಪ್ರಗತಿ ಅಡಗಿದೆ ಎಂದು ಸಾರಿದ. ಆ ಕಾರಣಕ್ಕಾಗಿಯೇ ಶೀಲ, ಸಚ್ಚರಿತ್ರ್ಯ ಮತ್ತು ನೈತಿಕ ಪರಿಶುದ್ಧತೆ ಮುಖ್ಯವೆಂದು, ಅದುವೆ ಬದುಕಿನ ಗುರಿ ಆಗಿರಲಿ ಎಂದವನು. ಅವನ ಧರ್ಮದಲ್ಲಿ ಪರಿಶುದ್ಧತೆಗೆ ಮೊದಲ ಸ್ಥಾನ. ಪರಿಪೂರ್ಣತೆಗೆ ಅಂತಿಮ ಸ್ಥಾನವಿದೆ. ಹಾಗಾಗಿ ಅವನು ಪರಿಶುದ್ಧತೆ ಮತ್ತು ಪರಿಪೂರ್ಣತೆ ಒಂದೇ ಅಲ್ಲವೆಂದು ವಾದಿಸುತ್ತಾನೆ. ಈ ಬಗ್ಗೆ ಅವನು ಶಿಷ್ಯನಾದ ಸುಭೂತಿ ಎಂಬುವನ ಜೊತೆ ಮಾತನಾಡುತ್ತಾ:

ಯಾವಾತ ಪರಿಪೂರ್ಣನೋ ಅವನಿಗೆ ಯಾವುದೇ ಧರ್ಮದ ಹಂಗಿಲ್ಲವೆನ್ನುತ್ತಾನೆ!. ಆತ ಧರ್ಮವನ್ನು ಮೀರಿ ನಿಲ್ಲುತ್ತಾನೆ! ಮುಂದುವರೆದು ಯಾವುದೇ ವ್ಯಕ್ತಿ ಧರ್ಮದಲ್ಲಿ ನಿರಂತರವಾಗಿ ನೆಲೆ ನಿಲ್ಲಬಾರದು! ಅದು ಅವನ ನಿಜ ಸ್ವರೂಪವಲ್ಲ ಎನ್ನುತ್ತಾನೆ., ಪ್ರತಿ ಮನಷ್ಯನ ನಿಜಸ್ವರೂಪವೆಂದರೆ ಧರ್ಮವನ್ನು ದಾಟಿ ಧರ್ಮಾತೀತನಾಗುವುದೇ ಎನ್ನುತ್ತಾನೆ! ಅದೇ ನಿಜವಾದ ಪರಿಪೂರ್ಣತೆ ಅದನ್ನೇ ಅವನು"ನಿಬ್ಬಣವೆಂದದ್ದು!" ಬುದ್ಧನ ಪ್ರಕಾರ ಧರ್ಮ ಅಚಲವಲ್ಲ, ಅನಂತವಲ್ಲ. ಪ್ರಶ್ನಾತೀತವಲ್ಲ. ಒಂದು ಪ್ರಾಥಮಿಕ ಹಂತ. ಒಂದು ಹಂತದ ತನಕ ಅದೊಂದು ನಿರ್ಣಾಯಕ ಘಟಕ. ಆ ನಂತರ ಅದರ ಅಗತ್ಯವಿಲ್ಲ! ಹಾಗಾಗಿ ಬುದ್ಧ ಯಾರೂ ಎಲ್ಲಿಯೂ ನೆಲೆ ಕಂಡುಕೊಂಡು ಅದನ್ನೇ ಶಾಶ್ವತ ಎಂದು ಭಾವಿಸಬೇಡಿ. ಅದನ್ನು ತೊರೆದು ಮುಂದುವರೆಯಿರಿ, ಸದಾ ಅನ್ವೇಷಕರಾಗಿ, ಸದಾ ಅಲೆಮಾರಿಯಾಗಿ, ಕಡೆಗೆ ಅನಿಕೇತನರಾಗಿ ಎನ್ನುತ್ತಾನೆ! ಇದೊಂದು ಜಗತ್ತಿನ ಧಾರ್ಮಿಕ ಇತಿಹಾಸದಲ್ಲಿ ಅತ್ಯಂತ ಕ್ರಾಂತಿಕಾರಕ ವಿಚಾರ! ಧಾರ್ಮಿಕತೆ ಎಂದರೆ ಧರ್ಮ ಮತ್ತು ದೇವರೆಂದು, ಮನುಷ್ಯನ ಅಂತಿಮ ಗುರಿ ಎಂದರೆ ದೇವರಲ್ಲಿ ನೆಲೆಸುವುದು, ಅಂದರೆ ಪರಮಭಕ್ತನಾಗುವುದು, ಸಂಪೂರ್ಣ ಶರಣಾಗುವುದು, ಅವನ ನಾಮವನ್ನು ಸ್ಮರಿಸುತ್ತಾ ಕೂರುವುದು, ಅದೇ ತಪಸ್ಸೆನ್ನುತ್ತಾರೆ. ಬುದ್ಧ ಅದಕ್ಕೆ ಸಂಪೂರ್ಣ ವಿರುದ್ಧ. ಇದು ಬುದ್ಧನ ಬಹುದೊಡ್ಡ ಕೊಡುಗೆ ಮತ್ತು ಕಾಣ್ಕೆ. ಈ ಕಾರಣಕ್ಕಾಗಿಯೇ ಬುದ್ಧ ಜಗತ್ತಿನ ಇತರೆ ಧರ್ಮಸಂಸ್ಥಾಪಕರಿಗಿಂತ, ತತ್ತ್ವಶಾಸ್ತ್ರಜ್ಞರಿಗಿಂತ ಸಂಪೂರ್ಣ ಭಿನ್ನನಾಗುತ್ತಾನೆ. ಇತರೆ ಪ್ರಮುಖ ಧರ್ಮದ ಯಾವುದೇ ಸಂಸ್ಥಾಪಕರನ್ನು ಗಮನಿಸಿ ಅವರು ತಾನು ಬೋಧಿಸಿದ ಧರ್ಮವೇ ಶ್ರೇಷ್ಠವೆನ್ನುತ್ತಾರೆ. ಅದೇ ಅಂತಿಮ ಎನ್ನುತ್ತಾರೆ.



ನನ್ನನ್ನು ನನ್ನ ಧರ್ಮವನ್ನು ಒಪ್ಪಿಕೊಂಡರೆ ಮಾತ್ರ ನಿಮ "ಮುಕ್ತಿ" ಎನ್ನುತ್ತಾರೆ. ನನ್ನ ಬೋಧನೆ ಪ್ರಶ್ನಾತೀತವೆನ್ನುತ್ತಾರೆ. ಇದು ಎಲ್ಲಿಯೂ ಎಂದಿಗೂ ಚರ್ಚೆಗೆ, ವಾದ ವಿವಾದಕ್ಕೆ, ಬದಲಾವಣೆಗೆ ತಿದ್ದುಪಡಿಗೆ ಅತೀತವಾದದ್ದು ಎನ್ನುತ್ತಾರೆ.

ಬುದ್ಧ ನಿರಂತರ ಅಲೆಮಾರಿ. ಎಲ್ಲಿಯೂ ನೆಲೆನಿಂತ ವನಲ್ಲ ಯಾವುದೇ ಅಭಿಪ್ರಾಯಕ್ಕೆ ಅಂಟಿಕೊಂಡವನಲ್ಲ. ಹಾಗಾಗಿ ಅವನು ನಿತ್ಯ ವಿನೂತನ ಅನಿಕೇತನ. ಬುದ್ಧನ ಶಿಷ್ಯರಲ್ಲಿ ಪ್ರಮುಖ ನಾದ ಸುಭೂತಿಯು ಬುದ್ಧನನ್ನು ಸಂಧಿಸಲು ತನ್ನ ಮನದ ಸಂಶಯಕ್ಕೆ ಸರಿ ಉತ್ತರ ಪಡೆಯಲು ಬಹುದಿನದಿಂದ ಬಯಸಿದ್ದ ಈ ವರ್ಷದ ಮಳೆಗಾಲವನ್ನು ಶ್ರಾವಸ್ತಿಯ ಚೇತನ ವನದಲ್ಲಿ ಕಳೆಯಲು ಬುದ್ಧ ಅಲ್ಲಿ ತಂಗಿದ್ದಾನೆ ಎಂಬ ವಿಷಯ ತಿಳಿದು ಬಹುದೂರದಿಂದ ಬರುತ್ತಾನೆ. ಬುದ್ಧನನ್ನು ಕಂಡು ಅವನಿಗೆ ನಮಿಸುತ್ತಾನೆ. ಅವನ ಎದುರು ಕುಳಿತು ತಾನು ಬಂದ ಉದ್ದೇಶ ಮತ್ತು ತನ್ನ ಸಂಶಯಗಳನ್ನು ತಿಳಿಸುತ್ತಾ ಹೀಗೆ ಪ್ರಶ್ನಿಸುತ್ತಾನೆ;

"ಗುರುದೇವಾ, ನನ್ನ ಮನಸ್ಸನ್ನು ಬಹುದಿನಗಳಿಂದ ಕಾಡುತ್ತಿರುವ ಪ್ರಶ್ನೆಯೊಂದಿದೆ, ಅದೆಂದರೆ;" ಪರಿಪೂರ್ಣತೆ." ಗುರುವೇ, ಪರಿಪೂರ್ಣತೆ ಎಂದರೆ ಏನು?" ಅದರಲ್ಲಿ ಎಷ್ಟು ವಿಧ?

ಪರಿಪೂರ್ಣತೆಯಲ್ಲಿ ಮೂರು ಹಂತ, ಅವುಗಳೆಂದರೆ ಕಾಯಾ, ವಾಚಾ ಮತ್ತು ಮನಸ್ಸಿನ ಪರಿಪೂರ್ಣತೆಗಳು. ಅವುಗಳು ಸಾಧಿಸುವ ಬಗೆ ಮತ್ತು ಸ್ವರೂಪವೆಂದರೆ; ಎಲ್ಲ ಆಸೆಗಳ ನಿರ್ಮೂಲನೆ. ಅ ಮೂಲಕ ಮಾತ್ರ ಬದುಕಿನಲ್ಲಿಯೇ ಸತ್ಯವನ್ನು ಕಂಡುಕೊಳ್ಳಬಹುದು.

ಅದನ್ನು ಸಾಧಿಸುವ ಬಗೆ ಹೇಗೆ? ಅದರ ಸ್ವರೂಪಗಳೇನು?" ಎಂದ. ಆಗ ಬುದ್ಧನು ತನ್ನ ಶಿಷ್ಯ ಸಹೋದರನನ್ನು ಉದ್ದೇಶಿಸಿ;

"ಎಲೈ ಸುಭೂತಿಯೇ, ಎಲ್ಲಿ ಯಾರಿಗೆ ಯಾವುದೇ ಬಗೆಯ ಆತಂಕಗಳಿರುವುದಿಲ್ಲವೊ, ಎಲ್ಲ ಉಪಾದಿಗಳನ್ನು ಯಾವಾತ ನೀಗಿಕೊಂಡಿರುತ್ತಾನೊ. ಯಾವಾತ ತನ್ನ ಪರಿಶುದ್ಧತೆಯಿಂದ ಧರ್ಮತೀತನಾಗಿರುತ್ತಾನೋ, ಅವನೇ ಪರಿಪೂರ್ಣ!"

"ಎಲೈ ಸುಭೂತಿಯೇ ಕೇಳು, ಪರಿಪೂರ್ಣತೆಯಲ್ಲಿ ಮೂರು ಹಂತ, ಅವುಗಳೆಂದರೆ ಕಾಯಾ, ವಾಚಾ ಮತ್ತು ಮನಸ್ಸಿನ ಪರಿಪೂರ್ಣತೆಗಳು. ಅವುಗಳು ಸಾಧಿಸುವ ಬಗೆ ಮತ್ತು ಸ್ವರೂಪವೆಂದರೆ; ಎಲ್ಲ ಆಸೆಗಳ ನಿರ್ಮೂಲನೆ. ಆ ಮೂಲಕ ಮಾತ್ರ ಬದುಕಿನಲ್ಲಿಯೇ ಸತ್ಯವನ್ನು ಕಂಡುಕೊಳ್ಳಬಹುದು. ಇದನ್ನು ನಾನು "ಸತ್ಯ ಸಾಕ್ಷತ್ಕಾರ" ಎನ್ನುವುದು. ಈ ಹಂತವನ್ನು ಸಾಧಿಸಿದಾಗ ಮಾತ್ರ ಹೃದಯದ ಪರಿಶುದ್ಧತೆಯನ್ನು ಪಡೆದುಕೊಳ್ಳಬಹುದು. ಇದಕ್ಕೆ ಬೇಕಾದದ್ದು; ತನ್ನೊಳಗೆ ನೆಲೆಸಿರುವ ಆಸೆಗಳನ್ನು ಅಂತರ್ವೀಕ್ಷಣೆಯಿಂದ ಬಿಡುಗಡೆ ಮಾಡಿಕೊಳ್ಳುವ ಸಂಪೂರ್ಣ ಅರಿವು. ಇದೇ ಮಾನಸಿಕ ಮತ್ತು ದೈಹಿಕ ಪರಿಪೂರ್ಣತೆ. ಇದಲ್ಲದೆ ದಾನದ ಪರಿಪೂರ್ಣತೆಯು ಉಂಟು"

"ಗುರುದೇವಾ, ದಾನದ ಪರಿಪೂರ್ಣತೆ ಎಂದರೆ ಏನು? ಅದರ ಉಪಯುಕ್ತತೆ ಏನು?"

"ಎಲೈ ಸುಭೂತಿ ನಾವು ಮೊದಲು ಅರಿಯಬೇಕಾದದ್ದು; ಎಲ್ಲವೂ ನನಗಾಗಿ ಅಲ್ಲ ಎಂಬುದನ್ನು! ಹಾಗೆಯೇ ನಾನು ಎಲ್ಲರಿಗಾಗಿ ಎಂಬ ಅರಿವನ್ನು ಹೊಂದಬೇಕು! ಎಲ್ಲಾ ವಿಧದ ಜ್ಞಾನ ಮತ್ತು ಆಲೋಚನೆಗಳ ಜೊತೆಗೆ ಕರುಣೆ, ಸಹಿಷ್ಣುತೆ, ತಾಳ್ಮೆ ಮತ್ತು ಸತ್ಯವನ್ನು ಆಂತರಿಕ ಮತ್ತು ಬಾಹ್ಯವಾಗಿ ಹೊಂದಿರಬೇಕು. ಹಾಗೂ ಅದನ್ನು ಎಲ್ಲ ಜೀವಿಗಳಿಗೂ ಸಮಾನವಾಗಿ ದಯಪಾಲಿಸಬೇಕು. ಇದನ್ನೆ ನಾನು "ಪರಮೋಚ್ಛ ಜ್ಞಾನೋದಯ" ಎನ್ನುವುದು. ಈ ನಿಟ್ಟಿನೆಡೆ ನಾವು ಇತರರನ್ನು ಪ್ರೇರೇಪಿಸಬೇಕು. ಈ ದಾನವೇ ನಮ್ಮಲ್ಲಿನ ಆತಂಕಗಳನ್ನು ನೀಗಿಕೊಳ್ಳಲು ಸಾಧನವಾಗುತ್ತದೆ ಇದನ್ನು ನೈತಿಕ ಪರಿಪೂರ್ಣತೆ ಎಂತಲೂ, ಸಹನೆಯ ಪರಿಪೂರ್ಣತೆ ಎಂತಲೂ ಮತ್ತು ಓಜಸ್ಸಿನ ಪರಿಪೂರ್ಣತೆ ಎಂತಲೂ ಕರೆಯಬಹುದು. ಇತರರೂ ಈ ನಿಟ್ಟಿನೆಡೆ ಮುನ್ನೆಡೆಯಲು ಪ್ರೇರೇಪಿಸಬೇಕು."

"ಗುರುದೇವ, ಏಕಾಗ್ರತೆಯ ಪರಿಪೂರ್ಣತೆ ಎಂದರೆ ಏನು?

"ಎಲೈ ಸುಭೂತಿ, ಎಲ್ಲ ಸಾಧನೆಯ ಮೂಲ ಏಕಾಗ್ರತೆ! ಅದರ ಸಾಧನೆ ಸುಲಭ ಸಾಧ್ಯವಲ್ಲ. ಅದು ದಬೇತುಗೊಂಡ ಪರಿಶುದ್ಧ ಮನಸ್ಸಿನಿಂದ ಮಾತ್ರ ಸಾಧ್ಯ! ಯಾವಾತ ಸ್ವತಃ ಸಾಧನೆಯ ಕೌಶಲ್ಯದಿಂದ ಭಾವಸಮಾಧಿಯನ್ನು ಪ್ರವೇಶಿಸುತ್ತಾನೋ ಅಲ್ಲಿ ಅಂತರ್ವೀಕ್ಷಣೆಯಿಂದ ಆಂತಕಗಳನ್ನು ನೀಗಿಕೊಳ್ಳುತ್ತಾನೋ, ಏಕಾಗ್ರತೆಯಲ್ಲಿ ನೆಲೆನಿಂತು ತನ್ನ ತಾನು ಕಂಡುಕೊಳ್ಳುತ್ತಾನೋ, ಇತರರನ್ನು ಆ ಕಡೆಗೆ ಪ್ರೇರೇಪಿಸುತ್ತಾನೋ, ಆತನೇ ಏಕಾಗ್ರತೆಯ ಪರಿಪೂರ್ಣ".

"ಗುರುದೇವಾ, ಜ್ಞಾನದ ಪರಿಪೂರ್ಣತೆ ಎಂದರೆ ಏನು?"

"ಎಲೈ ಸುಭೂತಿಯೇ, ಸಾಧನೆಯ ಮಾರ್ಗದಲ್ಲಿ ಇರುವ ಪ್ರತಿ ವ್ಯಕ್ತಿಯೂ ಯಾವುದಕ್ಕೆ ಬದ್ಧನಾಗ ಬೇಕು? ಯಾವುದಕ್ಕೆ ಅಬದ್ಧನಾಗಿರಬೇಕು? ಎಲ್ಲಿ ನೆಲೆ ನಿಲ್ಲಬೇಕು? ಯಾವಾಗ ನೆಲೆಯನ್ನು ನೀಗಿಸಿಕೊಳ್ಳಬೇಕು? ಏನನ್ನು ಅಂತಿಮವಾಗಿ ಪಡೆಯಬೇಕು? ಹಾಗೆ ಪಡೆದುದ್ದನ್ನು ಯಾವಾಗ ನೀಗಿಕೊಳ್ಳಬೇಕು? ಎಂಬ ಪರಿ ಜ್ಞಾನವೇ ಜ್ಞಾನದ ಪರಿಪೂರ್ಣತೆ".

"ಗುರುದೇವಾ, ನಾವು ಅಂತಿಮವಾಗಿ ಏನನ್ನು ಪಡೆಯಬೇಕು? ಅಥವಾ ನೀಗಿಕೊಳ್ಳಬೇಕು? ಇಲ್ಲವೆ ಅತೀತರಾಗಬೇಕು?

"ಎಲೈ ಸುಭೂತಿಯೇ, ಎಲ್ಲರಿಗೂ ಧರ್ಮವೇ ಅಂತಿಮ, ಅದನ್ನೆ ಪಡೆಯಬೇಕು, ಧರ್ಮದಲ್ಲಿಯೇ ನೆಲೆನಿಲ್ಲಬೇಕು, ಅದಕ್ಕಿಂತ ಅತೀತವಾದದ್ದು, ಬೇರೆನೂ ಇಲ್ಲ ಎನ್ನುತ್ತಾರೆ. ಆದರೆ ಇದೂ ಕೂಡ ಸ್ವಾರ್ಥದ ಮತ್ತೊಂದು ರೂಪ! ಇಲ್ಲಿ ಅಂತಿಮ ಎನ್ನುವುದು ಯಾವುದೂ ಇಲ್ಲ. ಮನುಷ್ಯ ಮೊದಲು ಪರಿಶುದ್ಧನಾಗಬೇಕು. ಧರ್ಮದಲ್ಲಿ ನೆಲೆ ನಿಲ್ಲಬೇಕು, ಅಲ್ಲಿ ವಿಹರಿಸಬೇಕು. ವಿಶ್ರಮಿಸಿಕೊಳ್ಳಬೇಕು. ಆದರೆ ಅದೆ ಅಂತಿಮವಲ್ಲ! ಅದೆ ನಮ್ಮ ಶಾಶ್ವತ ಮನೆಯಲ್ಲ ಅಥವಾ ಅರಮನೆಯಲ್ಲ! ಆ ಅರಮನೆಯಿಂದಲೂ ಹೊರನಡೆಯಬೇಕು. ಪರಿಪೂರ್ಣತೆಯನ್ನು ಸಾಧಿಸಬೇಕು. ಆಗ ನಮಗೆ ಧರ್ಮದ ಹಂಗಿಲ್ಲ! ಅಗತ್ಯವಿಲ್ಲ. ಅಂತವನು ಆಗ ಯಾವುದೇ ಧರ್ಮದಲ್ಲಿ ನೆಲೆ ನಿಲ್ಲುವುದಿಲ್ಲ. ಆತ ಧರ್ಮಾತೀತನಾಗಿರುತ್ತಾನೆ. ಏಕೆಂದರೆ, ಆತ ಎಲ್ಲಾ ಧರ್ಮಗಳ ಸಾರಭೂತ ಮೂಲ ಸ್ವಭಾವದ ಬಗ್ಗೆ ಧ್ಯಾನಿಸಿರುತ್ತಾನೆ, ಅರಿತಿರುತ್ತಾನೆ. ಆ ಮೂಲಕ ತಾನು ಪಡೆಯ ಬೇಕಾದ ಪರಿಪೂರ್ಣತೆಯನ್ನು ತಲುಪಿರುತ್ತಾನೆ, ಅರಿತಿರುತ್ತಾನೆ. ಹಾಗೆಯೇ ಆತ ಇತರರನ್ನು ಎಲ್ಲ ಧರ್ಮಗಳ ಬಗ್ಗೆ ಧ್ಯಾನಿಸಲು ಸಾರಭೂತವನ್ನು ಅರಿಯಲು ಪ್ರಚೋದಿಸುತ್ತಾನೆ.

ಈ ಪರಿಪೂರ್ಣತೆಯನ್ನು ತಲುಪಿದವನಿಗೆ ಧರ್ಮದ ಅಗತ್ಯವೇನು? ಏಕೆಂದರೆ ಆತ ತನ್ನ ಮಿತಿಯನ್ನು ಅರಿಯಲು ಮಿತಿಯನ್ನು ಮೀರಿರುತ್ತಾನೆ. ಆತ ಧರ್ಮಾತೀತನಾಗಿರುತ್ತಾನೆ. ಹಾಗಾಗಿ ನಾನು "ಧರ್ಮ ತನಗೆ ತಾನೇ!" ಎಂದದ್ದು. ಇತರರಿಂದ ರಕ್ಷಿಸಿಕೊಳ್ಳುವ ಧರ್ಮ ಧರ್ಮವೇ ಅಲ್ಲ! ನಾನು ಬೋಧಿಸಿರುವ ಧರ್ಮದಲ್ಲಿ ಅಂತರ್ಸತ್ವವಿದ್ದರೆ ಅದು ಬದುಕಿ ಉಳಿಯುತ್ತದೆ. ಈ ಸತ್ಯವನ್ನು ಅರಿಯುವುದೇ ಜ್ಞಾನದ ಪರಿಪೂರ್ಣತೆ, ಅಂತವನು ಮಾತ್ರ ಧರ್ಮಾತೀತನಾಗಬಲ್ಲ!!" ಎಂದ ಆಗ ಸುಭೂತಿಯು ಬುದ್ಧನನ್ನು ಉದ್ದೇಶಿಸಿ;

"ಅದ್ಭುತ ಗುರುದೇವಾ, ಅದ್ಭುತ.... ! ನಿನ್ನ ಯೋಚನಾಕ್ರಮವೇ ವಿಭಿನ್ನ.....!! ನಿನ್ನ ಸತ್ಯದ ಸಾಕ್ಷಾತ್ಕಾರವೇ ಅವಿಚ್ಛಿನ್ನ...!!! ಎಂದು ತಲೆ ಬಾಗಿ ವಂದಿಸಿದ. □

ಸಂವಾದ

ಲೇಖಕರಲ್ಲಿ ಮನವಿ

'ಸಂವಾದ'ವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು.

'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

-ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು - ೫೬೦ ೦೯೧

'SAMVADA' Kannada Monthly, DECEMBER 2005 RNI-KAR KAN/2002/9246 CPMG/KA/BGW-706/2003-

ಹೊನ್ನಿನ ಹಂದರದಲ್ಲಿ ಸುಂದರ ಕರ್ನಾಟಕ -

ಕರುನಾಡ ಸಿರಿನುಡಿ - ಕನ್ನಡ
ಕಸ್ತೂರಿ ಪರಿಮಳದ ಕುಡಿ - ಕನ್ನಡ ನುಡಿ
ಹಾಲ್ಜೇನಿನ ಮಧುರ ಝುರಿ - ಕನ್ನಡ ನಾಣ್ನುಡಿ

ಸುಮಾರು 2000 ವರ್ಷಗಳ ಇತಿಹಾಸವಿರುವ ಕನ್ನಡ ಭಾಷೆ, ಸಾಹಿತ್ಯ ಅನನ್ಯ ಮತ್ತು ಅನುಕರಣೀಯ. ಇಂದು ಕೂಡ ಕರ್ನಾಟಕ ಸಮಗ್ರ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಆಟೋಮೊಬೈಲ್ ಉದ್ಯಮ, ಸಿದ್ಧ ಉಡುಪು, ಆಭರಣಗಳು, ಕ್ರೀಡೆ, ಪುಷ್ಪೋದ್ಯಮದಂತಹ ಪ್ರಮುಖ ಕ್ಷೇತ್ರಗಳಲ್ಲಿ ಸಾಧಿಸಿದ ಪ್ರಗತಿಯೂ ಶ್ಲಾಘನೀಯ, ಕರ್ನಾಟಕ ಭಾರತಕ್ಕಷ್ಟೇ ಮಾತ್ರವಲ್ಲ ಇಡೀ ವಿಶ್ವಕ್ಕೆ ಮಾದರಿ.

ಅಪಾರ ಕೀರ್ತಿ ಗಳಿಸಿ ಮೆರೆವ ಭವ್ಯನಾಡಿಗೆ...ಇಂದು ಸುವರ್ಣ ಸಂಭ್ರಮ.

ಸುವರ್ಣ ಕರ್ನಾಟಕದ ವರ್ಷ : ೨೦೦೬

ಕರ್ನಾಟಕ ವಾರ್ತೆ
Karnataka Information